ಗುರುವಾರ, ಏಪ್ರಿಲ್ 18, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದೇಗುಲ ಭೇಟಿ
ಮುಂಬೈನ ಸಿದ್ಧಿವಿನಾಯಕ ದೇವಸ್ಥಾನಕ್ಕೆ ನಟಿ ಪರಿಣೀತಿ ಚೋಪ್ರಾ ಬುಧವಾರ ಭೇಟಿ ನೀಡಿದರು

ಗ್ಯಾರಂಟಿ ನೀಡುವ ಕೈಗೆ ಮತ ನೀಡಿ
ಕಾಂಗ್ರೆಸ್ ಗೆಲ್ಲಿಸಿ

ಬಿಜೆಪಿಯಿಂದ ಬ್ಲ್ಯಾಕ್‌ಮೇಲ್: ಪ್ರೆಸ್‌ಕ್ಲಬ್ ಸಂವಾದದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರೋಪ

'ಗ್ಯಾರಂಟಿಗಳಿಗೆ ಕೈ ಹಾಕಿದರೆ ಬಿಡುವುದಿಲ್ಲ'

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು: 'ನಮ್ಮ 'ಗ್ಯಾರಂಟಿ'ಗಳನ್ನು ಮುಟ್ಟಲು ಬಿಡುವುದಿಲ್ಲ. ಬಿಜೆಪಿಯವರು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ. ನಮ್ಮ ಸರ್ಕಾರವನ್ನು ಏನೂ ಮಾಡಲು ಆಗುವುದಿಲ್ಲ. ಇನ್ನೂ ಒಂಬತ್ತು ವರ್ಷ 'ಗ್ಯಾರಂಟಿ'ಗಳು ಮುಂದುವರಿಯಲಿವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರು ಪ್ರೆಸ್‌ಕ್ಲಬ್ ಬುಧವಾರ ಹಮ್ಮಿಕೊಂಡಿದ್ದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, 'ಗ್ಯಾರಂಟಿ ಯೋಜನೆಗಳು ರಾಜ್ಯದ ಹೆಣ್ಣುಮಕ್ಕಳ ಸ್ವಾಭಿಮಾನದ ಪ್ರಶ್ನೆ. ಅದಕ್ಕೆ ಕೈ ಹಾಕಿದರೆ ಬಿಡುವುದಿಲ್ಲ' ಎಂದು ಎಚ್ಚರಿಕೆಯನ್ನೂ ನೀಡಿದರು.

'ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಯಾಕೆ ಮತ ಹಾಕಬೇಕು' ಎಂಬ ಸುದ್ದಿಗಾರರ ಪ್ರಶ್ನೆಗೆ, 'ಬಿಜೆಪಿಗೆ ಏಕೆ ಮತ ಹಾಕಬೇಕು' ಎಂದು ಮರುಪ್ರಶ್ನೆಯ ಮೂಲಕ ಪ್ರತಿಕ್ರಿಯಿಸಿದ ಶಿವಕುಮಾರ್, 'ಆಪರೇಷನ್ ಕಮಲ' ಮಾಡಿ ಅವರು ಸರ್ಕಾರ ರಚನೆ ಮಾಡಿದ್ದರು. ಅಧಿಕಾರ ಸಿಕ್ಕಿದಾಗ ಕೊಟ್ಟ ಮಾತು ಈಡೇರಿಸಿದ್ದಾರಾ? ಮಹದಾಯಿ, ಮೇಕೆದಾಟು ವಿಚಾರದಲ್ಲಿ ನೀಡಿದ ಭರವಸೆ ಈಡೇರಿಸಲು ಸಾಧ್ಯವಾಗಿಲ್ಲ. ಗೆಲ್ಲುವ ಮುಖ ಇಲ್ಲವೆಂದು ಹಾಲಿ ಸಂಸದರಿಗೇ ಟಿಕೆಟ್ ನೀಡಿಲ್ಲ' ಎಂದರು.

'ನಿಮ್ಮ ಕಾಟದಿಂದ ದೊಡ್ಡ ಉದ್ಯಮಿಗಳು ದೇಶ ಬಿಟ್ಟು ಹೋಗುತ್ತಿದ್ದಾರೆ. ವಿಪಕ್ಷಗಳ ನಾಯಕರ ಮೇಲೆ ಐ.ಟಿ, ಇ.ಡಿ ದಾಳಿ ಮಾಡಲಾಗುತ್ತಿದೆ. ನಿಮ್ಮ ಪಕ್ಷದವರು ಹರಿಶ್ಚಂದ್ರನ ಮಕ್ಕಳಾ? ಎನ್‌ಡಿಎಯವರು ಎಷ್ಟು ಜನ ಅಕ್ರಮದಲ್ಲಿ ಭಾಗಿಯಾಗಿದ್ದಾರೆಂದು ಪಟ್ಟಿ ಕೊಡಲಾ? ಎಲ್ಲರನ್ನೂ ಹೆದರಿಸಿ, ಬೆದರಿಸಿ ಗೆಲ್ಲಲು ಹೊರಟಿದ್ದೀರಾ... ತೆರಿಗೆ ಹಂಚಿಕೆ ಅನ್ಯಾಯದ ಕುರಿತು ಡಿ.ಕೆ. ಸುರೇಶ್ ನೀಡಿದ್ದ ಹೇಳಿಕೆಯಲ್ಲಿ ಏನು ತಪ್ಪಿದೆ' ಎಂದು ಬಿಜೆಪಿ ನಾಯಕರನ್ನು ಉದ್ದೇಶಿಸಿ ಪ್ರಶ್ನಿಸಿದರು.

'ಐ.ಟಿ, ಇ.ಡಿಯವರಿಗೆ ನನ್ನ ಮತ್ತು ನನ್ನ ಪಕ್ಷದವರ ಬಗ್ಗೆಯೇ ಚಿಂತೆ. ರಾಜ್ಯದಲ್ಲಿ ಡಿಸಿಸಿ ಬ್ಯಾಂಕ್ ಅಧ್ಯಕ್ಷರಿಗೆ, ಉದ್ಯಮಿಗಳಿಗೆ, ಗುತ್ತಿಗೆದಾರರಿಗೆ ಕಿರುಕುಳ ನೀಡುತ್ತಿದ್ದಾರೆ. ಅವರು ಬಿಜೆಪಿಯವರ ಕಡೆ ನೋಡುತ್ತಿಲ್ಲ. ಅವರ ಏಜೆಂಟರಾಗಿ ಕೆಲಸ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

ಒಕ್ಕಲಿಗ ನಾಯಕನಾಗಲು ಇಷ್ಟ ಅಲ್ಲ: 'ಎಚ್ .ಡಿ. ಕುಮಾರಸ್ವಾಮಿ ಮತ್ತು ನಿಮ್ಮ ನಡುವೆ ಒಕ್ಕಲಿಗ ನಾಯಕತ್ವಕ್ಕಾಗಿ ಪೈಪೋಟಿ ನಡೆಯುತ್ತಿದೆಯಲ್ಲವೇ' ಎಂಬ ಪ್ರಶ್ನೆಗೆ, 'ಒಕ್ಕಲಿಗ ನಾಯಕನಾಗಲು ನನಗೆ ಇಷ್ಟ ಇಲ್ಲ. ನಾನು ಸಮುದಾಯದ ನಾಯಕನಲ್ಲ. ನನಗೆ ಜಾತಿ ಇಲ್ಲ, ನೀತಿ ಇದೆ. ನಾನು ಕಾಂಗ್ರೆಸ್ ನಾಯಕ. ಅವರು (ಕುಮಾರಸ್ವಾಮಿ) ಬೆನ್ನಿಗೆ ಚಾಕು ಹಾಕಿದವರನ್ನು ಕರೆದುಕೊಂಡು ಹೋಗಿ ಸ್ವಾಮೀಜಿಯವರಿಂದ ಆಶೀರ್ವಾದ ಪಡೆದುಕೊಂಡಿದ್ದಾರೆ' ಎಂದರು.

ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್. ಶ್ರೀಧರ್ ಹಾಗೂ ಪ್ರಧಾನ ಕಾರ್ಯದರ್ಶಿ ಬಿ.ಪಿ. ಮಲ್ಲಪ್ಪ ಉಪಸ್ಥಿತರಿದ್ದರು.

'ಎನ್‌ಡಿಎ ಅಧಿಕಾರಕ್ಕೆ ಬರಲ್ಲ'

'ಬೇರೆ ಸಮೀಕ್ಷೆಗಳನ್ನು ನಾನು ನಂಬುವುದಿಲ್ಲ. ನಾನು ವೈಯಕ್ತಿಕವಾಗಿ ಸಮೀಕ್ಷೆ ಮಾಡಿಸಿದರೆ ಒಂದೊಂದು ಕ್ಷೇತ್ರದಲ್ಲಿ 50 ಸಾವಿರದಿಂದ 1 ಲಕ್ಷ ಜನರ ಸಮೀಕ್ಷೆ ಮಾಡಿಸುತ್ತೇನೆ. ನನಗೆ ನನ್ನ ರಾಜಕೀಯ ಅನುಭವದ ಮೇಲೆ ನಂಬಿಕೆ ಇದೆ. ನನ್ನ ಜನರನ್ನು ನೋಡಿದರೆ ತಿಳಿಯುತ್ತದೆ. ಎನ್‌ಡಿಎ ಅಧಿಕಾರಕ್ಕೆ ಬರುವುದಿಲ್ಲ. 'ಇಂಡಿಯಾ' ಒಕ್ಕೂಟ ಅಧಿಕಾರಕ್ಕೆ ಬರಲಿದೆ' ಎಂದು ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

'ಆಸ್ತಿ ಬರೆಸಿಕೊಳ್ಳಲು 9 ವರ್ಷದ ಹೆಣ್ಣು ಮಗು ಕೂಡಿಟ್ಟಿದ್ದರು'

ಎಚ್‌.ಡಿ. ದೇವೇಗೌಡ

ಮೂಡಿಗೆರೆ (ಚಿಕ್ಕಮಗಳೂರು): 'ಬಿಡದಿ ಬಳಿಯ ರಸ್ತೆಯ ಬದಿಯ ಜಾಗ ಬರೆಸಿಕೊಳ್ಳಲು ಒಂಬತ್ತು ವರ್ಷದ ಹೆಣ್ಣು ಮಗಳ ಕಣ್ಣಿಗೆ ಬಟ್ಟೆ ಕಟ್ಟಿ ಕೂಡಿ ಹಾಕಿದ್ದರಲ್ಲ ಅದಕ್ಕೆ ಅವರ ಕೈ ಇನ್ನಷ್ಟು ಬಲಪಡಿಸಬೇಕಾ' ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಅವರು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಹರಿಹಾಯ್ದರು.

ಮೂಡಿಗೆರೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅಮೆರಿಕದಲ್ಲಿ ದುಡಿದು ತಂದಿದ್ದ ಹಣದಲ್ಲಿ ಉದ್ಯಮಿಯೊಬ್ಬರು ಬಿಡದಿ ಬಳಿ ಐ.ಟಿ ಕಂಪನಿ ಸ್ಥಾಪನೆ ಮಾಡಲು ಮುಂದಾಗಿದ್ದರು. ಬಹಳ ವರ್ಷ ಆಗಿರುವುದರಿಂದ ಅವರ ಹೆಸರು ಮರೆತಿದ್ದೇನೆ. ಅದರ ಹಿಂದಿನ ದಿನ ಇವರು ಸುಳ್ಳು ಕ್ರಯಪತ್ರ ಸಿದ್ಧಡಿಸುತ್ತಾರೆ. ಅದನ್ನು ಮುಂದಿಟ್ಟುಕೊಂಡು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗೆ ಹೋಗುತ್ತಾರೆ. ಎರಡೂ ಕಡೆ ಮುಖಭಂಗವಾಗುತ್ತದೆ. ಆ ಬಳಿಕ ಆ ವ್ಯಕ್ತಿಯ ಮಗಳನ್ನು ಗಂಗಮ್ಮ ತಿಮ್ಮಯ್ಯ ಕಲ್ಯಾಣ ಮಂಟಪದ ಪಕ್ಕದ ಮನೆಯಲ್ಲಿ ಒಂಬತ್ತು ದಿನ ಇಡುತ್ತಾರೆ' ಎಂದು ವಿವರಿಸಿದರು.

'ಆಸ್ತಿ ಪತ್ರಕ್ಕೆ ಸಹಿ ಹಾಕಿ 9 ವರ್ಷದ ಮಗಳನ್ನು ಕರೆದುಕೊಂಡು ಹೋಗುವಂತೆ ತಿಳಿಸುತ್ತಾರೆ. ಆಸ್ತಿ ಬರೆದುಕೊಟ್ಟು ಮಗಳನ್ನು ಕರೆತರುವಂತೆ ತಾಯಿ ತನ್ನ ಗಂಡನ ಕಾಲು ಹಿಡಿಯುತ್ತಾಳೆ. ಕಣ್ಣು ಕಟ್ಟಿದ ಸ್ಥಿತಿಯಲ್ಲಿ ಮಗಳನ್ನು ಅಪ್ಪನಿಗೆ ತೋರಿಸಿ ಮತ್ತೆ ಒಳಗೆ ಕರೆದೊಯ್ಯುತ್ತಾರೆ. ಚುನಾವಣೆಯಲ್ಲಿ ಈ ಪ್ರಸಂಗ ಬಳಸಿ ಎಂದು ವಕೀಲರೊಬ್ಬರು ನನಗೆ ದಾಖಲೆ ಕೊಟ್ಟಿದ್ದರು' ಎಂದರು.

ಚಿಲ್ಲರೆ ಹೇಳಿಕೆಗೆ ಪ್ರತಿಕ್ರಿಯಿಸಲ್ಲ:ಡಿಕೆಶಿ

ಬೆಂಗಳೂರು: 'ಅವರ (ದೇವೇಗೌಡರ) ಚಿಲ್ಲರೆ ಹೇಳಿಕೆಗೆ ಪ್ರತಿಕ್ರಿಯಿಸಲ್ಲ. ಬಹಿರಂಗ ಚರ್ಚೆಗೆ ಕರೆದಿದ್ದೇನೆ. ಅಧಿವೇಶನದಲ್ಲಿ ಅದಕ್ಕೆ ಉತ್ತರ ಕೊಡುತ್ತೇನೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಒಂಬತ್ತು ವರ್ಷದ ಹೆಣ್ಣು ಮಗುವನ್ನು ಕೂಡಿಹಾಕಿ ಆಸ್ತಿ ಬರೆಸಿಕೊಂಡಿದ್ದಾರೆ' ಎಂಬ ಎಚ್‌.ಡಿ. ದೇವೇಗೌಡರ ಆರೋಪಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಅವರು ದಾಖಲೆ ಬಿಡುಗಡೆ ಮಾಡಲಿ. ತಪ್ಪು ಮಾಡಿದ್ದರೆ ತಲೆ ಬಾಗುತ್ತೇನೆ' ಎಂದರು.

'₹16 ಲಕ್ಷ ಮತ್ತು ₹4 ಲಕ್ಷದ ಎರಡು ಚೆಕ್‌ಗಳನ್ನು ಬರೆದುಕೊಡುತ್ತಾರೆ. ಅವು ಲ್ಯಾಪ್ಸ್ ಆಗುತ್ತವೆ. ಆ ವ್ಯಕ್ತಿ ಕೊನೆಗೆ ಎಲ್ಲಾ ಆಸ್ತಿ ಕಳೆದುಕೊಂಡು ಬೇರೊಬ್ಬರ ಅಧೀನದಲ್ಲಿ ಕೆಲಸ ಮಾಡುತ್ತಾರೆ. ಈ ವಿಷಯ ಹೊರಗೆ ಹೇಳಿದರೆ ಏನಾಗುತ್ತೆ ಗೊತ್ತಲ್ಲ ಎಂದು ಕಬ್ಬನ್ ಪಾರ್ಕ್‌ನಲ್ಲಿ ಹೆದರಿಸುತ್ತಾರೆ. ಇಂಥವರ ಕೈ ಬಲಪಡಿಸಬೇಕಾ?' ಎಂದರು.

ರಾಜ್ಯದ 94 ಶಾಸಕರಿಗೆ ಸಂಪುಟ ದರ್ಜೆ ಸ್ಥಾನ ನೀಡಲಾಗಿದೆ. ಇದರ ಅಗತ್ಯ ಈಗ ಇತ್ತೆ ಎಂದು ಪ್ರಶ್ನಿಸಿದ ಅವರು, ರಾಜ್ಯದ ಆರ್ಥಿಕ ಬಿಕ್ಕಟ್ಟಿಗೆ ಕೇಂದ್ರದ ಮೇಲೆ ದಾಳಿ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಸುದ್ದಿ 2 ನಿಮಿಷ

ಬಿಜೆಪಿ ಸೇರುವುದಾಗಿ ಬೆದರಿಸಿದ್ದ ಸಿದ್ದರಾಮಯ್ಯ: ಕುಮಾರಸ್ವಾಮಿ

ಮೈಸೂರು: 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕರ್ನಾಟಕದಿಂದ ಹೊರಗಡೆ ಕಳಿಸದೇ ಇದ್ದರೆ ಬಿಜೆಪಿ ಸೇರುತ್ತೇನೆ ಎಂದು ಸಿದ್ದರಾಮಯ್ಯ ಅವರು ಕಾಂಗ್ರೆಸ್ ಹೈಕಮಾಂಡ್‌ನವರನ್ನು ಬೆದರಿಸಿದ್ದರು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದರು.

ಇಲ್ಲಿ ಪತ್ರಕರ್ತರ ಜತೆ ಬುಧವಾರ ಮಾತನಾಡಿ, 'ಬೇರೆ ಸಮಾಜದ ನಾಯಕರ ಏಳಿಗೆಯನ್ನು ಸಿದ್ದರಾಮಯ್ಯ ಎಂದಿಗೂ ಸಹಿಸಿಲ್ಲ; ಸಹಿಸುವುದೂ ಇಲ್ಲ' ಎಂದು ದೂರಿದರು.

'ಮೈಸೂರು ಜಿಲ್ಲೆಯಲ್ಲಿ ಒಕ್ಕಲಿಗರಿಗೆ ರಕ್ಷಣೆ ಇಲ್ಲ ಎಂದು ಡಿಕೆಶಿ ಈಚೆಗೆ ಹೇಳಿದ್ದಾರೆ. ಒಕ್ಕಲಿಗರಿಗೆ ಸಿದ್ದರಾಮಯ್ಯ ಅವರಿಂದ ರಕ್ಷಣೆ ಸಿಕ್ಕಿಲ್ಲ; ಅವರಿಂದ ಅನ್ಯಾಯವಾಗಿದೆ ಎಂದು ಒಪ್ಪಿಕೊಂಡಿದ್ದಾರೆ' ಎಂದರು

'ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಶ್ರೀಗಳ ಫೋನ್ ಕದ್ದಾಲಿಕೆಯನ್ನು ನಾನೇಕೆ ಮಾಡಲಿ? ಅವರ ಮೇಲೆ ಅನುಮಾನ ಇದ್ದಿದ್ದರೆ ಅವರೊಂದಿಗೇ ಏಕೆ ಅಮೆರಿಕಕ್ಕೆ ಹೋಗುತ್ತಿದ್ದೆ. ಸರ್ಕಾರ ಬೀಳುತ್ತದೆ ಎಂದು ಯಾರೂ ನನಗೆ ಹೇಳಿರಲಿಲ್ಲ. ನೀವು ಆರಾಮವಾಗಿ ಹೋಗಿ ಬನ್ನಿ ಎಂದು ಹೇಳಿ ಕಳುಹಿಸಿದ್ದರು' ಎಂದು ಕಾಂಗ್ರೆಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು.

ಐಸ್ ಕ್ರೀಂ ತಿಂದು ಮಕ್ಕಳ ಸಾವು

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಬೆಟ್ಟಹಳ್ಳಿ ಗ್ರಾಮದಲ್ಲಿ ಅವಳಿ ಮಕ್ಕಳು ಐಸ್‌ಕ್ರೀಂ ತಿಂದ ಬಳಿಕ ಮೃತಪಟ್ಟಿದ್ದಾರೆ.

ಗ್ರಾಮದ ಪ್ರಸನ್ನ ಮತ್ತು ಪೂಜಾ ದಂಪತಿಯ ಒಂದೂವರೆ ವರ್ಷದ ತ್ರಿಶೂಲ್ ಮತ್ತು ತ್ರಿಶಾ ಮೃತರಾದ ಮಕ್ಕಳು. ಅವರೊಂದಿಗೆ ಐಸ್ ಕ್ರೀಂ ತಿಂದಿದ್ದ ಪೂಜಾ ಕೂಡ ಅಸ್ವಸ್ಥಗೊಂಡಿದ್ದು, ಮಂಡ್ಯ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ವಾಹನದಲ್ಲಿ ಬೆಟ್ಟಹಳ್ಳಿಗೆ ತಂದಿದ್ದ ಐಸ್ ಕ್ರೀಂ ಖರೀದಿಸಿ ತಿಂದ ಕೆಲ ಹೊತ್ತಿನ ಬಳಿಕ ಮಕ್ಕಳು ಅಸ್ವಸ್ಥಗೊಂಡಿದ್ದರು. ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯದಲ್ಲಿ ಮೃತರಾದರು ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

'ಇದೇ ವಾಹನದಲ್ಲಿ ಗ್ರಾಮದ ಇನ್ನೂ ಹಲವರು ಐಸ್‌ಕ್ರೀಂ ಖರೀದಿಸಿ ತಿಂದಿದ್ದರು. ಬೇರೆಯವರಲ್ಲಿ ಯಾವುದೇ ಸಮಸ್ಯೆ ಕಂಡು ಬಂದಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ. 'ಮಕ್ಕಳ ಸಾವು ಪ್ರಕರಣ ಅನುಮಾನಾಸ್ಪವಾಗಿದೆ. ಈ ಬಗ್ಗೆ ತನಿಖೆ ನಡೆಯುತ್ತಿದೆ' ಎಂದು ಹೇಳಿದರು.

ಅರಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿಕ್ಕೋಡಿಯಲ್ಲಿ ಆಲಿಕಲ್ಲು ಮಳೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯ ಚಿಕ್ಕೋಡಿ, ಸವದತ್ತಿಯಲ್ಲಿ ಬುಧವಾರ ಗುಡುಗು, ಮಿಂಚು ಸಹಿತ ಆಲಿಕಲ್ಲು ಮಳೆಯಾಯಿತು. ಗೋಕಾಕ ತಾಲ್ಲೂಕಿನ ಮದವಾಲ, ಅಂಕಲಗಿ, ಅಕ್ಕತಂಗೇರಹಾಳದಲ್ಲಿ ಸಾಧಾರಣ, ಬೈಲಹೊಂಗಲದಲ್ಲಿ ತುಂತುರು ಮಳೆ ಆಯಿತು.

ಮಳೆ ಜೊತೆ ಜೋರಾಗಿ ಗಾಳಿ ಬೀಸಿದ ಪರಿಣಾಮ ಚಿಕ್ಕೋಡಿ ತಾಲ್ಲೂಕಿನ ಕಬ್ಬೂರ ಗ್ರಾಮದಲ್ಲಿ ನಾಲ್ಕು ಮನೆಗಳ ಪತ್ರಾಸ್, ಹೆಂಚು ಹಾರಿಹೋದವು. ಒಂದು ಮನೆ ಗೋಡೆ ಕುಸಿದು ಬಿದ್ದಿದೆ.

ಪ್ರಚಾರಕ್ಕೆ ಬರಲಿದ್ದಾರೆ ಮೋದಿ, ಶಾ, ಯೋಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊದಲ ಹಂತದ ಮತದಾನಕ್ಕೆ (ಏ.26) ಇನ್ನೂ ಒಂಬತ್ತು ದಿನಗಳು ಬಾಕಿ ಇದ್ದು, ಬಿಜೆಪಿಯ ಘಟಾನುಘಟಿ ನಾಯಕರು ಪ್ರಚಾರಕ್ಕಾಗಿ ರಾಜ್ಯಕ್ಕೆ ಸಾಲು ಸಾಲಾಗಿ ಬರಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಏ.20ಕ್ಕೆ ಬರಲಿದ್ದಾರೆ. ಅಮಿತ್ ಶಾ ಅವರು ಏ.23 ಮತ್ತು 24, ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಏ. 24ರಂದು ಪ್ರಚಾರ ನಡೆಸಲಿದ್ದಾರೆ. ಜೆ.ಪಿ.ನಡ್ಡಾ ಮತ್ತು ರಾಜನಾಥ್ ಸಿಂಗ್ ಅವರ ದಿನಾಂಕ ನಿಗದಿ ಆಗಬೇಕಾಗಿದೆ ಎಂದು ಬಿಜೆಪಿ ಪ್ರಧಾನಕಾರ್ಯದರ್ಶಿ ವಿ.ಸುನಿಲ್‌ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮಹಾರಾಷ್ಟ್ರಕ್ಕೆ 3 ತಾಲ್ಲೂಕು: ಅಂಜಲಿ ಹೇಳಿಕೆಗೆ ಬಿಜೆಪಿ ಟೀಕೆ

ಬೆಂಗಳೂರು: ಬೆಳಗಾವಿ ಜಿಲ್ಲೆಯ ಮೂರು ತಾಲ್ಲೂಕುಗಳು ಮಹಾರಾಷ್ಟ್ರಕ್ಕೆ ಸೇರಬೇಕಾಗಿವೆ ಎಂದು ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅಂಜಲಿ ನಿಂಬಾಳ್ಕರ್ ಹೇಳಿಕೆ ನೀಡಿದ್ದು, ಈ ಬಗ್ಗೆ ಕಾಂಗ್ರೆಸ್ ತನ್ನ ನಿಲುವು ಸ್ಪಷ್ಟಪಡಿಸಬೇಕು ಎಂದು ಬಿಜೆಪಿ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕ ವಿ.ಸುನಿಲ್‌ಕುಮಾರ್ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದ್ದಾರೆ.

'ಪಕ್ಷದ ನಾಯಕರ ಆಶೀರ್ವಾದ ಇಲ್ಲದೇ ಇಂತಹ ಹೇಳಿಕೆಗಳನ್ನು ನೀಡಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ರಾಜ್ಯವನ್ನು ಒಡೆಯುವುದು ಕಾಂಗ್ರೆಸ್ ಪಕ್ಷದ ರಹಸ್ಯ ಕಾರ್ಯಸೂಚಿಯೇ ಎಂಬುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಬೇಕು. ವಿಚಿತ್ರವೆಂದರೆ ಇಂತಹ ಹೇಳಿಕೆಗಳನ್ನು ಖಂಡಿಸದೇ ಮೌನವಹಿಸಿದ್ದಾರೆ. ವಿಧಾನಸೌಧದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಕೂಗಿದಾಗಲೂ ಮುಖ್ಯಮಂತ್ರಿ ಇದೇ ರೀತಿ ಮೌನವಹಿಸಿದ್ದರು' ಎಂದು ಸುನಿಲ್‌ಕುಮಾರ್ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಏ.20ರಂದು ಮಧ್ಯಾಹ್ನ 3.30ಕ್ಕೆ ಚಿಕ್ಕಬಳ್ಳಾಪುರದಲ್ಲಿ ಮತ್ತು ಸಂಜೆ 5.30ಕ್ಕೆ ಬೆಂಗಳೂರು ಅರಮನೆ ಮೈದಾನದಲ್ಲಿ 'ವಿಜಯ ಸಂಕಲ್ಪ' ಸಮಾವೇಶಗಳಲ್ಲಿ ಭಾಗವಹಿಸಲಿದ್ದಾರೆ.

ಗೃಹ ಸಚಿವ ಅಮಿತ್ ಶಾ ಅವರು, ಏ. 23ರಂದು ಬೆಳಿಗ್ಗೆ 10ಕ್ಕೆ ಯಶವಂತಪುರದಲ್ಲಿ ರೋಡ್ ಶೋ, 12.30ಕ್ಕೆ ಯಲಹಂಕದಲ್ಲಿ ಸಾರ್ವಜನಿಕ ಸಭೆ, ಸಂಜೆ 4ಕ್ಕೆ ಬೊಮ್ಮನಹಳ್ಳಿಯಲ್ಲಿ ರೋಡ್ ಶೋ, ರಾತ್ರಿ 7ಕ್ಕೆ ಮಹದೇವಪುರದಲ್ಲಿ ರೋಡ್ ಶೋನಲ್ಲಿ ಪಾಲ್ಗೊಳ್ಳಲಿದ್ದಾರೆ. ಏ.24ರ ಬೆಳಿಗ್ಗೆ 10ಕ್ಕೆ ಚಿಕ್ಕಮಗಳೂರಿನಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಲಿದ್ದಾರೆ. ಅದೇ ದಿನ ಮಧ್ಯಾಹ್ನ 1ಕ್ಕೆ ತುಮಕೂರಿನಲ್ಲಿ ಹಿಂದುಳಿದ ವರ್ಗಗಳ ಸಮಾವೇಶದಲ್ಲಿ ಭಾಗವಹಿಸಲಿದ್ದು, ಸಂಜೆ 5ಕ್ಕೆ ಹುಬ್ಬಳ್ಳಿಯಲ್ಲಿ ರೋಡ್ ಶೋನಲ್ಲಿ ಪಾಲ್ಗೊಳ್ಳುವರು ಎಂದು ಹೇಳಿದರು.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಏ.24ರಂದು ಬೆಳಿಗ್ಗೆ 10ಕ್ಕೆ ಆರ್.ಆರ್. ನಗರದಲ್ಲಿ ರೋಡ್ ಶೋ ನಡೆಸಲಿದ್ದಾರೆ. ಮಧ್ಯಾಹ್ನ 12 ಕ್ಕೆ ಮಡಿಕೇರಿಯಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಗಹಿಸಲಿದ್ದು, ಸಂಜೆ 4ಕ್ಕೆ ಉಡುಪಿಯಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಲಿದ್ದಾರೆ.

'ಮೋದಿಗಾಗಿ ಈ ಭಾನುವಾರ': ಏ. 21 ಮತ್ತು 28ರಂದು 'ನಾನು ಮೋದಿ ಪರಿವಾರ, ಮೋದಿಗಾಗಿ ಮೀಸಲು ಈ ಭಾನುವಾರ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಏ. 21ರಂದು ರಾಜ್ಯದ ವಿವಿಧೆಡೆ 15 ಲಕ್ಷಕ್ಕೂ ಹೆಚ್ಚು ಮೋದಿ ಬೆಂಬಲಿಗರು ಪ್ರಚಾರದಲ್ಲಿ ತೊಡಗಿಸಿಕೊಳ್ಳಲಿದ್ದಾರೆ.

ಕುಮಾರ ನಾಯಕ ಪತ್ನಿಯೇ ಶ್ರೀಮಂತೆ

₹4.12 ಕೋಟಿ ಒಟ್ಟು ಆಸ್ತಿಯ ಮೌಲ್ಯ

₹28.97 ಕೋಟಿ ಪತ್ನಿ ಶೀಲಾ ಕುಮಾರ ಒಟ್ಟು ಆಸ್ತಿಯ ಮೌಲ್ಯ

ಜಿ.ಕುಮಾರ ನಾಯಕ

ರಾಯಚೂರು: ರಾಯಚೂರು ಲೋಕಸಭಾ (ಪರಿಶಿಷ್ಟ ಪಂಗಡದ ಮೀಸಲು) ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ನಿವೃತ್ತ ಐಎಎಸ್ ಅಧಿಕಾರಿ ಜಿ.ಕುಮಾರ ನಾಯಕ ಅವರಿಗಿಂತ ಅವರ ಪತ್ನಿ ಶೀಲಾ ಕುಮಾರ ಅವರೇ ಅಧಿಕ ಆಸ್ತಿ ಹೊಂದಿದ್ದಾರೆ.

ಜಿ.ಕುಮಾರ ನಾಯಕ ₹ 1.72 ಕೋಟಿ ಮೌಲ್ಯದ ಚರಾಸ್ತಿ, ₹ 2.40 ಕೋಟಿ ಮೌಲ್ಯದ ಸ್ಥಿರಾಸ್ತಿ ಹೊಂದಿದ್ದರೆ, ಪತ್ನಿ ₹ 2.27 ಕೋಟಿ ಮೌಲ್ಯದ ಚರಾಸ್ತಿ ಮತ್ತು ₹ 26.70 ಕೋಟಿ ಮೌಲ್ಯದ ಸ್ಥಿರಾಸ್ಥಿ ಹೊಂದಿದ್ದಾರೆ. ವಿವಿಧ ಹಣಕಾಸು ಸಂಸ್ಥೆಗಳಿಂದ ₹5.04 ಕೋಟಿ ಸಾಲ ಪಡೆದಿದ್ದಾರೆ. ಕುಮಾರ ನಾಯಕ ಬಳಿ 20 ತೊಲ ಚಿನ್ನ ಹಾಗೂ ಶೀಲಾ ಕುಮಾರ ಬಳಿ 72.05 ತೊಲ ಚಿನ್ನ ಇದೆ ಎಂದು ಪ್ರಮಾಣಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಐಎಎಸ್ 1990ರ ಕೇಡರ್ ಅಧಿಕಾರಿಯಾಗಿದ್ದ ಇವರು, ರಾಯಚೂರು ಜಿಲ್ಲಾಧಿಕಾರಿ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಮೊದಲ ಬಾರಿಗೆ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿದ್ದಾರೆ.

ತಂದೆಯ ಬದುಕೇ ಪ್ರೇರಣೆ

ಪ್ರಜಾವಾಣಿ ವಾರ್ತೆ

ಎನ್‌.ಎ.ಹಂಸಶ್ರೀ

ಚಿಕ್ಕಬಳ್ಳಾಪುರ: 'ಮಗಳೇ ನಮ್ಮದು ಜೀತಗಾರರ ಕುಟುಂಬ. ನಮ್ಮ ಅಪ್ಪ, ಅಜ್ಜ ಊರಿನ ಸ್ವಾಮಿಗಳ ಮನೆಯಲ್ಲಿ ಜೀತ ಮಾಡುತ್ತಿದ್ದರು. ನೀನು ಎಂಜಿನಿಯರ್, ವೈದ್ಯೆ ಆಗುವುದಕ್ಕಿಂತ ಯುಪಿಎಸ್‌ಸಿ ಪರೀಕ್ಷೆ ಬರೆದು ಉನ್ನತ ಹುದ್ದೆ ಪಡೆಯಬೇಕು. ಆಗ ನಮ್ಮ ಕುಟುಂಬಕ್ಕೆ ಹೆಮ್ಮೆ' ಇದು ಯುಪಿಎಸ್‌ಸಿ ಪರೀಕ್ಷೆಯಲ್ಲಿ 866ನೇ ರ್‍ಯಾಂಕ್ ಪಡೆದಿರುವ ಬಾಗೇಪಲ್ಲಿ ತಾಲ್ಲೂಕಿನ ನಂಜಿರೆಡ್ಡಿಪಲ್ಲಿಯ ಎನ್‌.ಎ.ಹಂಸಶ್ರೀ ಅವರಿಗೆ ಅವರ ತಂದೆ ಎನ್‌.ಎ.ಆದಿನಾರಾಯಣಪ್ಪ ಅವರು ಹೇಳುತ್ತಿದ್ದ ಮಾತು.

ತಂದೆಯ ಮಾತುಗಳನ್ನು ಮನಕ್ಕೆ ಇಳಿಸಿಕೊಂಡ ಹಂಸಶ್ರೀ ಈಗ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ್ದಾರೆ. ಇಡೀ ಕುಟುಂಬ ಖುಷಿಪಡುತ್ತಿದೆ.

ಬಿ.ಇ ಕಂಪ್ಯೂಟರ್ ಸೈನ್ಸ್ ಪದವಿ ಪಡೆದಿರುವ ಹಂಸಶ್ರೀ ಯಾವುದೇ ಕೆಲಸಕ್ಕೆ ಸೇರಲಿಲ್ಲ. ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸಿದ್ದರು. ಬಾಲ್ಯದಲ್ಲಿ ಜೀತಗಾರನ ಕೆಲಸ ಮಾಡಿದ ಅವರ ತಂದೆ ಆದಿನಾರಾಯಣಪ್ಪ ಸಹ ನಂತರ ಓದು ಮುಂದುವರಿಸಿ ಪ್ರಾಧ್ಯಾಪಕರಾದರು.

ಆದಿನಾರಾಯಣಪ್ಪ ಶಿಡ್ಲಘಟ್ಟದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ. ತಾಯಿ ವೀಣಾ ರಾಣಿ ಕೂಡ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ.

'ನಮ್ಮ ತಂದೆ ಜೀವನದಲ್ಲಿ ಅಪಾರ ಕಷ್ಟಪಟ್ಟಿದ್ದಾರೆ. ನಾನು ಉನ್ನತ ಸ್ಥಾನ ಪಡೆಯಬೇಕು ಎನ್ನುವುದು ಅವರ ಆಸೆ. ನಾನು ಸಹ ಆ ಛಲದಲ್ಲಿಯೇ ವ್ಯಾಸಂಗ ಮಾಡಿದೆ' ಎನ್ನುತ್ತಾರೆ ಹಂಸಶ್ರೀ.

ಸಾಫ್ಟ್‌ವೇರ್ ಎಂಜಿನಿಯರ್‌ಗೆ 641ನೇ ರ್‍ಯಾಂಕ್

ಪ್ರಜಾವಾಣಿ ವಾರ್ತೆ

ಸಂತೋಷ ಶಿರಡೋಣ

ವಿಜಯಪುರ: ಯುಪಿಎಸ್‌ಸಿ ಪರೀಕ್ಷೆಯಲ್ಲಿ ವಿಜಯಪುರದ ಶಾಸ್ತ್ರಿ ನಗರದ ಸಂತೋಷ ಶಿರಡೋಣ 641ನೇ ರ್‍ಯಾಂಕ್ ಪಡೆದು ಸಾಧನೆ ಮಾಡಿದ್ದಾರೆ.

ವಕೀಲ ಶ್ರೀಕಾಂತ ಶಿರಡೋಣ ಹಾಗೂ ಅನ್ನಪೂರ್ಣ ದಂಪತಿಯ ಮಗನಾದ ಸಂತೋಷ ನಾಲ್ಕನೇ ಪ್ರಯತ್ನದಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಈ ಪರೀಕ್ಷೆಗಾಗಿ ದೆಹಲಿಯಲ್ಲಿ ವಿಶೇಷ ತರಬೇತಿ ಪಡೆದರು.

'ಬೆಂಗಳೂರಿನ ಆರ್‌.ವಿ.ಕಾಲೇಜಿನಲ್ಲಿ ಬಿಇ ಕಂಪ್ಯೂಟರ್ ಸೈನ್ಸ್ ಓದಿದ್ದು, ಬಿಇ ಮುಗಿದ ಮೇಲೆ ಕಂಪನಿಯೊಂದರಲ್ಲಿ ಉದ್ಯೋಗ ಮಾಡುತ್ತಿದ್ದೆ. ಆದರೆ, ಮೊದಲಿನಿಂದಲೂ ಸ್ಪರ್ಧಾತ್ಮಕ ಪರೀಕ್ಷೆ ಬರೆಯಬೇಕು, ಉನ್ನತ ಹುದ್ದೆಗೆ ಹೋಗಬೇಕು ಎಂಬ ಹಂಬಲ ಇತ್ತು. ಕಂಪನಿ ಉದ್ಯೋಗ ಬಿಟ್ಟು, ದೆಹಲಿಯಲ್ಲಿ ನಾಲ್ಕು ವರ್ಷಗಳಿಂದ ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ನಡೆಸಿದೆ. ನಿತ್ಯ 10 ರಿಂದ 12 ತಾಸು ಓದಿದೆ. ಕಠಿಣ ಅಧ್ಯಯನ, ನಿರಂತರ ಪರಿಶ್ರಮದಿಂದ ಈ ಸಾಧನೆ ಸಾಧ್ಯವಾಗಿದೆ' ಎಂದು ಸಂತೋಷ 'ಪ್ರಜಾವಾಣಿ'ಗೆ ತಿಳಿಸಿದರು.

ಕ್ಯಾಂಪಸ್ ಸಂದರ್ಶನದಲ್ಲಿ ಅಮೆರಿಕದ ಮಾರ್ಗನ್ ಸ್ಟ್ಯಾನ್ಲಿ ಮಲ್ಟಿನ್ಯಾಷನಲ್ ಕಂಪನಿಯಲ್ಲಿ ವಾರ್ಷಿಕ ₹18 ಲಕ್ಷ ವೇತನದೊಂದಿಗೆ ಸಾಫ್ಟ್‌ವೇರ್ ಎಂಜಿನಿಯರ್ ಹುದ್ದೆಗೆ ಆಯ್ಕೆಯಾಗಿ, ಬೆಂಗಳೂರಿನಲ್ಲಿ 8 ತಿಂಗಳು ಕೆಲಸ ಮಾಡಿದ್ದರು.

ನಾಲ್ಕನೇ ಪ್ರಯತ್ನದಲ್ಲಿ ಕೈ ಹಿಡಿದ ಯಶಸ್ಸು

ರಕ್ಷಿತ್ ಕೆ.ಗೌಡ

ತುಮಕೂರು: ತಾಲ್ಲೂಕಿನ ಹೆಬ್ಬೂರು ಹೋಬಳಿಯ ಲಿಂಗಾಪುರ ಗ್ರಾಮದ ಶಿಕ್ಷಕ ದಂಪತಿಯ ಪುತ್ರ ರಕ್ಷಿತ್ ಕೆ.ಗೌಡ ಯುಪಿಎಸ್‌ಸಿ ಪರೀಕ್ಷೆಯಲ್ಲಿ 802ನೇ ರ್‍ಯಾಂಕ್ ಪಡೆದಿದ್ದಾರೆ.

ತಂದೆ ಎಂ.ಕೆಂಪರಾಜು ಪ್ರೌಢಶಾಲೆ ಶಿಕ್ಷಕ, ತಾಯಿ ಪ್ರಾಥಮಿಕ ಶಾಲೆ ಶಿಕ್ಷಕಿ. ಮಗನನ್ನು ಉನ್ನತ ಸ್ಥಾನದಲ್ಲಿ ನೋಡಬೇಕು ಎಂಬ ಪೋಷಕರ ಕನಸು ನನಸಾಗಿದೆ. ರಕ್ಷಿತ್ ಸತತ ಪರಿಶ್ರಮದಿಂದ 4ನೇ ಪ್ರಯತ್ನದಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ನಗರದ ಎಸ್‌ಜಿಆರ್ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಿ, ಬೆಂಗಳೂರಿನ ಅಮೃತ ವಿಶ್ವವಿದ್ಯಾಪೀಠದಲ್ಲಿ ಬಿ.ಟೆಕ್ ಪದವಿ ಪಡೆದ ನಂತರ ಯುಪಿಎಸ್‌ಸಿ ಪರೀಕ್ಷೆಯ ಕಡೆಗೆ ಗಮನ ಹರಿಸಿದರು. 2022ರಲ್ಲಿ 15 ಅಂಕಗಳ ಅಂತರದಲ್ಲಿ ರ್‍ಯಾಂಕ್ ತಪ್ಪಿತ್ತು. 2023ನೇ ಸಾಲಿನ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

'ಸತತ ಪ್ರಯತ್ನದಿಂದ ಯಶಸ್ಸು ಸಾಧ್ಯ. ಕನಸು ನನಸಾಗಲು ಪ್ರಯತ್ನ ನಿರಂತರವಾಗಿರಬೇಕು. ಸೋಲಿಗೆ ಕುಗ್ಗದೆ ಮುಂದೆ ಸಾಗಿದರೆ ಯಶಸ್ಸು ಸುಲಭವಾಗಲಿದೆ' ಎಂದು ರಕ್ಷಿತ್ ಹೇಳುತ್ತಾರೆ.

ರೈತನ ಮಗನಿಗೆ 804ನೇ ರ್‍ಯಾಂಕ್

ರಾಹುಲ ಪಾಟೀಲ

ಬೆಳಗಾವಿ: ಬೆಳಗಾವಿ ತಾಲ್ಲೂಕಿನ ಕಲಕಾಂಬದ ಕೃಷಿ ಕುಟುಂಬದ ರಾಹುಲ ಪಾಟೀಲ ಈ ಬಾರಿಯ ಯುಪಿಎಸ್‌ಸಿ ಪರೀಕ್ಷೆಯಲ್ಲಿ 804ನೇ ರ್‍ಯಾಂಕ್ ಪಡೆದಿದ್ದು ತಮ್ಮ ಐದನೇ ಯತ್ನದಲ್ಲಿ ಅವರು ಸಫಲರಾಗಿದ್ದಾರೆ. 'ಬಿ.ಇ (ಮೆಕ್ಯಾನಿಕಲ್ ಎಂಜಿನಿಯರಿಂಗ್) ಓದಿರುವ ಅವರು ಒಂದೂವರೆ ವರ್ಷ ದೆಹಲಿಯಲ್ಲಿ ತರಬೇತಿ ಪಡೆದರು.

ಕೃಷಿಕರಾಗಿರುವ ತಂದೆ ಜಯವಂತ ಬಿ.ಎಸ್ಸಿ ಪದವೀಧರ. ಗೃಹಿಣಿಯಾಗಿರುವ ತಾಯಿ ಸುರೇಖಾ ಎಸ್ಸೆಸ್ಸೆಲ್ಸಿ ಓದಿದ್ದಾರೆ. ಈ ದಂಪತಿಗೆ ಇಬ್ಬರು ಪುತ್ರರು, ಪುತ್ರಿ ಇದ್ದಾರೆ.

'ಈಗಿನ ರ್‍ಯಾಂಕಿಂಗ್ ಪ್ರಕಾರ, ನನಗೆ ಐಎಎಸ್ ದರ್ಜೆ ಸಿಗುವ ಸಾಧ್ಯತೆ ಕಡಿಮೆ. ಅದಕ್ಕೆ ಐಎಎಸ್ ಅಧಿಕಾರಿ ಆಗಬೇಕು ಎಂಬ ಕನಸು ನನಸಾಗಿಸಲು, ಯುಪಿಎಸ್‌ಸಿ ಪರೀಕ್ಷೆ ಮತ್ತೆ ಬರೆಯುವೆ. ರ್‍ಯಾಂಕಿಂಗ್ ಸುಧಾರಿಸಿಕೊಳ್ಳಲು ಯತ್ನಿಸುವೆ. ಈಗ ಸಿಗುವ ಹುದ್ದೆ ಸಮರ್ಥವಾಗಿ ನಿಭಾಯಿಸಿ, ಬಡಜನರ ಬದುಕು ಸುಧಾರಣೆಗೆ ಒತ್ತು ಕೊಡುವೆ. ಪರೀಕ್ಷೆಯಲ್ಲಿ ಒಮ್ಮೆ ವಿಫಲವಾಗಿದ್ದಕ್ಕೆ ಅಭ್ಯರ್ಥಿಗಳು ಪ್ರಯತ್ನ ಕೈಬಿಡಬಾರದು. ಗುರಿ ಮುಟ್ಟುವವರೆಗೂ ವಿಶ್ವಾಸ ಉಳಿಸಿಕೊಂಡು ಮುನ್ನಡೆಯಬೇಕು. ಆಗ ಯಶಸ್ಸಿನ ಪಥದಲ್ಲಿ ಸಾಗಬಹುದು' ಎಂದು ರಾಹುಲ ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

14 ಕ್ಷೇತ್ರ: ಅಭ್ಯರ್ಥಿಗಳ ಸಂಖ್ಯೆ 168ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ರಾಜ್ಯದ 14 ಲೋಕಸಭಾ ಕ್ಷೇತ್ರಗಳಲ್ಲಿ ಬುಧವಾರ 60 ಮಂದಿ ನಾಮಪತ್ರ ಸಲ್ಲಿಸಿದ್ದಾರೆ. ಇದರೊಂದಿಗೆ ಈ ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಸಿದವರ ಒಟ್ಟು ಸಂಖ್ಯೆ 168ಕ್ಕೆ ತಲುಪಿದೆ.

ಈ ಕ್ಷೇತ್ರಗಳಲ್ಲಿ ಶುಕ್ರವಾರದಿಂದ ನಾಮಪತ್ರ ಸಲ್ಲಿಕೆ ಆರಂಭವಾಗಿತ್ತು. ಬುಧವಾರ ಒಟ್ಟು 72 ನಾಮಪತ್ರಗಳು ಸಲ್ಲಿಕೆಯಾಗಿವೆ. ನಾಮಪತ್ರ ಸಲ್ಲಿಸಿದವರಲ್ಲಿ 55 ಮಂದಿ ಪುರುಷರು ಮತ್ತು ಐವರು ಮಹಿಳೆಯರು ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಈವರೆಗೆ ನಾಮಪತ್ರ ಸಲ್ಲಿಸಿರುವ ಒಟ್ಟು ಅಭ್ಯರ್ಥಿಗಳಲ್ಲಿ 153 ಮಂದಿ ಪುರುಷರು. 15 ಮಹಿಳೆಯರು ಚುನಾವಣಾ ಅಖಾಡಕ್ಕಿಳಿದಿದ್ದಾರೆ. ದಾವಣಗೆರೆ (20), ಬೀದರ್ (17) ಮತ್ತು ಶಿವಮೊಗ್ಗ (15) ಲೋಕಸಭಾ ಕ್ಷೇತ್ರಗಳಲ್ಲಿ ಹೆಚ್ಚು ಮಂದಿ ನಾಮಪತ್ರ ಸಲ್ಲಿಸಿದ್ದಾರೆ.

ಬಿಜೆಪಿ ಅಭ್ಯರ್ಥಿಗಳು 12 ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಸಿದ್ದಾರೆ. ಬಾಗಲಕೋಟೆಯಲ್ಲಿ ಪಿ.ಸಿ. ಗದ್ದಿಗೌಡರ್ ಮತ್ತು ಶಿವಮೊಗ್ಗದಲ್ಲಿ ಬಿ.ವೈ. ರಾಘವೇಂದ್ರ ನಾಮಪತ್ರ ಸಲ್ಲಿಸುವುದು ಬಾಕಿ ಇದೆ. ಕಾಂಗ್ರೆಸ್ ಅಭ್ಯರ್ಥಿಗಳು 13 ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಸಿದ್ದಾರೆ. ಚಿಕ್ಕೋಡಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ಮಗಳು ಪ್ರಿಯಾಂಕಾ ಜಾರಕಿಹೊಳಿ ನಾಮಪತ್ರ ಸಲ್ಲಿಕೆ ಬಾಕಿ ಇದೆ.

ಟಿ.ವಿಜಯ ಕುಮಾರ್‌ಗೆ 953ನೇ ರ್‍ಯಾಂಕ್

ವಿಜಯ ಕುಮಾರ್

ಬಳ್ಳಾರಿ: ಸಂಡೂರು ತಾಲ್ಲೂಕಿನ ಚೋರನೂರು ಗ್ರಾಮದ ಮತ್ತು ಪ್ರಸ್ತುತ ಕೊಪ್ಪಳ ಜಿಲ್ಲಾ ಕಾರಾಗೃಹದಲ್ಲಿ ಅಧೀಕ್ಷಕ ಆಗಿರುವ ಟಿ.ವಿಜಯ ಕುಮಾರ್ ಯುಪಿಎಸ್‌ಸಿ ಪರೀಕ್ಷೆಯಲ್ಲಿ 953ನೇ ರ್‍ಯಾಂಕ್ ಪಡೆದಿದ್ದಾರೆ.

ಅವರು ಇಂಡಸ್ಟ್ರಿಯಲ್ ಎಂಜಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಪದವೀಧರ. ತಂದೆ ಅಡಿವೆಪ್ಪ.ಟಿ, ಸಣ್ಣ ವ್ಯವಹಾರಗಳ ಉದ್ಯಮಿ. ತಾಯಿ ಎಂ.ಟಿ ಮಣಿಯಮ್ಮ ಸರ್ಕಾರಿ ಶಾಲಾ ಶಿಕ್ಷಕಿಯಾಗಿ ನಿವೃತ್ತರಾಗಿದ್ದಾರೆ.

'ಯುಪಿಎಸ್‌ಸಿ ಪರೀಕ್ಷೆಗೆ ನಾನು 2016 ರಿಂದ ಯಾವುದೇ ತರಬೇತಿ ಪಡೆಯದೆ ಸ್ವಯಂ ಅಧ್ಯಯನ ಆರಂಭಿಸಿದೆ. ಪರೀಕ್ಷೆಗೆ ಎಷ್ಟು ಬೇಕು ಅಷ್ಟನ್ನು ಮಾತ್ರ ಓದಿದೆ. ಅಗತ್ಯಗಿಂತ ಹೆಚ್ಚು ಓದಿದರೆ ಪರೀಕ್ಷೆಗಳಲ್ಲಿ ವಿಷಯಾಂತರ ಆಗುತ್ತದೆ. ಕೋಚಿಂಗ್ ಬೇಕು ಎಂದೇನಿಲ್ಲ. ಸೂಕ್ತ ಮಾರ್ಗದರ್ಶನ ಸಿಕ್ಕರೆ ಸಾಕು. ಜೊತೆಗೆ ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಅಭ್ಯಸಿಸಿದರೆ ಪರೀಕ್ಷೆಯ ರೂಪುರೇಷೆ ಅರ್ಥವಾಗುತ್ತದೆ. ಸಮಯ ನಿಗದಿಪಡಿಸಿಕೊಂಡು ಓದುವುದಕ್ಕಿಂತ ದಿನದಲ್ಲಿ ಸಾಧ್ಯವಾದಷ್ಟು ಹೆಚ್ಚಿನ ಸಮಯ ಓದಿಗೆ ಮೀಸಲಿಡಬೇಕು. ಸಮಯ ವ್ಯರ್ಥ ಮಾಡದೇ ಓದಿದರೆ ಯಶಸ್ಸು ಸಾಧ್ಯ. ಮುಖ್ಯವಾಗಿ ಕುಟುಂಬದ ಸಹಕಾರ ಅವಶ್ಯ' ಎಂದು ಟಿ.ವಿಜಯಕುಮಾರ ತಿಳಿಸಿದರು.

ಸರ್ಕಾರಿ ಗೌರವಗಳೊಂದಿಗೆ ಚಾಮರಾಜಪೇಟೆಯ ಚಿತಾಗಾರದಲ್ಲಿ ಅಂತ್ಯಕ್ರಿಯೆ

ದ್ವಾರಕೀಶ್‌ಗೆ ಭಾವಪೂರ್ಣ ವಿದಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೃದಯಾಘಾತದಿಂದ ಮಂಗಳವಾರ (ಏ.16) ನಿಧನರಾದ ನಟ, ನಿರ್ಮಾಪಕ, ನಿರ್ದೇಶಕ ದ್ವಾರಕೀಶ್ ಅವರ ಅಂತ್ಯಕ್ರಿಯೆ ಬುಧವಾರ (ಏ.17) ಮಧ್ಯಾಹ್ನ ಸಕಲ ಸರ್ಕಾರಿ ಗೌರವಗಳೊಂದಿಗೆ ಚಾಮರಾಜಪೇಟೆಯ ಚಿತಾಗಾರದಲ್ಲಿ ನಡೆಯಿತು.

ದ್ವಾರಕೀಶ್ ಅವರ ಪಾರ್ಥಿವ ಶರೀರವನ್ನು ಬುಧವಾರ ಬೆಳಗ್ಗೆ ಎಲೆಕ್ಟ್ರಾನಿಕ್ ಸಿಟಿಯ ಗುಳಿಮಂಗಲದ ಅವರ ಮನೆಯಿಂದ ರವೀಂದ್ರ ಕಲಾಕ್ಷೇತ್ರದ ಆವರಣಕ್ಕೆ ತರಲಾಯಿತು. ಅಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಕನ್ನಡಿಗರಿಗೆ ಹಾಸ್ಯದೌತಣ ಉಣಿಸಿದ್ದ ದ್ವಾರಕೀಶ್ ಅಲ್ಲಿ ಸೇರಿದ್ದ ಎಲ್ಲರ ಕಣ್ಣಂಚನ್ನು ಒದ್ದೆ ಮಾಡಿದ್ದರು. ದ್ವಾರಕೀಶ್ ಅವರ ಪಾರ್ಥಿವ ಶರೀರದ ಮುಂದೆ ನಿಂತಾಗ ಹಲವರು ಭಾವುಕರಾದರು; ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಇನ್ನೂ ಕೆಲವರು ಅವರು ನಗಿಸಿದ ಕ್ಷಣಗಳನ್ನು, ಸಿನಿಮಾಗಳ ಪಾತ್ರಗಳನ್ನು ನೆನಪಿಸಿಕೊಂಡು ಒಂದು ಕ್ಷಣ ನಕ್ಕು, ಮತ್ತೆ ಮೌನಕ್ಕೆ ಜಾರಿದರು.

ದ್ವಾರಕೀಶ್ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದ ನಟ ಯಶ್. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್‌.ಎಂ.ಸುರೇಶ್, ನಿರ್ಮಾಪಕ ಕೆ.ಮಂಜು ಇದ್ದರು —ಪ್ರಜಾವಾಣಿ ಚಿತ್ರ

ದರ್ಶನ ಪಡೆದ ಸಾರ್ವಜನಿಕರ ಸಂಖ್ಯೆ ವಿರಳವಾಗಿತ್ತು. ಆದರೆ ಚಿತ್ರರಂಗದ ಪ್ರಮುಖರೆಲ್ಲರೂ ಅಂತಿಮ ದರ್ಶನ ಪಡೆದರು. ತನ್ನನ್ನು ಚಿತ್ರರಂಗಕ್ಕೆ ಪರಿಚಯಿಸಿದ ವ್ಯಕ್ತಿ ಇನ್ನಿಲ್ಲ ಎನ್ನುವುದನ್ನು ಕಂಡು ನಟಿ ಶ್ರುತಿ ಕಣ್ಣೀರಾದರು. ಕ್ಷಣಕಾಲ ದ್ವಾರಕೀಶ್ ಅವರ ಮುಖವನ್ನು ದಿಟ್ಟಿಸಿ ನೋಡುತ್ತಾ ನಿಂತ ಶ್ರುತಿ, ದ್ವಾರಕೀಶ್ ಪುತ್ರ ಯೋಗೀಶ್ ಅವರನ್ನು ತಬ್ಬಿ ಹಿಡಿದು ಅತ್ತರು.

ಬುಧವಾರ ಮುಂಜಾನೆ ದ್ವಾರಕೀಶ್ ಮನೆಗೆ ತೆರಳಿದ ಶಿವರಾಜ್‌ಕುಮಾರ್ ಅಂತಿಮ ದರ್ಶನ ಪಡೆದರು. ನಟರಾದ ಜಗ್ಗೇಶ್, ರವಿಚಂದ್ರನ್, ರಮೇಶ್ ಅರವಿಂದ್, ಸುಂದರ್‌ರಾಜ್, ಮುಖ್ಯಮಂತ್ರಿ ಚಂದ್ರು, ಕುಮಾರ್ ಗೋವಿಂದ್, ಸುದೀಪ್, ಅನಿರುದ್ಧ, ಯಶ್, ಧ್ರುವ ಸರ್ಜಾ, ಸುನಿಲ್ ಪುರಾಣಿಕ್, ಸಂಗೀತ ನಿರ್ದೇಶಕ ಹಂಸಲೇಖ, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ನಟಿಯರಾದ ಸುಮಲತಾ ಅಂಬರೀಶ್, ಸುಧಾರಾಣಿ ಮುಂತಾದವರು ರವೀಂದ್ರ ಕಲಾಕ್ಷೇತ್ರದಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ನೇತ್ರದಾನ: ದ್ವಾರಕೀಶ್ ಅವರ ಎರಡೂ ಕಣ್ಣುಗಳನ್ನು ನಾರಾಯಣ ನೇತ್ರಾಲಯಕ್ಕೆ ಕುಟುಂಬಸ್ಥರು ದಾನ ಮಾಡಿದ್ದಾರೆ.

ಬಹುಮುಖಿ ಪಾತ್ರದ ದ್ವಾರಕೀಶ್: 'ಚಿತ್ರರಂಗಕ್ಕೆ ದ್ವಾರಕೀಶ್ ಅವರ ಕೊಡುಗೆ ಅಪಾರ. ಹಲವು ದಶಕಗಳ ಕಾಲ ನೆನಪಿನಲ್ಲಿ ಉಳಿಯುವಂತಹ ನಟನೆ, ಹಿಟ್ ಸಿನಿಮಾಗಳನ್ನು ನೀಡಿದವರು ಅವರು. ಯುವ ಪ್ರತಿಭೆಗಳಿಗೆ ಅವಕಾಶ ನೀಡುತ್ತಾ, ಪ್ರೇಕ್ಷಕರನ್ನು ಸೆಳೆಯುವ ಅವರ ಸಾಮರ್ಥ್ಯವು ಕನ್ನಡ ಸಿನಿಮಾರಂಗವನ್ನು ರೂಪುಗೊಳಿಸುವಲ್ಲಿ ನೆರವಾಗಿದೆ. ಅವರ ಅಗಲಿಕೆ ಬೇಸರ ತಂದಿದೆ. ಅವರ ಈ ಅದ್ಭುತ ಪಯಣವನ್ನು ನಾವು ಎಂದೂ ನೆನಪಿನಲ್ಲಿ ಇಟ್ಟುಕೊಳ್ಳಲಿದ್ದೇವೆ' ಎಂದು ಪ್ರಧಾನಿ ನರೇಂದ್ರ ಮೋದಿ 'ಎಕ್ಸ್'ನಲ್ಲಿ ಹೇಳಿದ್ದಾರೆ.

ದ್ವಾರಕೀಶ್ ಎತ್ತರ ಕಡಿಮೆ ಇದ್ದರೂ ಅವರ ಕನಸು ಆಕಾಶದೆತ್ತರಕ್ಕಿತ್ತು. ದ್ವಾರಕೀಶ್ ಎಂದಾಕ್ಷಣ ನಗು ಹುಟ್ಟಿಕೊಳ್ಳುತ್ತೆ. ಎಲ್ಲರನ್ನೂ ನಗಿಸಿದ ಮಾಂತ್ರಿಕ

ರವಿಚಂದ್ರನ್, ನಟ

ಬದುಕು ಎನ್ನುವ ಅವಕಾಶವನ್ನು ಸದ್ಬಳಕೆ ಮಾಡಿಕೊಂಡವರು ದ್ವಾರಕೀಶ್. ಸಿದ್ಧಸೂತ್ರ, ಕಲ್ಪನೆ ಗಳನ್ನು ಒಡೆದು ಸಾಧನೆ ಮಾಡಿದ ಚೇತನ. ಅವರಿಂದ ಸ್ಫೂರ್ತಿ ಪಡೆದಿದ್ದೇವೆ

ಯಶ್, ನಟ

ಕರ್ನಾಟಕ ರತ್ನಕ್ಕೆ ಮನವಿ

ದ್ವಾರಕೀಶ್ ಅವರಿಗೆ ಮರಣೋತ್ತರ ಕರ್ನಾಟಕ ರತ್ನ ಪ್ರಶಸ್ತಿ ನೀಡಲು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್‌.ಎಂ. ಸುರೇಶ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮೌಖಿಕ ಮನವಿ ಸಲ್ಲಿಸಿದರು. ಇದಕ್ಕೆ ಸ್ಪಂದಿಸಿದ ಸಿದ್ದರಾಮಯ್ಯ, ಭೇಟಿಯಾಗಿ ಮನವಿ ಸಲ್ಲಿಸುವಂತೆ ತಿಳಿಸಿದರು.

'ನಿರಾಶ್ರಿತ ಕನ್ನಡಿಗರಿಗೆ ಪುನರ್ವಸತಿ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ನ್ಯಾಯಾಲಯದ ಆದೇಶದಂತೆ ಗೋವಾದಲ್ಲಿ ಕನ್ನಡಿಗರ ಮನೆಗಳನ್ನು ತೆರವು ಮಾಡಲಾಗುತ್ತಿದೆ ಹೊರತು ಸರ್ಕಾರದ ಇರಾದೆ ಇಲ್ಲ. ನಿರಾಶ್ರಿತರಿಗೆ ಪ್ರತ್ಯೇಕ ಜಾಗ ಒದಗಿಸಿ, ಪುನರ್ವಸತಿ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ ಸಾವಂತ್ ಹೇಳಿದರು.

ಬೆಳಗಾವಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಜಗದೀಶ ಶೆಟ್ಟರ್ ಅವರು ಬುಧವಾರ ಉಮೇದುವಾರಿಕೆ ಸಲ್ಲಿಸಿದ ಸಂದರ್ಭದಲ್ಲಿ ಜತೆಗಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, 'ನ್ಯಾಯಾಲಯದ ಆದೇಶ ಪಾಲನೆ ಸರ್ಕಾರದ ಕರ್ತವ್ಯ. ನಿರಾಶ್ರಿತ ಕನ್ನಡಿಗರ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನನ್ನೊಂದಿಗೆ ನೇರ ಮಾತನಾಡಿಲ್ಲ. 'ಎಕ್ಸ್' ಖಾತೆಯಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದು ಗಮನಿಸಿದ್ದೇನೆ' ಎಂದರು.

ನಂತರ ನಡೆದ ಪ್ರಚಾರ ರ್‍ಯಾಲಿಯಲ್ಲಿ ಮಾತನಾಡಿದ ಅವರು,'ಸುಳ್ಳು ಹೇಳುವ ಪಕ್ಷ ಯಾವುದಾದರೂ ಇದ್ದರೆ ಅದು ಕಾಂಗ್ರೆಸ್. ಅದು ಜನರ ಭರವಸೆ ಈಡೇರಿಸಲ್ಲ. ನುಡಿದಂತೆ ನಡೆಯಲ್ಲ. ಹೀಗಾಗಿ ಜನರಿಗೆ ಆ ಪಕ್ಷದ ಮೇಲೆ ವಿಶ್ವಾಸ ಇಲ್ಲ. ಅದು ಕುಟುಂಬ ರಾಜಕಾರಣದ ಪಕ್ಷ. ನಮ್ಮದು ರಾಷ್ಟ್ರೀಯ ವಾದದ ಪಕ್ಷ' ಎಂದರು.

ನಿಧನ ವಾರ್ತೆ

ಮಾಜಿ ಶಾಸಕ ರಮೇಶಕುಮಾರ ಪಾಂಡೆ



ಬೀದರ್: ಮಾಜಿ ಶಾಸಕ ರಮೇಶಕುಮಾರ ಪಾಂಡೆ (90) ನಗರದಲ್ಲಿ ಬುಧವಾರ ಸಂಜೆ ನಿಧನರಾದರು.

ಅವರು ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದರು. ಅವರಿಗೆ ಪತ್ನಿ, ಪುತ್ರ ಹಾಗೂ ಮೂವರು ಪುತ್ರಿಯರು ಇದ್ದಾರೆ. ಗುರುವಾರ (ಏ.18) ಬೆಳಿಗ್ಗೆ 11ಕ್ಕೆ ನಗರದ ಗುರುದ್ವಾರ ಸಮೀಪದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೀದರ್ ತಾಲ್ಲೂಕಿನ ಜನವಾಡ ನಿವಾಸಿಯಾದ ಪಾಂಡೆ ಅವರು ಆರಂಭದ ದಿನಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಬಿಜೆಪಿಯಲ್ಲಿ ಸಕ್ರಿಯರಾಗಿದ್ದರು. 1990ರಲ್ಲಿ ನಗರಸಭೆ ಸದಸ್ಯರಾಗಿ ಆಯ್ಕೆಯಾಗಿ ಅಧ್ಯಕ್ಷರಾಗಿದ್ದರು. 1998ರಲ್ಲಿ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತಿದ್ದರು. 1999ರ ವಿಧಾನಸಭೆ ಚುನಾವಣೆಯಲ್ಲಿ ಬೀದರ್ ಕ್ಷೇತ್ರದಿಂದ ಸ್ಪರ್ಧಿಸಿ ಗೆಲುವು ಕಂಡಿದ್ದರು. 2019ರಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಸೋತಿದ್ದರು. ಬಳಿಕ ಸಕ್ರಿಯ ರಾಜಕೀಯದಿಂದ ದೂರ ಉಳಿದಿದ್ದರು. ಆರ್‌ಆರ್‌ಕೆ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ಗುರುವಾರ, ಏಪ್ರಿಲ್ 18, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 108 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಕಾಡುವುದೇ
'ಗೋಧಿ ಬ್ಲಾಸ್ಟ್'
ಶಿಲೀಂಧ್ರ ರೋಗ?

ಆಳ-ಅಗಲ
ಭಾರತ ಬಲಿಷ್ಠ ಸಾಧಕ ರಾಷ್ಟ್ರ: ಐಎಂಎಫ್ 10
ಮರಳುಗಾಡಲ್ಲಿ ಮಹಾಮಳೆ
ಬಾಲರಾಮನಿಗೆ 'ಸೂರ್ಯ ತಿಲಕ'ದ ಗೌರವ 5

ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
₹75,860 (ಬೆಂಗಳೂರು) ▲	₹85,700 (ಬೆಂಗಳೂರು) ▼	83.60

ಎನ್‌ಡಿಎ ಅವಧಿ: ಬಂಧನ, ಆಸ್ತಿ ಮುಟ್ಟುಗೋಲು ಸರಿಸುಮಾರು 25 ಪಟ್ಟು ಜಾಸ್ತಿ

ಇ.ಡಿ ಶೋಧ: 86 ಪಟ್ಟು ಹೆಚ್ಚಳ

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಅಡಿಯಲ್ಲಿ ಕೈಗೊಂಡ ಶೋಧ ಕಾರ್ಯಗಳು 2014ರ ನಂತರದಲ್ಲಿ 86 ಪಟ್ಟು ಹೆಚ್ಚಾಗಿವೆ. ಬಂಧನ ಹಾಗೂ ಆಸ್ತಿ ಜಪ್ತಿ ಸರಿಸುಮಾರು 25 ಪಟ್ಟು ಜಾಸ್ತಿ ಆಗಿವೆ.

2014ಕ್ಕೂ ಮೊದಲಿನ ಒಂಬತ್ತು ವರ್ಷಗಳ ಜೊತೆ ಹೋಲಿಸಿದಾಗ ಈ ಪ್ರಮಾಣದ ಏರಿಕೆ ಕಂಡುಬಂದಿದೆ.

2005ರ ಜುಲೈನಿಂದ 2014ರ ಮಾರ್ಚ್‌ವರೆಗಿನ ದತ್ತಾಂಶವನ್ನು ಪಿಟಿಐ ಸುದ್ದಿಸಂಸ್ಥೆಯು 2014ರ ಏಪ್ರಿಲ್‌ನಿಂದ 2024ರ ಮಾರ್ಚ್‌ವರೆಗಿನ ದತ್ತಾಂಶಗಳ ಜೊತೆ ಹೋಲಿಸಿ ನೋಡಿದೆ. ಪಿಎಂಎಲ್‌ಎ ಅಡಿಯಲ್ಲಿ ಇ.ಡಿ ಕ್ರಮ ಕೈಗೊಳ್ಳುವುದು ತೀವ್ರಗೊಂಡಿರುವುದನ್ನು ಈ ವಿಶ್ಲೇಷಣೆಯು ತೋರಿಸಿಕೊಟ್ಟಿದೆ.

ಪಿಎಂಎಲ್‌ಎ ಕಾನೂನನ್ನು 2002ರಲ್ಲಿ ರೂಪಿಸಲಾಯಿತು. ಇದನ್ನು 2005ರ ಜುಲೈ 1ರಂದು ಜಾರಿಗೆ ತರಲಾಯಿತು. ಗಂಭೀರ ಸ್ವರೂಪದ ತೆರಿಗೆ ವಂಚನೆ, ಕಪ್ಪು ಹಣದ ಸೃಷ್ಟಿ ಹಾಗೂ ಹಣದ ಅಕ್ರಮ ವರ್ಗಾವಣೆಯನ್ನು ತಡೆಯುವುದು ಈ ಕಾಯ್ದೆಯ ಉದ್ದೇಶ.

ಕಳೆದ ಒಂದು ದಶಕದ ಅವಧಿಯಲ್ಲಿ ಇ.ಡಿ ಕೈಗೊಂಡ ಕ್ರಮಗಳು, ವಿರೋಧಿಗಳನ್ನು ಹತ್ತಿಕ್ಕಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಅನುಸರಿಸಿದ ವಿವಿಧ ತಂತ್ರಗಳ ಒಂದು ಭಾಗ ಎಂದು ವಿರೋಧ ಪಕ್ಷಗಳು ಆರೋಪಿಸುತ್ತಿವೆ. ಆದರೆ, ಇ.ಡಿ ನಡೆಯನ್ನು ಸಮರ್ಥಿಸಿಕೊಂಡಿರುವ ಕೇಂದ್ರ ಸರ್ಕಾರ ಮತ್ತು ಬಿಜೆಪಿ, ಈ ಸಂಸ್ಥೆಯು ಸ್ವತಂತ್ರವಾಗಿ ಕೆಲಸ ಮಾಡುತ್ತಿದೆ, ಪ್ರಕರಣಗಳ ಸತ್ಯಾಸತ್ಯತೆಯನ್ನು ಆಧರಿಸಿ ತನಿಖೆ ನಡೆಸುತ್ತದೆ ಎಂದು ಹೇಳಿವೆ.

ಕಳೆದ ಒಂದು ದಶಕದ ಅವಧಿಯಲ್ಲಿ ಇ.ಡಿ 36 ಪ್ರಕರಣಗಳಲ್ಲಿ ಒಟ್ಟು 63 ಮಂದಿ ಆರೋಪಿಗಳಿಗೆ ಶಿಕ್ಷೆ ಆಗುವಂತೆ ನೋಡಿಕೊಂಡಿದೆ. ಆದರೆ 2005ರಿಂದ 2014ರವರೆಗಿನ ಅವಧಿಯಲ್ಲಿ ಯಾವ ಪ್ರಕರಣದಲ್ಲಿಯೂ ಶಿಕ್ಷೆ ಆಗಿರಲಿಲ್ಲ.

ಪಿಎಂಎಲ್‌ಎ ಅಡಿಯಲ್ಲಿ ನಗದು ವಶಪಡಿಸಿಕೊಳ್ಳಲು ಕೂಡ ಇ.ಡಿ. ಅಧಿಕಾರಿಗಳಿಗೆ ಅವಕಾಶ ಇದೆ. ಕಳೆದ ಒಂದು ದಶಕದಲ್ಲಿ ಅಧಿಕಾರಿಗಳು ಒಟ್ಟು ₹2,310 ಕೋಟಿಗೂ ಹೆಚ್ಚಿನ ಮೌಲ್ಯದ ನಗದನ್ನು ವಶಪಡಿಸಿಕೊಂಡಿದ್ದಾರೆ. ಆದರೆ, 2005ರಿಂದ 2014ರವರೆಗಿನ ಅವಧಿಯಲ್ಲಿ ಇ.ಡಿ ವಶಪಡಿಸಿಕೊಂಡ ನಗದಿನ ಮೌಲ್ಯ ₹43 ಲಕ್ಷ ಮಾತ್ರ.

'ಈ ಎಲ್ಲ ಅಂಕಿ–ಅಂಶಗಳು ಹಣದ ಅಕ್ರಮ ವರ್ಗಾವಣೆಯನ್ನು ತಡೆಯಲು ಇ.ಡಿ. ನಡೆಸುತ್ತಿರುವ ತೀವ್ರ ಸ್ವರೂಪದ ಕಾರ್ಯಾಚರಣೆಗಳನ್ನು ತೋರಿಸುತ್ತಿವೆ' ಎಂದು ಅಧಿಕಾರಿಯೊಬ್ಬರು ವಿವರಿಸಿದರು.



ಮಂಡ್ಯದಲ್ಲಿ ಬುಧವಾರ ನಡೆದ ಸಮಾವೇಶದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕಾರ್ಯಕರ್ತರಿಗೆ ನಮಸ್ಕರಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಬಿಜೆಪಿ 'ಭಾವನೆ', ಕಾಂಗ್ರೆಸ್ 'ಬದುಕು': ರಾಹುಲ್

ಪ್ರಜಾವಾಣಿ ವಾರ್ತೆ

ಮೈಸೂರು: ಲೋಕಸಭೆ ಚುನಾವಣೆ ಘೋಷಣೆಯಾದ ಬಳಿಕ, ಇದೇ ಮೊದಲ ಬಾರಿಗೆ ರಾಜ್ಯಕ್ಕೆ ಬಂದು, 'ಪ್ರಜಾಧ್ವನಿ–2' ಪ್ರಚಾರಸಭೆಯಲ್ಲಿ ಪಾಲ್ಗೊಂಡ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ರಾಜ್ಯ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳು ಹಾಗೂ ಅಧಿಕಾರಕ್ಕೆ ಬಂದರೆ ಜಾರಿಗೊಳಿಸಲಿರುವ ಗ್ಯಾರಂಟಿಗಳ ವಿವರಗಳನ್ನು ಬಿಚ್ಚಿಟ್ಟು, ಕಾರ್ಯಕರ್ತರನ್ನು ಹುರಿದುಂಬಿಸಿದರು. ಮಂಡ್ಯದಲ್ಲಿ ಮಧ್ಯಾಹ್ನ ಕಾರ್ಯಕ್ರಮ ನಡೆದರೆ, ಮಾಲೂರು ಹಾಗೂ ಹೊಸಕೋಟೆ ನಡುವಿನ ಚೊಕ್ಕಂಡಹಳ್ಳಿ ಗೇಟ್ ಬಳಿ ಸಂಜೆ ಸಮಾವೇಶ ನಡೆಯಿತು.

> **ಕಳೆದ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಅನ್ನು ಬಿಜೆಪಿಯ ಬಿ ಟೀಮ್ ಎಂದು ಕರೆದಿದ್ದೆ. ಆದರೆ ಈಗ ಅದು ಬಿಜೆಪಿಯ ಪಾಲುದಾರ ಪಕ್ಷವೇ ಆಗಿಬಿಟ್ಟಿದೆ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಕೇಂದ್ರದ ಬಿಜೆಪಿ ಸರ್ಕಾರ, ಪ್ರಧಾನಿ ನರೇಂದ್ರ ಮೋದಿ ಕಾರ್ಯವೈಖರಿ ಹಾಗೂ ಬಿಜೆಪಿ– ಜೆಡಿಎಸ್ ಮೈತ್ರಿ ವಿರುದ್ಧ ವಾಗ್ದಾಳಿ ನಡೆಸಿ, 'ಬಿಜೆಪಿ ಎಂದರೆ ಭಾವನೆ, ಕಾಂಗ್ರೆಸ್ ಎಂದರೆ ಬದುಕು' ಎಂಬ ಸಂದೇಶ ರವಾನಿಸಿದರು. 'ಮಂಡ್ಯವನ್ನು ಗೆಲ್ಲುವ ಮೂಲಕ ಇಂಡಿಯಾವನ್ನೇ ಗೆಲ್ಲುವೆವು' ಎಂಬ ವಿಶ್ವಾಸವನ್ನು ಮಂಡ್ಯ ಸಭೆಯಲ್ಲಿ ವ್ಯಕ್ತಪಡಿಸಿದರು.

ಮಂಡ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ, ತಮ್ಮ ಭಾಷಣದ ಹೆಚ್ಚು ಸಮಯವನ್ನು ಗ್ಯಾರಂಟಿಗಳ ಬಗ್ಗೆ ಮಾತನಾಡಲೆಂದೇ ರಾಹುಲ್ ಮೀಸಲಿಟ್ಟರು.

ಅವರ ಸುದೀರ್ಘ ಭಾಷಣದ ಕನ್ನಡ ಅನುವಾದವಿದ್ದರೂ, ಭಾಷಣ ಆರಂಭಿಸಿದ ಕೆಲ ಹೊತ್ತಿನಲ್ಲೇ ಎದ್ದು ಹೋಗತೊಡಗಿದ ಕಾರ್ಯಕರ್ತರನ್ನು ಮುಖಂಡರು ಹಿಡಿದು ಕೂರಿಸಲು ಯತ್ನಿಸಿದರು.

ಮೊದಲಿಗೆ ಮಾತನಾಡಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, 'ಭಾರತ್ ಜೋಡೊ ಯಾತ್ರೆ'ಯನ್ನು ಉಲ್ಲೇಖಿಸಿ, ರಾಹುಲ್ ಗಾಂಧಿಯವರ ಕಾಲ್ಗುಣವನ್ನು ಹೊಗಳಿದರು. ಜೆಡಿಎಸ್ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ಹಾಗೂ ವರಿಷ್ಠ ಎಚ್.ಡಿ.ದೇವೇಗೌಡರ ವಿರುದ್ಧ ಅಬ್ಬರಿಸಿ ಕಾರ್ಯಕ್ರಮಕ್ಕೆ ವೀರಾವೇಶದ ಚೌಕಟ್ಟನ್ನೂ ಹಾಕಿಕೊಟ್ಟರು.

ಅದನ್ನು ಮುಂದುವರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯದ ಬಿಜೆಪಿ ಸಂಸದರು ಹಾಗೂ ಅವರೊಂದಿಗೆ ಸೇರಿಕೊಂಡಿರುವ ಜೆಡಿಎಸ್ ಸಂಸದರ ವಿರುದ್ಧವೂ ಕಿಡಿ ಕಾರಿದರು.

10ನೇ ಪುಟ ನೋಡಿ

ಯುಎಇಯಲ್ಲಿ ದಾಖಲೆ ಮಳೆ

ದುಬೈ (ಎಪಿ): ಮರುಭೂಮಿ ಪ್ರದೇಶವಾದ ಅರಬ್ ಸಂಯುಕ್ತ ಸಂಸ್ಥಾನದಲ್ಲಿ (ಯುಎಇ) ಮಂಗಳವಾರ ದಾಖಲೆಯ ಮಳೆಯಾಗಿದ್ದು, ವಿಶ್ವದ ಪ್ರಮುಖ ವಿಮಾನನಿಲ್ದಾಣಗಳಲ್ಲಿ ಒಂದಾದ ದುಬೈ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಪ್ರವಾಹ ಪರಿಸ್ಥಿತಿ ಏರ್ಪಟ್ಟಿದೆ 11

ಚಿನಕುರಳಿ

ಪ್ರಕಾಶ್ ಶೆಟ್ಟಿ

ಇಫ್ಕೊದಿಂದ ನ್ಯಾನೊ ಯೂರಿಯಾ ಪ್ಲಸ್ ತಯಾರಿಕೆ

ನವದೆಹಲಿ (ಪಿಟಿಐ): ಇಫ್ಕೊ ಸಂಸ್ಥೆಯ ಸಹಯೋಗದಡಿ ದ್ರವರೂಪದ ನ್ಯಾನೊ ಯೂರಿಯಾ ಪ್ಲಸ್ ತಯಾರಿಕೆಯನ್ನು ಆರಂಭಿಸಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಇದು ನ್ಯಾನೊ ಯೂರಿಯಾದ ಸುಧಾರಿತ ಮಾದರಿಯಾಗಿದೆ. ಇದರಲ್ಲಿ ಶೇ 16ರಷ್ಟು ಸಾರಜನಕ ಅಂಶವಿದ್ದು, ಬೆಳೆಗಳಿಗೆ ನಿರ್ಣಾಯಕ ಹಂತದಲ್ಲಿ ಬೇಕಾದ ಅಗತ್ಯ ಪೋಷಕಾಂಶವನ್ನು ಒದಗಿಸುತ್ತದೆ. ಮುಂದಿನ ಮೂರು ವರ್ಷ ಇಫ್ಕೊ ಇದನ್ನು ತಯಾರಿಸಲಿದೆ ಎಂದು ತಿಳಿಸಿದೆ.

ಸಾಂಪ್ರದಾಯಿಕ ರಸಗೊಬ್ಬರ ಹಾಗೂ ಇತರೆ ಸಾರಜನಕಯುಕ್ತ ಗೊಬ್ಬರಕ್ಕೆ ಪರ್ಯಾಯವಾಗಿ ರೈತರು ಇದನ್ನು ಬಳಸಬಹುದಾಗಿದೆ. ಈ ಗೊಬ್ಬರವು ಮಣ್ಣಿನ ಆರೋಗ್ಯವನ್ನು ಕಾಪಾಡುವ ಜೊತೆಗೆ ರೈತರಿಗೆ ಲಾಭದಾಯಕವಾಗಲಿದೆ ಎಂದು ಹೇಳಿದೆ.

'ಈ ಗೊಬ್ಬರವು ಸುಸ್ಥಿರ ಪರಿಸರ ವ್ಯವಸ್ಥೆಯನ್ನು ಕಾಪಾಡುತ್ತದೆ. ಜೊತೆಗೆ, ಮಣ್ಣಿನಲ್ಲಿ ಸೂಕ್ಷ್ಮ ಪೋಷಕಾಂಶಗಳ ಲಭ್ಯತೆ ಮತ್ತು ಅದರ ಪರಿಣಾಮಗಳನ್ನು ಹೆಚ್ಚಿಸಲಿದೆ. ಸಸ್ಯಗಳ ಎಲೆಗಳಲ್ಲಿ ಪತ್ರ ಹರಿತ್ತು (ಕ್ಲೋರೋಫಿಲ್) ಉತ್ಪತ್ತಿ ಹಾಗೂ ಇಳುವರಿ ಹೆಚ್ಚಳಕ್ಕೆ ನೆರವಾಗಲಿದೆ' ಎಂದು ಇಫ್ಕೊದ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಯು.ಎಸ್. ಅವಸ್ಥಿ ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಗುಜರಾತ್‌ನ ಕಲೋಲ್, ಉತ್ತರ ಪ್ರದೇಶದ ಅಒನ್ಲಾ ಮತ್ತು ಫೂಲ್ಪುರ್ ಘಟಕಗಳಲ್ಲಿ ಶೀಘ್ರವೇ ತಯಾರಿಕೆ ಆರಂಭಿಸಲಾಗುತ್ತದೆ ಎಂದು ಇಫ್ಕೊ ತಿಳಿಸಿದೆ.

ಇಡೀ ವಿಶ್ವದಲ್ಲಿಯೇ ಮೊದಲ ಬಾರಿಗೆ 2021ರ ಜೂನ್‌ನಲ್ಲಿ ಇಫ್ಕೊದಿಂದ ದ್ರವರೂಪದ ನ್ಯಾನೊ ಯೂರಿಯಾ ತಯಾರಿಗೆ ಚಾಲನೆ ನೀಡಲಾಗಿತ್ತು. 2023ರಲ್ಲಿ ನ್ಯಾನೊ ಡಿಎಪಿ ಉತ್ಪಾದನೆ ಆರಂಭಿಸಿತ್ತು.

'ಅಲ್ಲಾ ಹು ಅಕ್ಬರ್' ಕೂಗುವಂತೆ ಒತ್ತಾಯಿಸಿ ಹಲ್ಲೆ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೈಶ್ರೀರಾಮ್ ಎಂದು ಘೋಷಣೆ ಕೂಗಿಕೊಂಡು ಕಾರಿನಲ್ಲಿ ಹೋಗುತ್ತಿದ್ದ ಮೂವರು ಯುವಕರನ್ನು ಅಡ್ಡಗಟ್ಟಿ ಹಲ್ಲೆ ನಡೆಸಲಾಗಿದೆ' ಎಂದು ಆರೋಪಿಸಿ ಸಲ್ಲಿಸಲಾದ ದೂರನ್ನು ಆಧರಿಸಿ, ನಾಲ್ವರು ಆರೋಪಿಗಳನ್ನು ವಿದ್ಯಾರಣ್ಯಪುರ ಠಾಣೆ ಪೊಲೀಸರು ಬುಧವಾರ ರಾತ್ರಿ ಬಂಧಿಸಿದ್ದಾರೆ.

ಪವನ್ ಕುಮಾರ್ ಎಂಬಾತ ನೀಡಿದ ದೂರು ಆಧರಿಸಿ, ಫರ್ಮಾನ್, ಸಮೀರ್ ಸೇರಿದಂತೆ ಇಬ್ಬರು ಬಾಲಕರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯಲ್ಲಿ ಸಂಜೀವಿನಿ ನಗರದ ವಿನಾಯಕ್, ರಾಹುಲ್ ಹಾಗೂ ಸಹಕಾರ ನಗರದ ಪವನ್ ಕುಮಾರ್ ಎಂಬುವರು ಗಾಯಗೊಂಡಿದ್ದಾರೆ.

'ಘಟನೆ ಸಂಬಂಧ ದೂರುದಾರರು ಮೊಬೈಲ್‌ನಲ್ಲಿ ಚಿತ್ರೀಕರಿಸಿರುವ ದೃಶ್ಯಾವಳಿ ಪರಿಶೀಲಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಕೃತ್ಯದಲ್ಲಿ ಮತ್ತೊಬ್ಬ ಭಾಗಿಯಾಗಿದ್ದು ಆತನ ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ. ಘಟನೆಯಲ್ಲಿ ರಾಹುಲ್ ತಲೆ ಹಾಗೂ ವಿನಾಯಕನ ಮೂಗಿಗೆ ಗಾಯವಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಹಲ್ಲೆಗೆ ಒಳಗಾದ ಮೂವರು ಮಧ್ಯಾಹ್ನ 3.20ರ ಸುಮಾರಿಗೆ ಕಾರಿನಲ್ಲಿ ವಿದ್ಯಾರಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯ ಕೆ.ಜಿ ಹಳ್ಳಿಯಿಂದ ಚಿಕ್ಕಬೆಟ್ಟಹಳ್ಳಿ ರಸ್ತೆ ಮಾರ್ಗವಾಗಿ ಎಂ.ಎಸ್.ಪಾಳ್ಯದಲ್ಲಿ ಸೆಕೆಂಡ್ ಹ್ಯಾಂಡ್ ಬೈಕ್ ಖರೀದಿಗೆ ಹೋಗುತ್ತಿದ್ದರು. ಕಾರಿನಲ್ಲಿ ಶ್ರೀರಾಮನ ಭಾವಚಿತ್ರದ ಧ್ವಜ ಕಟ್ಟಿಕೊಂಡಿದ್ದು, ಜತೆಗೆ ಜೈಶ್ರೀರಾಮ್ ಎಂದು ಘೋಷಣೆ ಕೂಗುತ್ತಿದ್ದರು. ಆಗ ಬೈಕ್‌ನಲ್ಲಿ ಬಂದ ಇಬ್ಬರು ಯುವಕರು ಕಾರನ್ನು ಅಡ್ಡಗಟ್ಟಿದ್ದರು. ಆಗ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿದೆ' ಎಂದು ಪೊಲೀಸರು ಹೇಳಿದರು.

'ಹಿಂದಿನಿಂದ ಬೈಕ್‌ನಲ್ಲಿ ಬಂದಿದ್ದ ಫರ್ಮಾನ್ ಹಾಗೂ ಸಮೀರ್, ಕಾರನ್ನು ಅಡ್ಡಗಟ್ಟಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಅಲ್ಲದೇ ಅಲ್ಲಾ ಹು ಅಕ್ಬರ್ ಎಂದು ಕೂಗುವಂತೆ ಬಲವಂತ ಮಾಡಿದ್ದರು. ಹಾಗೆ ಕೂಗುವುದಿಲ್ಲ ಎಂದಾಗ ಅವರೊಂದಿಗೆ ಮತ್ತೆ ಮೂವರು ಸೇರಿಕೊಂಡು ದೊಣ್ಣೆಯಿಂದ ಹಲ್ಲೆ ನಡೆಸಿದರು' ಎಂದು ಪವನ್ ಕುಮಾರ್ ದೂರಿನಲ್ಲಿ ಉಲ್ಲೇಖಿಸಿದ್ದರು.

ಘಟನೆಯ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಪ್ರತಿ ಚದರಡಿಗೆ ₹70,300ರಂತೆ 10 ಸಾವಿರ ಚದರಡಿ ನಿವೇಶನ ಮಾರಾಟ

ಕೋರಮಂಗಲ: ಆಸ್ತಿ ಬಲು ದುಬಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ಖರೀದಿ–ಮಾರಾಟಕ್ಕೆ ಸಂಬಂಧಿಸಿ, ರಾಜಧಾನಿ ಬೆಂಗಳೂರಿನ ಕೋರಮಂಗಲ ಅತ್ಯಂತ ದುಬಾರಿ ಪ್ರದೇಶವೆನಿಸಿದೆ.

ಕ್ವೆಸ್ ಕಾರ್ಪ್ ಸಂಸ್ಥೆಯ ಸಂಸ್ಥಾಪಕ ಹಾಗೂ ಅಧ್ಯಕ್ಷ ಅಜಿತ್ ಐಸಾಕ್ ಅವರು, ಪ್ರತಿ ಚದರ ಅಡಿಗೆ ₹70,300ರಂತೆ ಒಟ್ಟು ₹67.5 ಕೋಟಿಗೆ 10 ಸಾವಿರ ಚದರಡಿ ನಿವೇಶನವನ್ನು ಖರೀದಿಸಿದ್ದು, ಇದು ಇಲ್ಲಿಯವರೆಗಿನ ಅತ್ಯಂತ ದುಬಾರಿ ಖರೀದಿಯಾಗಿದೆ ಎಂದು ಹೇಳಲಾಗುತ್ತಿದೆ.

ಕೋರಮಂಗಲ 3ನೇ ಬ್ಲಾಕ್‌ನಲ್ಲಿ, ಅರವಿಂದ ಹಾಗೂ ಗೀತಾ ರೆಡ್ಡಿ ದಂಪತಿ ಅವರಿಂದ ಅಜಿತ್ ಈ ನಿವೇಶನ ಖರೀದಿ ಮಾಡಿದ್ದಾರೆ. ಈ ದಂಪತಿ ಈ ಮೊದಲು ಇಲ್ಲಿ ತಮ್ಮ ಕುಟುಂಬದ ವ್ಯವಹಾರ ನಡೆಸುತ್ತಿದ್ದರು.

ಮುಖ್ಯಾಂಶಗಳು

- ಕ್ವೆಸ್ ಕಾರ್ಪ್‌ನ ಮಾರುಕಟ್ಟೆ ಮೌಲ್ಯ ₹16 ಸಾವಿರ ಕೋಟಿ
- ಬಹುರಾಷ್ಟ್ರೀಯ ಕಂಪನಿಗಳಿಗೆ ಸಿಬ್ಬಂದಿ ಒದಗಿಸುವ ಸಂಸ್ಥೆ
- ಸಮಾಜಮುಖಿ ಕಾರ್ಯಗಳಿಗೂ ಅಜಿತ್ ಐಸಾಕ್ ಪ್ರಸಿದ್ಧಿ

'ಕಳೆದ ವಾರ ಈ ಖರೀದಿ ಪ್ರಕ್ರಿಯೆ ಪೂರ್ಣಗೊಂಡಿದೆ. ಈ ನಿವೇಶನದಲ್ಲಿ ವಸತಿ ಸಮುಚ್ಚಯ ನಿರ್ಮಿಸಲಾಗುತ್ತದೆ' ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಈ ವ್ಯವಹಾರ ಕುದುರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಕೊಲಿಯರ್ಸ್ ಎಂಬ ಕನ್ಸಲ್ಟನ್ಸಿ ಸಂಸ್ಥೆಯು ಈ ಖರೀದಿ ಪ್ರಕ್ರಿಯೆ ಕುರಿತು 'ಪ್ರಜಾವಾಣಿ' ಕೇಳಿದ ಪ್ರಶ್ನೆಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿತು.

ನಿವೇಶನಗಳ ದರ ಶೇ 9ರಷ್ಟು ಹೆಚ್ಚಳ

ಈ ವರ್ಷದ ಜನವರಿ–ಮಾರ್ಚ್ ತ್ರೈಮಾಸಿಕ ಅವಧಿಯಲ್ಲಿ ಬೆಂಗಳೂರಿನ ವಸತಿ ನಿವೇಶನಗಳ ಬೆಲೆಗಳಲ್ಲಿ ಶೇ 9ರಷ್ಟು ಹೆಚ್ಚಳ ಕಂಡುಬಂದಿದೆ. ಅದರ ಹಿಂದಿನ ತ್ರೈಮಾಸಿಕಕ್ಕೆ (ಅಕ್ಟೋಬರ್–ಡಿಸೆಂಬರ್) ಹೋಲಿಸಿದಲ್ಲಿ ಶೇ 4ರಷ್ಟು ಪ್ರಗತಿ ಕಂಡುಬಂದಿದೆ. ಮೊದಲ ಸ್ಥಾನದಲ್ಲಿ ಹೈದರಾಬಾದ್ ಇದ್ದು, ಇಲ್ಲಿ ಶೇ 13ರಷ್ಟು ಬೆಳವಣಿಗೆ ಕಂಡುಬಂದಿತ್ತು ಎಂದು ವರದಿಯಲ್ಲಿ ಹೇಳಲಾಗಿದೆ.

ಈ ಹಿಂದೆಯೂ ಬಹಳ ದುಬಾರಿ ಬೆಲೆಗೆ ಇಲ್ಲಿ ಆಸ್ತಿಗಳು ಮಾರಾಟವಾದ ನಿದರ್ಶನಗಳಿವೆ. ಕೋರಮಂಗಲದ ಇದೇ ಬ್ಲಾಕ್‌ನಲ್ಲಿ ಈ ಹಿಂದೆ 9,488 ಚದರ ಅಡಿ ವಿಸ್ತೀರ್ಣದ ನಿವೇಶನವೊಂದನ್ನು ಟಿವಿಎಸ್ ಮೋಟಾರ್ಸ್‌ಗೆ ಪ್ರತಿ ಚದರ ಅಡಿಗೆ ₹68,597ರಂತೆ ಮಾರಾಟ ಮಾಡಲಾಗಿತ್ತು. ಇದು, ಬೆಂಗಳೂರಿನಲ್ಲಿ ಇದುವರೆಗಿನ ಅತ್ಯಂತ ದುಬಾರಿ ಆಸ್ತಿ ವ್ಯವಹಾರ ಎನಿಸಿತ್ತು.

ಸಿರಿವಂತರೇ ಹೆಚ್ಚಾಗಿ ವಾಸಿಸುತ್ತಿರುವ ಕೋರಮಂಗಲ 'ಬಿಲಿಯನೇರ್ಸ್ ಸ್ಟ್ರೀಟ್' ಎಂದೂ ಖ್ಯಾತಿ ಪಡೆದಿದೆ. ಫ್ಲಿಪ್‌ಕಾರ್ಟ್ ಸಹಸಂಸ್ಥಾಪಕ ಸಚಿನ್ ಬನ್ಸಲ್, ಇನ್ಫೊಸಿಸ್ ಸಹ ಸಂಸ್ಥಾಪಕರಾದ ನಂದನ್ ನಿಲೇಕಣಿ ಮತ್ತು ಕ್ರಿಸ್ ಗೋಪಾಲಕೃಷ್ಣನ್, ಬಾಗ್ಮನೆ ಡೆವಲಪರ್ಸ್‌ನ ರಾಜಾ ಬಾಗ್ಮನೆ, ನಾರಾಯಣ ಹೆಲ್ತ್‌ನ ಡಾ.ದೇವಿ ಪ್ರಸಾದ್ ಶೆಟ್ಟಿ, ರಾಜಕಾರಣಿ ರಾಜೀವ್ ಚಂದ್ರಶೇಖರ್ ಇಲ್ಲಿ ವಾಸಿಸುತ್ತಿದ್ದಾರೆ.

'ರಿಯಾಲ್ಟಿ ಮಾರುಕಟ್ಟೆಯಲ್ಲಿ ಆಸ್ತಿಗಳ ಮೌಲ್ಯದಲ್ಲಿ ಏರಿಳಿತ ಇದ್ದಿದ್ದೇ. ಹೀಗಾಗಿ, ಇಂತಹ ವ್ಯವಹಾರಗಳನ್ನು ಹೋಲಿಕೆ ಮಾಡಲು ಆಗುವುದಿಲ್ಲ' ಎಂದು ನೈಟ್ ಫ್ರ್ಯಾಂಕ್ ಇಂಡಿಯಾ ಎಂಬ ಕನ್ಸಲ್ಟನ್ಸಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಶಂತನು ಮಜುಂದಾರ್ ಹೇಳುತ್ತಾರೆ.

'ಕೆಲ ಪ್ರತಿಷ್ಠಿತ ಪ್ರದೇಶಗಳಲ್ಲಿ ಬೇಡಿಕೆಗೆ ತಕ್ಕಂತೆ ನಿವೇಶನಗಳನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ಇನ್ನೊಂದೆಡೆ, ಸುಂದರ ಪರಿಸರವುಳ್ಳ ಮತ್ತು ಅಧಿಕ ಮೌಲ್ಯದ ಆಸ್ತಿಗಳನ್ನು ಖರೀದಿಸಲು ಭಾರತೀಯರಲ್ಲಿ ಒಲವು ಹೆಚ್ಚುತ್ತಿದೆ. ಇವು ಇಂತಹ ದುಬಾರಿ ಬೆಲೆಗೆ ಆಸ್ತಿಗಳ ಮಾರಾಟ/ಖರೀದಿಗೆ ಪ್ರಮುಖ ಕಾರಣಗಳು' ಎಂದೂ ಅವರು ವಿಶ್ಲೇಷಿಸುತ್ತಾರೆ.

ಬೆಂಗಳೂರಿನಲ್ಲಿ ರಿಯಾಲ್ಟಿ ಕ್ಷೇತ್ರ ಕ್ಷಿಪ್ರ ಬೆಳವಣಿಗೆ ಕಾಣುತ್ತಿದೆ. ಆಸ್ತಿಗಳ ಮೌಲ್ಯದಲ್ಲಿ ಗಣನೀಯ ಹೆಚ್ಚಳ ಕಂಡುಬರುತ್ತಿದೆ ಎಂದು ನೈಟ್ ಫ್ರ್ಯಾಂಕ್ ಇಂಡಿಯಾ ಇತ್ತೀಚೆಗೆ ಬಿಡುಗಡೆ ಮಾಡಿರುವ ವರದಿಯಲ್ಲಿ ಹೇಳಲಾಗಿದೆ.

ವಿಮಾನ ನಿಲ್ದಾಣ ವಿಡಿಯೊ ಚಿತ್ರೀಕರಣ: ಯುವಕನ ವಿರುದ್ಧ ಪ್ರಕರಣ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಚೆನ್ನೈಗೆ ತೆರಳಲು ಬಂದಿದ್ದ ಪ್ರಯಾಣಿಕ ವಿಮಾನ ನಿಲ್ದಾಣದ ಒಳಗಿನ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿಬಿಟ್ಟ ಕಾರಣ ಆತನ ವಿರುದ್ಧ ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಏಪ್ರಿಲ್ 7ರಂದು ನಿಲ್ದಾಣಕ್ಕೆ ಬಂದಿದ್ದ ವಿಕಾಸ್ ಗೌಡ (23) ಎಂಬುವವರು ಚೆನ್ನೈ ತೆರಳಲು ಟಿಕೆಟ್ ಕಾಯ್ದಿರಿಸಿದ್ದರು. ಭದ್ರತಾ ಪ್ರಕ್ರಿಯೆ ಮುಗಿಸಿಕೊಂಡು ಬೋರ್ಡಿಂಗ್ ಪಾಸ್ ಪಡೆದುಕೊಂಡಿದ್ದರು. ಆದರೆ ಸಾಮಾಜಿಕ ಮಾಧ್ಯಮದ ಗೀಳಿನಿಂದಾಗಿ ವಿಮಾನ ಹತ್ತದೇ ಟರ್ಮಿನಲ್ -2ರಲ್ಲಿಯೇ ಉಳಿದು ವಿಡಿಯೊ ಚಿತ್ರೀಕರಣ ಮಾಡಿದ್ದರು.

ಹೆಚ್ಚು ಲೈಕ್‌ಗಳಿಸುವ ಉದ್ದೇಶದಿಂದ ವಿಡಿಯೊವನ್ನು ಯೂ ಟ್ಯೂಬ್‌ನಲ್ಲಿ ಹರಿಬಿಟ್ಟಿದ್ದರು. 'ಒಂದು ದಿನವಿಡೀ ನಾನು ಕೆಐಎನ ಹೊಸ ಟರ್ಮಿನಲ್‌ನಲ್ಲಿ ಕಳೆದಿದ್ದೇನೆ' ಎಂದು ಪೋಸ್ಟ್ ಮಾಡಿದ್ದರು. ವಿಡಿಯೊವನ್ನು ಏ.12 ರಂದು ಯೂ ಟ್ಯೂಬ್‌ನಲ್ಲಿ ಹಂಚಿಕೊಂಡಿದ್ದರು.

'ವಿಮಾನ ನಿಲ್ದಾಣದ ನಿಷೇಧಿತ ಪ್ರದೇಶದಲ್ಲಿ ಅತಿಕ್ರಮ ಪ್ರವೇಶ ಮಾಡಿ ಕಾನೂನು ಬಾಹಿರವಾಗಿ ಚಿತ್ರೀಕರಿಸಿದ ವಿಡಿಯೊ ಸಾರ್ವಜನಿಕಗೊಳ್ಳಿಸಿದ್ದಾರೆ. ಇದರಿಂದ ನಿಲ್ದಾಣದ ಭದ್ರತೆಗೆ ಧಕ್ಕೆಯಾಗಿದೆ. ಸಾರ್ವಜನಿಕರಲ್ಲಿ ನಿಲ್ದಾಣದ ರಹಸ್ಯ ಹಾಗೂ ಭದ್ರತೆಯ ಕುರಿತು ಸಂಶಯ ಮೂಡವಂತಹ ವಿಷಯ ಪ್ರಸ್ತಾಪ ಮಾಡಿದ್ದಾರೆ' ಎಂದು ಆರೋಪಿಸಿ ಸಿಐಎಸ್‌ಎಫ್‌ನ ಅಧಿಕಾರಿ ಮುರಳಿ ಲಾಲ್ ಮೀನಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ವಸತಿ ಮತ್ತು ನಗರಾಭಿವೃದ್ಧಿ ನಿಗಮ ನಿಯಮಿತ
hudco
(ಭಾರತ ಸರ್ಕಾರದ ಉದ್ಯಮ)
ಪ್ರಾದೇಶಿಕ ಕಛೇರಿ, ಬೆಂಗಳೂರು.
ಇ–ಮೇಲ್: bro@hudco.org

ಟೆಂಡರ್ ಪ್ರಕಟಣೆ

ಭಾರತ ಸರ್ಕಾರದ ಒಂದು ಉದ್ಯಮವಾಗಿರುವ ವಸತಿ ಮತ್ತು ನಗರಾಭಿವೃದ್ಧಿ ನಿಗಮ ನಿಯಮಿತ (ಹುಡ್ಕೋ), ನಂ. 313, ಆರ್‌ಎಂವಿ ಬಡಾವಣೆ, ಬೆಂಗಳೂರು–94 ಇಲ್ಲಿರುವ ತನ್ನ ಸಿಬ್ಬಂದಿ ಕ್ವಾರ್ಟರ್ಸ್‌ನ ನವೀಕರಣ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ/ಹೆಸರಾಂತ ಸಂಸ್ಥೆಗಳು/ಗುತ್ತಿಗೆದಾರರಿಂದ ಟೆಂಡರ್‌ರನ್ನು ಆಹ್ವಾನಿಸಿದೆ. ಇನ್ನಿತರೆ ವಿವರಗಳಿಗಾಗಿ ನಮ್ಮ ವೆಬ್‌ಸೈಟ್ www.hudco.org ಭೇಟಿ ನೀಡುವುದು. ಸಂಪರ್ಕ ಸಂಖ್ಯೆ : 080–25550811/25582602. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 01.05.2024.

ಭೇಟಿನೀಡಿ : www.hudco.org ಮತ್ತು www.eprocure.gov.in

ನೈಋತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2024–25/05 ದಿನಾಂಕ : 08–04–2024

ಕೆಲಸದ ಹೆಸರು	ಅಂದಾಜು ಮೌಲ್ಯ
(ಮರು–ಟೆಂಡರ್)	ರೂ. 6,79,98,550.92

ಮೈಸೂರು ವಿಭಾಗದ ಮೈಸೂರು – ಎಲಿಯೂರು ಸೆಕ್ಷನ್‌ನಲ್ಲಿನ ಮೈಸೂರು ಹೊಸ ಸರಕು ಟರ್ಮಿನಲ್‌ನಲ್ಲಿ 66ಕೆವಿ / 25ಕೆವಿ ಟ್ರ್ಯಾಕ್ಷನ್ ಸಬ್ ಸ್ಟೇಷನ್, ಫೀಡಿಂಗ್ ಪೋಸ್ಟ್ ಮತ್ತು ಶಂಟ್ ಕೆಪ್ಯಾಸಿಟರ್ ಬ್ಯಾಂಕ್‌ನ ವಿನ್ಯಾಸ, ಸರಬರಾಜು, ಸ್ಥಾಪನೆ, ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30–04–2024 ರಂದು 11:00 ಗಂಟೆಯವರೆಗೆ

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2024–25/06 ದಿನಾಂಕ : 08–04–2024

ಕೆಲಸದ ಹೆಸರು	ಅಂದಾಜು ಮೌಲ್ಯ
(ಮರು–ಟೆಂಡರ್)	ರೂ. 46,93,166.87

ಮೈಸೂರು – ಚಾಮರಾಜನಗರ ಮತ್ತು ಮೈಸೂರು – ಎಲಿಯೂರು ಸೆಕ್ಷನ್‌ಗಳಲ್ಲಿ ಹೊಸ ರಸ್ತೆ ಕೆಳಸೇತುವೆಯ ನಿರ್ಮಾಣಕ್ಕಾಗಿ ಓಹೆಚ್‌ಇ ಮಾರ್ಪಾಡು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30–04–2024 ರಂದು 11:00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಟಿಆರ್ ಮೈಸೂರು
ಪಿಯುಬಿ/18/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25
South Western Railway - SWR | SWRRLY | SWRRLY

ಗಾಳಿ ಆಂಜನೇಯ ಸ್ವಾಮಿ ಬ್ರಹ್ಮ ರಥೋತ್ಸವ: ವಾಹನ ದಟ್ಟಣೆ ಸಾಧ್ಯತೆ

ಮೈಸೂರು ರಸ್ತೆ ಸುತ್ತಮುತ್ತ ಮಾರ್ಗ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆಯಲಿರುವಗಾಳಿ ಆಂಜನೇಯಸ್ವಾಮಿ ಬ್ರಹ್ಮ ರಥೋತ್ಸವದ ಕಾರ್ಯಕ್ರಮಗಳಿಗೆ ಹೆಚ್ಚಿನ ಭಕ್ತರು ಸೇರಲಿದ್ದು, ಇದೇ 18 ಹಾಗೂ 19ರಂದು ಮೈಸೂರು ರಸ್ತೆಯ ಸುತ್ತಮುತ್ತಲ ಮಾರ್ಗಗಳಲ್ಲಿ ವಾಹನ ದಟ್ಟಣೆ ಉಂಟಾಗುವ ಸಾಧ್ಯತೆಯಿದೆ.

ಈ ಹಿನ್ನೆಲೆಯಲ್ಲಿ 18ರ ಬೆಳಿಗ್ಗೆ 6 ರಿಂದ 19ರ ಬೆಳಿಗ್ಗೆ 10ರವರೆಗೆ ಹಲವು ರಸ್ತೆಗಳಲ್ಲಿ ವಾಹನ ಸಂಚಾರದ ಮಾರ್ಗ ಬದಲಾವಣೆ ಮಾಡಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಕೆಂಗೇರಿ ಕಡೆಯಿಂದ ಮೈಸೂರು ರಸ್ತೆಯ ಮೂಲಕ ನಗರ ಪ್ರವೇಶಿಸುವ ಎಲ್ಲ ಮಾದರಿಯ ವಾಹನಗಳನ್ನು ಕಿಂಕೊ ಜಂಕ್ಷನ್‌ನಿಂದ ಹೊಸಗುಡ್ಡದಹಳ್ಳಿ ಜಂಕ್ಷನ್ ವರೆಗೆ ರಸ್ತೆಯ ಎರಡೂ ಕಡೆ ತಾತ್ಕಾಲಿಕ ನಿರ್ಬಂಧಿಸಲಾಗಿದೆ.

ಮೆಜೆಸ್ಟಿಕ್ ಮತ್ತು ಸಿಟಿ ಮಾರುಕಟ್ಟೆ ಕಡೆಯಿಂದ ಮೈಸೂರು ರಸ್ತೆಮೂಲಕ ಕೆಂಗೇರಿ ಮತ್ತು ಮೈಸೂರು ಕಡೆ ತೆರಳುವ ಎಲ್ಲ ಮಾದರಿ ವಾಹನಗಳನ್ನು ಹೊಸಗುಡ್ಡದಹಳ್ಳಿ ಜಂಕ್ಷನ್‌ನಿಂದ ಕಿಂಕೊ ಜಂಕ್ಷನ್‌ವರೆಗೆ ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ 1

ಕೆಂಗೇರಿ ಕಡೆಯಿಂದ ಮೈಸೂರು ರಸ್ತೆ ಮೂಲಕ ನಗರ ಪ್ರವೇಶಿಸುವ ಎಲ್ಲ ಮಾದರಿ ವಾಹನಗಳು ನಾಯಂಡಹಳ್ಳಿ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದುಕೊಳ್ಳಬೇಕು. ನಾಗರಬಾವಿ ಜಂಕ್ಷನ್ ಹತ್ತಿರ ಬಲಕ್ಕೆ ತಿರುವು ಪಡೆದು ಚಂದ್ರಾಲೇಔಟ್‌ನ 80 ಅಡಿ ರಸ್ತೆಯಲ್ಲಿ ಸಾಗಿ ವೆಸ್ಟ್ ಆಫ್ ಕಾರ್ಡ್ ರಸ್ತೆ ಮೂಲಕ ಮುಂದಕ್ಕೆ ಸಾಗಬಹುದು. ನಂತರ, ಎಂಸಿ ಸರ್ಕಲ್ ಬಳಿ ಬಲಕ್ಕೆ ತಿರುವು ಪಡೆದು ಮಾಗಡಿ ರಸ್ತೆ ಮೂಲಕ ತೆರಳಬಹುದು.

ಮೆಜೆಸ್ಟಿಕ್ ಕಡೆಗೆ ಹೋಗುವಾಗ ಹುಣಸೇಮರ ಜಂಕ್ಷನ್ ಬಳಿ ಎಡಕ್ಕೆ ತಿರುವು ಪಡೆದು ಕೆ.ಬಿ.ಜಂಕ್ಷನ್ ಮೂಲಕ ಸಾಗಿ ಖೋಡೆ ಸರ್ಕಲ್ ತಲುಪಿ ಅಲ್ಲಿಂದ ಮೆಜೆಸ್ಟಿಕ್ ತೆರಳಬಹುದು. ಸಿಟಿ ಮಾರುಕಟ್ಟೆಗೆ ತೆರಳುವ ಸವಾರರು ಹುಣಸೇಮರ ಜಂಕ್ಷನ್ ಬಳಿ ಬಲಕ್ಕೆ ತಿರುವು ಪಡೆದು ಬಿನ್ನಿಮಿಲ್ ಜಂಕ್ಷನ್ ಸರ್ಕಲ್ ಬಳಿ ಎಡ ತಿರುವು ಪಡೆದು ಸಾಗಬೇಕು.

ಪರ್ಯಾಯ ಮಾರ್ಗ–2

ನಾಯಂಡಹಳ್ಳಿ, ಬಿಎಚ್‌ಇಎಲ್ ಮತ್ತು ಮೈಸೂರು ರಸ್ತೆ ಮೂಲಕ ಮೆಜೆಸ್ಟಿಕ್ ಮತ್ತು ಸಿಟಿ ಮಾರುಕಟ್ಟೆಗೆ ಬರುವ ವಾಹನಗಳು ಕಿಂಕೊ ಜಂಕ್ಷನ್ ಬಳಿ ಎಡಕ್ಕೆ ತಿರುವು ಪಡೆದು ಅತ್ತಿಗುಪ್ಪೆ ಜಂಕ್ಷನ್, ವಿಜಯನಗರ ಬಸ್ ನಿಲ್ದಾಣ ಮೂಲಕ ಎಂಸಿ ಸರ್ಕಲ್‌ನಲ್ಲಿ ಬಲಕ್ಕೆ ತಿರುವು ಪಡೆದು ಮಾಗಡಿ ಮುಖ್ಯರಸ್ತೆಯ ಮೂಲಕ ಸಾಗಬಹುದು.

ಮೆಜೆಸ್ಟಿಕ್‌ಗೆ ಹೋಗುವ ವಾಹನ ಗಳು ಹುಣಸೇಮರ ಜಂಕ್ಷನ್ ಬಳಿ ಎಡ ತಿರುವು ಪಡೆದು ಕೆಬಿ ಜಂಕ್ಷನ್ ಮೂಲಕ ಸಾಗಿ ಖೋಡೆ ಸರ್ಕಲ್ ತಲುಪಿ ಮೆಜೆಸ್ಟಿಕ್‌ಗೆ ತೆರಳಬಹುದು.

ಸಿಟಿ ಮಾರುಕಟ್ಟೆಗೆ ಹೋಗುವ ವಾಹನ ಸವಾರರು ಹುಣಸೇಮರ ಜಂಕ್ಷನ್ ಬಳಿ ಬಲಕ್ಕೆ ತಿರುವು ಪಡೆದು ಬಿನ್ನಿಮಿಲ್ ಜಂಕ್ಷನ್ ಮೂಲಕ ಸಿರ್ಸಿ ಸರ್ಕಲ್ ಬಳಿ ಎಡಕ್ಕೆ ತಿರುವು ಪಡೆದು ಮಾರುಕಟ್ಟೆ ತಲುಪಬಹುದು ಎಂದು ಸಂಚಾರ ಪೊಲೀಸರು ಹೇಳಿದ್ದಾರೆ.

ಬಳ್ಳಾರಿ ರಸ್ತೆಯಲ್ಲಿ ವಾಹನ ದಟ್ಟಣೆ

ಹೆಬ್ಬಾಳ ಮೇಲ್ಸೇತುವೆಯಲ್ಲಿ ಬೈಕ್ ಹೊರತುಪಡಿಸಿ ಎಲ್ಲ ಮಾದರಿ ವಾಹನಗಳ ಸಂಚಾರ ನಿರ್ಬಂಧಿಸಿದ್ದರಿಂದ ಸೇತುವೆಯ ಕೆಳ ಭಾಗದ ರಸ್ತೆಯಲ್ಲಿ ಕಂಡುಬಂದ ವಾಹನ ದಟ್ಟಣೆ – ಪ್ರಜಾವಾಣಿ ಚಿತ್ರ

ಕಾಮಗಾರಿ ಸಂಬಂಧ ಹೆಬ್ಬಾಳ ಮೇಲ್ಸೇತುವೆಯಲ್ಲಿ ಬೈಕ್ ಹೊರತು ಪಡಿಸಿ ಎಲ್ಲ ಮಾದರಿ ವಾಹನಗಳ ಸಂಚಾರ ನಿಷೇಧಿಸಿರುವ ಪರಿಣಾಮ ಬುಧವಾರ ಕೆಳರಸ್ತೆಯಲ್ಲಿ ವಾಹನ ಸಂಚಾರ ಪೂರ್ತಿ ಅಸ್ತವ್ಯಸ್ತಗೊಂಡಿತ್ತು.

ಹೆಬ್ಬಾಳ– ಕೆ.ಆರ್.ಪುರ ಮೇಲ್ಸೇತುವೆಗೆ ಎರಡು ಹೊಸ ಟ್ರ್ಯಾಕ್ ಅಳವಡಿಸುವ ಕಾಮಗಾರಿ ಆರಂಭವಾಗಿದ್ದು ವಾಹನ ಸಂಚಾರ ನಿಷೇಧಿಸ ಲಾಗಿದೆ. ಆರು ತಿಂಗಳು ಕಾಮಗಾರಿ ನಡೆಯಲಿದೆ ಎಂದು ಗುತ್ತಿಗೆದಾರರು ತಿಳಿಸಿದ್ದು ವಾಹನ ಸಂಚಾರ ನಿರ್ಬಂಧಿಸಿದ ಮೊದಲ ದಿನವೇ ವಾಹನ ದಟ್ಟಣೆಯಿಂದ ವಾಹನ ಸವಾರರು ಹೈರಾಣಾದರು.

'ಕೆ.ಆರ್.ಪುರ, ನಾಗವಾರ ಕಡೆಯಿಂದ ಮೇಖ್ರಿ ವೃತ್ತಕ್ಕೆ ಹೋಗುವ ಅಪ್ ರ್‍ಯಾಂಪ್ ಮೇಲೆ ದ್ವಿಚಕ್ರ ವಾಹನ ಹೊರತುಪಡಿಸಿ ಉಳಿದ ವಾಹನ ಸಂಚಾರ ನಿರ್ಬಂಧಿಸಲಾಗಿದೆ' ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಮಕ್ಕಳಿಗೆ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾ ದರ್ಪಣ ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆಯು ಮಕ್ಕಳಿಗಾಗಿ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಮೇ 5ರಂದು ಹಮ್ಮಿಕೊಂಡಿದೆ.

ಈ ಸ್ಪರ್ಧೆಯು 8 ವರ್ಷದೊಳಗಿನ, 12 ವರ್ಷದೊಳಗಿನ ಹಾಗೂ 16 ವರ್ಷದೊಳಗಿನ ಮಕ್ಕಳಿಗೆ ಮೂರು ವಿಭಾಗಗಳಲ್ಲಿ ನಡೆಯಲಿದೆ. ಭಾಗವಹಿಸಿದ ಎಲ್ಲ ಮಕ್ಕಳಿಗೂ ಬಹುಮಾನ ಹಾಗೂ ಪ್ರಮಾಣ ಪತ್ರಗಳನ್ನು ಕೊಡಲಾಗುತ್ತದೆ. ವಿಜೇತರಿಗೆ ವಿಶೇಷ ಬಹುಮಾನಗಳನ್ನು ನೀಡಲಾಗುತ್ತದೆ.

ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿದೆ. ಆಸಕ್ತರು ಹೆಚ್ಚಿನ ವಿವರಗಳಿಗಾಗಿ 9380671947 ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಸಂಸ್ಥೆಯ ಕಾರ್ಯದರ್ಶಿಗಳಾದ ವಿನಾಯಕ ಪಾಟೀಲ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದ ಮೆಜೆಸ್ಟಿಕ್ ಬಳಿ ಹೊತ್ತಿ ಉರಿದ ಖಾಸಗಿ ಬಸ್

ಬೆಂಕಿ ಅವಘಡ: ಖಾಸಗಿ ಬಸ್ ಭಸ್ಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಜೆಸ್ಟಿಕ್ ಬಳಿಯ ಅಮರ್ ಹೋಟೆಲ್ ಬಳಿ ಬುಧವಾರ ರಾತ್ರಿ ನಿಲುಗಡೆ ಮಾಡಲಾಗಿದ್ದ ಖಾಸಗಿ ಬಸ್‌ವೊಂದರಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಬಸ್ ಬಹುತೇಕ ಭಸ್ಮವಾಗಿದೆ.

ಎಸ್.ಜೆ.ಕಂಫರ್ಟ್ ಹೆಸರಿನ ಖಾಸಗಿ ಬಸ್ ಅನ್ನು ನಿಲುಗಡೆ ಮಾಡಲಾಗಿತ್ತು. ಚಾಲಕ, ನಿರ್ವಾಹಕ ಹಾಗೂ ಕ್ಲೀನರ್ ಹೊರಹೋಗಿದ್ದರು. ಬಸ್‌ನಲ್ಲಿ ಪ್ರಯಾಣಿಕರು ಯಾರೂ ಇರಲಿಲ್ಲ. ಅದೇ ವೇಳೆಗೆ ಬೆಂಕಿ ಕಾಣಿಸಿಕೊಂಡಿದೆ.

ಸ್ಥಳದಲ್ಲಿದ್ದವರು ಮಾಹಿತಿ ನೀಡಿದ ಮೇರೆಗೆ ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿ ಹೆಚ್ಚಿನ ಹಾನಿ ಆಗುವುದನ್ನು ತಡೆದರು. ಎರಡು ಅಗ್ನಿಶಾಮಕ ವಾಹನಗಳು ಕಾರ್ಯಾಚರಣೆ ನಡೆಸಿದವು ಎಂದು ಮೂಲಗಳು ತಿಳಿಸಿವೆ.

ಸರಣಿ ಅಪಘಾತ: ಪಾದಚಾರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಸರಣಿ ಅಪಘಾತದಲ್ಲಿ ನಾಲ್ಕು ಕಾರುಗಳು ಜಖಂಗೊಂಡಿದ್ದು, ಪಾದಚಾರಿಯೊಬ್ಬರು ಗಾಯಗೊಂಡಿದ್ದಾರೆ.

ಪಾದಚಾರಿ ಅಮೀರ್ ಪಟೇಲ್ (53) ಎಂಬುವರು ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ರಸ್ತೆ ದಾಟುತ್ತಿದ್ದ ಪಾದಚಾರಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸುವ ಭರದಲ್ಲಿ ಕಾರು ಚಾಲಕ ಏಕಾಏಕಿ ಬ್ರೇಕ್ ಹಾಕಿದ್ದರಿಂದ ಅಪಘಾತ ಸಂಭವಿಸಿದೆ ಎಂದು ಪೊಲೀಸರು ಹೇಳಿದರು.

ಏನಿದು ಘಟನೆ?: ಮಂಗಳವಾರ ಬೆಳಿಗ್ಗೆ 10 ಗಂಟೆ ಸುಮಾರಿಗೆ ನಗರದಿಂದ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವ ಚಿಕ್ಕಜಾಲ ಮೇಲ್ಸೇತುವೆಯಲ್ಲಿ ಪಾದಚಾರಿಯೊಬ್ಬರು ರಸ್ತೆ ದಾಟುತ್ತಿದ್ದರು. ಇದೇ ಮಾರ್ಗದಲ್ಲಿ 4ಕಾರು ಗಳು ಒಂದೇ ವೇಗದಲ್ಲಿ ಬರುತ್ತಿದ್ದವು. ಆಗ ಮುಂಭಾಗ ಹೋಗುತ್ತಿದ್ದ ಕಾರಿನ ಚಾಲಕ ಪಾದಚಾರಿಗೆ ಡಿಕ್ಕಿ ಹೊಡೆಯು ವುದನ್ನು ತಪ್ಪಿಸಲು ಕಾರಿನ ಬ್ರೇಕ್ ಹಾಕಿದ್ದರು. ಅದೇ ವೇಳೆ ಹಿಂದೆ ಬರುತ್ತಿದ್ದ ಕಾರುಗಳು ಒಂದಕ್ಕೊಂದು ಡಿಕ್ಕಿ ಹೊಡೆದುಕೊಂಡಿದ್ದರಿಂದ ಸರಣಿ ಅಪಘಾತ ಸಂಭವಿಸಿದೆ. ಘಟನೆಯಲ್ಲಿ ಪಾದಚಾರಿ ಗಾಯಗೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

ಮಕ್ಕಳ ಅಶ್ಲೀಲ ವಿಡಿಯೊ ವೀಕ್ಷಣೆ: ಸೆಕ್ಯೂರಿಟಿ ಗಾರ್ಡ್ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರ್ಜಾಲದಲ್ಲಿ ಮಕ್ಕಳ ಅಶ್ಲೀಲ ವಿಡಿಯೊ ಹಾಗೂ ಛಾಯಾಚಿತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡು ವೀಕ್ಷಿಸುವ ಜೊತೆಗೆ ಬೇರೆಯವರಿಗೂ ರವಾನೆ ಮಾಡುತ್ತಿದ್ದ ಅಸ್ಸಾಂನ ಸುನ್ಯೆ ಗ್ರಾಮದ ವ್ಯಕ್ತಿಯನ್ನು ಪೂರ್ವ ವಿಭಾಗದ ಸೆನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ ನೂರ್ ಇಸ್ಲಾಂ ಚೌದ್ರಿ(37) ಬಂಧಿತ ಆರೋಪಿ.

ಆರೋಪಿಯಿಂದ ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೂರ್ವ ವಿಭಾಗ ಸೆನ್ ಠಾಣೆ ಪೊಲೀಸರು ಹೇಳಿದರು.

'ನೂರ್ ಇಸ್ಲಾ ಚೌದ್ರಿ ಎರಡು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದ. ಫ್ರೇಜರ್ ಟೌನ್‌ನಲ್ಲಿ ನೆಲೆಸಿದ್ದ. ಈತ ನಗರದ ಹೈನ್ಸ್ ರಸ್ತೆಯಲ್ಲಿರುವ ಎಟಿಎಂ ಕೇಂದ್ರಕ್ಕೆ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಆರೋಪಿ ಅಶ್ಲೀಲ ವಿಡಿಯೊ ವೀಕ್ಷಣೆ ಮಾಡುತ್ತಿದ್ದ ಬಗ್ಗೆ ಮಾಹಿತಿ ಸಂಗ್ರಹಿಸಿದ್ದ ಎನ್‌ಸಿಆರ್‌ಬಿ ಪೋರ್ಟಲ್ ವಿಭಾಗವು ರಾಜ್ಯದ ಸಿಐಡಿ ಸೈಬರ್ ಅಧಿಕಾರಿಗಳಿಗೆ ಸೈಬರ್ ಟಿಪ್‌ಲೈನ್ ನಂಬರ್ ಸಹಿತ ಮಾಹಿತಿ ನೀಡಿತ್ತು. ಇಲ್ಲಿನ ಸಿಐಡಿ ಅಧಿಕಾರಿಗಳು ಆರೋಪಿ ಮೊಬೈಲ್‌ನ ಐಪಿ ವಿಳಾಸ ಮತ್ತು ಇತರೆ ಮಾಹಿತಿ ಸಂಗ್ರಹಿಸಿ ಪೂರ್ವ ವಿಭಾಗದ ಸೆನ್ ಠಾಣೆ ಪೊಲೀಸರಿಗೆ ದೂರು ದಾಖಲಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರು. ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಸೆನ್ ಠಾಣೆ ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಆನ್‌ಲೈನ್ ವಂಚನೆ: ₹1.3 ಲಕ್ಷ ಕಳೆದುಕೊಂಡ ಗೃಹಿಣಿ

ಬೆಂಗಳೂರು: ಆನ್‌ಲೈನ್ ವಂಚಕರು ಗೃಹಿಣಿಯೊಬ್ಬರಿಗೆ ₹1.3 ಲಕ್ಷ ವಂಚಿಸಿದ್ದು, ಈ ಸಂಬಂಧ ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉತ್ತರಹಳ್ಳಿ ಮುಖ್ಯರಸ್ತೆಯ ಸುಂಕಲಪಾಳ್ಯದ ನಿವಾಸಿ ಆರ್.ಸುಕನ್ಯ ಅವರು ಹಣ ಕಳೆದುಕೊಂಡಿದ್ದು ದೂರು ನೀಡಿದ್ದಾರೆ.

'ಮಾರ್ಚ್ 29ರಂದು ಮಧ್ಯಾಹ್ನ 12.45ರ ಸುಮಾರಿಗೆ ಎರಡು ಪ್ರತ್ಯೇಕ ನಂಬರ್‌ಗಳಿಂದ ತನ್ನ ಮೊಬೈಲ್‌ಗೆ ಲಿಂಕ್‌ವೊಂದು ಬಂದಿತ್ತು. ತನಗೆ ಅರಿವಿಲ್ಲದೇ ಆ ಲಿಂಕ್ ಒತ್ತಿದೆ. ಅದಾದ ಕೆಲವೇ ಕ್ಷಣಗಳಲ್ಲಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ (ಫೋನ್ ಪೇ) ಹಾಗೂ ಎಸ್‌ಬಿಐನಿಂದ (ಫೋನ್ ಪೇ) ಪ್ರತ್ಯೇಕವಾಗಿ ₹13,001, ಆಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ನಿಂದ ₹41,180 ಹಾಗೂ ಎಸ್‌ಬಿಐ ಬ್ಯಾಂಕ್‌ನ ಕ್ರೆಡಿಟ್ ಕಾರ್ಡ್‌ನಿಂದ ₹36,032 ಅನ್ನು ವಂಚಿಸಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ಧಾರೆ.

ರಸ್ತೆಗೆ ಅರಮನೆ ಮೈದಾನ ಜಾಗ

ಬೆಂಗಳೂರು: ರಸ್ತೆ ವಿಸ್ತರಣೆಗಾಗಿ ಬೆಂಗಳೂರು ಅರಮನೆಗೆ ಸೇರಿದ 15.39 ಎಕರೆ ಭೂಮಿಯನ್ನು ಬಳಕೆ ಮಾಡಿಕೊಳ್ಳಲು ತೀರ್ಮಾನಿಸಿರುವುದಾಗಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ಸಂಬಂಧ ಮಾರ್ಚ್‌ನಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಈ ಕುರಿತು ಸೋಮವಾರ ಆದೇಶ ಹೊರಡಿಸಲಾಗಿದೆ.

ಬೆಂಗಳೂರು ಅರಮನೆ ಜಾಗದ ಹೊರಭಾಗದಲ್ಲಿ ರಸ್ತೆ ವಿಸ್ತರಣೆ ಮಾಡುವುದಾದರೆ ಟಿಡಿಆರ್ ಕೊಟ್ಟು ರಸ್ತೆ ಮಾಡಲು ನ್ಯಾಯಾಲಯ ಆದೇಶಿಸಿತ್ತು. ಆ ಬಳಿಕ ಸರ್ಕಾರ ಹಿಂದಕ್ಕೆ ಸರಿಯಿತು. ಮತ್ತೆ ಸರ್ಕಾರ ಭೂಮಿಯನ್ನು ವಶಕ್ಕೆ ಪಡೆದುಕೊಂಡು ಕಂಪೌಂಡ್ ಹಾಕಿತ್ತು. ಇದೀಗ ರಸ್ತೆ ವಿಸ್ತರಣೆಗೆ ಆದೇಶ ನೀಡಿದೆ.

ಬಿಹಾರದ ಕಾರ್ಮಿಕ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಕಾಶ್ಮೀರದ ಅನಂತನಾಗ್ ಜಿಲ್ಲೆಯ ಜಬ್ಲಿಪೋರಾ ಗ್ರಾಮದ ಬಳಿ ಬಿಹಾರದ ವಲಸೆ ಕಾರ್ಮಿಕರೊಬ್ಬರನ್ನು ಉಗ್ರರು ಹತ್ಯೆ ಮಾಡಿದ್ದಾರೆ.

ಹತ್ಯೆಗೀಡಾದ ವ್ಯಕ್ತಿಯನ್ನು ಬಿಹಾರದ ರಾಜಾ ಶಾಹ್ ಎಂದು ಗುರುತಿಸಲಾಗಿದೆ.

ಮಾಲೀಕರಿಲ್ಲದ 1,412 ವಾಹನ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 50 ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿದ ಪೊಲೀಸರು, ರಸ್ತೆಗಳ ಬದಿಯಲ್ಲಿ ಹಲವು ತಿಂಗಳಿಂದ ನಿಲುಗಡೆ ಮಾಡಿದ್ದ ಮಾಲೀಕರಿಲ್ಲದ 1,412 ವಾಹನಗಳನ್ನು ಪತ್ತೆ ಮಾಡಿದ್ದಾರೆ.

ರಸ್ತೆಬದಿ, ಪಾದಚಾರಿ ಮಾರ್ಗದಲ್ಲಿ ತಿಂಗಳುಗಟ್ಟಲೆ ವಾಹನಗಳನ್ನು ನಿಲುಗಡೆ ಮಾಡಿದ್ದರಿಂದ ಪಾದಚಾರಿಗಳಿಗೆ ಹಾಗೂ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿ ಉಂಟಾಗುತ್ತಿದೆ ಎಂಬ ದೂರುಗಳು ಬಂದಿದ್ದವು. ದೂರಿನ ಹಿನ್ನೆಲೆಯಲ್ಲಿ ಪೊಲೀಸರು ಕಾರ್ಯಾಚರಣೆ ನಡೆಸಿದರು.

ಈ ರೀತಿಯ ವಾಹನಗಳನ್ನು ಪತ್ತೆ ಹಚ್ಚಲು ಠಾಣಾಮಟ್ಟದಲ್ಲಿ ವಿಶೇಷ ತಂಡ ರಚಿಸಲಾಗಿತ್ತು. ಈ ತಂಡ ನಗರದಲ್ಲಿ 1,412 ವಾಹನಗಳಿವೆ ಎಂಬುದನ್ನು ಪತ್ತೆ ಹಚ್ಚಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಗುರುತಿಸಿರುವ 1,412 ವಾಹನಗಳ ಪೈಕಿ, 521 ಬೈಕ್, 706 ಆಟೊ, 79 ಕಾರು, 6 ಭಾರಿ ವಾಹನಗಳು, 93 ಲಘು ಸರಕು ಸಾಗಾಣಿಕೆ ವಾಹನಗಳು ಹಾಗೂ ಇತರೆ 7 ವಾಹನಗಳಿವೆ. ಅದರಲ್ಲಿ 449 ಬೈಕ್‌ಗಳು, 350 ಆಟೊ, 48 ಕಾರು, 2 ಭಾರಿ ವಾಹನ, 68 ಲಘು ಸರಕು ಸಾಗಾಣಿಕೆ ವಾಹನಗಳು ಹಾಗೂ 1 ಇತರೆ ವಾಹನ ಸೇರಿ 918 ವಾಹನಗಳನ್ನು ವಿಲೇವಾರಿ ಮಾಡಲಾಗಿದೆ. 494 ವಾಹನಗಳ ವಿಲೇವಾರಿ ಬಾಕಿ ಇದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ವಾಹನದ ಮಾಲೀಕರನ್ನು ಪತ್ತೆಹಚ್ಚಿ, ಅವರಿಂದ ಸಂಚಾರ ನಿಯಮ ಉಲ್ಲಂಘನೆ ಆರೋಪದಡಿ ದಂಡ ಪಾವತಿಸಿಕೊಂಡು ಸ್ಥಳದಿಂದ ತೆರವುಗೊಳಿಸಲಾಗಿದೆ. ಇತರೆ ವಾಹನಗಳ ವಾರಸುದಾರರ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ. ಮಾಲೀಕರು ಪತ್ತೆ ಆಗದಿದ್ದ ವಾಹನಗಳನ್ನು ಜಪ್ತಿ ಮಾಡಿಕೊಳ್ಳಲಾಗುವುದು. ಕೋರ್ಟ್ ಅನುಮತಿ ಪಡೆದು ಹರಾಜು ಹಾಕುವ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

CHANGE OF NAME
I,KEVIN DOUGLAS S/o Douglas Augustine George, Aged about 38 years, Residing at # 20, RA Road, Ejipura Viveknagar Post, Bengaluru - 560047, have changed my name to KEVIN DOUGLAS GEORGE, vide affidavit dated 22/03/2024 before notary G.Dayananda, Bengaluru. Henceforth I shall be called as KEVIN DOUGLAS GEORGE only

A REPUTED CHARITABLE TRUST IN BANGALORE SEEKS APPLICATIONS

from qualified and experienced **persons/organisations holding a license to run an orphanage for managing an orphanage being set up by the Trust.**

The person/organisation will be responsible to handle the day to day operations of the orphanage including managing the premises, taking care of the children, handling regulatory compliances, legal issues, etc.

The Trust will provide a well-equipped building to run the orphanage and take care of the education, health and transportation needs of the children in the orphanage besides taking care of the utility bills, maintenance bills and any other expenditure related to the upkeep of the building.

Interested parties may send their application to
lallaorphanage@gmail.com

Teachers / Professors

BRIGHT WAY INSTITUTIONS
No.105, 12th Main, Opp.BHCS Layout, Gowdanapalya, Bangalore-61
WALK-IN-INTERVIEW
Sunday - 21.04.2024 9.30 a.m - 2.00 p.m
BRIGHT WAY PU COLLEGE
PART TIME LECTURERS
History, Hindi, Sanskrit, Statistics- M.A/M.Sc, B.Ed
Ph: 080-26665388, 9483494468 | bwpucas559@yahoo.in
BRIGHT WAY SCHOOL
HIGH SCHOOL
Maths, Kannada, English, Hindi, Computer, Phy.Edu. Music & Dance.
B.A, B.Ed / M.A, B.Ed / B.Sc, B.Ed/ M.Sc,B.Ed / BCA / MCA. B.PEd / M.PEd. / Vidwath
Ph: 080-26396720, 9241204762 | brightways.school@yahoo.in

PERSONAL

Change of Name

CHANGE OF NAME
I, MANDAYAM ANANDAMPILLAI PADMA PRABHA, residing at # 41/6,15th Cross Road, Malleswaram, Bengaluru-560003, Karnataka, have changed my name to MANDAYAM ANANDAMPILLAI PRABHA vide affidavit dated 17/04/2024 sworn before Notary Chandrakala Bengaluru.

CHANGE OF NAME
I,No.16121496L,NK, SAMPATH N S, Residing at # 160, Masagodu Village, Thanniruhalla Post, Somwarpet Taluk, Kodagu Dist., Karnataka-571236, declare that in my service record my mother name is mentioned as SHOBHA N S corrrect name is N S SHOBHA, vide affidavit dated 18/03/2024 before notary H.C.Nagesh, Somwarpet.

PROPERTY
To Place your Classified Ads Contact
9845114560

EDUCATION CORNER ಕ್ಲಾಸಿಫೈಡ್ಸ್

BHARATH EDUCATION SOCIETY ®
B.E.S. DEGREE COLLEGE
IV Block, Jayanagar, Bengaluru - 560011
Recognised by UGC. Affiliated to Bengaluru City University.
Reaccredited B++ by NAAC.
080 - 2663 7295 / 94488 48416
Email: besddcol@yahoo.co.in
Website: www.besinstitutions.edu.in
www.besdegreecollege.in

Sri S.T. Somashekhar
Hon. President, Bharath Education Society
MLA, Yashwantpur Constituency,
Former Minister, Govt of Karnataka

SHAPE YOUR CAREER WITH INTEGRATED SKILL ENHANCEMENT PROGRAMMES



Sri B.L. Lakkegowda
Founder
B.E.S Institutions

PROGRAMMES OFFERED FOR : 2024-25
B.Com | B.B.A. | B.C.A.
B.A. | HEP | HES | HEK

Languages Offered: English, Kannada, Hindi & Sanskrit
As per Bengaluru City University Syllabus

B.E.S. EVENING DEGREE COLLEGE
080-26638415 / 94800 69705 E-mail: besedceve@gmail.com
Reaccredited B by NAAC.
PROGRAMMES OFFERED FOR : 2024-25
B.Com | B.A. | HEP | HES | HEK

Sri..Nirmal Kumar K.R., President, Bharath Education Society | Prof N.S. Vijaya, Vice President, Bharath Education Society | Sri M. Krishna Das, Secretary, Bharath Education Society | Prof N. Ashok Kumar, Principal, BES Degree College | Dr. K.S. Gopalakrishna, Principal, BES Evening Degree College

HOSTEL FACILITY AVAILABLE FOR GIRLS

BES-24509

I, MURALIDHAR Residing-at No.409,Prasham 4th_Floor,7th 'A'Main, HRBR 1st_Block, Kalyananagar, Bengaluru-560043 have Changed_My Name_to MURALIDHAR NARASIMHAIAH Vide_Affidavit Dtd:16.04.2024 Sworn_before Notary H.S.Sakalesh Aradhya, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

REAL ESTATE BUYING

Farm House/ Land/ Resorts

Out-Station

6 ACRES of land in Padil, Mangalore behind the First Neuro Hospital, Mangalore to Bangalore highway 3 lakh per cent 9845026847

RENTAL PROPERTIES

Accommodation Available

Commercial

3000SQFT COMMERCIAL space|14HP Power|Readily available for rent| Kaverinagar-80ft main road, Basaweshwaranagar| Contact:9060936155

DH DECCAN HERALD | ಪ್ರಜಾವಾಣಿ
Classifieds
More value, more impact
EDUCATION
Book your Educational Related Ads in DH All Karnataka + Prajavani Bengaluru City
*Conditions apply
www.dhclassifieds.com
BOOK NOW
For more details contact:
+91 9731810277 | +91 9886213331
+91 9845114560 | +91 9900428036

ನಗರದ ಬ್ಯಾಟರಾಯನಪುರ ಮೈಸೂರು ರಸ್ತೆಯ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಶ್ರೀರಾಮ ನವಮಿ ಅಂಗವಾಗಿ ನಡೆದ ಶ್ರೀರಾಮ ವೇಣುಗೋಪಾಲ ಕೃಷ್ಣ ಸ್ವಾಮಿ ಬ್ರಹ್ಮರಥೋತ್ಸವದಲ್ಲಿ ಭಕ್ತರು ಭಾರಿ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು (ಎಡಚಿತ್ರ) ಗುಡ್ಡದ ಆಂಜನೇಯ ಸ್ವಾಮಿ ದೇವಾಲಯದ ಆವರಣದಲ್ಲಿ ಭಕ್ತರಿಗೆ ನೀರುಮಜ್ಜಿಗೆ, ಪಾನಕ ವಿತರಿಸಲಾಯಿತು –ಪ್ರಜಾವಾಣಿ ಚಿತ್ರಗಳು

ಬೀದಿ ಬೀದಿಗಳಲ್ಲಿ ಪಾನಕ, ಕೋಸಂಬರಿ, ಉಪಾಹಾರ ವಿತರಣೆ

ನಗರದೆಲ್ಲೆಡೆ ರಾಮನವಮಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಕ್ತಿ, ಶ್ರದ್ಧೆ, ಸಡಗರ ಸಂಭ್ರಮದೊಂದಿಗೆ ನಗರದಾದ್ಯಂತ ಶ್ರೀರಾಮನವಮಿಯನ್ನು ಬುಧವಾರ ಆಚರಿಸಲಾಯಿತು. ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆ ಮತ್ತು ಅಭಿಷೇಕ ಕಾರ್ಯಕ್ರಮಗಳು ನಡೆದವು.

ಶ್ರೀರಾಮ ಮತ್ತು ಆಂಜನೇಯ ದೇವಸ್ಥಾನಗಳನ್ನು ವಿಶೇಷವಾಗಿ ಸಿಂಗರಿಸಲಾಗಿತ್ತು. ಭಕ್ತರು ಬೆಳಗಿನಿಂದಲೇ ಸರತಿ ಸಾಲಲ್ಲಿ ನಿಂತು ದೇವರ ದರ್ಶನ ಪಡೆದರು.

ನಗರದ ಹಲವೆಡೆ ವಿವಿಧ ಸಂಘಟನೆಗಳು ಭಕ್ತರಿಗೆ ಪಾನಕ, ಕೋಸಂಬರಿ, ಮಜ್ಜಿಗೆ, ಮೊಸರನ್ನ, ಪಲಾವು ವಿತರಿಸಿದವು. ಕೆಲವು ಕಡೆ ಸಂಘ – ಸಂಸ್ಥೆಗಳು ಆಯೋಜಿಸಿದ್ದ ಶ್ರೀರಾಮನ ಶೋಭಾಯಾತ್ರೆ ಹಬ್ಬದ ಸಂಭ್ರಮವನ್ನು ಇಮ್ಮಡಿಗೊಳಿಸಿದವು. ಮೆರವಣಿಗೆಯಲ್ಲಿ ಭಕ್ತರು ರಾಮನಾಮ ಸಂಕೀರ್ತನೆ, ಭಜನೆ ಮಾಡಿದರು.

ಮಲ್ಲೇಶ್ವರದ ಕೋದಂಡರಾಮಪುರದ ಕೋದಂಡರಾಮ ಭಜನಾ ಮಂದಿರ, ಯಶವಂತಪುರ ವೃತ್ತದಲ್ಲಿರುವ ದಾರಿ ಆಂಜನೇಯಸ್ವಾಮಿ ದೇವಸ್ಥಾನ, ರಂಗನಾಥಪುರ ದಲ್ಲಿರುವ ವೀರಾಂಜನೇಯ ಸ್ವಾಮಿ ದೇವಸ್ಥಾನ, ಅಶ್ವತ್ಥನಗರ ದಲ್ಲಿರುವ ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆಯ ಆಂಜನೇಯ ದೇವಸ್ಥಾನ, ರಾಗಿಗುಡ್ಡದ ಆಂಜನೇಯ ದೇವಾಲಯ, ರಾಜಾಜಿನಗರದ ಶ್ರೀರಾಮಮಂದಿರ, ಗಾಂಧಿನಗರದ ಶ್ರೀರಾಮ ದೇವಸ್ಥಾನ, ಸಂಪಂಗಿ ರಾಮಸ್ವಾಮಿ ದೇವಸ್ಥಾನ ಸೇರಿದಂತೆ ನಗರದ ವಿವಿಧ ಆಂಜನೇಯ ಹಾಗೂ ರಾಮ ದೇವಾಲಯಗಳಲ್ಲಿ, ವಿಶೇಷ ಪೂಜೆ, ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

ಮೈಸೂರು ರಸ್ತೆ: ನಗರದ ಬ್ಯಾಟರಾಯನಪುರ ಮೈಸೂರು ರಸ್ತೆಯಲ್ಲಿರುವ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಶ್ರೀರಾಮ ವೇಣುಗೋಪಾಲ ಕೃಷ್ಣ ಸ್ವಾಮಿ ಬ್ರಹ್ಮರಥೋತ್ಸವ ನಡೆಯಿತು. ಭಕ್ತರು ಭಾರಿ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಮಂಜುನಾಥ ನಗರ ಮಹಾಗಣಪತಿ ದೇವಾಲಯ ಸೇರಿದಂತೆ ಬೇರೆ ದೇವರ ದೇಗುಲಗಳಲ್ಲಿಯೂ ಶ್ರೀರಾಮ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಕೆಲವು ದೇಗುಲಗಳಲ್ಲಿ ಸಂಗೀತೋತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ನಾಗದೇವನಹಳ್ಳಿ: ನಾಗದೇವನಹಳ್ಳಿಯ ಮಳರ ಸಿದ್ದೇಶ್ವರ ಪ್ರಾವಿಜನ್ ಸ್ಟೋರ್ ಬಳಿ ಶ್ರೀರಾಮನವಮಿಯನ್ನು ನೂರಾರು ಭಕ್ತರು ಸೇರಿ ಸಡಗರದಿಂದ ನಡೆಸಿದರು.

ವಿಶೇಷ ಪೂಜೆ, ಧ್ಯಾನ, ರಾಮನಾಮ ಸ್ಮರಣೆ ನಡೆಯಿತು. ಭಕ್ತರಿಗೆ ಮಜ್ಜಿಗೆ, ಬೆಲ್ಲದ ಪಾನಕ, ಕೊಸಂಬರಿ, ಸಿಹಿ ಹಂಚಲಾಯಿತು. ಮುಖಂಡರಾದ ಎನ್‌.ಸಿ. ಕುಮಾರ್, ಮಹಾಲಿಂಗೇಗೌಡ, ಚನ್ನಬಸವಾರಾಧ್ಯ, ಕುಮಾರಸ್ವಾಮಿ, ಬಿ.ಜಿ. ಭಟ್ ಭಾಗವಹಿಸಿದ್ದರು.

ದಾಬಸ್ ಪೇಟೆ: ಶ್ರೀರಾಮ ನವಮಿ ಹಬ್ಬದ ಅಂಗವಾಗಿ ಸೋಂಪುರ ಹೋಬಳಿಯ ನರಸೀಪುರದ ಆತ್ಮಾರಾಮ ಸ್ವಾಮಿ, ರಾಮದೇವರ ಹಾಗೂ ಹೆಗ್ಗುಂದ ಬೆಟ್ಟಗಳ ರಾಮದೇವರ ಪಾದುಕೆ ಬೆಟ್ಟ, ಅಗಲಕುಪ್ಪೆಯ ಕುಮಟರಾಮ ಸ್ವಾಮಿ, ಚನ್ನೋಹಳ್ಳಿ, ಹಾಲೇನಹಳ್ಳಿ, ಕೆರೆಪಾಳ್ಯ, ಇಮಚೇನಹಳ್ಳಿ, ಹೆಗ್ಗುಂದ, ಕುರುವೆಲ್ ತಿಮ್ಮನಹಳ್ಳಿ ಗ್ರಾಮಗಳ ಆಂಜನೇಯ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು. ದೇವಾಲಯಗಳನ್ನು ತಳಿರುತೋರಣ, ಹೂ, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಬೆಳಿಗ್ಗಿನಿಂದ ದೇವಾಲಯಗಳಲ್ಲಿ ಮೂಲ ದೇವರಿಗೆ ಅಭಿಷೇಕ ಹಾಗೂ ಇತರ ಪೂಜಾ ಕಾರ್ಯಕ್ರಮ ನಡೆದವು. ಭಕ್ತರಿಗೆ ನೀರು ಮಜ್ಜಿಗೆ, ಪಾನಕ, ಕೋಸಂಬರಿ ವಿತರಿಸಲಾಯಿತು.

ಪೀಣ್ಯ ದಾಸರಹಳ್ಳಿ: ಚಿಕ್ಕಬಾಣಾವರದಲ್ಲಿ ಹಿಂದೂ ಮತ್ತು ಮುಸ್ಲಿಂ ಬಾಂಧವ್ಯದ ಸಂಕೇತವಾಗಿ ಎಸ್‌.ಕೆ. ಕಾರ್ಸ್ ಮಾಲೀಕ ಮಹಮ್ಮದ್ ಸಲೀಂ ಅಹಮ್ಮದ್ ಹಾಗೂ ಸೋಮಶೇಖರ್ ನೇತೃತ್ವದಲ್ಲಿ ಶ್ರೀರಾಮನವಮಿ ಹಬ್ಬವನ್ನು ಆಚರಿಸಲಾಯಿತು.

ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ, ಹ್ಯೂಮನ್ ರೈಟ್ಸ್ ಪ್ರೊಟೆಕ್ಷನ್ ಕಮಿಟಿ ರಾಜ್ಯಾಧ್ಯಕ್ಷ ಬಿ.ಎಂ. ಚಿಕ್ಕಣ್ಣ ಭಾಗವಹಿಸಿದ್ದರು. ಶ್ರೀರಾಮನ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದ ನಂತರ ಪಾನಕ, ಮಜ್ಜಿಗೆ ಹಾಗೂ ಕೋಸಂಬರಿಯನ್ನು ಭಕ್ತರಿಗೆ ವಿತರಿಸಲಾಯಿತು.

ಗ್ಲೋರಿಯಾ ಎಲಿಜಬೆತ್, ಹರೀಶ್ ಪಾರ್ಥ, ಬಿ.ಎಂ. ಜಗದೀಶ್, ಸೋಮಶೇಖರ್, ಅಮ್ಜದ್ ಖಾನ್, ನಯಾಜ್ ಪಾಷಾ, ಮೊಹಮ್ಮದ್ ಸಿದ್ದಿಕ್, ಪುಷ್ಪಲತಾ, ಅಶ್ವತ್ಥಾಮ್ಮ, ಜಯಶ್ರೀ, ಲಲಿತಮ್ಮ ಭಾಗವಹಿಸಿದ್ದರು.

ರಾಜಾಜಿನಗರದ 4ನೇ ಬ್ಲಾಕ್‌ನ ರಾಮಮಂದಿರದಲ್ಲಿ ಬುಧವಾರ ರಾಮನವಮಿ ಅಂಗವಾಗಿ ಬಾಲರಾಮನ ತೊಟ್ಟಿಲನ್ನು ಭಕ್ತರು ತೂಗಿದರು (ಎಡಚಿತ್ರ) ಬನಶಂಕರಿ ದ್ವಾರಕನಗರದ ವಿದ್ಯಾಗಣಪತಿ ದೇವಸ್ಥಾನದಲ್ಲಿ ಶ್ರೀರಾಮನವಮಿಯನ್ನು ಶ್ರದ್ಧೆಯಿಂದ ಆಚರಿಸಲಾಯಿತು

‘ಅರೆ ಸೇನಾಪಡೆ ನಿಯೋಜಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಸೇರಿ ಕೆಲವು ಕ್ಷೇತ್ರಗಳಲ್ಲಿ ಪರಿಸ್ಥಿತಿ ಸೂಕ್ಷ್ಮವಾಗಿದ್ದು, ಅಲ್ಲಿಗೆ ಅರೆಸೇನಾಪಡೆ ನಿಯೋಜಿಸಲು ಚುನಾವಣಾ ಆಯೋಗಕ್ಕೆ ಮನವಿ ಮಾಡಲಾಗುವುದು ಎಂದು ಬಿಜೆಪಿ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕ ವಿ.ಸುನಿಲ್‌ಕುಮಾರ್ ಹೇಳಿದರು.

ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಗೂಂಡಾಗಿರಿ ಹೆಚ್ಚಾಗಿದೆ. ಮತದಾರರನ್ನು ಮತ್ತು ಬಿಜೆಪಿ ಕಾರ್ಯಕರ್ತರನ್ನು ಬೆದರಿಸುವ ಕೆಲಸ ನಡೆದಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ನಮ್ಮ ಪಕ್ಷದ ಕಾರ್ಯಕರ್ತರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹೂಡಿ ಹೆದರಿಸುವ ತಂತ್ರವನ್ನು ಕಾಂಗ್ರೆಸ್ ಅನುಸರಿಸುತ್ತಿದೆ. ರೌಡಿಸಂ ಮೂಲಕ ಚುನಾವಣೆ ಗೆಲ್ಲಲು ಹೊರಟಿದೆ. ಆದ್ದರಿಂದ ಬೆಂಗಳೂರು ಗ್ರಾಮಾಂತರ ಮತ್ತು ನಕ್ಸಲ್ ಪ್ರಭಾವ ಇರುವ ಕ್ಷೇತ್ರಗಳಲ್ಲಿ ಅರೆಸೇನಾಪಡೆ ನಿಯೋಜಿಸುವ ಅಗತ್ಯವಿದೆ’ ಎಂದು ಅವರು ಪ್ರತಿಪಾದಿಸಿದರು.





ನೆತ್ತಿಸುಡುವ ಬಿಸಿಲಿನಲ್ಲಿ ‘ಮತಯಾಚನೆ’– ನವಬೆಂಗಳೂರು ನಿರ್ಮಾಣದ ಸಂಕಲ್ಪ

ಭರ್ಜರಿ ರೋಡ್ ಶೋ: ‘ಗ್ಯಾರಂಟಿ’ಗಳ ಭರವಸೆ

• ಖಲೀಲಅಹ್ಮದ ಶೇಖ

ಅಭ್ಯರ್ಥಿ ಜತೆ ಒಂದು ದಿನ

ಬೆಂಗಳೂರು: ನೆತ್ತಿ ಸುಡುವ ಬಿಸಿಲಿನಲ್ಲಿಯೂ ಪ್ರಚಾರ ಸಾಮಗ್ರಿಗಳೊಂದಿಗೆ ನಗರದ ಮರ್ಫಿಟೌನ್‌ನಲ್ಲಿ ಅಭ್ಯರ್ಥಿಗಾಗಿ ಕಾರ್ಯಕರ್ತರು ಕಾಯುತ್ತಿದ್ದರು. ಇನ್ನೊಂದೆಡೆ ತಮಟೆ ಸದ್ದು, ಜೈಕಾರ, ಕೇಕೆ, ಶಿಳ್ಳೆ, ಯಕ್ಷಗಾನ, ಗೊಂಬೆ ವೇಷಧಾರಿಗಳ ನೃತ್ಯದೊಂದಿಗೆ ಕಾರ್ಯಕರ್ತರ ಮತ್ತೊಂದು ತಂಡ ಪ್ರಚಾರಕ್ಕೆ ಸಜ್ಜಾಗಿತ್ತು. ತೆರೆದ ವಾಹನದಲ್ಲಿ ಜನರತ್ತ ಕೈ ಬೀಸುತ್ತಾ ಬಂದ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮನ್ಸೂರ್ ಅಲಿ ಖಾನ್ ಕಾರ್ಯಕರ್ತರನ್ನು ಸೇರಿಕೊಂಡರು.

ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ಮರ್ಫಿಟೌನ್‌ನಲ್ಲಿ ಮನ್ಸೂರ್ ಅಲಿ ಖಾನ್ ಅವರು ಬುಧವಾರ ನಡೆಸಿದ ಚುನಾವಣಾ ಪ್ರಚಾರ ಕೈಗೊಂಡ ಪರಿ ಇದು.

ಬೆಳಿಗ್ಗೆ 11 ಗಂಟೆಗೆ ಇಲ್ಲಿನ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವುದರ ಮೂಲಕ ಮನ್ಸೂರ್ ಅವರು ಮತಯಾಚನೆ ಆರಂಭಿಸಿದರು. ನಂತರ ರೋಡ್ ಶೋ ಮೂಲಕ ಪ್ರಚಾರಕ್ಕೆ ಮುಂದಾದರು. ಮೆರವಣಿಗೆ ಸಾಗಿದ ರಸ್ತೆಗಳಲ್ಲಿ ಕಾರ್ಯಕರ್ತರು ಹೂವಿನ ಮಳೆ ಸುರಿಸಿದರು. ಕ್ರೇನ್ ಮೂಲಕ ಬೃಹತ್ ಗಾತ್ರದ ಸೇಬಿನ ಹಾರ ಹಾಕಿದರು. ಮುತ್ಯಾಲಮ್ಮ ದೇವಸ್ಥಾನ, ಗ್ಯಾಂಗ್‌ಮನ್ ಕ್ವಾಟರ್ಸ್‌ನ ಚರ್ಚ್, ದುರ್ಗಮ್ಮ ದೇವಿ ದೇವಸ್ಥಾನಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಮಹಿಳಾ ಕಾರ್ಯಕರ್ತರು ಮನ್ಸೂರ್ ಅವರಿಗೆ ಆರತಿ ಬೆಳಗಿ ಶುಭ ಹಾರೈಸಿದರು.

ಮರ್ಫಿಟೌನ್, ಜೈರಾಜ್‌ನಗರ, ಲಕ್ಷ್ಮಿಪುರ ಭಾಗಗಳಲ್ಲಿ ತಮಿಳರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸ್ಥಳೀಯ ಮುಖಂಡರು ತಮಿಳು ಭಾಷೆಯಲ್ಲಿಯೇ ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡುವಂತೆ ಮನವಿ ಮಾಡಿದರು. ‘ರಾಜ್ಯ ಸರ್ಕಾರ ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ, ಶಕ್ತಿ ಯೋಜನೆ, ಯುವನಿಧಿ ಗ್ಯಾರಂಟಿಗಳನ್ನು ನೀಡಿದೆ. ಕೇಂದ್ರದಲ್ಲೂ ಅಧಿಕಾರ ಹಿಡಿಯಲು ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸಬೇಕು’ ಎಂದು ಮನವಿ ಮಾಡಿದರು.

ಶಿವಾಜಿನಗರ–ಸಿವಿ ರಾಮನ್‌ನಗರ ವಿಧಾನಸಭೆ ಕ್ಷೇತ್ರದಲ್ಲಿ ಪ್ರಚಾರ ನಡೆಸಿದ ಮನ್ಸೂರ್ ಅವರಿಗೆ ಶಾಸಕ ರಿಜ್ವಾನ್ ಅರ್ಷದ್ ಸಾಥ್ ನೀಡಿದರು.

ಸಂಜೆ ಶಿವಾಜಿನಗರ ವಿಧಾನಸಭೆ ಕ್ಷೇತ್ರದಲ್ಲಿ ಮನ್ಸೂರ್ ಅಲಿ ಖಾನ್ ರೋಡ್ ಶೋ ನಡೆಸಿದರು. ರಾತ್ರಿ 8ರಿಂದ 10 ಗಂಟೆಯವರೆಗೆ ಶಿವಾಜಿನಗರದ ಗುಲಿಸ್ತಾನ್ ಶಾದಿ ಮಹಲ್‌ನಲ್ಲಿ ವ್ಯಾಪಾರಸ್ಥರೊಂದಿಗೆ ಸಭೆ ನಡೆಸುತ್ತಲೇ ಗೆಲುವಿಗಾಗಿ ‘ಕಾರ್ಯತಂತ್ರ’ ರೂಪಿಸಿದರು.

2008ರ ಕ್ಷೇತ್ರ ಪುನರ್ವಿಂಗಡಣೆ ಬಳಿಕ ಅಸ್ತಿತ್ವಕ್ಕೆ ಬಂದ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಮೇಲೆ ಬಿಜೆಪಿ ಬಲವಾದ ಹಿಡಿತ ಸಾಧಿಸಿದೆ. ಕಾಂಗ್ರೆಸ್ ಈ ಬಾರಿ ಈ ಕ್ಷೇತ್ರವನ್ನು ‘ಕೈ’ವಶ ಮಾಡಿಕೊಳ್ಳಲು ರಾಜ್ಯಸಭೆಯ ಉಪ ಸಭಾಪತಿಯಾಗಿದ್ದ ಕೆ. ರೆಹಮಾನ್ ಖಾನ್ ಪುತ್ರ ಮನ್ಸೂರ್ ಅಲಿ ಖಾನ್ ಅವರನ್ನು ಕಣಕ್ಕಿಳಿಸಿದೆ. ಮುಸ್ಲಿಂ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಅದೇ ಸಮುದಾಯದವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ.

ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮನ್ಸೂರ್ ಅಲಿ ಖಾನ್ ಇಂದಿರಾನಗರದ ಕೆಎಫ್‌ಸಿ ವೃತ್ತದ ಬಳಿ ಪುನೀತ್ ರಾಜ್‌ಕುಮಾರ್ ಆಟೊ ನಿಲ್ದಾಣದವರು ಆಯೋಜಿಸಿದ್ದ ಶ್ರೀರಾಮ ನವಮಿಯಲ್ಲಿ ಪಾಲ್ಗೊಂಡು, ಮಜ್ಜಿಗೆ ಮತ್ತು ಪಾನಕವನ್ನು ಕಾರ್ಯಕರ್ತರಿಗೆ ವಿತರಿಸಿದರು –ಪ್ರಜಾವಾಣಿ ಚಿತ್ರ: ಎಂ.ಎಸ್‌.ಮಂಜುನಾಥ್

ಮಜ್ಜಿಗೆ, ಪಾನಕ, ಕೋಸಂಬರಿ

ಇಂದಿರಾನಗರದ ಕೆಎಫ್‌ಸಿ ವೃತ್ತದಲ್ಲಿ ಪುನೀತ್ ರಾಜ್‌ಕುಮಾರ್ ಆಟೊ ಚಾಲಕರು ಆಯೋಜಿಸಿದ್ದ ಶ್ರೀರಾಮ ನವಮಿ ಕಾರ್ಯಕ್ರಮದಲ್ಲಿ ಮನ್ಸೂರ್ ಅಲಿ ಖಾನ್ ಪಾಲ್ಗೊಂಡು, ಸೀತಾ–ರಾಮನ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ನಂತರ ಭಕ್ತರಿಗೆ ಹಾಗೂ ಕಾರ್ಯಕರ್ತರಿಗೆ ಮಜ್ಜಿಗೆ ಪಾನಕ, ಕೋಸಂಬರಿ ವಿತರಿಸಿದರು. ನೆತ್ತಿ ಸುಡುವ ಬಿಸಲಿನಲ್ಲಿಯೇ ಅಭ್ಯರ್ಥಿಯೊಂದಿಗೆ ಹೆಜ್ಜೆ ಹಾಕಿದ್ದ ಕಾರ್ಯಕರ್ತರು ಮಜ್ಜಿಗೆ, ಪಾನಕ ಕುಡಿದು ಸ್ವಲ್ಪ ಸಮಯ ವಿಶ್ರಾಂತಿ ಪಡೆದು ಮತ್ತೆ ರೋಡ್ ಶೋನಲ್ಲಿ ಹೆಜ್ಜೆ ಹಾಕಿದರು.

‘ಕೇಂದ್ರ ಲೋಕಸಭಾ ಕ್ಷೇತ್ರದಲ್ಲಿ ಬದಲಾವಣೆ ಗಾಳಿ’

‘ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದ್ದು, ಮತದಾರರು ಕಾಂಗ್ರೆಸ್‌ಗೆ ಬೆಂಬಲಿಸುವ ಒಲವು ತೋರುತ್ತಿದ್ದಾರೆ. ರಾಜ್ಯ ಸರ್ಕಾರ ಜಾರಿಗೊಳಿಸಿರುವ ಐದು ಗ್ಯಾರಂಟಿ ಯೋಜನೆಗಳು ಈ ಚುನಾವಣೆಯಲ್ಲಿ ಕೈಹಿಡಿಯುವ ವಿಶ್ವಾಸವಿದೆ. ನಾನು ಸಂಸದನಾಗಿ ಆಯ್ಕೆಯಾದರೆ, ನಮ್ಮ ರಾಜ್ಯದ ಸರ್ವತೋಮುಖ ಅಭಿವೃದ್ಧಿಯ ಬಗ್ಗೆ ಸಂಸತ್ತಿನಲ್ಲಿ ಧ್ವನಿ ಎತ್ತುತ್ತೇನೆ’ ಎಂದು ಮನ್ಸೂರ್ ಅಲಿ ಖಾನ್ ಭರವಸೆ ನೀಡಿದರು.

ಸಿವಿ ರಾಮನ್‌ನಗರ, ಶಿವಾಜಿನಗರ ವಿಧಾನಸಭೆ ಕ್ಷೇತ್ರಗಳಲ್ಲಿ ಪ್ರಚಾರ

ಬೆಳಿಗ್ಗೆ 11ರಿಂದ ಮಧ್ಯಾಹ್ನ 2ಗಂಟೆಯವರೆಗೆ ಸಿ.ವಿ. ರಾಮನ್ ನಗರದ ಮರ್ಫಿಟೌನ್, ಜೈರಾಜ್‌ನಗರ, ಲಕ್ಷ್ಮೀಪುರ, ಲಾಲ್ ಬಹದ್ದೂರ್ ಶಾಸ್ತ್ರಿನಗರ, ಇಂದಿರಾನಗರ, ಹಳೆ ಬಿನ್ನಮಂಗಳ, ಹೊಸ ಬಿನ್ನಮಂಗಳ, ಎಚ್. ಕಾಲೊನಿ ಹಾಗೂ ಹಳೆ ತಿಪ್ಪಸಂದ್ರ ಹಾಗೂ ಶಿವಾಜಿನಗರದಲ್ಲಿ ಸಂಜೆ 4ರಿಂದ ರಾತ್ರಿ 8ಗಂಟೆವರೆಗೆ ಶಿವಾಜಿನಗರ ವಿಧಾನಸಭಾ ಕ್ಷೇತ್ರದ ರಾಮಸ್ವಾಮಿ ವಾರ್ಡ್, ಎ.ಕೆ. ಕಾಲೊನಿ, ಪೆಮ್ಮೆಗೌಡ ರಸ್ತೆ, ಮಾರಪ್ಪ ಗಾರ್ಡನ್ ಶೇಷಾದ್ರಿ ರಸ್ತೆ, ಚಿನ್ನಪ್ಪ ಗಾರ್ಡನ್‌ನ 1, 2 ಮತ್ತು 4ನೇ ಮುಖ್ಯರಸ್ತೆಯಲ್ಲಿ ರೋಡ್ ಶೋ ಮೂಲಕ ‘ಮತಬೇಟೆ’ ನಡೆಸಿದರು.

ಸುದ್ದಿ 2 ನಿಮಿಷ

ಅಂಚೆ ಮತದಾನ ಕೇಂದ್ರ ಸ್ಥಾಪನೆ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಅಗತ್ಯ ಸೇವೆಗಳ ಸಿಬ್ಬಂದಿ (ಎವಿಇಎಸ್) ಮತಚಲಾಯಿಸಲು ಅನುಕೂಲ ಆಗುವಂತೆ ನಗರ ವ್ಯಾಪ್ತಿಯ ಮೂರು ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಅಂಚೆ ಮತದಾನ ಕೇಂದ್ರ ಸ್ಥಾಪಿಸಲಾಗಿದೆ.

ನಗರದ ಮೂರು ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 1,348 ಅಗತ್ಯ ಸೇವೆಗಳ ಸಿಬ್ಬಂದಿ ಅಂಚೆ ಮತದಾನ ಮಾಡಲು ನೋಂದಣಿ ಮಾಡಿಕೊಂಡಿದ್ದಾರೆ. ಏ.19ರಿಂದ 21ರವರೆಗೆ ಮೂರು ದಿನ ಬೆಳಿಗ್ಗೆ 9 ರಿಂದ ಸಂಜೆ 5ರ ವರೆಗೆ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿದೆ.

ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಚುನಾವಣಾಧಿಕಾರಿ ಕಚೇರಿ, ಕೊಠಡಿ ಸಂಖ್ಯೆ 17, ನೆಲ ಮಹಡಿ, ಬಿಬಿಎಂಪಿ ಕೇಂದ್ರ ಕಚೇರಿ, ನರಸಿಂಹ ರಾಜ ವೃತ್ತ, ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಚುನಾವಣಾಧಿಕಾರಿಗಳ ಕಚೇರಿ, ವಲಯ ಆಯುಕ್ತರ(ದಕ್ಷಿಣ) ಕಾರ್ಯಾಲಯ, 2ನೇ ಮಹಡಿ, ಮಹಾನಗರ ಪಾಲಿಕೆ ಕಚೇರಿಗಳ ಸಂಕೀರ್ಣ, 9ನೇ ಕ್ರಾಸ್, 2ನೇ ಬ್ಲಾಕ್, ಜಯನಗರ, ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕೇಂದ್ರ ಸಂಘ ಕಟ್ಟಡ, ಸಭಾಂಗಣ, ನೆಲಮಹಡಿ, ಕಂದಾಯ ಭವನ ಹಿಂಬಾಗ, ಕೆ.ಜಿ ರಸ್ತೆ ಇಲ್ಲಿ ಅಂಚೆ ಮತದಾನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

‘ಧಾರ್ಮಿಕ ಮೂಲಭೂತವಾದ ಸೋಲಬೇಕು’

ಬೆಂಗಳೂರು: ‘ಈ ಬಾರಿಯ ಲೋಕಸಭೆ ಚುನಾವಣೆಯಲ್ಲಿ ಜಾತಿವಾದ ಮತ್ತು ಧಾರ್ಮಿಕ ಮೂಲಭೂತವಾದಗಳು ಸೋಲಬೇಕು. ಆದ್ದರಿಂದ ಸಮಾನತೆ ಮತ್ತು ಸೌಹಾರ್ದ ಪರವಾದ ಸೈದ್ಧಾಂತಿಕ ಶಕ್ತಿಗಳನ್ನು ಬೆಂಬಲಿಸಬೇಕು’ ಎಂದು ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ ಆಶಯ ವ್ಯಕ್ತಪಡಿಸಿದೆ.

ಇದಕ್ಕೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರಾದ ಬರಗೂರು ರಾಮಚಂದ್ರಪ್ಪ, ಜಿ.ರಾಮಕೃಷ್ಣ, ಎನ್.ಗಾಯತ್ರಿ, ಸಿದ್ದನಗೌಡ ಪಾಟೀಲ, ರಾಜಪ್ಪ ದಳವಾಯಿ, ಆರ್.ಜಿ.ಹಳ್ಳಿ ನಾಗರಾಜ್, ಭಕ್ತರಹಳ್ಳಿ ಕಾಮರಾಜ್, ಬಿ.ರಾಜಶೇಖರಮೂರ್ತಿ, ಎಚ್.ಎಲ್.ಪುಷ್ಪ, ಕೆ.ಷರೀಫಾ, ಎ.ಬಿ.ರಾಮಚಂದ್ರಪ್ಪ, ಬಿ.ಎನ್. ಮಲ್ಲೇಶ್, ವೈ.ಬಿ.ಹಿಮ್ಮಡಿ, ಎಸ್.ವೈ.ಗುರುಶಾಂತ್, ಪಿ.ಆರ್. ವೆಂಕಟೇಶ್, ಅಬ್ದುಲ್ ಹೈ, ಅಶ್ವಿನಿ ಮದನಕರ ಹಾಗೂ ಎಚ್.ಆರ್. ಸ್ವಾಮಿ ಅವರು ಸಂಘಟನೆಯ ಆಶಯಕ್ಕೆ ಬೆಂಬಲ ಸೂಚಿಸಿದ್ದಾರೆ.

‘ನಮ್ಮ ದೇಶವು ಅನೇಕ ಬಿಕ್ಕಟ್ಟುಗಳನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಲೋಕಸಭೆಗೆ ಚುನಾವಣೆ ನಡೆಯುತ್ತಿದೆ. ನಿರುದ್ಯೋಗ, ಬೆಲೆ ಏರಿಕೆ, ದಲಿತರು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ, ಜಾತಿ ಮತ್ತು ಧರ್ಮ ದ್ವೇಷದ ವಾತಾವರಣದಿಂದ ಜನಸಾಮಾನ್ಯರು ತತ್ತರಿಸುವಂತಾಗಿದೆ. ವ್ಯಕ್ತಿಗತ ವಾಗ್ವಾದಗಳು ಮೇಲುಗೈ ಪಡೆದು, ಸೈದ್ಧಾಂತಿಕ ವಿಚಾರಗಳು ಹಿನ್ನೆಲೆಗೆ ಸರಿದಿವೆ’ ಎಂದು ಸಂಘಟನೆಯ ಬಿ.ರಾಜಶೇಖರಮೂರ್ತಿ ತಿಳಿಸಿದ್ದಾರೆ.



ಪೀಣ್ಯದಾಸರಹಳ್ಳಿಯ ಸಿಡೇದಹಳ್ಳಿಯಲ್ಲಿ ಸೌಂದರ್ಯ ಪಿ. ಮಂಜಪ್ಪ ಮತ್ತು ಎಂ.ಕೀರ್ತನ್ ಕುಮಾರ್ ಅವರು ಆಮ್ ಆದ್ಮಿ ಪಕ್ಷ (ಎಎಪಿ) ತೊರೆದು ಬುಧವಾರ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು. ಅವರನ್ನು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪಿ. ರಾಜೀವ್ ಗೌಡ ಅವರು ಕಾಂಗ್ರೆಸ್ ಶಾಲು ಹಾಕಿ ಪಕ್ಷಕ್ಕೆ ಬರಮಾಡಿಕೊಂಡರು

‘ಶೋಭಾ ಕರಂದ್ಲಾಜೆ ಗೆಲುವಿಗೆ ಶ್ರಮಿಸಲು ಸಂಕಲ್ಪ’

ಬಿಜೆಪಿಗೆ ಅಖಂಡ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಬುಧವಾರ ಬಿಜೆಪಿ ಸೇರಿದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ನಿರಾಕರಿಸಿದ್ದರಿಂದ ಅವರು ಬಿಎಸ್‌ಪಿಯಿಂದ ಸ್ಪರ್ಧಿಸಿ ಸೋತಿದ್ದರು.

ಬಿಜೆಪಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಶೋಭಾ ಕರಂದ್ಲಾಜೆ ಇದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿ.ಎಸ್.ಯಡಿಯೂರಪ್ಪ, ‘ಡಿ.ಜೆ.ಹಳ್ಳಿ ಮತ್ತು ಕೆ.ಜಿ.ಹಳ್ಳಿ ಗಲಭೆಯ ಸಂದರ್ಭದಲ್ಲಿ ಅಖಂಡ ಶ್ರೀನಿವಾಸಮೂರ್ತಿ ಅವರ ಮನೆಗೆ ಬೆಂಕಿ ಇಟ್ಟು ಸುಟ್ಟು ಹಾಕಿದಾಗ ಕಾಂಗ್ರೆಸ್ ಪಕ್ಷದ ಯಾವುದೇ ನಾಯಕರು ಇವರ ನೆರವಿಗೆ ಬರಲಿಲ್ಲ. ಬೆಂಬಲ ವ್ಯಕ್ತಪಡಿಸದೇ ನಾಯಕರು ಮೌನವಾಗಿದ್ದರು. ನಾವು ಅವರ ಬೆಂಬಲಕ್ಕೆ ನಿಂತೆವು. ಈಗ ಅವರು ತಮ್ಮ ಬೆಂಬಲಿಗರೊಂದಿಗೆ ಪಕ್ಷವನ್ನು ಸೇರಿದ್ದಾರೆ. ಇದರಿಂದ ಪಕ್ಷದ ಶಕ್ತಿ ಹೆಚ್ಚಾಗಿದ್ದು, ಶೋಭಾ ಅವರು ಎರಡೂವರೆ ಲಕ್ಷ ಅಂತರದಿಂದ ಗೆಲ್ಲುವುದು ನಿಶ್ಚಿತ’ ಎಂದು ಹೇಳಿದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌.ಯಡಿಯೂರಪ್ಪ ಅವರ ಸಮ್ಮುಖದಲ್ಲಿ ಮಾಜಿ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಬಿಜೆಪಿ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಶೋಭಾ ಕರಂದ್ಲಾಜೆ ಇದ್ದರು

ಅಖಂಡ ಶ್ರೀನಿವಾಸಮೂರ್ತಿ ಮಾತನಾಡಿ, ‘2018 ರ ವಿಧಾನಸಭಾ ಚುನಾವಣೆಯಲ್ಲಿ ಅತಿ ಹೆಚ್ಚು ಮತಗಳನ್ನು ಪಡೆದು ಗೆದ್ದಿದ್ದೆ. ಆದರೆ, 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ತಪ್ಪಿಸಿತು. ಡಿ.ಜೆ.ಹಳ್ಳಿ ಗಲಭೆ ವೇಳೆ ನನ್ನದಲ್ಲದ ತಪ್ಪಿಗೆ ನನ್ನ ಮನೆ ಸುಟ್ಟು ಹಾಕಿದರು. ಆಗ ಕಾಂಗ್ರೆಸ್ ನಾಯಕರು ಬೆಂಬಲಕ್ಕೆ ನಿಲ್ಲಲಿಲ್ಲ. ಇವತ್ತು ಶ್ರೀರಾಮನವಮಿ, ಈ ಶುಭದಿನದಂದು ನನಗೆ ಬಿಜೆಪಿ ಸೇರಲು ಅವಕಾಶ ನೀಡಿದೆ. ಬಿಜೆಪಿ ಸೇರಲು ಶ್ರೀರಾಮನ ಆಶೀರ್ವಾದವೇ ಕಾರಣ’ ಎಂದರು.

‘ನನ್ನ ಕ್ಷೇತ್ರದಲ್ಲಿ ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತರು ಒಗ್ಗಟ್ಟಾಗಿದ್ದೇವೆ. ನನ್ನ ಮನೆಗೆ ಬೆಂಕಿ ಹಚ್ಚಿದವರು ಈಗಲೂ ಹೊರಗಡೆ ಓಡಾಡಿಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಪದವಿಗಳನ್ನೂ ಪಡೆದುಕೊಂಡಿದ್ದಾರೆ. ಅಮಾಯಕರು ಜೈಲಿನಲ್ಲಿದ್ದರೆ ಅದಕ್ಕೆ ನಾನು ಕಾರಣನಲ್ಲ. ಕಾಂಗ್ರೆಸ್‌ನಲ್ಲಿ ಟಿಕೆಟ್ ತಪ್ಪಿಸಿದ್ದು ಒಳ್ಳೆಯದೇ ಆಯಿತು. ಇದರಿಂದ ನಾನು ಬಿಜೆಪಿ ಸೇರುವಂತಾಯಿತು. ಲೋಕಸಭಾ ಚುನಾವಣೆಯಲ್ಲಿ ಶೋಭಾ ಅವರಿಗೆ ಪುಲಿಕೇಶಿ ನಗರ ಕ್ಷೇತ್ರದಿಂದ ಹೆಚ್ಚು ಲೀಡ್ ಕೊಡಿಸಲು ಹೆಚ್ಚು ಶ್ರಮವಹಿಸುತ್ತೇನೆ’ ಎಂದು ತಿಳಿಸಿದರು.

ಚುನಾವಣಾ ತರಬೇತಿಗೆ ಗೈರಾದವರ ಮೇಲೆ ಶಿಸ್ತು ಕ್ರಮ: ತುಷಾರ್ ಗಿರಿನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಮತಗಟ್ಟೆ ಅಧಿಕಾರಿಗಳಿಗೆ ಹಮ್ಮಿಕೊಂಡಿರುವ ತರಬೇತಿಗೆ ಗೈರು ಹಾಜರಾದವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಜಿಲ್ಲಾ ಚುನಾವಣಾಧಿಕಾರಿಯಾಗಿರುವ ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮತಗಟ್ಟೆ ಅಧಿಕಾರಿಗಳಿಗೆ ಬುಧವಾರ ನಡೆದ 2ನೇ ಹಂತದ ತರಬೇತಿಯನ್ನು ಪರಿಶೀಲಿಸಲು ಶಿವಾಜಿನಗರ, ಗಾಂಧಿನಗರ, ಶಾಂತಿನಗರದ ತರಬೇತಿ ಕೇಂದ್ರಗಳಿಗೆ ಭೇಟಿ ನೀಡಿ ಅವರು ಮಾತನಾಡಿದರು.

ವಿವಿ ಪ್ಯಾಟ್, ಕಂಟ್ರೋಲ್ ಯುನಿಟ್ ಹಾಗೂ ಬ್ಯಾಲೆಟ್ ಯೂನಿಟ್ ಹೇಗೆ ಕಾರ್ಯನಿರ್ವಹಿಸಲಿದೆ? ಯಾವ ರೀತಿ ಸಂಪರ್ಕ ನೀಡಬೇಕು ಎಂಬುದನ್ನು ಸರಿಯಾಗಿ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮತಗಟ್ಟೆ ಅಧಿಕಾರಿಗಳಿಗೆ ಎರಡನೇ ಹಂತದ ತರಬೇತಿ ನಡೆಯುತ್ತಿರುವ ಕೇಂದ್ರಗಳಿಗೆ ಬುಧವಾರ ಜಿಲ್ಲಾ ಚುನಾವಣಾಧಿಕಾರಿಯಾಗಿರುವ ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಭೇಟಿ ನೀಡಿದರು

ಮತದಾನದ ಕುರಿತು ಹೆಚ್ಚು ಮಾಹಿತಿಗಾಗಿ ಮತಗಟ್ಟೆ ಕೈಪಿಡಿಯನ್ನು ನೀಡಲಾಗಿದೆ. ಮತಗಟ್ಟೆ ಅಧಿಕಾರಿಗಳ ಕೈಪಿಡಿಯು ಭಾರತ ಚುನಾವಣಾ ಆಯೋಗ ಹಾಗೂ ಕರ್ನಾಟಕ ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲೂ ಲಭ್ಯವಿದ್ದು, ಅಲ್ಲಿಯೂ ಡೌನ್‌ಲೋಡ್ ಮಾಡಿಕೊಂಡು ವಿವರಗಳನ್ನು ಪಡೆದುಕೊಳ್ಳಬಹುದೆಂದು ತಿಳಿಸಿದರು.

ಚುನಾವಣಾ ವಿಭಾಗದ ವಿಶೇಷ ಆಯುಕ್ತ ಸೆಲ್ವಮಣಿ, ಸಹಾಯಕ ಚುನಾವಣಾಧಿಕಾರಿಗಳಾದ ಚಿದಾನಂದ ಎಸ್. ವಠಾರೆ, ಕಮಲಾ ಬಾಯಿ, ಮಮತಾ ಕುಮಾರಿ, ಮತದರಾರರ ನೋಂದಣಾಧಿಕಾರಿಗಳು ಉಪಸ್ಥಿತರಿದ್ದರು.

ಸೌಮ್ಯಾರೆಡ್ಡಿಗೆ ಖಾಸಗಿ ಸಾರಿಗೆ ಸಂಘಟನೆಗಳ ಒಕ್ಕೂಟ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಸಾರಿಗೆ ಸಂಸ್ಥೆಗಳ ಒಕ್ಕೂಟವು ದಕ್ಷಿಣ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾರೆಡ್ಡಿ ಬೆಂಬಲ ಸೂಚಿಸಿದೆ.

‘ಬೆಂಗಳೂರು ದಕ್ಷಿಣ ಕ್ಷೇತ್ರಕ್ಕೆ ನಮ್ಮ ಬೆಂಬಲ ಸೀಮಿತ’ ಎಂದು ಒಕ್ಕೂಟದ ಅಧ್ಯಕ್ಷ ಎಸ್. ನಟರಾಜ ಶರ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಟೊ, ಟ್ಯಾಕ್ಸಿ, ವ್ಯಾನ್, ಶಾಲಾ ಬಸ್, ಖಾಸಗಿ ಬಸ್, ಸರಕು ಸಾಗಣೆ ವಾಹನ ಸೇರಿ 32 ಸಂಘಟನೆಗಳು ಈ ಒಕ್ಕೂಟದಲ್ಲಿವೆ. ನಮ್ಮ 30 ಬೇಡಿಕೆಗಳನ್ನು ಈಡೇರಿಸಬೇಕು ಎಂದು ನಿರಂತರವಾಗಿ ಹೋರಾಟ ಮಾಡಿಕೊಂಡು ಬಂದಿದ್ದೆವು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು 20 ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಂಡು ಖಾಸಗಿ ವಾಹನ ಚಾಲಕರ ಹಿತಕಾಯಲು ಶ್ರಮಿಸಿದ್ದಾರೆ.

‘ರ್‍ಯಾಪಿಡೊ ಬೈಕ್, ಟ್ಯಾಕ್ಸಿ ರದ್ದತಿ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಂದಿರಾ ಕ್ಯಾಂಟೀನ್, ಅಗ್ರಿಗೇಟರ್ ಆ್ಯಪ್ ಕಾನ್ಸೆಪ್ಟ್ ನೋಟ್ ತಯಾರಿ, ಅಸಂಘಟಿತ ಚಾಲಕರ ಅಭಿವೃದ್ಧಿ ನಿಗಮ ಸ್ಥಾಪನೆ, ಚಾಲಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಧನಸಹಾಯ ಸೇರಿ ಅನೇಕ ಕ್ರಮ ಕೈಗೊಂಡಿದ್ದಾರೆ. ಅದಕ್ಕಾಗಿ ಅವರ ಪುತ್ರಿ ಸೌಮ್ಯಾರೆಡ್ಡಿ ಅವರಿಗೆ ಬೆಂಬಲ ಘೋಷಣೆ ಮಾಡಿದ್ದೇವೆ’ ಎಂದು ಪೀಸ್ ಆಟೊ ಅಧ್ಯಕ್ಷ ರಘು, ಕರ್ನಾಟಕ ಚಾಲಕರ ಒಕ್ಕೂಟದ ಅಧ್ಯಕ್ಷ ಜಿ. ನಾರಾಯಣಸ್ವಾಮಿ, ಇಂಡಿಯನ್ ವೆಹಿಕಲ್ ಟ್ರೇಡ್ ಯುನಿಯನ್ ಸದಾನಂದ ಸ್ವಾಮಿ, ಭಾರತ್ ಟ್ರಾನ್ಸ್‌ಪೋರ್ಟ್ ಅಸೋಸಿಯೆಶನ್ ಅಧ್ಯಕ್ಷ ಜಯಣ್ಣ, ಟ್ಯಾಕ್ಸಿ ಚಾಲಕರ ಸಂಘದ ಅಧ್ಯಕ್ಷ ಹಮೀದ್ ಸೇರಿದಂತೆ 32 ಸಂಘಟನೆಗಳ ಪದಾಧಿಕಾರಿಗಳು ತಿಳಿಸಿದ್ದಾರೆ.

‘ಉದಾಸೀನ ಬೇಡ; ಮತದಾನ ಮಾಡಿ’

ಪೀಣ್ಯ ದಾಸರಹಳ್ಳಿ: ‘ಚುನಾವಣೆಯಲ್ಲಿ ಯಾರಾದರೂ ಗೆಲ್ಲಲಿ. ಚುನಾವಣೆಯಿಂದ ನನಗೆ ಏನು ಆಗಬೇಕೆಂಬ ಉದಾಸೀನ ಭಾವನೆ ಬೇಡ. ಮತ ಹಾಕದೆ ನಿರ್ಲಕ್ಷ್ಯ ಮಾಡಬೇಡಿ. ಕಡ್ಡಾಯವಾಗಿ ಮತ ಹಾಕುವ ಮೂಲಕ ಒಳ್ಳೆಯ ಅಭ್ಯರ್ಥಿಯನ್ನು ಗೆಲ್ಲಿಸಿ ...’

– ಹೀಗೆಂದು ಮನವಿ ಮಾಡಿದವರು ಸಾಹಿತಿ ಚಿಕ್ಕ ಹೆಜ್ಜಾಜಿ ಮಹಾದೇವ್ ಅವರು.

ಲಗ್ಗೆರೆಯ ಮಂಜುನಾಥ ಸ್ವಾಮಿ ದೇವಸ್ಥಾನದ ಉದ್ಯಾನದಲ್ಲಿ ವಿಶ್ವ ಕನ್ನಡ ಕಲಾ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಮತದಾನ ಜಾಗೃತಿ ಕುರಿತ ಕವಿಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ರಾಜಕಾರಣಿಗಳು ಸರಿಯಿಲ್ಲ’ ಅನ್ನುವುದಕ್ಕಿಂತ ನಮ್ಮ ಮತವನ್ನು ಒಳ್ಳೆಯ ಮತ್ತು ಸೂಕ್ತ ಅಭ್ಯರ್ಥಿಗೆ ಚಲಾಯಿಸಬೇಕು. ಆಗ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ. ಮತದಾನ ನಮ್ಮ ಹಕ್ಕು. ಅದನ್ನು ಪ್ರತಿಯೊಬ್ಬರೂ ಚಲಾಯಿಸಬೇಕು’ ಎಂದರು.

ಲಗ್ಗೆರೆಯ ಮಂಜುನಾಥ ಸ್ವಾಮಿ ದೇವಸ್ಥಾನದ ಉದ್ಯಾನದಲ್ಲಿ ವಿಶ್ವ ಕನ್ನಡ ಕಲಾ ಸಂಸ್ಥೆ ವತಿಯಿಂದ ಮತದಾನ ಜಾಗೃತಿ ಕುರಿತು ಕವಿಗೋಷ್ಠಿ ನಡೆಯಿತು.

ಸಾಹಿತಿ ವೈ.ಬಿ.ಎಚ್. ಜಯದೇವ್ ಮಾತನಾಡಿ, ‘ಬೆಂಗಳೂರಿನಂತಹ ಮಹಾನಗರಗಳಲ್ಲಿ ಶೇ 54ರಷ್ಟು ಮತದಾನವಾಗುತ್ತದೆ. ಚುನಾವಣೆ ದಿನ ಏನೇ ಕೆಲಸವಿರಲಿ, ಪ್ರತಿಯೊಬ್ಬರೂ ದೇಶದ ಹಿತದೃಷ್ಟಿಯಿಂದ ಕಡ್ಡಾಯವಾಗಿ ಮತದಾನ ಮಾಡಿ’ ಎಂದರು.

ಅಂಬೇಡ್ಕರ್ ಜಯಂತಿ ಪ್ರಯುಕ್ತ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. 20ಕ್ಕೂ ಹೆಚ್ಚು ಕವಿಗಳು ಕವನ ವಾಚಿಸಿದರು. ಕಾದಂಬರಿಕಾರರಾದ ಮಮತಾ ವಾರನಹಳ್ಳಿ, ಸಂಸ್ಥೆಯ ಅಧ್ಯಕ್ಷ ಈ.ರವೀಶ ಹಾಗೂ ಗೀತಾ, ಭಾರತಿ ಕೋಕಲೆ, ಕಾವೇರಿ, ಲತಾ ಕುಂದರಗಿ ಇದ್ದರು.

3ಗಳ ಸ್ವಾಮೀಜಿ ಭೇಟಿಯಾದ ಬಿಜೆಪಿ ಅಭ್ಯರ್ಥಿ

ಪ್ರಜಾವಾಣಿ ವಾರ್ತೆ

ವಿಜಯಪುರ(ದೇವನಹಳ್ಳಿ): ಹೋಬಳಿಯ ಹಾರೋಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬುಳ್ಳಹಳ್ಳಿ ಗ್ರಾಮದಲ್ಲಿರುವ ದ್ರೌಪದಿ ಆದಿಪರಾಶಕ್ತಿ ಮಹಾಸಂಸ್ಥಾನ ಪೀಠಕ್ಕೆ ಬುಧವಾರ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಕೆ. ಸುಧಾಕರ್ ಭೇಟಿ ನೀಡಿದ್ದರು.

ತಿಗಳ ಸಮುದಾಯದ ಸ್ವಾಮೀಜಿ, ದ್ರೌಪದಿ ಆದಿಪರಾಶಕ್ತಿ ಮಹಾಸಂಸ್ಥಾನ ಪೀಠದ ಮಂಜುನಾಥ್ ಮಹಾರಾಜ್ ಹಾಗೂ ಸಮುದಾಯ ಮುಖಂಡರೊಂದಿಗೆ ಚರ್ಚೆ ನಡೆಸಿದರು.

ದೇವನಹಳ್ಳಿಯಲ್ಲಿ ಇತ್ತೀಚೆಗೆ ನಡೆದ ವಹ್ನಿಕುಲ ತಿಗಳ ಸಮುದಾಯದ ಮುಖಂಡರ ಸಭೆಯಲ್ಲಿ ಸಮುದಾಯದವರನ್ನು ಸುಧಾಕರ್ ರಾಜಕೀಯವಾಗಿ ತುಳಿದಿದ್ದಾರೆ ಎಂದು ವಾಗ್ದಾಳಿ ನಡೆಸಲಾಗಿತ್ತು. ಆ ಹಿನ್ನೆಲೆಯಲ್ಲಿ ಈ ಭೇಟಿ ಮಹತ್ವ ಪಡೆದುಕೊಂಡಿದೆ. ‘ಇದುವರೆಗೂ ಉಂಟಾಗಿದ್ದ ಎಲ್ಲಾ ಗೊಂದಲ ಬಗೆಹರಿದಿವೆ. ನನ್ನ ಬಗ್ಗೆ ಸಮುದಾಯದ ಮುಖಂಡರಲ್ಲಿದ್ದ ಅನುಮಾನ ನಿವಾರಿಸಲಾಗಿದೆ. ಸಮುದಾಯದ ಮುಖಂಡರನ್ನು ಉತ್ತಮವಾಗಿ ನಡೆಸಿಕೊಳ್ಳುವುದಾಗಿ ಸ್ವಾಮೀಜಿಗೆ ಭರವಸೆ ನೀಡಿದ್ದೇನೆ. ವಹ್ನಿಕುಲ ತಿಗಳ ಸಮುದಾಯ ಬಿಜೆಪಿ ಪರ ನಿಲ್ಲಲಿದೆ’ ಎಂದು ಸಭೆಯ ಬಳಿಕ ಸುಧಾಕರ್ ಮಾಹಿತಿ ನೀಡಿದರು.

> ಸಮುದಾಯಕ್ಕೆ ಅನುಮಾನ ಹುಟ್ಟಿಕೊಂಡಿರುವುದು ಸತ್ಯ. ಮೂರನೇ ವ್ಯಕ್ತಿಯಿಂದ ಭಿನ್ನಾಭಿಪ್ರಾಯ ಸೃಷ್ಟಿಯಾಗಿದೆ. ಸಣ್ಣ ಸಮಸ್ಯೆಯನ್ನು ದೊಡ್ಡದಾಗಿ ಬಿಂಬಿಸಲಾಗಿದೆ. ಭಿನ್ನಾಭಿಪ್ರಾಯ ಕ್ಷಣಿಕ. ಇದಕ್ಕೆ ಡಾ.ಕೆ. ಸುಧಾಕರ್ ಅವರು ಎಲ್ಲರ ಸಮ್ಮುಖದಲ್ಲಿ ವಿವರಣೆ ನೀಡಿದ್ದಾರೆ. ಸಮುದಾಯ ಅವರ ಹಿಂದೆ ಇರುತ್ತದೆ. ಎಲ್ಲವೂ ಬಗೆಹರಿದಿದೆ. ನಮಗೆ ಬಿಜೆಪಿ ಸರ್ಕಾರದಿಂದ ಸಹಕಾರ ಸಿಕ್ಕಿದೆ. ಎಲ್ಲವೂ ಸುಖಾಂತ್ಯವಾಗಿದೆ
>
> **ಮಂಜುನಾಥ್ ಮಹಾರಾಜ್**, ದ್ರೌಪದಿ ಆದಿಪರಾಶಕ್ತಿ ಸಂಸ್ಥಾನ ಪೀಠದ

ಆದಿಶಕ್ತಿ ಬ್ಯಾಂಕ್ ಅಧ್ಯಕ್ಷ ಕೆ.ಲಕ್ಷ್ಮಣ್, ಎಸ್.ಆರ್. ಎಸ್.ದೇವರಾಜ್, ತಾಲ್ಲೂಕು ತಿಗಳರ ಸಂಘದ ಅಧ್ಯಕ್ಷ ವಿ. ಗೋಪಾಲಕೃಷ್ಣ, ರಾಜ್ಯ ಸಂಘದ ಉಪಾಧ್ಯಕ್ಷ ವೈ.ಎನ್.ಶಾಮಣ್ಣ, ರಾಜ್ಯ ಸಂಘಟನಾ ಕಾರ್ಯದರ್ಶಿ ಜೆ.ಆರ್.ಮುನಿವೀರಣ್ಣ, ನಿರ್ದೇಶಕರಾದ ಎನ್.ಕನಕರಾಜು, ಕೆ.ಎಂ.ಮಂಜುನಾಥ್, ಜಿ.ಗಣೇಶ್, ಮುನೀಂದ್ರ, ಜಿ.ಎಂ.ಚಂದ್ರು, ಕರವೇ ಶಿವಕುಮಾರ್, ಡಿ.ಆರ್.ಚನ್ನಕೃಷ್ಣ, ವಿ.ಎಂ.ಮಂಜುನಾಥ್, ಇದ್ದರು.

ಐಎಂಎ ಪ್ರಣಾಳಿಕೆಯಲ್ಲಿ ಹಲವು ಬೇಡಿಕೆ

ಆರೋಗ್ಯ ಕ್ಷೇತ್ರಕ್ಕೆ ಜಿಎಸ್‌ಟಿ ವಿನಾಯಿತಿಗಾಗಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆ ಪ್ರಯುಕ್ತ ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರ್ನಾಟಕ ಶಾಖೆಯು ಚುನಾವಣೆ ಪ್ರಣಾಳಿಕೆ ಸಿದ್ಧಪಡಿಸಿದ್ದು, ಆರೋಗ್ಯ ಕ್ಷೇತ್ರಕ್ಕೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಿನಾಯಿತಿ, ಹೆಚ್ಚಿನ ಅನುದಾನ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿದೆ.

ಆರೋಗ್ಯ ಕ್ಷೇತ್ರದ ವಿವಿಧ ವಿಭಾಗಗಳಲ್ಲಿನ ಸಮಸ್ಯೆಗಳನ್ನು ಪಟ್ಟಿ ಮಾಡುವ ಜತೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಪ್ರಣಾಳಿಕೆಯಲ್ಲಿ ತಿಳಿಸಲಾಗಿದೆ. ಒಟ್ಟು 64 ಪುಟಗಳನ್ನು ಹೊಂದಿದ್ದು, ರೋಗವಾರು ಕೂಡ ಚಿಕಿತ್ಸೆ ಸೇರಿ ವಿವಿಧ ಸುಧಾರಣಾ ಕ್ರಮಗಳಿಗೆ ಒತ್ತಾಯಿಸಲಾಗಿದೆ.

ಆಧುನಿಕ ವೈದ್ಯಕೀಯ ವಿಜ್ಞಾನದ ಶುದ್ಧತೆಯನ್ನು ಕಾಪಾಡಬೇಕು. ಎಲ್ಲ ವೈದ್ಯಕೀಯ ವಿಜ್ಞಾನಗಳನ್ನು ಒಳಗೊಂಡ ಸಮಗ್ರ ಚಿಕಿತ್ಸಾ ಪ್ರಕಾರವು ರೋಗಿಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಇದು ಮುಂದಿನ ದಿನಗಳಲ್ಲಿ ಜನರ ಆರೋಗ್ಯಕ್ಕೆ ಮಾರಕವಾಗುವ ಸಾಧ್ಯತೆಯಿದೆ. ಆದ್ದರಿಂದ ಎಲ್ಲ ವೈದ್ಯಕೀಯ ಪದ್ಧತಿಗಳನ್ನು ಒಟ್ಟುಗೂಡಿಸಿ ನೋಡುವ ಬದಲು ಪ್ರತ್ಯೇಕಿಸಿ, ರೋಗಿಗೆ ಚಿಕಿತ್ಸೆಯ ಆಯ್ಕೆ ಒದಗಿಸಲು ಕ್ರಮವಹಿಸಬೇಕು ಎಂದು ಐಎಂಎ ಕರ್ನಾಟಕ ಶಾಖೆ ತಿಳಿಸಿದೆ.

ಕರ್ತವ್ಯನಿರತ ವೈದ್ಯರ ಮೇಲೆ ಹಲ್ಲೆ ತಡೆಗೆ ಕ್ರಮವಹಿಸಬೇಕು. ವೈದ್ಯರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುವುದು ವೈದ್ಯರನ್ನು ಸೋಲಿಸಿದಂತೆಯೇ ಸರಿ. ಆದ್ದರಿಂದ ಸದ್ಯ ವೈದ್ಯರ ರಕ್ಷಣೆಗೆ ಇರುವ ಕಾಯ್ದೆಗಳನ್ನು ಪರಿಣಾಮಕಾರಿಯಾಗಿ ಜಾರಿ ಮಾಡಬೇಕು. ‘ಕ್ಲಿನಿಕಲ್ ಎಸ್ಟಾಬ್ಲಿಷ್‌ಮೆಂಟ್ ಆ್ಯಕ್ಟ್’ನಿಂದ ಸಣ್ಣ ಹಾಗೂ ಮಧ್ಯಮ ಆಸ್ಪತ್ರೆಗಳನ್ನು ಹೊರಗಿಡಬೇಕು. ಆರೋಗ್ಯ ಕ್ಷೇತ್ರದ ಮೇಲೆ ಜಿಎಸ್‌ಟಿ ಹಾಕುವುದೆಂದರೆ ಕಾಯಿಲೆಗೆ ತೆರಿಗೆ ಹಾಕಿದಂತೆ. ಅನಾರೋಗ್ಯ ಪೀಡಿತ ವ್ಯಕ್ತಿಯ ಚಿಕಿತ್ಸೆ ಮೇಲೆ ತೆರಿಗೆ ಹಾಕುವುದು ಖಂಡಿತವಾಗಿಯೂ ನ್ಯಾಯ ಸಮ್ಮತವಲ್ಲ. ಈ ಬಗ್ಗೆಯೂ ಕ್ರಮವಹಿಸಬೇಕು ಎಂದು ಹೇಳಿದೆ.

ಹೆಣ್ಣು ಭ್ರೂಣ ಹತ್ಯೆ ತಡೆಗೆ ಸರ್ಕಾರ ಕ್ರಮವಹಿಸಬೇಕು. ಗರ್ಭಪೂರ್ವ ಮತ್ತು ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ಕಾಯ್ದೆ (ಪಿಸಿಪಿಎನ್‌ಡಿಟಿ) ಅಡಿ ವೈದ್ಯರು ಮೇಲೆ ಅನಗತ್ಯ ಕಿರುಕುಳ ನೀಡಬಾರದು. ಆಯುಷ್ಮಾನ್ ಯೋಜನೆಯ ಸುಧಾರಣೆಗೆ ಕ್ರಮವಹಿಸಬೇಕು ಹೆಚ್ಚಿಸಬೇಕು ಎಂದು ಆಗ್ರಹಿಸಿದೆ.

‘ಬಿಜೆಪಿ ಮೈತ್ರಿಕೂಟ ಸೋಲಿಸಿ’ ಅಭಿಯಾನಕ್ಕೆ ಚಾಲನೆ

ಚಾಮರಾಜನಗರ: ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯ ರೈತ ಸಂಘದಿಂದ ಹಮ್ಮಿಕೊಂಡಿರುವ ‘ಬಿಜೆಪಿ ಮತ್ತು ಮೈತ್ರಿಕೂಟವನ್ನು ಸೋಲಿಸಿ, ರೈತ ಸಮುದಾಯವನ್ನು ಉಳಿಸಿ’ ಎಂಬ ಅಭಿಯಾನಕ್ಕೆ ಬುಧವಾರ ಚಾಲನೆ ನೀಡಲಾಯಿತು.

ತಾಲ್ಲೂಕಿನ ಹೊಂಡರಬಾಳು ‘ಅಮೃತ ಭೂಮಿ’ಯಲ್ಲಿರುವ ರೈತ ನಾಯಕ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರ ಸ್ಮಾರಕ ಸ್ಥಳದಲ್ಲಿ ಪಂಜಾಬ್‌ನ ಕ್ರಾಂತಿಕಾರಿ ಕಿಸಾನ್ ಯೂನಿಯನ್‌ನ ಅವತಾರ್ ಸಿಂಗ್ ಮೆಹ್ಮಾ ಚಾಲನೆ ನೀಡಿದರು. ನಂತರ ಮಾತನಾಡಿ, ‘ರೈತರ ಶಕ್ತಿ ಏನೆಂಬುದನ್ನು ನಾವು ಮೋದಿಯವರಿಗೆ ತೋರಿಸಿದ್ದೇವೆ. ಮೋದಿ ಇದ್ದರೆ ಎಲ್ಲವೂ ಸಾಧ್ಯ ಎಂದು ಬಿಜೆಪಿ ಹೇಳುತ್ತಿತ್ತು. ಆದರೆ, ರೈತರು ಹಟಬಿಡದೆ ಹೋರಾಟ ಮಾಡಿದ್ದರಿಂದ ಕೇಂದ್ರ ಸರ್ಕಾರವು, ಮೂರು ರೈತ ವಿರೋಧಿ ಕಾಯ್ದೆಗಳನ್ನು ವಾಪಸ್ ಪಡೆಯಿತು. ಪ್ರಧಾನಿಯ ಅಹಂಕಾರವನ್ನು ನಾವು ಮುರಿದಿದ್ದೇವೆ’ ಎಂದು ಹೇಳಿದರು.

‘ನಮ್ಮ ತೆರಿಗೆ ನಮ್ಮ ಹಕ್ಕು’ ನಾಗರಿಕರ ಜಾಥಾ: ಎಸ್‌.ಜಿ. ಸಿದ್ಧರಾಮಯ್ಯ

ಕೇಂದ್ರದಿಂದ ರಾಜ್ಯಕ್ಕೆ ದ್ರೋಹ: ಆರೋಪ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುವ ರೀತಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ನಡೆದುಕೊಳ್ಳುತ್ತಿದೆ. ರಾಜ್ಯದಿಂದ ಕೇಂದ್ರಕ್ಕೆ ಅತಿ ಹೆಚ್ಚಿನ ತೆರಿಗೆ ಕಟ್ಟಲಾಗುತ್ತಿದ್ದರೂ, ರಾಜ್ಯಕ್ಕೆ ಸಿಗಬೇಕಾದ ಪಾಲು ನೀಡದೇ ದ್ರೋಹ ಮಾಡುತ್ತಿದೆ’ ಎಂದು ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಆರೋಪಿಸಿದರು.

ರಾಜರಾಜೇಶ್ವರಿ ನಗರದ ಮಾಳಗಾಳದಲ್ಲಿ ಕನ್ನಡ ಜಾಣಜಾಣೆಯರ ವೇದಿಕೆ ಬುಧವಾರ ಆಯೋಜಿಸಿದ್ದ ‘ನಮ್ಮ ತೆರಿಗೆ ನಮ್ಮ ಹಕ್ಕು’ ಜಾಗೃತಿ ಜಾಥಾದಲ್ಲಿ ಅವರು ಮಾತನಾಡಿದರು.

‘ಕರ್ನಾಟಕ, ಕೇರಳ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳ ತೆರಿಗೆ ಪಾಲನ್ನು ಉತ್ತರ ಭಾರತದ ರಾಜ್ಯಗಳ ಅಭಿವೃದ್ಧಿಗೆ ಹಂಚಿಕೆ ಮಾಡಲಾಗುತ್ತಿದೆ. ರಾಜ್ಯದಿಂದ ಆಯ್ಕೆಯಾಗಿರುವ ಸಂಸದರಿಗೆ ಇದನ್ನು ಪ್ರಶ್ನಿಸುವ ಧೈರ್ಯವಿಲ್ಲದೇ ಮೌನಕ್ಕೆ ಶರಣಾಗಿದ್ದಾರೆ. ಕನ್ನಡ ಅಸ್ಮಿತೆ, ಅಸ್ತಿತ್ವ ಉಳಿಯಬೇಕಾದರೆ, ಕನ್ನಡಿಗರ ಪರ ಧ್ವನಿ ಎತ್ತುವ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ನೀಡಬೇಕು’ ಎಂದು ಕರೆ ನೀಡಿದರು.

‘ನಮ್ಮ ಹಕ್ಕು ನಮ್ಮ ತೆರಿಗೆ’ ನಾಗರಿಕರ ಜಾಥಾಕ್ಕೆ ಎಸ್‌.ಜಿ.ಸಿದ್ಧರಾಮಯ್ಯ ಅವರು ಡೊಳ್ಳುಬಾರಿಸುವ ಮೂಲಕ ಚಾಲನೆ ನೀಡಿದರು. ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್, ಕಾಂಗ್ರೆಸ್ ನಾಯಕಿ ಎಚ್. ಕುಸುಮಾ, ನಾರಾಯಣಘಟ್ಟ, ಪತ್ರಕರ್ತ ಜಾಣಗೆರೆ ವೆಂಕಟರಾಮಯ್ಯ, ಇತಿಹಾಸಕಾರ ತಲಕಾಡು ಚಿಕ್ಕರಂಗೇಗೌಡ, ಕಾಂಗ್ರೆಸ್ ಮುಖಂಡ ಹನುಮಂತರಾಯಪ್ಪ ಭಾಗವಹಿಸಿದ್ದರು

ಕಾಂಗ್ರೆಸ್ ನಾಯಕಿ ಎಚ್. ಕುಸುಮಾ, ‘ದಕ್ಷಿಣ ಭಾರತದವರಿಗೆ ಆಗುತ್ತಿರುವ ಅನ್ಯಾಯವನ್ನು ಪ್ರಶ್ನಿಸಿದ್ದ ಸಂಸದ ಡಿ.ಕೆ. ಸುರೇಶ್ ಅವರಿಗೆ ಬಿಜೆಪಿಯವರು ದೇಶ ದ್ರೋಹದ ಪಟ್ಟ ಕಟ್ಟಿದರು. ಬಿಜೆಪಿಗರಿಗೆ ಸಿದ್ಧಾಂತ, ದೇಶ ಪ್ರೇಮವಿಲ್ಲ. ಅಧಿಕಾರಕ್ಕಾಗಿ ಅವರು ಧರ್ಮದ ಹೆಸರಿನಲ್ಲಿ ಜನರನ್ನು ವಿಭಜಿಸುವ ಕೆಲಸ ಮಾಡುತ್ತಿದ್ದಾರೆ’ ಎಂದು ದೂರಿದರು.

ಕವಿ ಎಲ್.ಎನ್. ಮುಕುಂದರಾಜ್, ‘ಪ್ರಧಾನಿ ನರೇಂದ್ರ ಮೋದಿ ಅವರ 10 ವರ್ಷಗಳ ಅಧಿಕಾರದ ಅವಧಿಯಲ್ಲಿ ಏನೂ ಅಭಿವೃದ್ಧಿ ಕೆಲಸಗಳನ್ನು ಮಾಡಿಲ್ಲ. ರಾಮಮಂದಿರ, ಧರ್ಮ–ಜಾತಿ ಹೆಸರಿನಲ್ಲಿ ಮತಯಾಚನೆ ಮಾಡುತ್ತಿದ್ದಾರೆ’ ಎಂದು ಆರೋಪಿಸಿದರು.

ಮಾಳಗಾಳದಿಂದ ಆರಂಭವಾದ ಜಾಥಾ ಕಂಠೀರವ ಸ್ಟುಡಿಯೊಗೆ ತಲುಪಿ ಅಲ್ಲಿ ನಟ ಡಾ.ರಾಜ್‌ಕುಮಾರ್ ಅವರ ಸಮಾಧಿಗೆ ಪುಷ್ಪನಮನ ಸಲ್ಲಿಸಲಾಯಿತು. ಜಾಥಾದಲ್ಲಿ ಸಾಹಿತಿಗಳು ಮತ್ತು ನೂರಾರು ಕನ್ನಡಪರ ಹೋರಾಟಗಾರರು ಪಾಲ್ಗೊಂಡಿದ್ದರು.

‘ಗ್ಯಾರಂಟಿ ಪದ ಕದ್ದಿದ್ದು ಮೋದಿ’

ಪ್ರಜಾವಾಣಿ ವಾರ್ತೆ

ಕೋಲಾರ: ‘ಸುಳ್ಳು ಹೇಳುವುದೇ ಪ್ರಧಾನಿ ನರೇಂದ್ರ ಮೋದಿ ಕಸುಬು. ಆತ ಸುಳ್ಳಿನ ಸರದಾರ. ಈಗ ಗ್ಯಾರಂಟಿ ಬೆನ್ನು ಹತ್ತಿದ್ದಾರೆ. ಗ್ಯಾರಂಟಿ ಎಂಬ ಪದವನ್ನು ನಮ್ಮಿಂದ ಕದ್ದಿದ್ದಾರೆ. ಆ ಪದವನ್ನೇ ಕಳ್ಳತನ ಮಾಡಿದ್ದಾರೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ನಡೆಸಿದರು.

ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಮಾಲೂರು ಹಾಗೂ ಹೊಸಕೋಟೆ ನಡುವಿನ ಚೊಕ್ಕಂಡಹಳ್ಳಿ ಗೇಟ್ ಬಳಿ ಬುಧವಾರ ಕಾಂಗ್ರೆಸ್ ಆಯೋಜಿಸಿದ್ದ ಬೃಹತ್ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಇದು ಮಹತ್ವದ ಚುನಾವಣೆ. ಚುನಾವಣೆ ಬರುತ್ತವೆ, ಹೋಗುತ್ತವೆ ಎಂದು ಭಾವಿಸಬೇಡಿ. ಬಿಜೆಪಿ ಸೋಲಿಸಿದರೆ ಮಾತ್ರ ಈ ಬಾರಿಯ ಚುನಾವಣೆ ಮಹತ್ವ ಗೊತ್ತಾಗಲಿದೆ. ಮೋದಿ ಎಲ್ಲಾ ಕಡೆ ನಮ್ಮ ವಿರುದ್ಧ ಮಾತನಾಡುತ್ತಾರೆ. ಮೈಸೂರಿನಲ್ಲಿ ತಮ್ಮ 30 ನಿಮಿಷ ಭಾಷಣದಲ್ಲಿ 10 ನಿಮಿಷ ಬಿಜೆಪಿ ಕಾರ್ಯಕ್ರಮದ ಬಗ್ಗೆ ಮಾತನಾಡಿ 20 ನಿಮಿಷ ನಮ್ಮನ್ನು ಬೈಯ್ದಿದ್ದಾರೆ. ಇದೇನಾ ದೇಶಕ್ಕೆ ಬಿಜೆಪಿ ಕೊಡುಗೆ’ ಎಂದು ಪ್ರಶ್ನಿಸಿದರು.

‘ಈ ರಾಜ್ಯಕ್ಕೆ ಮೋದಿ ಕೊಡುಗೆ ಏನು ಎಂಬುದನ್ನು ಜನರೇ ಹೇಳಬೇಕು. ಭೀಕರ ಬರಗಾಲ ಬಂದಿದ್ದು ಎಷ್ಟು ಬರ ಪರಿಹಾರ ಅನುದಾನ ಕೊಟ್ಟಿದ್ದೀರಾ ಎಂದು ಜನರು ಕೇಳಬೇಕು. ತೆರಿಗೆಯಲ್ಲಿ ನಮ್ಮ ಪಾಲಿನ ಹಣ ಎಷ್ಟು ಕೊಟ್ಟಿದ್ದೀರಿ ಎಂದುಕೇಳಬೇಕು. ಸಿದ್ದರಾಮಯ್ಯ ಹಾಗೂ ಕೃಷ್ಣಬೈರೇಗೌಡರ ಒಂದೂ ಪ್ರಶ್ನೆಗೆ ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್ ಈವರೆಗೆ ಉತ್ತರಿಸಿಲ್ಲ’ ಎಂದು ಹರಿಹಾಯ್ದರು.

‘ಸರ್ಕಾರ ಬೀಳಲ್ಲ, ಗ್ಯಾರಂಟಿ ನಿಲ್ಲಲ್ಲ’

ಪ್ರಜಾವಾಣಿ ವಾರ್ತೆ

ಕೋಲಾರ: ‘ಲೋಕಸಭೆ ಚುನಾವಣೆ ನಂತರ ರಾಜ್ಯ ಕಾಂಗ್ರೆಸ್ ಸರ್ಕಾರ ಬೀಳುತ್ತದೆ ಎಂಬುದು ಎಚ್.ಡಿ.ದೇವೇಗೌಡರ ಭ್ರಮೆ. ಸರ್ಕಾರ ನಿರಾತಂಕವಾಗಿ ಐದು ವರ್ಷ ಪೂರೈಸಲಿದ್ದು, ಗ್ಯಾರಂಟಿಗಳು ಮುಂದುವರಿಯಲಿವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಚೊಕ್ಕಂಡಹಳ್ಳಿ ಗೇಟ್ ಬಳಿ ಬುಧವಾರ ನಡೆದ ಪ್ರಜಾಧ್ವನಿ–2 ಸಮಾವೇಶದಲ್ಲಿ ಅವರು ಮಾತನಾಡಿದರು. ‘ಬಿಜೆಪಿ ಸೋಲಿನ ಭಯದಿಂದ ಜೆಡಿಎಸ್ ಜತೆಗೆ ಮೈತ್ರಿ ಮಾಡಿಕೊಂಡಿದೆ. ಆದರೂ ಕಾಂಗ್ರೆಸ್ ಲೋಕಸಭಾ ಚುನಾವಣೆಯಲ್ಲಿ 20 ಸ್ಥಾನ ಗೆಲ್ಲಲಿದೆ’ ಎಂದರು.

‘ಜೆಡಿಎಸ್-ಬಿಜೆಪಿ ಅಪವಿತ್ರ ಮೈತ್ರಿ ಆಗಿದ್ದು, ಬಿಜೆಪಿಯದ್ದು ಕೋಮುವಾದಿ ದ್ವೇಷದ ರಾಜಕಾರಣ ಎಂದು ಆರೋಪ ಮಾಡುತ್ತಿದ್ದ ಅಪ್ಪ, ಮಕ್ಕಳು (ದೇವೇಗೌಡ-ಕುಮಾರಸ್ವಾಮಿ) ಇದೀಗ ಮೋದಿ ಅವರನ್ನು ಹೊಗಳಲು ಆರಂಭಿಸಿದ್ದಾರೆ. ಮೋದಿ ಪ್ರಧಾನಿ ಆದರೆ ದೇಶ ಬಿಡ್ತೀನಿ, ಮುಂದಿನ ಜನ್ಮದಲ್ಲಿ ನಾನು ಮುಸ್ಲಿಂ ಆಗಿ ಜನಿಸುತ್ತೇನೆ ಎಂದು ಘೋಷಿಸಿದ್ದ ದೇವೇಗೌಡರು ದೇಶ ಬಿಟ್ಟರಾ’ ಎಂದು ಪ್ರಶ್ನಿಸಿದರು.

‘ಬಿಜೆಪಿ ಜತೆಗೆ ಜೆಡಿಎಸ್ ಸೇರಿರುವುದರಿಂದಾಗಿ ಜಾತ್ಯತೀತ ಅಲ್ಲ. ಜಾತ್ಯತೀತ ಪದಕ್ಕೆ ಅವಮಾನ ಮಾಡಬೇಡಿ. ಹೀಗಾಗಿ, ಜಾತ್ಯತೀತ ಪದ ತೆಗೆದು ಜನತಾದಳ ಎಂದು ಮಾತ್ರ ಇಟ್ಟುಕೊಳ್ಳಿ’ ಎಂದು ಸಲಹೆ ನೀಡಿದರು.

‘ವಿಜಯೇಂದ್ರ ಹಣೆಯಲ್ಲಿ ಬರೆದಿಲ್ಲ’

‘ಕೋಲಾರ ಕಾಂಗ್ರೆಸ್‌ನ ಭದ್ರಕೋಟೆ. ಒಂದು ಬಾರಿ ಜನತಾ ಪರಿವಾರ, ಮತ್ತೊಮ್ಮೆ ಬಿಜೆಪಿ ಬಿಟ್ಟರೆ ನಮ್ಮದೇ ಆಡಳಿತ. ಗ್ಯಾರಂಟಿಗಳನ್ನು ತೆಗೆಯಲು ಬಿಜೆಪಿ ರಾಜ್ಯ ಅಧ್ಯಕ್ಷ ವಿಜಯೇಂದ್ರ ಹಣೆಯಲ್ಲಿ ಬರೆದಿಲ್ಲ. ಹೀಗಾಗಿ, 5 ಅಲ್ಲ 10 ವರ್ಷ ಗ್ಯಾರಂಟಿ ಮುಂದುವರಿಯಲಿದೆ. ಹೆಣ್ಣು ಮಕ್ಕಳ ಕುರಿತು ಲಘುವಾಗಿ ಮಾತನಾಡಿರುವ ಎಚ್.ಡಿ.ಕುಮಾರಸ್ವಾಮಿಗೆ ಮಹಿಳೆಯರು ಚುನಾವಣೆಯಲ್ಲಿ ತಕ್ಕ ಉತ್ತರ ಕೊಡುತ್ತಾರೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

‘ಕೈ’ ಹಿಡಿದವರನ್ನು ಜನ ‘ಗ್ಯಾರಂಟಿ’ ಮರೆಯಲ್ಲ

ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ಅವರಿಗೆ ಇದು ಮೊದಲ ಲೋಕಸಭಾ ಚುನಾವಣೆ. ರಾಜ್ಯ ಸರ್ಕಾರದ ಬಲ ಹಾಗೂ ‘ಗ್ಯಾರಂಟಿ’ ನೆಚ್ಚಿಕೊಂಡಿರುವ ಅವರು, ಅಭಿವೃದ್ಧಿಯ ಕುರಿತ ದೂರದೃಷ್ಟಿ ಹಾಗೂ ಸವಾಲುಗಳ ಬಗ್ಗೆ ‘ಪ್ರಜಾವಾಣಿ’ ಜತೆ ಮಾತನಾಡಿದ್ದಾರೆ.

• **ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಕಾಂಗ್ರೆಸ್‌ಗೆ ಮತಗಳನ್ನು ತಂದು ಕೊಡುತ್ತವೆ ಎನ್ನುವ ವಿಶ್ವಾಸ ಇದೆಯಾ?**

ಜನರಿಗಾಗಿ ಕಾಂಗ್ರೆಸ್ ಸರ್ಕಾರ ಕೆಲಸ ಮಾಡುತ್ತಿದೆ. ‘ಕೈ’ ಹಿಡಿದವರನ್ನು ಜನರು ಎಂದಿಗೂ ಮರೆಯುವುದಿಲ್ಲ. ಬಲ ನೀಡುತ್ತಾರೆ. ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರವು ಯುಪಿಎ ಸರ್ಕಾರದಲ್ಲಿ ಜಾರಿಯಾದ ಯೋಜನೆ, ಕಾರ್ಯಕ್ರಮಗಳ ಹೆಸರು ಬದಲಿಸಿದೆಯಷ್ಟೇ. ಹೊಸದಾದ ಯೋಜನೆಗಳೇ ಇಲ್ಲ.

ಜಿಎಸ್‌ಟಿ, ನೋಟು ರದ್ದು, ಕೋವಿಡ್‌ನಿಂದ ಜನರು ತತ್ತರಿಸಿದ್ದರು. ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್, ‘ಗ್ಯಾರಂಟಿ’ ಯೋಜನೆ ಜಾರಿಗೊಳಿಸಿತು. ಇದರಿಂದ ಕಷ್ಟದಲ್ಲಿದ್ದ ಜನರ ಬದುಕು ಸುಧಾರಣೆ ಕಾಣುತ್ತಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಜನರ ಬದುಕು ಮತ್ತಷ್ಟು ಉತ್ತಮಗೊಳ್ಳಲಿದೆ. ಗ್ಯಾರಂಟಿ ಯೋಜನೆ ಖಚಿತವಾಗಿ ಕಾಂಗ್ರೆಸ್‌ಗೆ ಬಲ ನೀಡಲಿವೆ.

• **ಎತ್ತಿಹೊಳೆ ಯೋಜನೆ ನೀರು ಇಂದಿಗೂ ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರಕ್ಕೆ ಹರಿದಿಲ್ಲ. ಈ ವಿಚಾರವಾಗಿ ನಿಮ್ಮ ಭರವಸೆ ಏನು?**

ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರಕ್ಕೆ ಎತ್ತಿನಹೊಳೆ ನೀರಾವರಿ ಯೋಜನೆ ಅನುಕೂಲವಾಗಿದೆ. ಮುಂದಿನ ಎರಡು ವರ್ಷಗಳಲ್ಲಿ ಬಯಲುಸೀಮೆಗೆ ಎತ್ತಿನಹೊಳೆ ನೀರು ಹರಿಯಲಿದೆ. ಎಚ್.ಎನ್.ವ್ಯಾಲಿ ಮತ್ತು ಕೆ.ಸಿ.ವ್ಯಾಲಿ ನೀರನ್ನು ಮೂರು ಹಂತಗಳಲ್ಲಿ ಶುದ್ಧೀಕರಣಕ್ಕೂ ರಾಜ್ಯ ಸರ್ಕಾರ ಕ್ರಮವಹಿಸುತ್ತದೆ.

• **ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವಿಗೆ ಪೂರಕ ಅಂಶಗಳು ಏನು?**

ಈ ಕ್ಷೇತ್ರವು ಹಿಂದಿನಿಂದಲೂ ಕಾಂಗ್ರೆಸ್ ಭದ್ರಕೋಟೆ. ಅತಿ ಹೆಚ್ಚು ಬಾರಿ ಪಕ್ಷದ ಅಭ್ಯರ್ಥಿಗಳು ಇಲ್ಲಿ ಗೆಲುವು ಸಾಧಿಸಿದ್ದಾರೆ. ಈಗ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದ ಶಾಸಕರು ಆಯ್ಕೆಯಾಗಿದ್ದಾರೆ. ಜವಳಿ ಪಾರ್ಕ್, ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸೇರಿದಂತೆ ಬಹಳಷ್ಟು ಅಭಿವೃದ್ಧಿ ಕಾರ್ಯಗಳು ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ಈ ಕ್ಷೇತ್ರದಲ್ಲಿ ಆಗಿವೆ. ನೆರೆಯ ಜಿಲ್ಲೆಗಳು ಮತ್ತು ಲೋಕಸಭಾ ಕ್ಷೇತ್ರಗಳಿಗೆ ಹೋಲಿಸಿದರೆ ಚಿಕ್ಕಬಳ್ಳಾಪುರದಲ್ಲಿ ಬಹಳಷ್ಟು ಅಭಿವೃದ್ಧಿ ಕೆಲಸ ಆಗಿವೆ. ಇದಕ್ಕೆ ಮೂಲ ಕಾರಣ ಕಾಂಗ್ರೆಸ್. ಈ ಎಲ್ಲ ದೃಷ್ಟಿಯಿಂದ ಹೇಳುವುದಾದರೆ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಗೆಲುವಿನ ವಾತಾವರಣವಿದೆ.

• **ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಒಳೇಟಿನ ಭೀತಿ ಇದೆಯಾ?**

ಖಂಡಿತವಾಗಿಯೂ ಇಲ್ಲ. ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಯಿಂದ ಬೇಸರಗೊಂಡು ಎರಡೂ ಪಕ್ಷಗಳ ಕಾರ್ಯಕರ್ತರು, ನಾಯಕರು ಕಾಂಗ್ರೆಸ್ ಸೇರಿದ್ದಾರೆ. ನಮ್ಮಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದಾರೆ.

• **ಚಿಕ್ಕಬಳ್ಳಾಪುರದಿಂದ ವಿಧಾನಸಭೆ ಚುನಾವಣೆ ಸ್ಪರ್ಧಿಸುವಂತೆ ಆಗ್ರಹವಿತ್ತು. ನೀವು ಲೋಕಸಭೆ ಆಯ್ಕೆ ಮಾಡಿಕೊಂಡಿದ್ದು ಏಕೆ?**

ರಾಜ್ಯದಿಂದ ಬಿಜೆಪಿಯ 25 ಸಂಸದರು ಇದ್ದರೂ ಕರ್ನಾಟಕಕ್ಕೆ ಕೇಂದ್ರದಿಂದ ಅನ್ಯಾಯ ಆಗುತ್ತಿದೆ. ರಾಜ್ಯದ ಪಾಲಿನ ತೆರಿಗೆ ಹಣ ಕೇಳುತ್ತಿಲ್ಲ. ಸರ್ಕಾರಿ ಸಂಸ್ಥೆಗಳ ಬಾಗಿಲು ಮುಚ್ಚುತ್ತಿದ್ದಾರೆ. ಬರ ಪರಿಹಾರ, ನೆರೆ ಹಾವಳಿ ಸೇರಿದಂತೆ ಯಾವುದೇ ವಿಚಾರವಾಗಿ ರಾಜ್ಯದ ಪರ ಸಂಸದರು ಧ್ವನಿ ಎತ್ತಲಿಲ್ಲ. ಸಂಸದನಾದರೆ ರಾಜ್ಯದ ಪರವಾಗಿ ಕೇಂದ್ರ ಮಟ್ಟದಲ್ಲಿ ಧ್ವನಿ ಎತ್ತಬಹುದು. ರಾಜ್ಯದ ಹಿತಾಸಕ್ತಿ ಕಾಪಾಡಬಹುದು. ಈ ಉದ್ದೇಶದಿಂದ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿದೆ.

• **ಕ್ಷೇತ್ರದ ಅಭಿವೃದ್ಧಿಗೆ ನಿಮ್ಮ ಮುನ್ನೋಟಗಳೇನು?**

ಬಡವರಿಗೆ ಎಲ್ಲ ಸೌಕರ್ಯ ಮುಟ್ಟಬೇಕು ಎಂದರೆ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು. ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರವನ್ನು ಐ.ಟಿ– ಬಿ.ಟಿ ವಲಯ ಮಾಡಬೇಕು. ಅತಿ ಹೆಚ್ಚು ಹೂ ಬೆಳೆಗಾರರು ಈ ಭಾಗದಲ್ಲಿ ಇದ್ದಾರೆ. ಆದ್ದರಿಂದ ಚಿಕ್ಕಬಳ್ಳಾಪುರವನ್ನು ಹೂವಿನ ರಾಜಧಾನಿ ಮಾಡಬೇಕು ಎಂದುಕೊಂಡಿದ್ದೇನೆ. ನಿರುದ್ಯೋಗ ಹೆಚ್ಚಿದೆ. ಗ್ರಾಮೀಣ ಭಾಗಗಳಲ್ಲಿ ಸಾಕ್ಷರತೆ ಪ್ರಮಾಣ ಕಡಿಮೆ ಇದೆ. ಹೀಗೆ ಜನರ ಬದುಕು ಸುಧಾರಣೆ, ಮೂಲಸೌಕರ್ಯ ಸೇರಿದಂತೆ ಹಲವು ವಿಚಾರ ಮುಂದಿಟ್ಟು ಮತ ಕೇಳುತ್ತಿದ್ದೇವೆ.

ಪ್ರಜಾವಾಣಿ ಸಂದರ್ಶನ

ರಕ್ಷಾ ರಾಮಯ್ಯ
ಡಾ.ಕೆ. ಸುಧಾಕರ್

• ಸಂದರ್ಶನ: ಡಿ.ಎಂ. ಕುರ್ಕೆ ಪ್ರಶಾಂತ್

‘ಮೈತ್ರಿ’ಯಿಂದ ಬಲ ಹೆಚ್ಚಳ: ಗಿಮಿಕ್ ರಾಜಕಾರಣ ಮಾಡಿಲ್ಲ

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರವನ್ನು ತನ್ನಲ್ಲಿಯೇ ಉಳಿಸಿಕೊಳ್ಳಲು ಬಿಜೆಪಿಯು ಮಾಜಿ ಸಚಿವ ಡಾ.ಕೆ.ಸುಧಾಕರ್ ಅವರನ್ನು ಕಣಕ್ಕಿಳಿಸಿದೆ. ಕ್ಷೇತ್ರದ ಪ್ರಗತಿ ಕುರಿತ ತಮ್ಮ ಆಲೋಚನೆಗಳನ್ನು ಅವರು ‘ಪ್ರಜಾವಾಣಿ’ ಜತೆ ಹಂಚಿಕೊಂಡಿದ್ದಾರೆ.

• **ಕೋವಿಡ್ ಸಮಯದಲ್ಲಿ ಭ್ರಷ್ಟಾಚಾರ ನಡೆಸಿದ್ದಾರೆ ಎಂಬ ಅಸ್ತ್ರವನ್ನು ನಿಮ್ಮ ವಿರೋಧಿಗಳು ಬಳಸುತ್ತಿದ್ದಾರಲ್ಲ?**

‘ಕೋವಿಡ್ ಸಮಯದಲ್ಲಿ ನಾನು ತಪ್ಪು ಮಾಡಿದ್ದೇನೆ ಎನ್ನುವುದು ಕೇವಲ ರಾಜಕೀಯ ಅಪಪ್ರಚಾರ. ಬಿಜೆಪಿ ಸರ್ಕಾರದ ಅವಧಿಯಲ್ಲಿ ನಾನು ಜಾರಿಗೊಳಿಸಿದ ಯೋಜನೆಗಳನ್ನೇ ಕಾಂಗ್ರೆಸ್ ಸರ್ಕಾರ ಮುಂದುವರಿಸಿದೆ. ಒಂದು ವರ್ಷದಿಂದ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವೇ ಇದೆ. ಕೋವಿಡ್ ಸಮಯದಲ್ಲಿ ತಪ್ಪಾಗಿದ್ದರೆ ಕ್ರಮ ಕೈಗೊಳ್ಳಬೇಕಿತ್ತು. ಯಾರಿಗಾದರೂ ಅನುಮಾನವಿದ್ದರೆ ತನಿಖಾ ಸಂಸ್ಥೆಗಳಿಗೆ ಮಾಹಿತಿ ನೀಡಲಿ. ತಪ್ಪಿದ್ದರೆ ಶಿಕ್ಷೆ ಎದುರಿಸುತ್ತೇನೆ.

• **ಜೆಡಿಎಸ್ ಮೈತ್ರಿಯಿಂದ ನಿಮಗೆ ಅನುಕೂಲ ಆಗಲಿದೆಯೇ?**

ಖಂಡಿತ. ಮೈತ್ರಿಯಿಂದ ನಮ್ಮ ಬಲ ಹೆಚ್ಚಿದೆ. ಚಿಕ್ಕಬಳ್ಳಾಪುರದಲ್ಲಿ ಮಾಜಿ ಶಾಸಕ ಬಚ್ಚೇಗೌಡ ಮಾತ್ರ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದರು. ಉಳಿದಂತೆ ಲೋಕಸಭಾ ಕ್ಷೇತ್ರದ ಎಲ್ಲೆಡೆಯೂ ಮೈತ್ರಿಯ ಬೆಸುಗೆ ಗಾಢವಾಗಿದೆ. ಈ ಬಾರಿ ಮೈತ್ರಿಯೂ ನಮಗೆ ಪ್ಲಸ್ ಪಾಯಿಂಟ್.

• **ನಿಮಗೆ ಟಿಕೆಟ್ ನೀಡಿದ್ದಕ್ಕೆ ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಅಸಮಾಧಾನ ವ್ಯಕ್ತಪಡಿಸಿದ್ದರು. ಬಿಜೆಪಿಗೆ ಒಳ ಏಟಿನ ಭೀತಿ ಇದೆಯೇ?**

ವಿಶ್ವನಾಥ್ ಪಕ್ಷದ ಹಿರಿಯ ನಾಯಕರು. ಹಿಂದಿನ ಚುನಾವಣೆಯಲ್ಲಿ ಈ ಲೋಕಸಭಾ ಕ್ಷೇತ್ರದ ಉಸ್ತುವಾರಿಯಾಗಿ ಕೆಲಸ ಮಾಡಿದ್ದಾರೆ. ಆರಂಭದಲ್ಲಿ ಸಣ್ಣಪುಟ್ಟ ವ್ಯತ್ಯಾಸ ಇದ್ದವು. ಆದರೆ ಅವೆಲ್ಲವೂ ಪರಿಹಾರವಾಗಿವೆ.

• **ಹಿಂದುಳಿದ ವರ್ಗಗಳ ಅಭ್ಯರ್ಥಿಗಳೇ ಕ್ಷೇತ್ರದಲ್ಲಿ ಹೆಚ್ಚು ಬಾರಿ ಗೆಲುವು ಸಾಧಿಸಿದ್ದಾರೆ. ನಿಮಗೆ ಯಾವ ರೀತಿ ವಿಶ್ವಾಸವಿದೆ?**

ಚಿಕ್ಕಬಳ್ಳಾಪುರ ಶಾಸಕ ಮತ್ತು ಸಚಿವನಾಗಿದ್ದಾಗ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಅದಕ್ಕೆ ನಿದರ್ಶನ ಕಣ್ಣ ಮುಂದೆಯೇ ಇವೆ. ಒಕ್ಕಲಿಗ ಸಮಾಜದಲ್ಲಿ ಹುಟ್ಟಿರಬಹುದು, ಆದರೆ ನನ್ನ ರಾಜಕಾರಣದ ಅವಧಿಯಲ್ಲಿ ಎಂದಿಗೂ ಜಾತಿ ನೋಡಿ ಮಣೆ ಹಾಕಿಲ್ಲ. ಗಿಮಿಕ್ ರಾಜಕಾರಣ ಮಾಡಿಲ್ಲ. ಸಾಮಾಜಿಕ ನ್ಯಾಯ ಪಾಲಿಸಿದ್ದೇನೆ. ಆ ಕಾರಣದಿಂದಲೇ ನನಗೆ ಎಲ್ಲ ವರ್ಗದ ಮತದಾರರು ಮನ್ನಣೆ ನೀಡುತ್ತಿದ್ದಾರೆ.

• **ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಬಿಜೆಪಿ ಮತ ಬುಟ್ಟಿಗೆ ಕೈ ಹಾಕಲಿವೆಯಾ? ಗ್ಯಾರಂಟಿ ಆತಂಕ ಇದೆಯಾ?**

ಖಂಡಿತವಾಗಿಯೂ ಇಲ್ಲ. ಕೇಂದ್ರ ಸರ್ಕಾರ ರೈತರಿಗೆ ಕಿಸಾನ್ ಸಮ್ಮಾನ್ ಯೋಜನೆಯಡಿ ₹6 ಸಾವಿರ ನೀಡುತ್ತಿದೆ. ಇದಕ್ಕೆ ರಾಜ್ಯದಲ್ಲಿನ ಬಿಜೆಪಿ ಸರ್ಕಾರ ₹4 ಸಾವಿರ ನೀಡುತ್ತಿತ್ತು. ಅದನ್ನು ಕಾಂಗ್ರೆಸ್ ನಿಲ್ಲಿಸಿದೆ. ರೈತರು ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ಪಡೆಯಬೇಕಾದರೆ ಲಕ್ಷಾಂತರ ಹಣ ತೆರಬೇಕಾಗಿದೆ. ಟ್ರಾನ್ಸ್‌ಫಾರ್ಮರ್ ಸುಲಭವಾಗಿ ದೊರೆಯುತ್ತಿಲ್ಲ. ರೈತರ ಮಕ್ಕಳಿಗೆ ನೀಡುತ್ತಿದ್ದ ವಿದ್ಯಾರ್ಥಿ ವೇತನಕ್ಕೆ ತಡೆ ಬಿದ್ದಿದೆ. ಒಂದು ಕಡೆ ಕಿತ್ತುಕೊಂಡು ಮತ್ತೊಂದು ಕಡೆ ಗ್ಯಾರಂಟಿ ಹೆಸರಿನಲ್ಲಿ ನೀಡುತ್ತಿದ್ದಾರೆ. ಇದು ಜನರಿಗೆ ಅರ್ಥವಾಗಿದೆ.

• **ಕ್ಷೇತ್ರದ ಅಭಿವೃದ್ಧಿಗೆ ನಿಮ್ಮ ನೀಲನಕ್ಷೆ ಏನಿದೆ?**

ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವನಾಗಿ ಕೆಲಸ ಮಾಡಿದ್ದರಿಂದ ಎರಡೂ ಜಿಲ್ಲೆಗಳ ಸಮಸ್ಯೆಗಳ ಅರಿವು ಚೆನ್ನಾಗಿಯೇ ಇದೆ. ಅಧಿಕಾರದ ಅವಧಿಯಲ್ಲಿ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಸಹ ಮಾಡಿದ್ದೇನೆ. ವೀರಪ್ಪ ಮೊಯಿಲಿ ಅವರು ಎತ್ತಿನಹೊಳೆ ಹೆಸರು ಹೇಳುತ್ತಲೇ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ರಾಜಕಾರಣ ಮಾಡಿದರು. ಆದರೆ, ನೀರು ಬರಲೇ ಇಲ್ಲ. ಬಯಲು ಸೀಮೆಗೆ ಶಾಶ್ವತ ನೀರಾವರಿ ಯೋಜನೆ ಜಾರಿಗೊಳಿಸುವುದು ನಮ್ಮ ಆದ್ಯತೆ. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದ ವೇಳೆ ಕೆ.ಸಿ.ವ್ಯಾಲಿ ಮತ್ತು ಎಚ್.ಎನ್.ವ್ಯಾಲಿ ನೀರನ್ನು ಮೂರು ಹಂತಗಳಲ್ಲಿ ಶುದ್ಧೀಕರಿಸುವುದಾಗಿ ಬಜೆಟ್‌ನಲ್ಲಿ ಪ್ರಕಟಿಸಿದರು. ಆದರೆ ನಂತರ ಕಾಂಗ್ರೆಸ್ ಸರ್ಕಾರ ಈ ಬಗ್ಗೆ ಕ್ರಮವಹಿಸಲಿಲ್ಲ. ನೀರಾವರಿಯೇ ನನ್ನ ಆದ್ಯತೆ.

ನಿವೃತ್ತ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಸುಭಾಷ್ ಭರಣಿ

‘ಸಂವಿಧಾನದ ಚರ್ಚೆ ದುರಂತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಮಾಯಣವನ್ನು ವಾಲ್ಮೀಕಿ, ಮಹಾಭಾರತವನ್ನು ವ್ಯಾಸರು ಬರೆದಿದ್ದು ಎಷ್ಟರ ಮಟ್ಟಿಗೆ ಸತ್ಯವೊ, ಅಂಬೇಡ್ಕರ್ ಅವರು ಸಂವಿಧಾನವನ್ನು ರಚಿಸಿರುವುದೂ ಅಷ್ಟರ ಮಟ್ಟಿಗೆ ನಿಜ. ಈ ಕುರಿತು ಚರ್ಚೆ ನಡೆಯುತ್ತಿರುವುದು ನಿಜಕ್ಕೂ ದುರಂತ’ ಎಂದು ನಿವೃತ್ತ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಸುಭಾಷ್ ಭರಣಿ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಹಮ್ಮಿಕೊಂಡ ಬಿ.ಆರ್.ಅಂಬೇಡ್ಕರ್ ಅವರ 133ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

‘ಬುದ್ಧ-ಬಸವ-ಅಂಬೇಡ್ಕರ್ ಅವರು ಈ ದೇಶದ ಯುಗಪುರುಷರು. ಅವರು ಸಾಂಸ್ಕೃತಿಕ ಚಹರೆಯನ್ನು ಬದಲಾಯಿಸಿದರು. ಕಡು ಬಡತನದಲ್ಲಿ ಅರಳಿದ ಅಂಬೇಡ್ಕರ್, ಬಹು ಎತ್ತರಕ್ಕೆ ಏರಿದರು. ಅವರು ತಾವು ಬಂದ ಹಾದಿಯನ್ನು ಮರೆಯದೆ, ಎಲ್ಲ ರಂಗದಲ್ಲಿಯೂ ಸಮಾನತೆಗೆ ಪ್ರಯತ್ನಿಸಿದರು. ಅವರಿಗೆ ಸಾಮಾಜಿಕ ಸ್ವಾತಂತ್ರ್ಯವು ರಾಜಕೀಯ ಸ್ವಾತಂತ್ರ್ಯಕ್ಕಿಂತಲೂ ಮುಖ್ಯವಾಗಿತ್ತು. ಮಹಿಳೆಯರಿಗೆ ಸಮಾನತೆ ಹಕ್ಕು ದೊರಕುವಂತೆ ಮಾಡಲು ಅವರು ನಿರಂತರವಾಗಿ ಶ್ರಮಿಸಿದರು’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಸುಭಾಷ್ ಭರಣಿ ಹಾಗೂ ಮಹೇಶ ಜೋಶಿ ಪುಷ್ಪ ನಮನ ಸಲ್ಲಿಸಿದರು. ಕಸಾಪ ಗೌರವ ಕಾರ್ಯದರ್ಶಿಗಳಾದ ಪದ್ಮಿನಿ ನಾಗರಾಜು, ನೇ.ಭ.ರಾಮಲಿಂಗ ಶೆಟ್ಟಿ ಹಾಗೂ ಕೋಶಾಧ್ಯಕ್ಷ ಬಿ.. ಎಂ.ಪಟೇಲ ಪಾಂಡು ಪಾಲ್ಗೊಂಡಿದ್ದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಬಾಬಾಸಾಹೇಬ ಡಾ.ಬಿ. ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಪ್ರೊ. ಸಿ.ಬಿ.ಹೊನ್ನಸಿದ್ದಾರ್ಥ, ‘ಸಂವಿಧಾನದ ಮಹತ್ವವನ್ನು ನಮ್ಮ ಸಮಾಜದಲ್ಲಿ ಇನ್ನೂ ಅನೇಕರು ಅರಿತಿಲ್ಲ. ನಮ್ಮಲ್ಲಿ ವಿದ್ಯಾವಂತ ಅನಕ್ಷರಸ್ಥರೂ ಇದ್ದಾರೆ. ಅಂಬೇಡ್ಕರ್ ಅವರು ದೇಶ ಕಂಡ ದೊಡ್ಡ ಚಿಂತಕ ಮತ್ತು ಸುಧಾರಕ. ಅವರ ಚಿಂತನೆಗಳನ್ನು ಎಲ್ಲೆಡೆ ಪಸರಿಸುವುದು ನಮ್ಮ ಕರ್ತವ್ಯ’ ಎಂದರು.

ಕಸಾಪ ಅಧ್ಯಕ್ಷ ಮಹೇಶ ಜೋಶಿ, ‘ಅಂಬೇಡ್ಕರ್ ಅವರು ಕೇವಲ ದಲಿತರ ನಾಯಕರಲ್ಲ. ಅವರು ಅನ್ಯಾಯದ ವಿರುದ್ಧ ನಿರಂತರವಾಗಿ ಧ್ವನಿ ಎತ್ತಿ ಹೋರಾಟ ಮಾಡಿದ ಮಾನವೀಯತೆಯ ಹರಿಕಾರ. ಭಾರತ ಸಮಾಜದಲ್ಲಿ ಸಮಾನತೆಯ ಹೊಸ ಪರಂಪರೆಯನ್ನು ರೂಪಿಸಲು ಅವರು ಪ್ರಯತ್ನಿಸಿದರು. ‘ಸಂವಿಧಾನದ ಶಿಲ್ಪಿ’ ಎಂದೇ ಕರೆಸಿಕೊಂಡಿರುವ ಅವರು, ಸಾಮಾಜಿಕ ನ್ಯಾಯವನ್ನು ಸಾಧಿಸಲು ವಿಶೇಷ ಪ್ರಯತ್ನ ಮಾಡಿದರು’ ಎಂದು ಹೇಳಿದರು.

‘ಮಗುವಿನ ಸುಪರ್ದಿಗೆ ಆರ್ಥಿಕ ಸಾಮರ್ಥ್ಯವೊಂದೇ ಸಾಲದು’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಹಣಕಾಸಿನ ಸಾಮರ್ಥ್ಯದ (ಆರ್ಥಿಕ ಸದೃಢತೆ) ಅಂಶವೊಂದೇ ಮಗುವಿನ ಸುಪರ್ದಿಯ ವಿಚಾರವನ್ನು ನಿರ್ಧರಿಸಲು ಆಧಾರ ಆಗುವುದಿಲ್ಲ’ ಎಂದು ಹೈಕೋರ್ಟ್ ಕೌಟುಂಬಿಕ ವ್ಯಾಜ್ಯವೊಂದರಲ್ಲಿ ಅಭಿಪ್ರಾಯಪಟ್ಟಿದೆ.

‘ಮಗಳನ್ನು ನನ್ನ ಸುಪರ್ದಿಗೆ ನೀಡಲು ಪತ್ನಿಗೆ ನಿರ್ದೇಶಿಸಬೇಕು’ ಎಂದು ಕೋರಿ ಪತಿ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ನ್ಯಾಯಮೂರ್ತಿ ಅನಂತ ರಾಮನಾಥ ಹೆಗ್ಡೆ ಅವರಿದ್ದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

ಮಗುವನ್ನು ತಂದೆಯ ವಶಕ್ಕೆ ನೀಡಲು ನಿರಾಕರಿಸಿರುವ ನ್ಯಾಯಪೀಠ, ‘ಮಗಳ ಭೇಟಿ ಹಕ್ಕು ಪ್ರತಿಪಾದಿಸಲು ಮತ್ತು ಅವಳಿಗೆ ಉತ್ತಮ ಶಿಕ್ಷಣದ ವ್ಯವಸ್ಥೆ ಕಲ್ಪಿಸಲು ಅವಕಾಶ ಕೋರಿ ಮೇಲ್ಮನವಿದಾರರು ಕೌಟುಂಬಿಕ ನ್ಯಾಯಾಲಯದ ಮೊರೆಹೋಗಲು ಸ್ವತಂತ್ರರಾಗಿದ್ದಾರೆ’ ಎಂದು ಇದೇ ವೇಳೆ ಸ್ಪಷ್ಟಪಡಿಸಿದೆ.

ಪ್ರಕರಣವೇನು?: ದಂಪತಿ 2008ರ ಏಪ್ರಿಲ್ 27ರಂದು ಮದುವೆಯಾಗಿದ್ದರು. 2009ರ ಸೆಪ್ಟೆಂಬರ್ 29ರಂದು ಪುತ್ರಿ ಜನಿಸಿದ್ದಳು. ಕೌಟುಂಬಿಕ ಕಲಹದ ಪರಿಣಾಮ ಪತ್ನಿ 2010ರಲ್ಲಿ ಪತಿಯನ್ನು ತೊರೆದು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರು. ಅಂತೆಯೇ, ವಿಚ್ಛೇದನ ಕೋರಿ 2011ರಲ್ಲಿ ಅರ್ಜಿ ಸಲ್ಲಿಸಿದ್ದರು. ಕೌಟುಂಬಿಕ ನ್ಯಾಯಾಲಯ 2012ರಲ್ಲಿ ದಂಪತಿಯ ವಿವಾಹ ಅನೂರ್ಜಿತಗೊಳಿಸಿ, ವಿಚ್ಛೇದನ ಮಂಜೂರು ಮಾಡಿತ್ತು.

‘ಮಗಳನ್ನು ಶಾಶ್ವತವಾಗಿ ನನ್ನ ಸುಪರ್ದಿಗೆ ನೀಡಲು ಪತ್ನಿಗೆ ಆದೇಶಿಸಬೇಕು’ ಎಂದು ಕೋರಿ ಪತಿ, ‘ಪೋಷಕರು ಮತ್ತು ಪಾಲಕರ ಕಾಯ್ದೆ’-1890ರ ಅಡಿಯಲ್ಲಿ ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಸ್ಥಳೀಯ ಕೌಟುಂಬಿಕ ಹಿರಿಯ ಸಿವಿಲ್ ನ್ಯಾಯಾಲಯ 2019ರ ಡಿಸೆಂಬರ್ 19ರಂದು ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗಿತ್ತು.

‘ಸಿದ್ದರಾಮಯ್ಯ ಇಳಿಸಲು ಡಿಕೆಶಿ ಷಡ್ಯಂತ್ರ’

ಪ್ರಜಾವಾಣಿ ವಾರ್ತೆ

ವಿಜಯಪುರ: ‘ಲೋಕಸಭೆ ಚುನಾವಣೆ ಫಲಿತಾಂಶ ಪ್ರಕಟವಾದ 15 ದಿನಗಳ ಒಳಗೆ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸಲು ಡಿಸಿಎಂ ಡಿ.ಕೆ.ಶಿವಕುಮಾರ್ ವ್ಯವಸ್ಥಿತ ಷಡ್ಯಂತ್ರ ನಡೆಸಿದ್ದಾರೆ’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದರು.

‘ಬಾಗಲಕೋಟೆ ಜಿಲ್ಲೆಯ ಸ್ವಾಮೀಜಿಯೊಬ್ಬರ ಜೊತೆ ಈ ಸಂಬಂಧ ಮಾತನಾಡಿರುವ ಡಿ.ಕೆ. ಶಿವಕುಮಾರ್, ಲೋಕಸಭಾ ಚುನಾವಣೆಯಲ್ಲಿ ನನ್ನ ಪರವಾದ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಸಹಕಾರ ನೀಡಿ. ಅವರು ಗೆದ್ದರೆ ಚುನಾವಣೆ ಬಳಿಕ ತಾವೇ ಮುಖ್ಯಮಂತ್ರಿ ಆಗುವುದಾಗಿ ಹೇಳಿದ್ದಾರೆ’ ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

‘ಬಾಗಲಕೋಟೆ, ಧಾರವಾಡ, ಬೆಳಗಾವಿ ಸೇರಿ ಇನ್ನೂ ಮೂರು–ನಾಲ್ಕು ಕಾಂಗ್ರೆಸ್ ಲೋಕಸಭಾ ಅಭ್ಯರ್ಥಿಗಳು ಚುನಾವಣೆಯಲ್ಲಿ ಗೆದ್ದರೆ ಸಿದ್ದರಾಮಯ್ಯ ಅವರನ್ನು ಇಳಿಸಲು ಅನುಕೂಲವಾಗಲಿದೆ. ಇದಕ್ಕೆ ಲಿಂಗಾಯತರ ಸಹಕಾರ ಬೇಕು ಎಂದು ಶಿವಕುಮಾರ್ ಕೋರಿದ್ದಾರೆ’ ಎಂದರು.

‘ತಮ್ಮ ಪರವಾದ ಲೋಕಸಭಾ ಸದಸ್ಯರನ್ನು ಚುನಾವಣೆಯಲ್ಲಿ ಆಯ್ಕೆ ಮಾಡಿಕೊಂಡ ಬಳಿಕ ಡಿ.ಕೆ.ಶಿವಕುಮಾರ್ ಫಲಿತಾಂಶ ಬಂದ 15 ದಿನಗಳಲ್ಲಿ ಮುಖ್ಯಮಂತ್ರಿ ಆಗುವ ಕನಸಕಾಣುತ್ತಿದ್ದಾರೆ. ಒಂದು ವೇಳೆ ಸಿದ್ದರಾಮಯ್ಯ ಅವರನ್ನು ಸಿ.ಎಂ ಹುದ್ದೆಯಿಂದ ಕೆಳಗಿಳಿಸಿದರೆ ಕಾಂಗ್ರೆಸ್ ಇಬ್ಭಾಗ ಮತ್ತು ಹೊಸ ಸರ್ಕಾರ ರಚನೆ ಗ್ಯಾರಂಟಿ’ ಎಂದರು.

‘ಡಿ.ಕೆ.ಶಿವಕುಮಾರ್ ಬೆಂಬಲಿತ ಬಾಗಲಕೋಟೆ, ಧಾರವಾಡ, ಬೆಳಗಾವಿಯ ಕಾಂಗ್ರೆಸ್ ಅಭ್ಯರ್ಥಿಗಳು ಚುನಾವಣೆಯಲ್ಲಿ ಗೆದ್ದರೆ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸುವುದು ಗ್ಯಾರಂಟಿ. ಹೀಗಾಗಿ ಸಿದ್ದರಾಮಯ್ಯ ಅವರು ಶಿವಕುಮಾರ್ ಬೆಂಬಲಿತ ಲೋಕಸಭಾ ಅಭ್ಯರ್ಥಿಗಳನ್ನು ಸೋಲಿಸಿ ತಮ್ಮ ಕುರ್ಚಿಯನ್ನು ಗ್ಯಾರಂಟಿ ಮಾಡಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಸಂಗೀತೋತ್ಸವ ನಗರದ ಚಾಮರಾಜಪೇಟೆಯ ಕೋಟೆ ಹೈಸ್ಕೂಲ್ ಆವರಣದಲ್ಲಿ ಶ್ರೀರಾಮ ಸೇವಾ ಮಂಡಲಿ ಮತ್ತು ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಆಯೋಜಿಸಿದ ರಾಮನವಮಿ ಸಂಗೀತೋತ್ಸವದಲ್ಲಿ ಬುಧವಾರ ಶಿವಶ್ರೀ ಸ್ಕಂದಾಪ್ರಸಾದ್ ಅವರು ಸಂಗೀತ ಕಛೇರಿ ನೀಡಿದರು — ಪ್ರಜಾವಾಣಿ ಚಿತ್ರ

ಕೃಷಿಹೊಂಡದಲ್ಲಿ ಮುಳುಗಿ ಬಾಲಕ ಸಾವು

ಮುಳಬಾಗಿಲು: ತಾಲ್ಲೂಕಿನ ಕೋಗಿಲೇರು ಗ್ರಾಮದಲ್ಲಿ ಮಂಗಳವಾರ ಕೃಷಿಹೊಂಡದಲ್ಲಿ ಈಜಲು ಹೋಗಿದ್ದ ಬಾಲಕನೊಬ್ಬ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ.

ಬೆಂಗಳೂರಿನ ಬದರೀನಾಥ್ (12) ಮೃತ ಬಾಲಕ. ಈತ ಮೂಲತಃ ಕೆಜಿಎಫ್ ತಾಲ್ಲೂಕಿನ ಕದರೀಪುರದ ರಮೇಶ್ ಕುಮಾರ್ ಅವರ ಮಗ. ಬೆಂಗಳೂರಿನಲ್ಲಿ ವಿಧ್ಯಾಭ್ಯಾಸ ಮಾಡುತ್ತಿದ್ದ ಈತ ರಜಾ ದಿನ ಕಳೆಯಲು ಅಜ್ಜಿ ಮನೆಗೆ ಬಂದಿದ್ದ.

ನಾರಾಯಣ ಪಿ.ಯು ಕಾಲೇಜು ಶೇ 99ರಷ್ಟು ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ರಾಜ್ಯದ ನಾರಾಯಣ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದು, ಶೇ 99ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

200 ವಿದ್ಯಾರ್ಥಿಗಳು 570ಕ್ಕೂ ಅಧಿಕ ಅಂಕಗಳನ್ನು ಗಳಿಸಿದ್ದಾರೆ. ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು 540ಕ್ಕೂ ಅಧಿಕ ಅಂಕ ಪಡೆದಿದ್ದಾರೆ. ಇನ್ನುಳಿದ ಶೇ 45 ರಷ್ಟು ವಿದ್ಯಾರ್ಥಿಗಳು ಪ್ರಥಮ ದರ್ಜೆಯೊಂದಿಗೆ ತೇರ್ಗಡೆಯಾಗಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ವಜ್ರಕಾಂತ್ ಎಂ. (592), ಅರ್ಪಿತಾ ಆರ್. (591), ವೈ.ನಂದನಾ (591), ಲಿನಿಶಾ ಲೋಕೇಶ್ (590), ಸೌಮ್ಯ ಜಿ. (590) ಹಾಗೂ ಹನ್ಸಿಕಾ ಆರ್. (590) ಉತ್ತಮ ಸಾಧನೆ ಮಾಡಿದ್ದಾರೆ.

ನಾರಾಯಣ ಶಿಕ್ಷಣ ಸಂಸ್ಥೆಗಳ ನಿರ್ದೇಶಕರಾದ ಪಿ. ಸಿಂಧುರ, ‘ಸಂಸ್ಥೆಯ ವಿದ್ಯಾರ್ಥಿಗಳು ಪಿಯು ಪರೀಕ್ಷೆಯಲ್ಲಿ ಗಮನಾರ್ಹವಾದ ಸಾಧನೆ ಮಾಡಿದ್ದಾರೆ. ಇದು ಸಂಸ್ಥೆಯ ಶಿಕ್ಷಣದ ಗುಣಮಟ್ಟವನ್ನು ತೋರಿಸುತ್ತದೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಜ್ರಕಾಂತ್ ಎಂ.

ಸೌಮ್ಯ ಜಿ.

ಲಿನಿಶಾ ಲೋಕೇಶ್

ಅರ್ಪಿತಾ ಆರ್.

ವೈ. ನಂದನಾ

ಹನ್ಸಿಕಾ ಆರ್.

ನಗರದಲ್ಲಿ ಇಂದು

ಶ್ರೀರಾಮ ವೇಣುಗೋಪಾಲ ಕೃಷ್ಣಸ್ವಾಮಿ ಬ್ರಹ್ಮರಥೋತ್ಸವ: ಆಯೋಜನೆ ಹಾಗೂ ಸ್ಥಳ: ಆಯೋಜನೆ ಹಾಗೂ ಸ್ಥಳ: ಗಾಳಿ ಆಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್, ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಳಿಗ್ಗೆ 9ರಿಂದ

ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನದ ವಸಂತ ನವರಾತ್ರಿ ಬ್ರಹ್ಮೋತ್ಸವ: ಭಕ್ತೋತ್ಸವ, ಆಯೋಜನೆ ಮತ್ತು ಸ್ಥಳ: ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನ, ರಾಜರಾಜೇಶ್ವರಿನಗರ, ಬೆಳಿಗ್ಗೆ 9.30

ವಿಶ್ವ ಪರಂಪರೆ ದಿನದ ಪ್ರಯುಕ್ತ ವಿಶೇಷ ಅಂಚೆ ಕಾರ್ಡ್ ಬಿಡುಗಡೆ: ಆಯೋಜನೆ: ಅಂಚೆ ಇಲಾಖೆ, ಸ್ಥಳ: ಪ್ರಧಾನ ಅಂಚೆ ಕಚೇರಿ, ಅಂಬೇಡ್ಕರ್ ವೀಧಿ, ಬೆಳಿಗ್ಗೆ 10.30

ಬೆಂಗಳೂರು ಮಾವು ಉತ್ಸವ: ಉದ್ಘಾಟನೆ: ರಾಕ್‌ಲೈನ್ ವೆಂಕಟೇಶ್, ವಿನಯ್ ಗೌಡ, ಪ್ರಶಾಂತ್ ಸಂಬರಗಿ, ಸಿ.ಎಂ.ಶಿವಕುಮರ್ ನಾಯ್ಕ್, ಮುಖ್ಯ ಅತಿಥಿಗಳು: ಮುರಳಿ, ಸಂತೋಷ್, ಪ್ರಥಮ್, ನಿಕಿತಾ ಸ್ವಾಮಿ, ಶ್ರುತಿ, ಆಯೋಜನೆ: ವಾಸವಿ ಕಾಂಡಿಮೆಂಟ್ಸ್, ಸ್ಥಳ: ನ್ಯಾಷನಲ್ ಕಾಲೇಜು ಮೈದಾನ, ಬಸವನಗುಡಿ, ಬೆಳಿಗ್ಗೆ 11

‘ವರನಟ ಡಾ.ರಾಜ್‌ಕುಮಾರ್ ಸಿರಿಗನ್ನಡ ಪ್ರಶಸ್ತಿ’ ಪ್ರದಾನ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಮೋಹನದೇವ ಆಳ್ವ, ಮುಖ್ಯ ಅತಿಥಿ: ಗೋಪಾಲ್ ಬಿ. ಹೊಸೂರು, ಪ್ರಶಸ್ತಿ ಪುರಸ್ಕೃತರು: ಬಿ.ಕೆ.ಶಿವರಾಂ, ಉಪಸ್ಥಿತಿ: ಕೆ.ಮೋಹನ್ ರಾವ್, ಸಿ.ಕೆ. ರಾಮೇಗೌಡ, ಗಾಯನ: ರಘು ಹೂವಿನ ಕಟ್ಟೆ ಮತ್ತು ತಂಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.15

‘ವಸುಂಧರ ಮತ್ತು ಪರಮಶಿವಯ್ಯ ದತ್ತಿ ಹಸ್ತಪ್ರತಿ ಮತ್ತು ತಾಳೆಗರಿ ಅಧ್ಯಯನ ಪುರಸ್ಕಾರ ಪ್ರದಾನ: ಅತಿಥಿ: ವಸುಂಧರ ಪರಮಶಿವಯ್ಯ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಪುರಸ್ಕೃತರು: ಭಾನುಪ್ರಕಾಶ್ ಟಿ.ವಿ., ಆಯೋಜನೆ: ಬಿ.ಎಂ.ಶ್ರೀ.ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಸಂಜೆ 5

ಬೆಂಗಳೂರು ಕರಗೋತ್ಸವ: ದೇವರ ನಾಮ–ಭಜನೆ: ಮಾವಳ್ಳಿ ಮಹಿಳಾ ಸಂಘ, ಯಕ್ಷೇಶ್ವರಿ ಯಕ್ಷಗಾನ ತಂಡದಿಂದ ಯಕ್ಷಗಾನ, ಆಯೋಜನೆ ಮತ್ತು ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ ತಿಗಳರಪೇಟೆ, ಸಂಜೆ 5ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಹರಿದಾಸ ವಾಣಿ: ಮೈಸೂರು ರಾಮಚಂದ್ರಾಚಾರ್ ಮತ್ತು ಸಂಗಡಿಗರು, ಆಯೋಜನೆ ಹಾಗೂ ಸ್ಥಳ: ರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಅಂಚೆ ಕಚೇರಿ ಹತ್ತಿರ, ಮಲ್ಲೇಶ್ವರ, ಸಂಜೆ 6

ರಾಮನವಮಿ ಆಚರಣೆ ಪ್ರಯುಕ್ತ ಸಂಗೀತ ಕಛೇರಿ: ಮೃದಂಗ: ವಿಷ್ಣು ವೆಂಕಟೇಶ್, ಜಿ.ಎಸ್. ನಾಗರಾಜ್, ಘಟ: ಎನ್.ಎಸ್. ಕ್ರಿಷ್ಣಪ್ರಸಾದ್, ಆಯೋಜನೆ: ಭಾರತೀಯ ಶಿಕ್ಷಣ ಸಮಿತಿ, ಸ್ಥಳ: ಪ್ರೊ.ಎಂ.ಪಿ.ಎಲ್. ಶಾಸ್ತ್ರಿ ಆಡಿಟೋರಿಯಂ, ಗಾಂಧಿನಗರ ಪಿ.ಯು. ಕಾಲೇಜು ಆವರಣ, ಸಂಜೆ 6

ಭರತನಾಟ್ಯ ರಂಗಪ್ರವೇಶ: ಧರಿತ್ರಿ ಆರ್. ಭದ್ರಿ, ಮುಖ್ಯ ಅತಿಥಿಗಳು: ಶೀಲಾ ಚಂದ್ರಶೇಖರ್, ಕಿರಣ್ ಸುಬ್ರಮಣ್ಯಮ್, ಸಂಧ್ಯಾ ಕಿರಣ್, ಶೀಲಾ ಅರಕಲಗೂಡು, ಆಯೋಜನೆ: ಭ್ರಮರಿ ಡ್ಯಾನ್ಸ್ ರೆಪರ್ಟರ್, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 6

‘ಬೆರಳ್ಗೆ ಕೊರಳ್’ ನಾಟಕ ಪ್ರದರ್ಶನ: ನಿರ್ದೇಶನ: ರಾಘವೇಂದ್ರ ಎಸ್., ಆಯೋಜನೆ: ಆದಿಶಕ್ತಿ ರಂಗ ಕಲಾಸಂಸ್ಥೆ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

ರಾಮನವಮಿ ಸಂಗೀತೋತ್ಸವ–2024: ಸಂಜೆ 5ರಿಂದ 6 ಗಂಟೆ: ಹೃದಯೇಶ್ ಆರ್. ಕೃಷ್ಣ ಮತ್ತು ತಂಡದಿಂದ ಸಂಗೀತ ಕಾರ್ಯಕ್ರಮ, ವಿಶೇಷ ಕರ್ನಾಟಕ ಸಂಗೀತ ಕಛೇರಿ: ಸಿಕ್ಕಿಲ್ ಗುರುಚರಣ್, ಚಾರುಲತಾ ರಾಮಾನುಜಂ, ಬೆಂಗಳೂರು ವಿ. ಪ್ರವೀಣ್, ಗಿರಿಧರ್ ಉಡುಪ, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 6.30

ಶ್ರೀರಾಮೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ವಿವೇಕ್ ಸದಾಶಿವಂ, ಪಿಟೀಲು: ಯಶಸ್ವಿ ಎಸ್., ಮೃದಂಗ: ನಾಗೇಂದ್ರ ಪ್ರಸಾದ್, ಖಂಜಿರ: ಸುನಾದ್ ಆನೂರ್, ಆಯೋಜನೆ ಹಾಗೂ ಸ್ಥಳ: ಜಯರಾಮ ಸೇವಾ ಮಂಡಳಿ, 1ನೇ ಮುಖ್ಯ ರಸ್ತೆ, 8ನೇ ಬಡಾವಣೆ, ಜಯನಗರ, ಸಂಜೆ 6.30

ಗಣಕಯಂತ್ರದಲ್ಲಿ ಕನ್ನಡ ತಂತ್ರಾಂಶ ಕಲಿಕಾ ತರಗತಿ ಉದ್ಘಾಟನೆ ಹಾಗೂ ಮಾಸದ ಮಾತು: ವಿಷಯ: ‘ಕರ್ನಾಟಕದ ವೀರ ವನಿತೆಯರು’, ಉದ್ಘಾಟನೆ: ಎಂ.ಜಿ.ಬಾಲಸುಬ್ರಮಣ್ಯ, ಉಪನ್ಯಾಸಕರು: ಸಂಧ್ಯಾ ವಿ., ಮುಖ್ಯ ಅತಿಥಿಗಳು: ಜಿ.ಎನ್. ನರಸಿಂಹಮೂರ್ತಿ, ರಾ.ನಂ.ಚಂದ್ರಶೇಖರ, ಮಹೇಶ್ ಅಂಗಡಿ, ಕುಸುಮ ರಾಜಶೇಖರ್, ಬಿ.ಎನ್. ಶಿವಲಿಂಗ, ಎಸ್. ರಾಜುಹಾಸನ್, ಆಯೋಜನೆ ಹಾಗೂ ಸ್ಥಳ: ಬಿ. ವಿಜಯಕುಮಾರ್ ಸಭಾಂಗಣ, ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ, ಮಧ್ಯಾಹ್ನ 3.30

70ನೇ ಶ್ರೀರಾಮನವಮಿ ಸಂಗೀತ ಮಹೋತ್ಸವ: ಗಾಯನ: ಅಂಜಲಿ ಶ್ರೀರಾಮ್ ಮತ್ತು ವೃಂದ, ಆಯೋಜನೆ ಹಾಗೂ ಸ್ಥಳ: ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ, ಸಂಜೆ 7

ಭರತನಾಟ್ಯ ಪ್ರದರ್ಶನ: ಆರೋಹಣ ನೃತ್ಯ ಶಾಲೆಯ ವಿದ್ಯಾರ್ಥಿಗಳು, ನಿರ್ದೇಶನ: ಭಾರ್ಗವಿ ಪ್ರಕಾಶ್, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ ಐದನೆ ಬಡಾವಣೆ, ಸಂಜೆ 7.30

21 ಐಟಿ ಪಾರ್ಕ್‌ಗಳಿಗೆ ಶೀಘ್ರ ಕಾವೇರಿ ನೀರು: ಜಲಮಂಡಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹದೇವಪುರ ವಲಯದಲ್ಲಿರುವ 21 ಐಟಿ ಪಾರ್ಕ್‌ಗಳಿಗೆ ಅಗತ್ಯವಿರುವಷ್ಟು ಕಾವೇರಿ ನೀರನ್ನು ಸರಬರಾಜು ಮಾಡಲು ಜಲಮಂಡಳಿ ಸಿದ್ಧವಿದೆ. ಕಾವೇರಿ ನೀರಿಗಾಗಿ ಬೇಡಿಕೆ ಸಲ್ಲಿಸಿರುವ ಕಂಪನಿಗಳಿಗೆ ಕಾವೇರಿ ನಾಲ್ಕನೇ ಹಂತದ ನೀರನ್ನು ಪೈಪ್‌ಲೈನ್ ಮೂಲಕ ಸರಬರಾಜು ಮಾಡಲಾಗುವುದು‘ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ರಾಮ್‌ಪ್ರಸಾತ್ ಮನೋಹರ್ ಹೇಳಿದರು.

ಔಟರ್ ರಿಂಗ್ ರೋಡ್ ಕಂಪನೀಸ್ ಅಸೋಸಿಯೇಷನ್ (ಒಆರ್‌ಸಿಎ) ಪದಾಧಿಕಾರಿಗಳ ಜೊತೆ ಸಭೆ ನಡೆಸಿ ಅವರು ಮಾತನಾಡಿದರು.

ಹೆಚ್ಚು ಐಟಿ ಪಾರ್ಕ್‌ಗಳು ಕೊಳವೆಬಾವಿಗಳ ಮೇಲೆ ಅವಲಂಬಿತವಾಗಿವೆ. ಈ ಬೇಸಿಗೆಯಲ್ಲಿ ನೀರಿನ ಕೊರತೆ ಉಂಟಾಗಿದ್ದು, ಜಲಮಂಡಳಿ ಅಗತ್ಯ ವ್ಯವಸ್ಥೆ ಮಾಡುವ ಮೂಲಕ ಸರಿಪಡಿಸಿದೆ. ಎಲ್ಲ ಉದ್ಯಮಗಳ ಬಳಕೆಗೆ ಸುಮಾರು 12 ಎಂ.ಎಲ್.ಡಿಯಷ್ಟು ಕಾವೇರಿ ನೀರಿನ ಅವಶ್ಯಕತೆ ಇದೆ. ಸದ್ಯ ಲಭ್ಯವಿರುವ ಕಾವೇರಿ 4ನೇ ಹಂತದ ಯೋಜನೆಯಲ್ಲೇ 5 ಎಂ.ಎಲ್.ಡಿ ನೀರು ಒದಗಿಸಬಹುದು. ಇದಕ್ಕೆ ತಗಲುವ ವೆಚ್ಚವನ್ನು ಕಂಪನಿಗಳೇ ಭರಿಸಬೇಕು. ಶುಲ್ಕ ಭರಿಸಿದರೆ 30 ದಿನಗಳಲ್ಲಿ ಪೈಪ್‌ಲೈನ್ ಮೂಲಕ ನೀರು ಸರಬರಾಜು ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

ಕಾವೇರಿ 5ನೇ ಹಂತದ ಯೋಜನೆ ಜಾರಿಗೊಂಡ ನಂತರ ಹೆಚ್ಚಿನ ಪ್ರಮಾಣದ ನೀರು ಒದಗಿಸಬಹುದು. ಇನ್ನುಳಿದ ಬೇಡಿಕೆಯನ್ನು ಸಂಸ್ಕರಿಸಿದ ನೀರು ಸರಬರಾಜು ಮಾಡುವ ಮೂಲಕ ಈಡೇರಿಸಲಾಗುವುದು ಎಂದು ಭರವಸೆ ನೀಡಿದರು.

ಐಟಿ ಪಾರ್ಕ್‌ನಲ್ಲಿರುವ ಕಚೇರಿಗಳಲ್ಲಿ ನಿತ್ಯ ಬಳಕೆಗೆ ಸಂಸ್ಕರಿಸಿದ ನೀರು ಬಳಸಬೇಕು. ಮನೆಗಳ ಹಾಗೂ ಕಚೇರಿಗಳ ಶೌಚಾಲಯದ ನೀರು ಹೊರತಪಡಿಸಿ ಬೇರೆ ಕಾರ್ಯಗಳಿಗೆ ಬಳಕೆಯಾದ ನೀರನ್ನು ‘ಗ್ರೇ ವಾಟರ್’ ಎಂದು ಕರೆಯಲಾಗುತ್ತದೆ. ಇದನ್ನು ಸಂಸ್ಕರಿಸುವುದು ಬಹಳ ಸುಲಭ ಎಂದು ಸಲಹೆ ನೀಡಿದರು.

ಬಹಳಷ್ಟು ಐಟಿ ಪಾರ್ಕ್‌ಗಳು ಈಗಾಗಲೇ ಮಳೆ ನೀರು ಸಂಗ್ರಹ ಪದ್ಧತಿಯನ್ನು ಅಳವಡಿಸಿಕೊಂಡಿವೆ. ಹೊರ ಪ್ರದೇಶದಲ್ಲಿ ಬೀಳುವ ಮಳೆ ನೀರನ್ನ ಶೇಖರಿಸಿ ಹತ್ತಿರದ ಕೆರೆಗಳು ಅಥವಾ ಜಲಮೂಲಗಳಿಗೆ ಹರಿಯಬಿಡಬಹುದು ಎಂದರು.

ಔಟರ್ ರಿಂಗ್ ರೋಡ್ ಕಂಪನೀಸ್ ಅಸೋಸಿಯೇಷನ್ ಉಪಾಧ್ಯಕ್ಷೆ ಅರ್ಚನಾ ತಯಾದೇ, ಕಾರ್ಯದರ್ಶಿ ರಮೇಶ್ ವೆಂಕಟರಾಮು, ಜನರಲ್ ಮ್ಯಾನೇಜರ್ ಕೃಷ್ಣ ಕುಮಾರ್ ಗೌಡ ಉಪಸ್ಥಿತರಿದ್ದರು.

ಸ್ಪರ್ಧಾ ವಾಣಿ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಗೋಧಿ ಬ್ಲಾಸ್ಟ್

ಯು.ಟಿ. ಆಯಿಷಾ ಫರ್ಜಾನ

- ಇತ್ತೀಚೆಗೆ ಗೋಧಿ ಬೆಳೆಗೆ ವ್ಯಾಪಕವಾಗಿ ಕಂಡುಬರುತ್ತಿರುವ ಶಿಲೀಂಧ್ರ ರೋಗವಾದ 'ಗೋಧಿ ಸ್ಫೋಟ ರೋಗ'ವು, 2050ರ ವೇಳೆಗೆ ಜಾಗತಿಕ ಗೋಧಿ ಉತ್ಪಾದನೆಯಲ್ಲಿ ಶೇ 13ರಷ್ಟು ಇಳಿಕೆಗೆ ಕಾರಣವಾಗಬಹುದು ಎಂದು ಸಂಶೋಧಕರು ಇತ್ತೀಚೆಗೆ ಎಚ್ಚರಿಕೆ ನೀಡಿದ್ದಾರೆ.
- ಗೋಧಿ ಸ್ಫೋಟ ರೋಗವನ್ನು ಮೊದಲು ಬ್ರೆಜಿಲ್‌ನಲ್ಲಿ 1985ರಲ್ಲಿ ಗುರುತಿಸಲಾಯಿತು ಮತ್ತು ನಂತರ ದಕ್ಷಿಣ ಅಮೆರಿಕದ ನೆರೆಯ ದೇಶಗಳಿಗೂ ಈ ರೋಗ ಹರಡಿತು. ಏಷ್ಯಾದಲ್ಲಿ ಗೋಧಿ ಸ್ಫೋಟದ ಮೊದಲ ಪ್ರಕರಣವು ಬಾಂಗ್ಲಾದೇಶದಲ್ಲಿ 2016ರಲ್ಲಿ ವರದಿಯಾಗಿದೆ.
- ಈ ರೋಗವು ಶೀಘ್ರ ಹರಡುವಿಕೆ ಮತ್ತು ತೀವ್ರ ಇಳುವರಿ ನಷ್ಟ ಮಾಡುವ ಕಾರಣಗಳಿಂದಾಗಿ ಜಾಗತಿಕ ಗಮನವನ್ನು ಸೆಳೆಯಿತು.
- ಇದು ಪ್ರಾಥಮಿಕವಾಗಿ ಗೋಧಿ ಸಸ್ಯದ ಸ್ಪೈಕ್ ಅಥವಾ ತಲೆಯ ಮೇಲೆ ಪರಿಣಾಮ ಬೀರುತ್ತದೆ. ನಂತರ ಸಂಪೂರ್ಣ ಗೋಧಿತೆನೆ ನಾಶವಾಗುತ್ತದೆ.

ಕಾರಣವಾದ ಅಂಶ : ಮ್ಯಾಗ್ನಾಪೋರ್ತೆ ಒರಿಜೆ ಪಾಥೋಟೈಪ್ ಟ್ರೈಟಿಕಮ್ (MoT) ಎಂಬ ಶಿಲೀಂಧ್ರವು ಗೋಧಿ ಸ್ಫೋಟಕ್ಕೆ ಕಾರಣವಾಗಿದೆ. ಈ ಶಿಲೀಂಧ್ರವು ಅಕ್ಕಿ ಮತ್ತು ಬಾರ್ಲಿಯಂಥ ಇತರ ಏಕದಳ ಬೆಳೆಗಳಿಗೂ ಸೋಂಕನ್ನುಹರಡುತ್ತದೆ.

ಸೋಂಕಿನ ವಿಧಾನ : ಈ ಗೋಧಿ ಬ್ಲಾಸ್ಟ್ ರೋಗವು ಶಿಲೀಂಧ್ರ ಬೀಜಕಗಳ ಮೂಲಕ ಹರಡುತ್ತದೆ. ಇದು ಗಾಳಿ, ಮಳೆ ಮತ್ತು ಮಾನವ ಚಟುವಟಿಕೆಗಳಿಂದ ಹರಡುತ್ತದೆ. ಶಿಲೀಂಧ್ರವು ಎಲೆಗಳು ಮತ್ತು ಸ್ಪೈಕ್‌ಗಳ ಮೇಲೆ ಗಾಯಗಳು ಅಥವಾ ಸ್ಟೊಮಾಟಾದಂತಹ ನೈಸರ್ಗಿಕ ತೆರೆಯುವಿಕೆಗಳ ಮೂಲಕ ಗೋಧಿ ಸಸ್ಯಗಳಿಗೆ ಸೋಂಕು ತರುತ್ತದೆ.

- ಸಸ್ಯದ ಅಂಗಾಂಶದೊಳಗೆ ಒಮ್ಮೆ, ಶಿಲೀಂಧ್ರವು ವೇಗವಾಗಿ ಬೆಳೆಯುತ್ತಾ ಆತಿಥೇಯ ಕೋಶಗಳನ್ನು ನಾಶಪಡಿಸುತ್ತದೆ .

ಲಕ್ಷಣಗಳು

- ಗೋಧಿ ಸ್ಫೋಟದ ಲಕ್ಷಣಗಳು ಸೋಂಕಿನ ಹಂತ ಮತ್ತು ಪರಿಸರದ ಪರಿಸ್ಥಿತಿಗಳನ್ನು ಅವಲಂಬಿಸಿ ಬದಲಾಗುತ್ತವೆ.
- ಆರಂಭದಲ್ಲಿ, ಸೋಂಕಿತ ಸಸ್ಯಗಳ ಎಲೆಗಳು ಮತ್ತು ಸ್ಪೈಕ್‌ಗಳ ಮೇಲೆ ಸಣ್ಣ, ನೀರಿನಲ್ಲಿ ನೆನೆಸಿದಂತಹಾ ಗಾಯಗಳು ಕಾಣಿಸಿಕೊಳ್ಳುತ್ತವೆ. ಈ ಗಾಯಗಳು ತ್ವರಿತವಾಗಿ ವಿಸ್ತರಿಸುತ್ತವೆ ಮತ್ತು ಒಗ್ಗೂಡಿಸಿ, ಪೀಡಿತ ಅಂಗಾಂಶವನ್ನು ಕಂದು ಅಥವಾ ಕಪ್ಪು ಬಣ್ಣಕ್ಕೆ ತಿರುಗಿಸುತ್ತದೆ.
- ರೋಗವು ಮುಂದುವರಿದಂತೆ ತೆನೆಯು ಸಂಪೂರ್ಣ ಇಳುವರಿ ನಷ್ಟವಾಗುತ್ತದೆ.

ಗೋಧಿ ಸ್ಫೋಟ ಉಂಟಾಗಲು ಕಾರಣಗಳು

- 20° ಸೆಲ್ಸಿಯಸ್ ನಿಂದ 28° ಸೆಲ್ಸಿಯಸ್ ಮತ್ತು ಹೆಚ್ಚಿನ ಸಾಪೇಕ್ಷ ಆರ್ದ್ರ ವಾತಾವರಣದಲ್ಲಿ ಗೋಧಿ ಬ್ಲಾಸ್ಟ್ ಬೆಳೆಯುತ್ತದೆ.
- ಈ ಪರಿಸ್ಥಿತಿಗಳು ಶಿಲೀಂಧ್ರದ ಬೆಳವಣಿಗೆ ಮತ್ತು ಹರಡುವಿಕೆಗೆ ಅನುಕೂಲಕರವಾಗಿರುತ್ತವೆ.
- ಉಷ್ಣವಲಯದ ಮತ್ತು ಉಪೋಷ್ಣವಲಯದ ಹವಾಮಾನವನ್ನು ಹೊಂದಿರುವ ಪ್ರದೇಶಗಳಲ್ಲಿ ವಿಶೇಷವಾಗಿ ಗೋಧಿ ಸ್ಫೋಟ ಉಂಟಾಗಬಹುದು.

ನಿರ್ವಹಣಾ ತಂತ್ರಗಳು

- ಗೋಧಿ ಬ್ಲಾಸ್ಟ್ ನಿರ್ವಹಣೆಗೆ ಜೈವಿಕ , ಆನುವಂಶಿಕ ಮತ್ತು ರಾಸಾಯನಿಕ ನಿಯಂತ್ರಣ ಕ್ರಮಗಳನ್ನು ಸಂಯೋಜಿಸುವ ಸಮಗ್ರ ವಿಧಾನದ ಅಗತ್ಯವಿದೆ.
- ರೈತರು ರೋಗ-ನಿರೋಧಕ ಗೋಧಿ ತಳಿಗಳನ್ನು ನೆಡುವ ಮೂಲಕ, ಬೆಳೆ ಸರದಿಯನ್ನು ಅಭ್ಯಾಸ ಮಾಡುವ ಮೂಲಕ ಮತ್ತು ಉತ್ತಮ ಗಾಳಿಯ ಪ್ರಸರಣವನ್ನು ಉತ್ತೇಜಿಸುವ ಮತ್ತು ಆರ್ದ್ರತೆಯ ಮಟ್ಟವನ್ನು ಕಡಿಮೆ ಮಾಡುವ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಸೋಂಕಿನ ಅಪಾಯವನ್ನು ಕಡಿಮೆ ಮಾಡಬಹುದು.
- ಶಿಲೀಂಧ್ರನಾಶಕಗಳನ್ನು ಗೋಧಿ ಸ್ಫೋಟವನ್ನು ನಿಯಂತ್ರಿಸಲು ತಡೆಗಟ್ಟುವ ಅಥವಾ ಗುಣಪಡಿಸುವ ಕ್ರಮವಾಗಿ ಬಳಸಬಹುದು. ಆದರೂ ಅವುಗಳ ಪರಿಣಾಮಕಾರಿ ಅನ್ವಯಿಸುವ ಸಮಯ ಮತ್ತು ಶಿಲೀಂಧ್ರದ ತಳಿಯ ಮೇಲೆ ಅವಲಂಬಿತವಾಗಿರುತ್ತದೆ.
- ಗೋಧಿ ಸ್ಫೋಟವು ಗೋಧಿ ಉತ್ಪಾದನೆ ಮತ್ತು ಆಹಾರ ಭದ್ರತೆಗೆ ಹೆಚ್ಚಿನ ಬೆದರಿಕೆಯನ್ನು ಒಡ್ಡುತ್ತದೆ. ವಿಶೇಷವಾಗಿ ಬೆಚ್ಚಗಿನ ಮತ್ತು ಆರ್ದ್ರ ವಾತಾವರಣವಿರುವ ಪ್ರದೇಶಗಳಲ್ಲಿ. ಗೋಧಿ ಸ್ಫೋಟದ ಪರಿಣಾಮಕಾರಿ ನಿರ್ವಹಣೆಗೆ ಅಗತ್ಯವಿರುವ ಕ್ರಮಗಳು, ಆನುವಂಶಿಕ ಪ್ರತಿರೋಧ ಮತ್ತು ರಾಸಾಯನಿಕ ನಿಯಂತ್ರಣ ಕ್ರಮಗಳನ್ನು ಸಂಯೋಜಿಸುವ ಬಹುಮುಖಿ ವಿಧಾನದ ಅಗತ್ಯವಿದೆ.
- ಸಂಶೋಧನೆ, ಸಹಯೋಗ ಮತ್ತು ಹೊಸತನಗಳಲ್ಲಿ ಹೂಡಿಕೆ ಮಾಡುವ ಮೂಲಕ ಗೋಧಿ ಸ್ಫೋಟದ ಪರಿಣಾಮವನ್ನು ತಗ್ಗಿಸಬಹುದು. ಈ ವಿನಾಶಕಾರಿ ರೋಗದ ವಿರುದ್ಧ ಹೋರಾಡುವ ಮೂಲಕ ಜಾಗತಿಕ ಗೋಧಿ ಉತ್ಪಾದನೆಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳಬಹುದು.

ಗೋಧಿ ಉತ್ಪಾದನೆಯ ಮೇಲೆ ಪರಿಣಾಮ

- ಗೋಧಿ ಸ್ಫೋಟವು ಆಹಾರ ಭದ್ರತೆ ಮತ್ತು ಕೃಷಿ ಜೀವನೋಪಾಯಕ್ಕೆ ತೀವ್ರ ಅಪಾಯವನ್ನುಂಟುಮಾಡುತ್ತದೆ, ವಿಶೇಷವಾಗಿ ಗೋಧಿಯು ಪ್ರಧಾನ ಬೆಳೆಯಾಗಿರುವ ದೇಶಗಳಲ್ಲಿ ಇದರಿಂದ ವ್ಯಾಪಕ ನಷ್ಟ ಸಂಭವಿಸುತ್ತದೆ.
- ಗೋಧಿ ಊತದ ತೀವ್ರತೆ ಏಕಾಏಕಿ ಶೇ 20 ರಿಂದ ಶೇ 100ರವರೆಗೆ ನಡೆದು ಕೊನೆಗೆ ಇಳುವರಿ ನಷ್ಟಕ್ಕೆ ಕಾರಣವಾಗಬಹುದು. ಇದು ಗೋಧಿ ತಳಿಗಳು, ಸೋಂಕಿನ ಸಮಯ ಮತ್ತು ರೋಗ ನಿರ್ವಹಣೆಯ ತಂತ್ರಗಳ ಮೇಲೆ ಅವಲಂಬಿಸಿರುತ್ತದೆ.
- ಹೆಚ್ಚಿದ ಉತ್ಪಾದನಾ ವೆಚ್ಚಗಳು, ಆಹಾರದ ಕೊರತೆಯನ್ನು ಒಳಗೊಂಡಂತೆ ಗೋಧಿ ಸ್ಫೋಟ ವಿವಿಧ ಆರ್ಥಿಕ ಸಮಸ್ಯೆಯನ್ನು ತಂದೊಡ್ಡುತ್ತದೆ.

ಪರೀಕ್ಷೆ ತಯಾರಿಗೆ ಪ್ರಚಲಿತ ಮಾಹಿತಿ

'ಭಾಷಾನೆಟ್' ಪೋರ್ಟಲ್

ಭಾರತ ರಾಷ್ಟ್ರೀಯ ಇಂಟರ್ನೆಟ್ ವಿನಿಮಯ ಸಂಸ್ಥೆಯು ಮಾರ್ಚ್ 21ರಂದು ದೆಹಲಿಯ ಡಾ. ಅಂಬೇಡ್ಕರ್ ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ನಡೆದ ಸಾರ್ವತ್ರಿಕ ಸ್ವೀಕಾರ ದಿನಾಚರಣೆಯ ಸಂದರ್ಭದಲ್ಲಿ 'ಭಾಷಾನೆಟ್' ಪೋರ್ಟಲ್‌ಗೆ ಚಾಲನೆ ನೀಡಿತು.

ಇದು ನಿಕ್ಸಿ ಮತ್ತು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಜಂಟಿಯಾಗಿ ಆಯೋಜಿಸಿದ ಎರಡನೇ ಕಾರ್ಯಕ್ರಮವಾಗಿದೆ. ಸಾರ್ವತ್ರಿಕ ಸ್ವೀಕಾರ (ಯುಎ) ಮತ್ತು ದೇಶದಾದ್ಯಂತ ಡಿಜಿಟಲ್ ಒಳಗೊಳ್ಳುವಿಕೆಗೆ ಉತ್ತೇಜನ ನೀಡುವಲ್ಲಿ ಅವುಗಳ ಬದ್ಧತೆಯನ್ನು ಸೂಚಿಸುತ್ತದೆ.

ಇಂಟರ್ನೆಟ್ ಹೆಸರು ಮತ್ತು ಸಂಖ್ಯೆಗಳನ್ನು ನೀಡುವ ಸಂಸ್ಥೆಯಾದ ಇಂಟರ್ನೆಟ್ ಕಾರ್ಪೋರೇಷನ್ ಫಾರ್ ಎಸ್ಸೈನ್ಡ್ ನೇಮ್ಸ್ ಎಂಡ್ ನಂಬರ್ಸ್ (ICANN) ಮತ್ತು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಇಂಟರ್‌ನೆಟ್ ಆಡಳಿತ ವಿಭಾಗವು ಸಾರ್ವತ್ರಿಕ ಸ್ವೀಕಾರ ದಿನಕ್ಕೆ ತಮ್ಮ ಸಕ್ರಿಯ ಬೆಂಬಲವನ್ನು ನೀಡಿದವು. ಎಲ್ಲಾ ವ್ಯಕ್ತಿಗಳು ತಮ್ಮ ಭಾಷೆ ಅಥವಾ ಲಿಪಿ ಯಾವುದೇ ಆಗಿದ್ದರೂ, ಡಿಜಿಟಲ್ ಪ್ರಪಂಚದಲ್ಲಿ ಸಂಪೂರ್ಣವಾಗಿ ಭಾಗವಹಿಸುವುದನ್ನು ಖಾತರಿಪಡಿಸುವುದು ನಿಕ್ಸಿಯ ಮೂಲ ಉದ್ದೇಶವಾಗಿದೆ.

ಭಾರತ ರಾಷ್ಟ್ರೀಯ ಇಂಟರ್ನೆಟ್ ವಿನಿಮಯ ಸಂಸ್ಥೆ (ನಿಕ್ಸಿ)

ಜೂನ್ 19, 2003ರಲ್ಲಿ ಸ್ಥಾಪಿತವಾದ ಭಾರತ ರಾಷ್ಟ್ರೀಯ ಇಂಟರ್ನೆಟ್ ವಿನಿಮಯ ಸಂಸ್ಥೆಯು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಅಡಿಯಲ್ಲಿ ಕಾರ್ಯಾಚರಿಸುವ ಲಾಭರಹಿತ (ಸೆಕ್ಷನ್ 8) ಕಂಪೆನಿಯಾಗಿದೆ.

ಅದರ ಪ್ರಾಥಮಿಕ ಉದ್ದೇಶವು ಇಂಟರ್ನೆಟ್ ವ್ಯವಸ್ಥೆಗಳನ್ನು ಬೇರೆಬೇರೆ ಹಂತಗಳಲ್ಲಿ ಬಳಸಲು ಮತ್ತು ನಿರ್ವಹಿಸಲು ಅಗತ್ಯವಾದ ವಿವಿಧ ಮೂಲಸೌಕರ್ಯಗಳನ್ನು ಸಾಧ್ಯ ಮಾಡಿ ಕೊಡುವುದರ ಮೂಲಕ ಭಾರತದಲ್ಲಿ ಇಂಟರ್ನೆಟ್‌ನ ವ್ಯಾಪಕತೆ ಮತ್ತು ಬಳಕೆಯನ್ನು ಹೆಚ್ಚಿಸುವುದು.



ನಿಕ್ಸಿಯು ನಾಲ್ಕು ಪ್ರಮುಖ ಸೇವೆಗಳು

1. **ಸಂಪರ್ಕವನ್ನು ಸುಧಾರಿಸಲು ಇಂಟರ್ನೆಟ್ ವಿನಿಮಯ ಕೇಂದ್ರಗಳ ಸ್ಥಾಪನೆ.**
2. **'.in' ಡೊಮೇನ್ ಹೆಸರುಗಳ ಡಿಜಿಟಲ್ ಗುರುತನ್ನು ಉತ್ತೇಜಿಸಲು '.in'ರಿಜಿಸ್ಟ್ರಿಯ ನಿರ್ವಹಣೆ,**
3. IPv4 **ಮತ್ತು** IPv6 **ವಿಳಾಸಗಳ ಬಳಕೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಇಂಟರ್ನೆಟ್ ಹೆಸರು ಮತ್ತು ಸಂಖ್ಯೆಗಳ ಭಾರತೀಯ ರಿಜಿಸ್ಟ್ರಿ** (IRINN)**ಯ ಆಡಳಿತ,**
4. **ಮತ್ತು ನಿಕ್ಸಿ-ಸಿಎಸ್‌ಸಿ** (NIXI-CSC) **ಮೂಲಕ ದಕ್ಷವಾದ ದತ್ತಾಂಶ ಶೇಖರಣೆ ಪರಿಹಾರಗಳಿಗಾಗಿ ದತ್ತಾಂಶ ಕೇಂದ್ರ** (Data Centre) **ಸೇವೆಗಳನ್ನು ಒದಗಿಸುವುದು.**

ಮಹಾತಾರಿ ವಂದನಾ ಯೋಜನೆ

ಛತ್ತೀಸ್‌ಗಡದಲ್ಲಿ ಮಹಿಳೆಯರ ಸಶಕ್ತೀಕರಣದ ಕಡೆಗೆ ಒಂದು ಗಮನಾರ್ಹ ಹೆಜ್ಜೆಯಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಮಹಾತಾರಿ ವಂದನಾ ಯೋಜನೆಯನ್ನು ಉದ್ಘಾಟಿಸಿ, ಈ ಯೋಜನೆಯ ಅಡಿಯಲ್ಲಿ ಪ್ರಥಮ ಕಂತನ್ನು ವಿತರಿಸಿದರು. ಅರ್ಹ ವಿವಾಹಿತ ಮಹಿಳೆಯರಿಗೆ ಪ್ರತಿ ತಿಂಗಳು ₹ 1000 ಹಣಕಾಸು ನೆರವನ್ನು ನೀಡುವ ಗುರಿ ಹೊಂದಿದೆ.

ಮಹಿಳೆಯರ ಆರ್ಥಿಕ ಸಶಕ್ತೀಕರಣವನ್ನು ಪ್ರೋತ್ಸಾಹಿಸಲು, ಅವರಿಗೆ ಆರ್ಥಿಕ ಸ್ಥಿರತೆ ಒದಗಿಸಲು, ಲಿಂಗ ಸಮಾನತೆಗೆ ಬೆಂಬಲ ನೀಡಲು ಮತ್ತು ಕುಟುಂಬದೊಳಗೆ ಮಹಿಳೆಯ ಪ್ರಮುಖ ಪಾತ್ರವನ್ನು ಬಲಗೊಳಿಸಲು ಈ ಯೋಜನೆಯನ್ನು ರೂಪಿಸಲಾಗಿದೆ.

ಈ ಯೋಜನೆಯು ಜನವರಿ 1, 2024ರಂತೆ 21 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ಅರ್ಹ ವಿವಾಹಿತ ಮಹಿಳೆಯರಿಗೆ ಅನ್ವಯಿಸುತ್ತದೆ. ವಿಧವೆಯರು, ವಿಚ್ಛೇದಿತರು ಮತ್ತು ಪತಿಯಿಂದ ತ್ಯಜಿಸಲ್ಪಟ್ಟ ಮಹಿಳೆಯರಿಗೂ ಇದು ಅನ್ವಯವಾಗುತ್ತದೆ. ಅಂದಾಜು 70 ಲಕ್ಷ ಮಹಿಳೆಯರು ಲಾಭ ಪಡೆಯಲಿದ್ದಾರೆ.

ಸ್ವಚ್ಛತಾ ಗ್ರೀನ್ ಲೀಫ್ ರೇಟಿಂಗ್ (ಎಸ್‌ಜಿಎಲ್‌ಆರ್)

ತೀವ್ರವಾಗಿ ಬೆಳೆಯುತ್ತಿರುವ ಭಾರತದ ಪ್ರವಾಸೋದ್ಯಮ ಕ್ಷೇತ್ರದೊಳಗೆ ನೈರ್ಮಲ್ಯದ ಗುಣಮಟ್ಟವನ್ನು ಪರಿವರ್ತಿಸುವ ಮಹತ್ವದ ಕಾರ್ಯಕ್ರಮ. ಜಲಶಕ್ತಿ ಸಚಿವಾಲಯದ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು, ಪ್ರವಾಸೋದ್ಯಮ ಸಚಿವಾಲಯದ ಜೊತೆಗೂಡಿ 'ಸ್ವಚ್ಛತಾ ಗ್ರೀನ್ ಲೀಫ್ ರೇಟಿಂಗ್' ಎಂಬ ಒಂದು ಉಪಕ್ರಮವನ್ನು ಆರಂಭಿಸಿದೆ.

ಈ ಯೋಜನೆಯು ಪ್ರವಾಸಿಗರಿಗೆ ಅತ್ಯುನ್ನತ ಗುಣಮಟ್ಟದ ಸ್ವಚ್ಛತೆ ಮತ್ತು ನೈರ್ಮಲ್ಯದ ಸೌಲಭ್ಯ ಒದಗಿಸುತ್ತದೆ. ಹೆಚ್ಚು ಸ್ವಚ್ಛವಾದ ಮತ್ತು ಸುಸ್ಥಿರವಾದ ಪ್ರವಾಸೋದ್ಯಮ ಅಭ್ಯಾಸಗಳನ್ನು ಉತ್ತೇಜಿಸುವಲ್ಲಿ ಇದೊಂದು ಬಹುಮುಖ್ಯ ಹೆಜ್ಜೆಯಾಗಿದೆ.

ಮಧ್ಯಪ್ರದೇಶದ ನರ್ಮದಾಪುರಂನ ಹೃದಯ ಭಾಗದಲ್ಲಿರುವ 'ಬೈಸನ್ ರಿಸೋರ್ಟ್ಸ್, ಮಧಾಯ್' ಮೊದಲ ಐದು 'ಸ್ವಚ್ಛತಾ ಗ್ರೀನ್ ಲೀಫ್ ರೇಟಿಂಗ್' ಮಾನ್ಯತಾಪತ್ರಗಳನ್ನು ಪಡೆಯುವುದರ ಮೂಲಕ ಮುಂಚೂಣಿಯಲ್ಲಿದೆ.

ನೀಟ್- ಪಿಯುಸಿ ಸಿಇಟಿ ಪರೀಕ್ಷೆ ದಿಕ್ಸೂಚಿ

NEET PHYSICS

16) See the diagram. Area of each plate is 2.0 m^2 and $d = 2 \times 10^{-3}$ m. A charge of 8.85×10^{-8} C is given to *Q*. Then the potential of Q becomes



(a) 13 V (b) 10 V
(c) 6.67 V (d) 8.825 V

Ans:- (c)

Expln- In the given arrangement, plate Q is common for two capacitors which are connected in parallel.

$$\therefore C_{eff} = C_P = C_1 + C_2$$

$$\Rightarrow C_P = \frac{\varepsilon_0 A}{d} + \frac{\varepsilon_0 A}{2d} = \frac{2\varepsilon_0 A}{2d}$$

The given arrangement can be shown as

Let V be the potential difference across the capacitor, which is equal to the potential of the plate Q



So, $C = \frac{q}{V}$ i.e., $C_{eff} = \frac{q}{V}$

i.e., $\frac{3\varepsilon_0 A}{2d} = \frac{8.85 \times 10^{-8}}{V}$

$$\Rightarrow V = \frac{8.85 \times 10^{-8} \times 2 \times 2 \times 10^{-3}}{3 \times 8.85 \times 10^{-12} \times 2} = \frac{20}{3} = 6.67\,V$$

17) The ratio of radius of gyration of a solid sphere of mass M and radius R about its own axis to the radius of gyration of the thin hollow sphere of same mass and radius about its axis is:

a) 5 : 2 b) 3 : 5
c) 5 : 3 d) 2 : 5

18) For Young's double slit experiment, two statements are given below:

Statement I: If screen is moved away from the plane of slits, angular separation of the fringes remains constant.

Statement II: If the monochromatic source is replaced by another monochromatic source of larger wavelength, the angular separation of fringes decreases. In the light of the above statements,

choose the correct answer from the options given below:

a) Statement I is false but Statement II is true
b) Both Statement I and Statement II is true
c) Both Statement I and Statement II are true
d) Statement I is true but Statement II are false

19) The concentric spheres of radii R and r have positive charges q_1 and q_2 with equal surface charge densities. What is the electric potential at their common centre?

(a) $\frac{\sigma}{\varepsilon_0}(R + r)$ (b) $\frac{\sigma}{\varepsilon_0}(R - r)$

(c) $\frac{\sigma}{\varepsilon_0}\left(\frac{1}{R} + \frac{1}{r}\right)$ (d) $\frac{\sigma}{\varepsilon_0}\left(\frac{1}{R}\right)$

Ans:- (a)

Expln- Potential at the centre due to sphere with radius R,

$$V_1 = \frac{q_1}{4\pi\varepsilon_0 R}$$

Potential at the centre due to sphere with radius r,

$$V_2 = \frac{q_2}{4\pi\varepsilon_0 r}$$

Given, surface charge densities for both spheres

$$\sigma = \sigma_R = \sigma_r$$

$$\text{i.e., } \frac{q_1}{4\pi\varepsilon_0 R^2} = \frac{q_2}{4\pi\varepsilon_0 r^2}$$

$$\Rightarrow q_1 = \frac{R^2}{r^2} q_2$$

Total potential at the centre due to both spheres

$$V = V_1 + V_2$$

$$= \frac{q_1}{4\pi\varepsilon_0 R} + \frac{q_2}{4\pi\varepsilon_0 r} = \frac{1}{4\pi\varepsilon_0}\left(\frac{q_1}{R} + \frac{q_2}{r}\right)$$

$$= \frac{q_2}{4\pi\varepsilon_0}\left(\frac{R + r}{r^2}\right) = \frac{q_2}{4\pi r^2 \varepsilon_0}(R + r) = \frac{\sigma}{\varepsilon_0}(R + r)$$

20) A full wave rectifier circuit consists of two p-n junction diodes, a centre-tapped transformer, capacitor and a load resistance. Which of these components remove the ac ripple from the rectified output

a) Load resistance
b) A centre-tapped transformer
c) p-n junction diodes d) Capacitor

Ans:- (d) Theory based Capacitor in parallel removes the ac ripple from the rectified output.

21) In the circuit, $R_1 = R_2$. The value of E and R_1 are .... (E – EMF, R_1 – resistance)



(a) 180 V; 60 Ω (b) 120 V, 60 Ω
(c) 180 V, 10 Ω (d) none of these

Ans:- d

Expln- Applying Kirchoff's 2[nd] law in loop ABEFA

$$-IR - (I - 1.5)R + E = 0$$



(Contd.........)

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CET CHEMISTRY

21) Aqueous solution of a salt (A) forms a dense white precipitate with $BaCl_2$ solution. The precipitate dissolves in dilute HCl to produce a gas (B) which decolourises acidified $KMnO_4$ solution. A and B respectively are:

a) $BaSO_3$, H_2S b) $BaSO_4$, SO_2
c) $BaSO_3$, SO_2 d) $BaSO_4$, H_2S

Ans: (c)

The corresponding reactions are

$$BaCl_2 + Na_2SO_3 \rightarrow BaSO_3 + 2NaCl$$
$$BaSO_3 + 2HCl \rightarrow BaCl_2 + SO_2 + H_2O$$

Salt A is Na_2SO_3 and the dense white precipitate is $BaSO_3$ (Barium sulfite).

Gas B is SO_2. It decolourises acidified $KMnO_4$ solution because of its reducing nature.

The corresponding reaction is:

$$2KMnO_4 + 5SO_2 + 2H_2O \rightarrow K_2SO_4 + 2MnSO_4 + 2H_2SO_4$$

22) : The orbital nearest to the nucleus is

a) 4f b) 5d
c) 4s d) 7p

Ans: (c)

Expln:- Penetration power of the electron describes how much it is closer to the nucleus. Penetration power of an electron follows:

1S > 2S > 2P > 3S > 3P > 4S > 3d > 4P > 5S > 4d > 5P > 6S

Sub shell penetration power follows:

S > P > D > F

So, 4S orbital is closer to the nucleus among the other 4f, 5d, 7p orbital.

23) Schottky defect is observed in crystals when ....

a) some cations move from their lattice site to interstitial sites.
b) equal number of cations and anions are missing from the lattice.
c) some lattice sites are occupied by electrons.
d) some impurity is present in the lattice.

Ans:-b

24) Which of the following is true about the charge acquired by *p*-type semiconductors?

a) positive b) neutral
c) negative
d) depends on concentration of *p* impurity

Ans:- C

25) The aqueous solution of the following salt will have the lowest pH:

a) $NaClO$ b) $NaClO_4$
c) $NaClO_3$ d) $NaClO_2$

Ans: **(B)** $NaClO_4$

$$NaClO_4 \rightarrow Na^+ + ClO_4^-$$
$$ClO_4^- + H^+ \rightarrow HClO_4$$

Perchloric acid is the strongest acid, hence has lowest pH.

26) The total number of tetrahedral voids in the face centred unit cell is ....

a) 6 b) 8
c) 10 d) 12

Ans:-b

27) Which of the following point defects are shown by AgBr(s) crystals?

i) Schottky defect ii) Frenkel defect
iii) Metal excess defect
iv) Metal deficiency defect

a) (i) and (ii) b) (iii) and (iv)
c) (i) and (iii) d) (ii) and (iv)

Ans:-a

28) In which pair most efficient packing is present?

a) *hcp* and *bcc* b) *hcp* and *ccp*
c) *bcc* and *ccp*
d) *bcc* and simple cubic cell

Ans:-b

29) H_2O_2 is..........

a). An oxidizing agent b). A reducing agent
c). Both oxidizing and reducing agent
d) Neither oxidizing nor reducing agent

Answer: (c)

Expln:- H_2O_2 acts as both oxidizing and reducing agent oxygen of H_2O_2 (-1 oxidation state) is reduced to H_2O (–2 oxidation state) acts as an oxidizing agent. When the oxygen of H_2O_2 (-1 oxidation state) is oxidized to (0) oxidation state acts as a reducing agent.

30) The percentage of empty space in a body centered cubic arrangement is ....

a) 74 b) 68
c) 32 d) 26

Ans:-C

31) Which of the following statement is *not* true about the hexagonal close packing?

a) The coordination number is 12.
b) It has 74% packing efficiency.
c) Tetrahedral voids of the second layer are covered by the spheres of the third layer.
d) In this arrangement spheres of the fourth layer are exactly aligned with those of the first layer.

Ans:-d

32) In which of the following structures coordination number for cations and anions in the packed structure will be same?

a) Cl^- ion form *fcc* lattice and Na^+ ions occupy all octahedral voids of the unit cell.
b) Ca^{2+} ions form *fcc* lattice and F^- ions occupy all the eight tetrahedral voids of the unit cell.
c) O^{2-} ions form *fcc* lattice and Na^+ ions occupy all the eight tetrahedral voids of the unit cell.
d) S^{2-} ions form *fcc* lattice and Zn^{2+} ions go into alternate tetrahedral voids of the unit cell.

Ans:-a

ಐದು ರಾಜ್ಯಗಳ ಸ್ಥಳೀಯ ಪಕ್ಷಗಳ ಜೊತೆ ಮೈತ್ರಿಯ ಸಣ್ಣ ಪಾಲುದಾರನಾದ ಕಾಂಗ್ರೆಸ್ ಪಕ್ಷ

5 ರಾಜ್ಯಗಳ 65 ಕ್ಷೇತ್ರಗಳಲ್ಲಷ್ಟೇ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಮಲ್ಲಿಕಾರ್ಜುನ ಖರ್ಗೆ

ನವದೆಹಲಿ: ಲೋಕಸಭೆಗೆ ಶೇ 40ರಷ್ಟು ಸಂಸದರನ್ನು ಕಳುಹಿಸುವ ಐದು ರಾಜ್ಯಗಳನ್ನು ಗೆದ್ದವರು ದೆಹಲಿ ಗದ್ದುಗೆಗೆ ಏರುತ್ತಾರೆ ಎಂಬ ಪ್ರತೀತಿ ಇದೆ. ಈ ಹಿಂದಿನ ಎರಡು ಲೋಕಸಭಾ ಚುನಾವಣೆಗಳಲ್ಲಿ ಈ ಪಂಚ ರಾಜ್ಯಗಳಲ್ಲಿ ಕಾಂಗ್ರೆಸ್ ಸಾಧನೆ ಪೇಲವವಾಗಿತ್ತು. ಈ ಸಲ 'ಕೈ' ಪಾಳಯವು ಈ ರಾಜ್ಯಗಳಲ್ಲಿ 65 ಕ್ಷೇತ್ರಗಳಲ್ಲಷ್ಟೇ ಅದೃಷ್ಟ ಪರೀಕ್ಷೆಗೆ ಇಳಿದಿದೆ.

ದೊಡ್ಡ ರಾಜ್ಯಗಳಾದ ಉತ್ತರ ಪ್ರದೇಶ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಬಿಹಾರ ಹಾಗೂ ತಮಿಳುನಾಡಿನಲ್ಲಿ ಒಟ್ಟು 249 ಲೋಕಸಭಾ ಕ್ಷೇತ್ರಗಳಿವೆ. ಉತ್ತರ ಪ್ರದೇಶದಲ್ಲಿ ಎಸ್‌ಪಿ, ಪಶ್ಚಿಮ ಬಂಗಾಳದಲ್ಲಿ ಎಡ ಪಕ್ಷಗಳು, ಬಿಹಾರದಲ್ಲಿ ಆರ್‌ಜೆಡಿ, ಮಹಾರಾಷ್ಟ್ರದಲ್ಲಿ ಶಿವಸೇನಾ (ಠಾಕ್ರೆ ಬಣ) ಹಾಗೂ ಎನ್‌ಸಿಪಿ (ಶರದ್ ಪವಾರ್ ಬಣ) ಹಾಗೂ ತಮಿಳುನಾಡಿನಲ್ಲಿ ಡಿಎಂಕೆ ಜತೆಗೆ ಮೈತ್ರಿ ಮಾಡಿಕೊಂಡು ಕಾಂಗ್ರೆಸ್ ಚುನಾವಣೆ ಎದುರಿಸುತ್ತಿದೆ. ಬಹುತೇಕ ಎಲ್ಲ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷವು ಮೈತ್ರಿಯ ಕಿರಿಯ ಪಾಲುದಾರ. ಹೀಗಾಗಿ, ಪಕ್ಷವು ಸ್ಪರ್ಧಿಸಿರುವ ಕ್ಷೇತ್ರಗಳ ಸಂಖ್ಯೆ ಗಣನೀಯವಾಗಿ ಕಡಿಮೆ ಆಗಿದೆ.

ಆರು ರಾಜ್ಯಗಳಲ್ಲಿ ನೇರ ಹಣಾಹಣಿ: 2014 ಹಾಗೂ 2019ರ ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ಆರು ರಾಜ್ಯಗಳಲ್ಲಿ ನೇರ ಹಣಾಹಣಿ ಏರ್ಪಟ್ಟಿತ್ತು. ಮಧ್ಯ ಪ್ರದೇಶ (29 ಕ್ಷೇತ್ರಗಳು), ಗುಜರಾತ್ (26), ರಾಜಸ್ಥಾನ (25), ಛತ್ತೀಸಗಢ (11), ಉತ್ತರಾಖಂಡ (5) ಹಾಗೂ ಹಿಮಾಚಲ ಪ್ರದೇಶದಲ್ಲಿ (4) 100 ಕ್ಷೇತ್ರಗಳಿವೆ. ಕಳೆದ ಬಾರಿ ಕಮಲ ಪಾಳಯ 97ರಲ್ಲಿ ವಿಜಯಶಾಲಿಯಾಗಿತ್ತು. ಕಾಂಗ್ರೆಸ್ ಮೂರಕ್ಕೆ ಸಮಾಧಾನಪಟ್ಟಿತ್ತು. ಅಸ್ಸಾಂ ಹಾಗೂ ಹರಿಯಾಣದಲ್ಲಿ ಯಾವುದೇ ಪಕ್ಷದ ಜತೆಗೆ ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿಲ್ಲ. ಆದರೆ, ಬಿಜೆಪಿಯು ಪ್ರಾದೇಶಿಕ ಪಕ್ಷಗಳ ಜತೆಗೆ ದೋಸ್ತಿ ಮಾಡಿಕೊಂಡಿದೆ. ಕಾಂಗ್ರೆಸ್ ಪಕ್ಷ ಈ ಬಾರಿ ರಣತಂತ್ರವನ್ನು ಬದಲಿಸಿಕೊಂಡಿದೆ. ಈ ರಾಜ್ಯಗಳಲ್ಲಿ ಸಣ್ಣ ಹಾಗೂ ಪ್ರಾದೇಶಿಕ ಪಕ್ಷಗಳಿಗೆ ಒಂದಿಷ್ಟು ಸ್ಥಾನಗಳನ್ನು ಬಿಟ್ಟುಕೊಟ್ಟಿದೆ. ಇದರಿಂದಾಗಿ, ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶದಲ್ಲಿ ಬಿಜೆಪಿ ಪ್ರಬಲ ಸ್ಪರ್ಧೆ ನೀಡಬಹುದು ಎಂಬ ನಿರೀಕ್ಷೆಯಲ್ಲಿ 'ಕೈ' ಪಾಳಯ ಇದೆ.

ಎಲ್ಲೆಲ್ಲಿ ಕಾಂಗ್ರೆಸ್ ಸ್ಪರ್ಧೆ

ರಾಜ್ಯ	ಕ್ಷೇತ್ರಗಳು	ರಾಜ್ಯ	ಕ್ಷೇತ್ರಗಳು
ತಮಿಳುನಾಡು	9	ಪಶ್ಚಿಮ ಬಂಗಾಳ	13
ಕೇರಳ	16	ಬಿಹಾರ	9
ಕರ್ನಾಟಕ	28	ಹರಿಯಾಣ	9
ಆಂಧ್ರಪ್ರದೇಶ	23	ಪಂಜಾಬ್	13
ಗೋವಾ	2	ಹಿಮಾಚಲ ಪ್ರದೇಶ	4
ತೆಲಂಗಾಣ	17	ಉತ್ತರಾಖಂಡ	5
ಮಹಾರಾಷ್ಟ್ರ	17	ಜಮ್ಮು ಮತ್ತು ಕಾಶ್ಮೀರ	2
ಗುಜರಾತ್	24	ಲಡಾಖ್	1
ಮಧ್ಯಪ್ರದೇಶ	28	ಸಿಕ್ಕಿಂ	1
ಛತ್ತೀಸಗಢ	11	ಅಸ್ಸಾಂ	13
ಒಡಿಶಾ	21	ಅರುಣಾಚಲ ಪ್ರದೇಶ	2
ರಾಜಸ್ಥಾನ	22	ತ್ರಿಪುರ	1
ದೆಹಲಿ	3	ಮಿಜೋರಾಂ	1
ಉತ್ತರ ಪ್ರದೇಶ	17	ಮಣಿಪುರ	1
ಜಾರ್ಖಂಡ್	7	ನಾಗಾಲ್ಯಾಂಡ್	1

ಲೋಕಸಭಾ ಕ್ಷೇತ್ರ–ಅಗ್ರ ಐದು ರಾಜ್ಯಗಳು

ಉತ್ತರ ಪ್ರದೇಶ	ಮಹಾರಾಷ್ಟ್ರ	ಪಶ್ಚಿಮ ಬಂಗಾಳ	ಬಿಹಾರ	ತಮಿಳುನಾಡು
80	48	42	40	39

ರಾಯ್‌ಬರೇಲಿ: ಪ್ರಿಯಾಂಕಾ ನಿರಾಸಕ್ತಿ

ಉತ್ತರ ಪ್ರದೇಶದ ರಾಯ್‌ಬರೇಲಿ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ಆಸಕ್ತ–ಳಾಗಿಲ್ಲ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಪಕ್ಷದ ಹಿರಿಯ ನಾಯಕರಿಗೆ ತಿಳಿಸಿದ್ದಾರೆ. ಅವರ ಮನವೊಲಿಸುವ ಪ್ರಯತ್ನವನ್ನು ಕಾಂಗ್ರೆಸ್ ನಾಯಕರು ಮುಂದುವರಿಸಿದ್ದಾರೆ.

ರಾಯ್‌ಬರೇಲಿ ಹಾಗೂ ಅಮೇಠಿ ಲೋಕಸಭಾ ಕ್ಷೇತ್ರಗಳಿಗೂ ನೆಹರೂ, ಗಾಂಧಿ ಕುಟುಂಬಕ್ಕೂ ಎಲ್ಲಿಲ್ಲದ ನಂಟು. 2019ರ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರು ರಾಯ್‌ಬರೇಲಿಯಲ್ಲಿ ಗೆದ್ದಿದ್ದರು. ಪುತ್ರ ರಾಹುಲ್ ಗಾಂಧಿ ಅವರು ಅಮೇಠಿಯಲ್ಲಿ ಸೋತಿದ್ದರು. ಈ ಸಲ ಅಮೇಠಿಯಲ್ಲಿ ಕೇಂದ್ರ ಸಚಿವೆ ಸ್ಮೃತಿ ಇರಾನಿ ವಿರುದ್ಧ ತೊಡೆ ತಟ್ಟಲು ರಾಹುಲ್ ಸಜ್ಜಾಗಿದ್ದಾರೆ. ಆದರೆ, ರಾಯ್‌ಬರೇಲಿಯದ್ದೇ ಕಾಂಗ್ರೆಸ್‌ಗೆ ಸಮಸ್ಯೆ.

ವಯಸ್ಸಿನ ಕಾರಣಕ್ಕೆ ಸೋನಿಯಾ ಅವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಮೊದಲೇ ಸ್ಪಷ್ಟಪಡಿಸಿದ್ದರು. ಅವರು ರಾಜಸ್ಥಾನದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ರಾಯ್‌ಬರೇಲಿಯಲ್ಲಿ ಪ್ರಿಯಾಂಕಾ ಸ್ಪರ್ಧಿಸಬೇಕು ಎಂದು 'ಕೈ'ನಾಯಕರ ಇರಾದೆ. ಇದರಿಂದ, ರಾಜ್ಯದ ಕೆಲವು ಕ್ಷೇತ್ರದಲ್ಲಿ ಪಕ್ಷಕ್ಕೆ ಅನುಕೂಲವಾಗಲಿದೆ ಎಂದು ಅವರ ಆಲೋಚನೆ. ಆದರೆ, ಚುನಾವಣೆಯಲ್ಲಿ ಸ್ಪರ್ಧಿಸಲು ಪ್ರಿಯಾಂಕಾ ಬಿಲ್‌ಕುಲ್ ಒಪ್ಪುತ್ತಿಲ್ಲ.

ಅಮೇಠಿಯಿಂದ ಸ್ಪರ್ಧೆ: ಪಕ್ಷದ ನಿರ್ಧಾರಕ್ಕೆ ಬದ್ಧ–ರಾಹುಲ್

ಗಾಜಿಯಾಬಾದ್(ಪಿಟಿಐ): ಪ್ರಸಕ್ತ ಲೋಕಸಭೆ ಚುನಾವಣೆಯಲ್ಲಿ ಉತ್ತರ ಪ್ರದೇಶದ ಅಮೇಠಿಯಿಂದ ತಾವು ಸ್ಪರ್ಧಿಸುವ ಕುರಿತು ಹಬ್ಬಿರುವ ವದಂತಿಗಳಿಗೆ ಬುಧವಾರ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ಈ ಬಗ್ಗೆ ಪಕ್ಷದ ಆದೇಶದಂತೆ ನಡೆಯುವೆ' ಎಂದು ಹೇಳಿದ್ದಾರೆ.

ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರೊಂದಿಗೆ ಜಂಟಿ ಸುದ್ದಿಗೋಷ್ಠಿ ನಡೆಸಿದ ವೇಳೆ ಈ ಕುರಿತು ಪತ್ರಕರ್ತರು ಕೇಳಿದ ಪ್ರಶ್ನೆಗೆ ಅವರು ಹೀಗೆ ಉತ್ತರಿಸಿದ್ದಾರೆ.

'ವಯನಾಡ್ ಜೊತೆಗೆ ಅಮೇಠಿಯಿಂದಲೂ ಕಣಕ್ಕಿಳಿಯುತ್ತೀರಾ' ಎಂಬ ಪ್ರಶ್ನೆಗೆ, 'ನಾನು ಅಮೇಠಿಯಿಂದ ಸ್ಪರ್ಧಿಸುವ ಬಗ್ಗೆ ಪಕ್ಷದ ಕೇಂದ್ರ ಚುನಾವಣಾ ಸಮಿತಿ (ಸಿಇಸಿ) ನಿರ್ಧಾರ ತೆಗೆದುಕೊಳ್ಳುತ್ತದೆ' ಎಂದಿದ್ದಾರೆ.

ಶೀಘ್ರವೇ 'ಇಂಡಿಯಾ' ಗ್ಯಾರಂಟಿ ಪ್ರಕಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಪುಲ್ವಾಮಾ ಭಯೋತ್ಪಾದಕ ದಾಳಿ ಮತ್ತು ಇತರ ರಾಷ್ಟ್ರೀಯ ಭದ್ರತಾ ಲೋಪಗಳಿಗೆ ಸಂಬಂಧಿಸಿದಂತೆ ಶ್ವೇತಪತ್ರ ಹೊರಡಿಸುವುದು, ಎಲ್ಲ ಕುಟುಂಬಗಳಿಗೆ 200 ಯೂನಿಟ್ ಉಚಿತ ವಿದ್ಯುತ್, ರೈತರಿಗೆ ತಿಂಗಳಿಗೆ ₹ 1,000 ನೇರ ನಗದು ವರ್ಗಾವಣೆ, ಕೇಂದ್ರೀಯ ಸಂಸ್ಥೆಗಳ ಅಧಿಕಾರ ಮೊಟಕು ಮತ್ತು ಚುನಾವಣಾ ಬಾಂಡ್‌ಗಳ ಮೇಲಿನ ಎಸ್‌ಐಟಿ ತನಿಖೆ ಸೇರಿದಂತೆ ಹಲವು ಖಾತರಿಗಳನ್ನು 'ಇಂಡಿಯಾ' ಮೈತ್ರಿಕೂಟ ಶೀಘ್ರದಲ್ಲಿಯೇ ಪ್ರಕಟಿಸಲಿದೆ ಎಂದು ಮೂಲಗಳು ತಿಳಿಸಿವೆ.

'ಅಗ್ನಿವೀರ' ನೇಮಕಾತಿ ರದ್ದು, ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಕಾನೂನು ಖಾತರಿ, ಸರ್ಕಾರಿ ವಲಯದಲ್ಲಿ ವರ್ಷದಲ್ಲಿ 30 ಲಕ್ಷ ಖಾಲಿ ಹುದ್ದೆಗಳ ಭರ್ತಿ, ನಗರ ಉದ್ಯೋಗ ಖಾತರಿ ಯೋಜನೆ, ಜಾತಿ ಗಣತಿ, ಮೀಸಲು ಕೋಟಾ ಮಿತಿ (ಶೇ 50) ಹೆಚ್ಚಳ, ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ತಕ್ಷಣದಿಂದಲೇ ಮಹಿಳೆಯರಿಗೆ ಶೇ 33ರಷ್ಟು ಮೀಸಲು ಜಾರಿ ವಿಷಯಗಳು 'ಇಂಡಿಯಾ' ಕೂಟದ ಖಾತರಿಯ ಭಾಗವಾಗುವ ಸಾಧ್ಯತೆಗಳಿವೆ.

ಈ ಕರಡನ್ನು ಈಗಾಗಲೇ ಮೈತ್ರಿಕೂಟದ ವಿವಿಧ ಪಕ್ಷಗಳಿಗೆ ನೀಡಲಾಗಿದ್ದು, ಆ ಪಕ್ಷಗಳ ಪ್ರಮುಖ ಭರವಸೆಗಳನ್ನು ಒಳಗೊಂಡಿರುವುದರಿಂದ ಒಮ್ಮತ ಮೂಡಿದೆ. ಖಾತರಿಗಳನ್ನು ಉದ್ಯೋಗ, ಸಾಮಾಜಿಕ ನ್ಯಾಯ, ಸಾಮಾಜಿಕ ಭದ್ರತೆ, ಆರೋಗ್ಯ ಮತ್ತು ಶಿಕ್ಷಣ, ರೈತರು, ರಾಷ್ಟ್ರೀಯ ಭದ್ರತೆ ಹಾಗೂ ನಾಗರಿಕರು ಎಂದು ಏಳು ವಿಭಾಗಗಳಾಗಿ ವಿಂಗಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಪ್ರಾಮಾಣಿಕ ಉದ್ಯಮಿಗಳು ಮತ್ತು ರಾಜಕೀಯ ವಿರೋಧಿಗಳಿಗೆ ಕಿರುಕುಳ ನೀಡಲು ಕೇಂದ್ರೀಯ ಸಂಸ್ಥೆಗಳಾದ ಜಾರಿ ನಿರ್ದೇಶನಾಲಯ, ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆಯನ್ನು ಕೇಂದ್ರ ಸರ್ಕಾರ ಬಳಸಿಕೊಳ್ಳುತ್ತಿದೆ ಎಂದು ವಿರೋಧ ಪಕ್ಷಗಳು ಪದೇ ಪದೇ ಆರೋಪಿಸಿವೆ. 'ಇಂಡಿಯಾ' ಕೂಟವು ಈ ಸಂಸ್ಥೆಗಳ ಅಧಿಕಾರವನ್ನು ಮೊಟಕುಗೊಳಿಸುವ ಭರವಸೆಯನ್ನು ನೀಡಲಿದೆ ಎಂದು ಮೂಲಗಳು ಹೇಳಿವೆ.

ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದಂತೆ ಎಸ್‌ಐಟಿ ತನಿಖೆಗೆ ಆದೇಶಿಸುವುದರ ಜತೆಗೆ ಕಠಿಣ ಕ್ರಮಗಳ ಕುರಿತು ಪರಿಶೀಲನೆ, ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣದ ಮರುಪರಿಶೀಲನೆ ಹಾಗೂ ಜಿಎಸ್‌ಟಿ ವ್ಯವಸ್ಥೆಯನ್ನು ಉತ್ತಮಗೊಳಿಸುವ ಖಾತರಿಯನ್ನು ನೀಡುವ ಸಾಧ್ಯತೆ ಇದೆ.

ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವರ್ಷಕ್ಕೆ ಉಚಿತವಾಗಿ ಆರು ಎಲ್‌ಪಿಜಿ ಸಿಲಿಂಡರ್, ಹಳೆ ಪಿಂಚಣಿ ಯೋಜನೆ ಮರುಜಾರಿ ಸೇರಿ ವಿವಿಧ ಖಾತರಿ ಘೋಷಿಸುವ ಸಾಧ್ಯತೆಗಳಿವೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಭರದ ಸಿದ್ಧತೆ

ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನವು ಏಪ್ರಿಲ್ 19ರಂದು ನಡೆಯಲಿದ್ದು, ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಚುನಾವಣಾ ಅಧಿಕಾರಿಗಳು ಬುಧವಾರ ವಿದ್ಯುನ್ಮಾನ ಮತಯಂತ್ರಗಳನ್ನು ವಾಯುಪಡೆಯ ಹೆಲಿಕಾಪ್ಟರ್‌ನಲ್ಲಿ ಸಾಗಿಸಿದರು –ಪಿಟಿಐ ಚಿತ್ರ

'ಬಿಜೆಪಿ 150 ಸ್ಥಾನಕ್ಕೆ ಕುಸಿಯಲಿದೆ'

• ಶೆಮಿನ್ ಜಾಯ್

ಗಾಜಿಯಾಬಾದ್: 'ಪ್ರಸಕ್ತ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ 150 ಸ್ಥಾನಗಳಲ್ಲಿ ಮಾತ್ರ ಗೆಲ್ಲಲಿದೆ' ಎಂದು ಭವಿಷ್ಯ ನುಡಿದಿರುವ ವಿಪಕ್ಷಗಳ ನಾಯಕರಾದ ರಾಹುಲ್ ಗಾಂಧಿ ಹಾಗೂ ಅಖಿಲೇಶ್ ಯಾದವ್, 'ಕೊಳ್ಳೆ ಹೊಡೆಯುವುದು ಹಾಗೂ ಸುಳ್ಳುಗಳನ್ನು ಹೇಳುವುದೇ ಕೇಸರಿ ಪಕ್ಷದ ಗುರುತಾಗಿದೆ' ಎಂದು ಬುಧವಾರ ವಾಗ್ದಾಳಿ ನಡೆಸಿದ್ದಾರೆ.

ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಇದೇ ಮೊದಲ ಬಾರಿಗೆ ಜಂಟಿ ಸುದ್ದಿಗೋಷ್ಠಿ ನಡೆಸಿದ ಉಭಯ ನಾಯಕರು, 'ಚುನಾವಣಾ ಬಾಂಡ್‌ಗಳ ರದ್ದತಿ, ರೈತರು ಮತ್ತು ಯುವಕರು ಎದುರಿಸುತ್ತಿರುವ ಸಮಸ್ಯೆಗಳು ಈ ಚುನಾವಣೆಯ ವಿಷಯಗಳಾಗಿವೆ. ಮತ ವಿಭಜನೆಯಾಗುವುದನ್ನು ತಡೆದು, ಒಂದೇ ಒಂದು ಮತ ಕೂಡ ಬಿಜೆಪಿಗೆ ಬೀಳುವುದಿಲ್ಲ ಎಂಬುದನ್ನು ಖಾತ್ರಿಪಡಿಸುವಂತೆ ನಮ್ಮ ಕಾರ್ಯಕರ್ತರಿಗೆ ಹೇಳಿದ್ದೇವೆ' ಎಂದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ,'ಬಿಜೆಪಿ 180 ಸ್ಥಾನಗಳಲ್ಲಿ ಗೆಲ್ಲುತ್ತದೆ ಎಂದು 15–20 ದಿನಗಳ ಹಿಂದೆ ನನಗೆ ಅನಿಸಿತ್ತು. ಆದರೆ, ಈಗ ಆ ಪರಿಸ್ಥಿತಿ ಇಲ್ಲ. ಬಿಜೆಪಿ 150 ಸ್ಥಾನಗಳನ್ನು ಗೆಲ್ಲಬಹುದಷ್ಟೆ' ಎಂದು ಹೇಳಿದರು.

'ಪ್ರಧಾನಿ ಮೋದಿ ಅವರು ಇತ್ತೀಚೆಗೆ ಮಾಧ್ಯಮವೊಂದಕ್ಕೆ ನೀಡಿರುವ 'ದೀರ್ಘ' ಮತ್ತು 'ಪೂರ್ವ ಯೋಜಿತ' ಸಂದರ್ಶನದಲ್ಲಿ ಚುನಾವಣಾ ಬಾಂಡ್ ಯೋಜನೆಯನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಅಂತಿಮವಾಗಿ ಇದೊಂದು ವ್ಯರ್ಥ ಕಸರತ್ತು ಎಂಬುದು ಗೊತ್ತಾಯಿತು' ಎಂದು ಟೀಕಿಸಿದರು.

'ರಾಜಕೀಯ ಪಕ್ಷಗಳಿಗೆ ನೀಡುವ ದೇಣಿಗೆಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಚುನಾವಣಾ ಬಾಂಡ್ ಯೋಜನೆಯನ್ನು ಜಾರಿಗೊಳಿಸಲಾಗಿತ್ತು ಎಂದು ಮೋದಿ ಆ ಸಂದರ್ಶನದಲ್ಲಿ ಹೇಳಿದ್ದಾರೆ. ಅವರು ಹೇಳುವುದೇ ನಿಜವಿದ್ದಲ್ಲಿ, ಈ ಯೋಜನೆಯನ್ನು ಸುಪ್ರೀಂ ಕೋರ್ಟ್ ಯಾಕೆ ರದ್ದುಪಡಿಸಿತು' ಎಂದು ಪ್ರಶ್ನಿಸಿದರು.

'ಈ ಯೋಜನೆಯಲ್ಲಿ ಪಾರದರ್ಶಕತೆಯನ್ನು ತರಲು ಬಯಸಿದ್ದಲ್ಲಿ, ಬಿಜೆಪಿ ದೇಣಿಗೆ ನೀಡಿದವರ ಹೆಸರುಗಳನ್ನು, ಯಾವ ದಿನಾಂಕದಂದು ಅವರು ನಿಮಗೆ ಹಣ ನೀಡಿದ್ದರು ಎಂಬ ಮಾಹಿತಿಯನ್ನು ಯಾಕೆ ಮುಚ್ಚಿಟ್ಟಿದ್ದೀರಿ' ಎಂದು ಪ್ರಶ್ನಿಸಿದ ಅವರು, 'ಚುನಾವಣಾ ಬಾಂಡ್ ಯೋಜನೆ ವಿಶ್ವದ ಅತ್ಯಂತ ದೊಡ್ಡ ಸುಲಿಗೆ ಯೋಜನೆಯಾಗಿದೆ' ಎಂದರು.

'ಎಲ್ಲ ಉದ್ಯಮಿಗಳು ಈ ಯೋಜನೆಯನ್ನು ಅರ್ಥ ಮಾಡಿಕೊಂಡಿದ್ದಾರೆ. ಈ ಯೋಜನೆ ಬಗ್ಗೆ ಅವರು (ಪ್ರಧಾನಿ ಮೋದಿ) ಎಷ್ಟೇ ಸ್ಪಷ್ಟೀಕರಣ ನೀಡಿದರೂ ಯಾವುದೇ ಪರಿಣಾಮ ಬೀರುವುದಿಲ್ಲ. ಪ್ರಧಾನಿ ಮೋದಿ ಭ್ರಷ್ಟಾಚಾರದ ಚಾಂಪಿಯನ್' ಎಂಬುದು ಇಡೀ ದೇಶಕ್ಕೆ ಗೊತ್ತು' ಎಂದು ರಾಹುಲ್ ಗಾಂಧಿ ಹೇಳಿದರು.

'ಈ ಬಾರಿಯ ಚುನಾವಣೆ ಆರ್‌ಎಸ್‌ಎಸ್–ಬಿಜೆಪಿ ಮತ್ತು 'ಇಂಡಿಯಾ' ಮೈತ್ರಿಕೂಟದ ಸಿದ್ಧಾಂತಗಳ ನಡುವಿನ ಹೋರಾಟವಾಗಿದೆ. ದೇಶ ಎದುರಿಸುತ್ತಿರುವ ದೊಡ್ಡ ಸಮಸ್ಯೆಗಳ ಬಗ್ಗೆ ಬಿಜೆಪಿಯಾಗಲಿ ಅಥವಾ ಪ್ರಧಾನಿಯಾಗಲಿ ಮಾತನಾಡುತ್ತಿಲ್ಲ' ಎಂದು ರಾಹುಲ್ ಗಾಂಧಿ ಅವರು ವಾಗ್ದಾಳಿ ನಡೆಸಿದರು.

ಬದಲಾವಣೆ ಗಾಳಿ ಬೀಸಲು ಆರಂಭವಾಗಲಿದೆ: ಅಖಿಲೇಶ್

'ಉತ್ತರ ಪ್ರದೇಶದಲ್ಲಿ ಈ ಬಾರಿ ಬದಲಾವಣೆಯ ಗಾಳಿ ಬೀಸಲು ಆರಂಭವಾಗಲಿದೆ. ಪಶ್ಚಿಮ ಭಾಗದ ಗಾಜಿಯಾಬಾದ್‌ನಿಂದ ಪೂರ್ವದಲ್ಲಿರುವ ಗಾಜಿಪುರವರೆಗೆ ಬೀಸಲಿರುವ ಈ ಬದಲಾವಣೆ ಗಾಳಿಯು ಬಿಜೆಪಿಗೆ ದೊಡ್ಡದಾದ ಬೀಳ್ಕೊಡುಗೆಯನ್ನೇ ನೀಡಲಿದೆ' ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಹೇಳಿದರು.

'ಬಿಜೆಪಿಯು ಎಲ್ಲ ಭ್ರಷ್ಟ ವ್ಯಕ್ತಿಗಳಿಂದ ತುಂಬಿದ ಗೋದಾಮಿನಂತಾಗಿದೆ. ಬಿಜೆಪಿ ನಾಯಕರು ಭ್ರಷ್ಟರನ್ನು ಮಾತ್ರ ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುತ್ತಿಲ್ಲ. ಅವರು ಭ್ರಷ್ಟಾಚಾರದ ಮೂಲಕ ಗಳಿಸಿರುವ ಹಣವನ್ನು ಸಹ ತಾವೇ ಇಟ್ಟುಕೊಳ್ಳುತ್ತಿದ್ದಾರೆ' ಎಂದು ಟೀಕಿಸಿದರು.

'ವಿಪಕ್ಷಗಳ ಒಕ್ಕೂಟದಲ್ಲಿ ಕುಟುಂಬವಾದವೇ ವಿಜೃಂಭಿಸುತ್ತಿದೆ' ಎಂಬ ಮೋದಿ ಅವರ ಟೀಕೆ ಕುರಿತ ಪ್ರಶ್ನೆಗೆ, 'ಹಾಗಾದರೆ, ಈಗ, ಬಿಜೆಪಿಯವರು ಯಾವ ಕುಟುಂಬದ ಸದಸ್ಯರಿಗೂ ಟಿಕೆಟ್ ನೀಡುವುದಿಲ್ಲ ಇಲ್ಲವೇ ಅವರಿಂದ ಮತ ಕೇಳುವುದಿಲ್ಲ ಎಂಬ ಪ್ರತಿಜ್ಞೆ ಕೈಗೊಳ್ಳಬೇಕು' ಎಂದು ಪ್ರತಿಕ್ರಿಯಿಸಿದರು.

ನಾಳೆಯಿಂದ ಪ್ರಚಾರ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಶುಕ್ರವಾರದಿಂದ ಜಂಟಿಯಾಗಿ ಪ್ರಚಾರ ಕಾರ್ಯ ಆರಂಭಿಸಲಿದ್ದಾರೆ.

ಅಮ್ರೋಹ ಕ್ಷೇತ್ರದಿಂದ ಮತ ಯಾಚನೆ ಮಾಡಲಿರುವ ಉಭಯ ನಾಯಕರು, ಕಾಂಗ್ರೆಸ್ ಅಭ್ಯರ್ಥಿ ಡ್ಯಾನಿಶ್ ಅಲಿ ಅವರ ಪ್ರಚಾರಕ್ಕೆ ಚಾಲನೆ ನೀಡಲಿದ್ದಾರೆ. ಬಿಎಸ್‌ಪಿ ತೊರೆದು ಕಾಂಗ್ರೆಸ್ ಸೇರಿರುವ ಅಲಿ, ಮರು ಆಯ್ಕೆ ಬಯಸಿದ್ದಾರೆ. ಇಲ್ಲಿ ಏಪ್ರಿಲ್ 26ರಂದು ಮತದಾನ ನಡೆಯಲಿದೆ.

ಎನ್‌ಡಿಎ–ಇಂಡಿಯಾಗೆ ಪ್ರಾಬಲ್ಯ ಉಳಿಸಿಕೊಳ್ಳುವ ಸವಾಲು

ಮೊದಲ ಹಂತ: ನಾಳೆ ಮತದಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಯ ಮೊದಲ ಹಂತದ ಚುನಾವಣೆ ಇದೇ ಶುಕ್ರವಾರ ನಡೆಯಲಿದ್ದು, ಅಂದು 102 ಕ್ಷೇತ್ರಗಳಿಗೆ ಮತದಾನ ನಡೆಯಲಿದೆ. ಐದು ವರ್ಷಗಳ ಹಿಂದೆ ಈ ಕ್ಷೇತ್ರಗಳಲ್ಲಿ ನಡೆದ ಚುನಾವಣೆಯಲ್ಲಿ ಸಾಧಿಸಿದ್ದ ಪ್ರಾಬಲ್ಯ ಉಳಿಸಿಕೊಳ್ಳುವ ಮತ್ತು ಫಲಿತಾಂಶ ಉತ್ತಮಪಡಿಸಿಕೊಳ್ಳುವ ಸವಾಲು ಆಡಳಿತಾರೂಢ ಎನ್‌ಡಿಎ ಮತ್ತು ವಿಪಕ್ಷಗಳ ಮೈತ್ರಿಕೂಟ 'ಇಂಡಿಯಾ'ದ ಮುಂದಿದೆ.

ಈ ಬಾರಿಯ ಮೊದಲ ಹಂತದ ಮತದಾನದಲ್ಲಿ, ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದ ಮಿತ್ರಕೂಟದ ಹಾದಿಗೆ ಎಐಎಡಿಎಂಕೆ ಮತ್ತು ಬಿಜೆಪಿಯಿಂದ ಯಾವುದೇ ಸವಾಲು ಎದುರಾಗದಿದ್ದರೆ ಕಳೆದ ಬಾರಿಯಂತೆಯೇ 38–1 ಫಲಿತಾಂಶ ಮರುಕಳಿಸುತ್ತದೆ ಎನ್ನುವ ವಿಶ್ವಾಸದಲ್ಲಿ 'ಇಂಡಿಯಾ' ಮೈತ್ರಿಕೂಟವಿದೆ.

ಅದೇ ರೀತಿ, 2014 ಮತ್ತು 2019ರಲ್ಲಿ ರಾಜಸ್ಥಾನದಲ್ಲಿ ಸಂಪೂರ್ಣ ಸೋತಿರುವ ಕಾಂಗ್ರೆಸ್ ಈ ಬಾರಿ ರಾಜಸ್ಥಾನದಲ್ಲಿ ತನ್ನ ಖಾತೆ ತೆರೆಯುವ ನಿರೀಕ್ಷೆ ಹೊಂದಿದೆ. ರಾಜಸ್ಥಾನದಲ್ಲಿ ಈಗ ನಡೆಯಲಿರುವ ಚುನಾವಣೆಯ 12 ಸ್ಥಾನಗಳಲ್ಲಿ, ಬಿಜೆಪಿ ಕಳೆದ ಸಲ 11 ಸ್ಥಾನಗಳಲ್ಲಿ ಗೆದ್ದಿದ್ದರೆ, ಉಳಿದ ಒಂದು ಸ್ಥಾನವನ್ನು ಆರ್‌ಎಲ್‌ಪಿ ಗೆದ್ದುಕೊಂಡಿತ್ತು.

ಮುಖ್ಯಾಂಶಗಳು

- ಬಹಿರಂಗ ಪ್ರಚಾರಕ್ಕೆ ತೆರೆ, ಮನೆ–ಮನೆ ಪ್ರಚಾರಕ್ಕೆ ಮಾತ್ರ ಅವಕಾಶ
- ತಮಿಳುನಾಡಿನಲ್ಲಿ ಎಐಎಡಿಎಂಕೆ ಮೈತ್ರಿಯಿಲ್ಲದೆ ಸ್ವತಂತ್ರವಾಗಿ ಸ್ಪರ್ಧೆ

ನಾಗೌರ್‌ನಿಂದ ಮರು ಆಯ್ಕೆ ಬಯಸುತ್ತಿರುವ ಹಿಂದಿನ ಎನ್‌ಡಿಎ ಮಿತ್ರ ಬೇನಿವಾಲ್ ಈಗ ಕಾಂಗ್ರೆಸ್ ನೇತೃತ್ವದ ಮೈತ್ರಿ ಕೂಟದಲ್ಲಿದ್ದಾರೆ. ಇದರಲ್ಲಿ ಸಿಪಿಎಂ ಸಹ ಇದ್ದು, ಈ ಪಕ್ಷದ ಅಮ್ರ ರಾಮ್ ಸಿಕರ್‌ನಿಂದ ಸ್ಪರ್ಧಿಸುತ್ತಿದ್ದಾರೆ. ಟಿಕೆಟ್ ನಿರಾಕರಿಸಿದ ನಂತರ ಬಿಜೆಪಿ ತೊರೆದಿರುವ ಹಾಲಿ ಸಂಸದ ರಾಹುಲ್ ಕಸ್ವಾನ್ ಅವರು ಕಾಂಗ್ರೆಸ್ ಟಿಕೆಟ್ ಮೇಲೆ ಚುರು ಕ್ಷೇತ್ರದಿಂದ ಕಣದಲ್ಲಿದ್ದಾರೆ.

ಉತ್ತರಪ್ರದೇಶದಲ್ಲಿ 8 ಸ್ಥಾನಗಳಲ್ಲಿ, ಬಿಜೆಪಿ ಮತ್ತು ಬಿಎಸ್‌ಪಿ ತಲಾ ಮೂರು ಸ್ಥಾನಗಳನ್ನು ಮತ್ತು ಎಸ್‌ಪಿ ಒಂದರಲ್ಲಿ ಗೆದ್ದಿದ್ದವು. ಆದರೆ ನಂತರ ರಾಂಪುರದಲ್ಲಿ ನಡೆದ ಉಪಚುನಾವಣೆಯಲ್ಲಿ ಬಿಜೆಪಿಯು ಎಸ್‌ಪಿ ಅಭ್ಯರ್ಥಿಯನ್ನು ಸೋಲಿಸಿತು. ಇಂಡಿಯಾ ಮೈತ್ರಿಕೂಟ ಸಹಾರನ್‌ಪುರ ಮತ್ತು ಕೈರಾನಾ ಮತ್ತು ಪಿಲಿಭಿತ್‌ನಲ್ಲಿ ಉತ್ತಮ ಪ್ರದರ್ಶನದ ನಿರೀಕ್ಷೆಯಲ್ಲಿದೆ. ಅಲ್ಲಿ ಬಿಜೆಪಿ ವರುಣ್ ಗಾಂಧಿಗೆ ಟಿಕೆಟ್ ನಿರಾಕರಿಸಿದೆ. ಆದರೆ ಬಿಎಸ್‌ಪಿಯ ತಂತ್ರಗಾರಿಕೆಯ ಅಭ್ಯರ್ಥಿಗಳು ಎರಡೂ ಕಡೆಯ ಅಭ್ಯರ್ಥಿಗಳ ಮೇಲೆ ಹೇಗೆ ಪ್ರಭಾವ ಬೀರುತ್ತಾರೆ ಎಂಬುದನ್ನು ಕಾದುನೋಡಬೇಕು.



ಉತ್ತರಾಖಂಡ (5) ಮತ್ತು ಪಶ್ಚಿಮ ಬಂಗಾಳದಲ್ಲಿ (3) ಚುನಾವಣೆ ನಡೆಯಲಿರುವ ಎಲ್ಲ ಎಂಟು ಸ್ಥಾನಗಳನ್ನು ಬಿಜೆಪಿಯು ಗೆದ್ದಿತ್ತು. ಮೊದಲ ಹಂತದಲ್ಲಿ ಐದು ಸ್ಥಾನಗಳಿಗೆ (ಬಿಜೆಪಿ-3, ಕಾಂಗ್ರೆಸ್-1, ಶಿವಸೇನೆ-1) ಚುನಾವಣೆ ನಡೆಯಲಿರುವ ಮತ್ತೊಂದು ರಾಜ್ಯ ಮಹಾರಾಷ್ಟ್ರದತ್ತಲೂ ಎರಡೂ ಕೂಟಗಳು ತೀವ್ರ ಗಮನ ಹರಿಸಿವೆ.

ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆ: ಎಂಟು ಮಂದಿ ಕೇಂದ್ರ ಸಚಿವರು, ಇಬ್ಬರು ಮಾಜಿ ಮುಖ್ಯಮಂತ್ರಿಗಳು ಹಾಗೂ ಒಬ್ಬ ಮಾಜಿ ರಾಜ್ಯಪಾಲ ಚುನಾವಣಾ ಕಣದಲ್ಲಿ ಇದ್ದಾರೆ.

ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ನಾಗ್ಪುರ ಕ್ಷೇತ್ರದಿಂದ ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಜಿತೇಂದ್ರ ಸಿಂಗ್ ತೋಮರ್ ಅವರು ಉಧಂಪುರದಿಂದ ಹ್ಯಾಟ್ರಿಕ್ ಗೆಲುವು ದಕ್ಕಿಸಿಕೊಳ್ಳುವ ನಿರೀಕ್ಷೆಯಲ್ಲಿ ಇದ್ದಾರೆ.

ಸಂಕ್ಷಿಪ್ತ ಸುದ್ದಿ

ಏಕನಾಥ ಖಡಸೆಗೆ ಬೆದರಿಕೆ ಕರೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಮಾಜಿ ಸಚಿವ ಏಕನಾಥ ಖಡಸೆ ಅವರಿಗೆ ಬೆದರಿಕೆ ಕರೆ ಬಂದಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ತನಿಖೆ ಆರಂಭಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದರು.

ಸೋಮವಾರ ಅಪರಿಚಿತ ನಂಬರ್‌ನಿಂದ ಅವರಿಗೆ ಬೆದರಿಕೆ ಕರೆ ಬಂದಿದೆ. ಈ ಬೆನ್ನಲ್ಲೇ ಅವರು ಜಲಗಾಂವ್ ಜಿಲ್ಲೆಯ ಮುಕ್ತಾಯೀನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ ಎಂದು ಹೇಳಿದರು.

'ಕರೆ ಮಾಡಿದ್ದ ಆರೋಪಿ ಭೂಗತ ಪಾತಕಿ ದಾವೂದ್ ಇಬ್ರಾಹಿಂ ಮತ್ತು ಛೋಟಾ ಶಕೀಲ್ ಅವರ ಹೆಸರನ್ನು ಉಲ್ಲೇಖಿಸಿದ್ದ' ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ರಸ್ತೆ ಅಪಘಾತ: 10 ಮಂದಿ ಸಾವು

ನಡಿಯಾದ್, ಗುಜರಾತ್ (ಪಿಟಿಐ): ಖೇಡಾ ಜಿಲ್ಲೆಯಲ್ಲಿ ಅಹಮದಾಬಾದ್–ವಡೋದರ ಎಕ್ಸ್‌ಪ್ರೆಸ್ ವೇಯಲ್ಲಿ ಕಾರೊಂದು ಟ್ರಕ್‌ಗೆ ಬುಧವಾರ ಅಪ್ಪಳಿಸಿದ್ದು, ಕಾರಿನಲ್ಲಿದ್ದ 10 ಮಂದಿ ಮೃತಪಟ್ಟಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಕಾರು ವಡೋದರದಿಂದ ಅಹಮದಾಬಾದ್‌ಗೆ ಸಾಗುತ್ತಿತ್ತು. ರಸ್ತೆಬದಿಯಲ್ಲಿ ನಿಲುಗಡೆ ಮಾಡಲಾಗಿದ್ದ ಟ್ರಕ್‌ಗೆ ಗುದ್ದಿದ ಪರಿಣಾಮ ಅವಘಡ ಸಂಭವಿಸಿದೆ. ಎಂದು ಪೊಲೀಸರು ತಿಳಿಸಿದ್ದಾರೆ.

ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ರಾಮ ನವಮಿ ಸಂಭ್ರಮ ಹೆಚ್ಚಿಸಿದ ಯಾಂತ್ರಿಕ ವ್ಯವಸ್ಥೆ

ಬಾಲರಾಮನಿಗೆ 'ಸೂರ್ಯ ತಿಲಕ'ದ ಗೌರವ

ಅಯೋಧ್ಯಾ(ಪಿಟಿಐ): ಬಾಲರಾಮನ ಹಣೆಗೆ ಸೂರ್ಯನ ಕಿರಣಗಳು ಸ್ಪರ್ಶಿಸುವ ಮೂಲಕ 'ಸೂರ್ಯ ತಿಲಕ' ವನ್ನಿಟ್ಟ ಸಂಭ್ರಮದ ಘಳಿಗೆಗೆ ಅಯೋಧ್ಯೆ ಬುಧವಾರ ಸಾಕ್ಷಿಯಾಯಿತು.

ಕನ್ನಡಿಗಳು, ಮಸೂರಗಳನ್ನು ಬಳಸಿ ರೂಪಿಸಿರುವ ಯಾಂತ್ರಿಕ ವ್ಯವಸ್ಥೆ ಮೂಲಕ ಸಾಗಿದ ಸೂರ್ಯನ ಕಿರಣಗಳು, ಹಲವು ಬಾರಿ ಪ್ರತಿಫಲನಗೊಂಡು ಕೊನೆಗೆ ಬಾಲರಾಮನ ಹಣೆ ಮೇಲೆ ಬಿದ್ದ ಪರಿಯನ್ನು ಭಕ್ತರು ಕಣ್ತುಂಬಿಕೊಂಡರು.

ಜನವರಿ 22ರಂದು ನೂತನ ಮಂದಿರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬಾಲರಾಮನ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಿದ ನಂತರ ಆಚರಿಸಲಾದ ಮೊದಲ ರಾಮ ನವಮಿ ಇದು ಎಂಬುದು ಗಮನಾರ್ಹ.

'ಬಾಲರಾಮನ ಮೂರ್ತಿಯ ಹಣೆ ಮೇಲೆ 4–5 ನಿಮಿಷಗಳ ಕಾಲ ಸೂರ್ಯರಶ್ಮಿಗಳು ಬಿದ್ದವು. ಆ ಮೂಲಕ 'ಸೂರ್ಯ ತಿಲಕ'ವನ್ನಿಟ್ಟ ವಿಧಿಯನ್ನು ನೆರವೇರಿಸಿದಂತಾಯಿತು' ಎಂದು ರಾಮ ಮಂದಿರದ ವಕ್ತಾರ ಪ್ರಕಾಶ್ ಗುಪ್ತ ಹೇಳಿದ್ದಾರೆ.

'ಸೂರ್ಯ ತಿಲಕ' ಕೌತುಕ ವೀಕ್ಷಿಸಲು ಭಾರಿ ಸಂಖ್ಯೆಯಲ್ಲಿ ಭಕ್ತರು ಸೇರುವ ಸಾಧ್ಯತೆ ಇದ್ದ ಕಾರಣ, ಮಂದಿರದ ಆಡಳಿತ ಮಂಡಳಿಯು ಈ ಅವಧಿಯಲ್ಲಿ ಭಕ್ತರು ಗರ್ಭ ಗುಡಿ ಪ್ರವೇಶಿಸುವುದಕ್ಕೆ ನಿರ್ಬಂಧ ಹೇರಿತ್ತು' ಎಂದು ಹೇಳಿದರು.

ಈ 'ಸೂರ್ಯ ತಿಲಕ'ದ ವಿನ್ಯಾಸವನ್ನು ರೂರ್ಕಿಯ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಪರಿಷತ್ತಿನ ಕೇಂದ್ರೀಯ ನಿರ್ಮಾಣ ಸಂಶೋಧನಾ ಸಂಸ್ಥೆ (ಸಿಎಸ್‌ಐಆರ್–ಸಿಬಿಆರ್‌ಐ) ಮಾಡಿದೆ.

'ಯೋಜಿಸಿದಂತೆಯೇ, ಮಧ್ಯಾಹ್ನ 12 ಗಂಟೆಗೆ ಬಾಲರಾಮನ ಮೂರ್ತಿಯ ಹಣೆ ಮೇಲೆ 'ಸೂರ್ಯ ತಿಲಕ' ಕಂಡುಬಂತು' ಎಂದು ಸಿಎಸ್‌ಐಆರ್–ಸಿಬಿಆರ್‌ಐನ ಮುಖ್ಯ ವಿಜ್ಞಾನಿ ಡಾ.ಡಿ.ಪಿ.ಕನುಂಗೊ ಹೇಳಿದ್ದಾರೆ.

ಮೊಳಗಿದ ಜಯಘೋಷಗಳು: ಸೂರ್ಯ ಕಿರಣಗಳು ಗರ್ಭಗುಡಿಯಲ್ಲಿರುವ ಬಾಲರಾಮನ ಮೂರ್ತಿಯ ಹಣೆಯನ್ನು ಸ್ಪರ್ಶಿಸುತ್ತಿದ್ದಂತೆಯೇ, ಭಕ್ತರು ಜೈ ಶ್ರೀರಾಮ್ ಎಂಬ ಘೋಷಣೆಗಳನ್ನು ಕೂಗಿ, ಸಂಭ್ರಮಿಸಿದರು. ಇದೇ ವೇಳೆ, ಅರ್ಚಕರು ಆರತಿ ನೆರವೇರಿಸಿದರು.

ಈ ವಿಶೇಷ ಸಂದರ್ಭಕ್ಕಾಗಿ, ಬಾಲರಾಮನ ಮೂರ್ತಿಗೆ ರತ್ನಖಚಿತ ಕಿರೀಟವನ್ನು ತೊಡಿಸಲಾಗಿತ್ತು. ಈ ಕಿರೀಟವನ್ನು ಆ್ಯಪಲ್ ಗ್ರೀನ್ ಡೈಮಂಡ್ ಎಂಬ ಕಂಪನಿ ತಯಾರಿಸಿದೆ ಎಂದು ಮಂದಿರದ ಆಡಳಿತ ತಿಳಿಸಿದೆ.

ರಾಮ ನವಮಿ ಅಂಗವಾಗಿ ಅಯೋಧ್ಯೆಯಲ್ಲಿ ಬುಧವಾರ ಬಾಲರಾಮನ ಮೂರ್ತಿಯ ಹಣೆ ಮೇಲೆ 'ಸೂರ್ಯ ತಿಲಕ' ಮೂಡಿತ್ತು –ಪಿಟಿಐ ಚಿತ್ರ


ಅಯೋಧ್ಯೆಯಲ್ಲಿ ಬಾಲರಾಮನ ಮೂರ್ತಿಯ ಹಣೆ ಮೇಲೆ 'ಸೂರ್ಯ ತಿಲಕ' ಮೂಡಿದ ದೃಶ್ಯಗಳ ನೇರ ಪ್ರಸಾರವನ್ನು ಪ್ರಧಾನಿ ಮೋದಿ ವೀಕ್ಷಿಸಿದರು–ಪಿಟಿಐ ಚಿತ್ರ

ಭಾವನಾತ್ಮಕ ಕ್ಷಣ: ಪ್ರಧಾನಿ ಮೋದಿ

ನಲ್ಬಾರಿ(ಅಸ್ಸಾಂ)(ಪಿಟಿಐ): ಲೋಕಸಭಾ ಚುನಾವಣೆ ಪ್ರಚಾರಕ್ಕಾಗಿ ಅಸ್ಸಾಂನ ನಲ್ಬಾರಿಯಲ್ಲಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ಪ್ರಚಾರ ಕಾರ್ಯಕ್ರಮಕ್ಕೆ ತೆರಳುವ ವೇಳೆಯೇ, ಕಂಪ್ಯೂಟರ್ ಪರದೆಯಲ್ಲಿ 'ಸೂರ್ಯ ತಿಲಕ'ದ ನೇರ ಪ್ರಸಾರವನ್ನು ವೀಕ್ಷಿಸಿದರು.

ಈ ಕುರಿತ ಚಿತ್ರಗಳನ್ನು ಅವರು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಅಸ್ಸಾಂನ ನಲ್ಬಾರಿಯಲ್ಲಿ ರ‍್ಯಾಲಿ ಮುಗಿದ ಬಳಿಕ ಬಾಲರಾಮನ ಮೂರ್ತಿಯ ಹಣೆ ಮೇಲೆ ಬಿದ್ದ ಸೂರ್ಯ ತಿಲಕವನ್ನು ನಾನು ವೀಕ್ಷಿಸಿದೆ. ಕೋಟ್ಯಂತರ ಭಾರತೀಯರಂತೆ, ಇದು ಕೂಡ ನನಗೆ ಅತ್ಯಂತ ಭಾವನಾತ್ಮಕ ಕ್ಷಣವಾಗಿದೆ' ಎಂದು ಪೋಸ್ಟ್ ಮಾಡಿದ್ದಾರೆ.

'ಅಯೋಧ್ಯೆಯಲ್ಲಿ ವೈಭವ–ಸಂಭ್ರಮದಿಂದ ರಾಮ ನವಮಿ ಆಚರಣೆ ನಡೆದಿದ್ದು ಐತಿಹಾಸಿಕ. ಈ ಸೂರ್ಯ ತಿಲಕ ನಮ್ಮ ಜೀವನಕ್ಕೆ ಚೈತನ್ಯ ತುಂಬಲಿ, ದೇಶ ಹೊಸ ಎತ್ತರಕ್ಕೆ ಏರುವಂತೆ ಪ್ರೇರಣೆ ನೀಡಲಿ' ಎಂದೂ ಅವರು ಹಾರೈಸಿದ್ದಾರೆ.

ಇದಕ್ಕೂ ಮುನ್ನ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, '500 ವರ್ಷಗಳ ನಂತರ, ಅಯೋಧ್ಯೆಯಲ್ಲಿ ಭಗವಾನ್ ರಾಮನ ಜನ್ಮೋತ್ಸವವನ್ನು ಸೂರ್ಯ ತಿಲಕದ ಮೂಲಕ ಆಚರಿಸಲಾಗುತ್ತಿದೆ' ಎಂದರು.

'500 ವರ್ಷಗಳ ನಂತರ ರಾಮ ಜನಿಸಿದ ಸ್ಥಳದಲ್ಲಿಯೇ ಜನ್ಮೋತ್ಸವ ಆಚರಿಸುತ್ತಿರುವ ಕಾರಣ, ದೇಶದಾದ್ಯಂತ ಹೊಸ ವಾತಾವರಣವೇ ನಿರ್ಮಾಣವಾಗಿದೆ. ಇದು ಶತಮಾನಗಳ ಭಕ್ತಿ–ನಿಷ್ಠೆ ಹಾಗೂ ಅನೇಕ ತಲೆಮಾರುಗಳ ತ್ಯಾಗದ ಪರಾಕಾಷ್ಠೆಯಾಗಿದೆ' ಎಂದರು.

ಬೆಂಗಳೂರು ವಿಜ್ಞಾನಿಗಳ ನೆರವು

ಸೂರ್ಯ ಕಿರಣಗಳು ಬಾಲ ರಾಮನ ಮೂರ್ತಿಯ ಹಣೆ ಮೇಲೆ ಬೀಳುವಂತಹ ಯಾಂತ್ರಿಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಕಾರ್ಯಕ್ಕೆ ಸಿಎಸ್‌ಐಆರ್–ಸಿಬಿಆರ್‌ಐ ಜೊತೆ ಬೆಂಗಳೂರು ಮೂಲದ ಭಾರತೀಯ ಖಭೌತ ವಿಜ್ಞಾನ ಸಂಸ್ಥೆ (ಐಐಎ) ವಿಜ್ಞಾನಿಗಳು ಕೂಡ ಕೈಜೋಡಿಸಿದ್ದಾರೆ.

ಈ ವ್ಯವಸ್ಥೆ ಮೂಲಕ 19 ವರ್ಷಗಳ ಕಾಲ, ರಾಮ ನವಮಿಯಂದು ರಾಮ ಮಂದಿರದ ಮೂರನೇ ಮಹಡಿ ಮೂಲಕ ಹಾಯ್ದು ಹೋಗುವ ಸೂರ್ಯ ಕಿರಣಗಳು, ಗರ್ಭ ಗೃಹದಲ್ಲಿರುವ ಬಾಲರಾಮನ ಮೂರ್ತಿಯ ಹಣೆಯನ್ನು ಸ್ಪರ್ಶಿಸಲಿವೆ.

ಇದಕ್ಕೆ ಅಗತ್ಯವಿರುವ ಯಾಂತ್ರಿಕ ವ್ಯವಸ್ಥೆಯನ್ನು ಸಿಬಿಆರ್‌ಐ ಮಾಡಿದ್ದರೆ, ಬೆಳಕಿನ ಕಿರಣಗಳ ಪ್ರತಿಫಲನಕ್ಕೆ ಬೇಕಾದ ವ್ಯವಸ್ಥೆಯ ವಿನ್ಯಾಸವನ್ನು ಐಐಎ ಒದಗಿಸಿದೆ.

'ಪ್ರತಿ ವರ್ಷ ರಾಮ ನವಮಿ ದಿನ ಸೂರ್ಯ ಕಿರಣಗಳು ಬಾಲ ರಾಮನ ಮೂರ್ತಿಯ ಹಣೆ ಸ್ಪರ್ಶಿಸಿ 'ಸೂರ್ಯ ತಿಲಕ' ಮೂಡಿಸುವ ವ್ಯವಸ್ಥೆಯೊಂದನ್ನು ವಿನ್ಯಾಸಗೊಳಿಸುವುದೇ ಯೋಜನೆಯ ಉದ್ದೇಶವಾಗಿತ್ತು. ಯೋಜನೆಯಂತೆ, ಸೂರ್ಯ ಕಿರಣವು ರಾಮ ನವಮಿಯಂದೇ ಬಾಲರಾಮನ ಮೂರ್ತಿಯ ಹಣೆ ಮೇಲೆ ಬೀಳುವಂತೆ ಮಾಡಲಾಗಿದೆ' ಎಂದು ಸಿಎಸ್‌ಐಆರ್–ಸಿಬಿಆರ್‌ಐನ ಡಾ.ಎಸ್.ಕೆ.ಪಾಣಿಗ್ರಾಹಿ ಹೇಳಿದ್ದಾರೆ.

ಕೇಂದ್ರದಿಂದ ಕಿಸಾನ್ ಮೋರ್ಚಾ ವಿಭಜನೆ: ರಾಕೇಶ್ ಟಿಕಾಯತ್

ನವದೆಹಲಿ (ಪಿಟಿಐ): ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಅನ್ನು ಕೇಂದ್ರ ಸರ್ಕಾರವು ಯೋಜಿಸಿ ವಿಭಜಿಸಿದೆ ಎಂದು ಆರೋಪಿಸಿದ ರೈತ ಮುಖಂಡ ರಾಕೇಶ್ ಟಿಕಾಯತ್, ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಎಸ್‌ಕೆಎಂ 2020–21ರಲ್ಲಿ ನಡೆದ ರೈತ ಆಂದೋಲನದ ನೇತೃತ್ವ ವಹಿಸಿತ್ತು. ಪಂಜಾಬ್, ಹರಿಯಾಣ, ಉತ್ತರ ಪ್ರದೇಶದಿಂದ ಹೆಚ್ಚಿನ ಸಂಖ್ಯೆಯ ರೈತರು ದೆಹಲಿಯ ಗಡಿಗಳಾದ ಸಿಂಘು, ಟಿಕ್ರಿ, ಗಾಜಿಪುರಗಳಲ್ಲಿ ಮೂರು ಕೃಷಿ ಕಾನೂನುಗಳ ವಿರುದ್ಧ ವರ್ಷಪೂರ್ತಿ ಪ್ರತಿಭಟನೆ ನಡೆಸಿದ್ದರು. ಇದರ ಪರಿಣಾಮ ಕಾಯ್ದೆಗಳನ್ನು ಸರ್ಕಾರ ರದ್ದುಪಡಿಸಿತು.

ದೆಹಲಿಯಿಂದ ತೆರಳಿದಾಗ ರೈತರು ಭಿನ್ನ ಹಾದಿಯಲ್ಲಿ ಸಾಗಿದರು. ಕೇಂದ್ರ ಸರ್ಕಾರವು ಮತ್ತೊಂದು ಸಂಘ ರಚಿಸಲು ಬಯಸಿ, ಅದರಂತೆಯೇ ಮಾಡಿತು ಎಂದು ಅವರು ದೂರಿದರು.

ಈ ವಿಭಜನೆಯು ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ರಚನೆಗೆ ಕಾರಣವಾಯಿತು ಎಂದು ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ನಾಯಕ ಟಿಕಾಯತ್ ತಿಳಿಸಿದರು.

ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಮತ್ತು ಕೃಷಿ ಸಾಲ ಮನ್ನಾ ಸೇರಿದಂತೆ ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಎಸ್‌ಕೆಎಂ (ರಾಜಕೀಯೇತರ) ಮತ್ತು ಕಿಸಾನ್ ಮಜ್ದೂರ್ ಮೋರ್ಚಾ (ಕೆಎಂಎಂ) ನಡೆಸುತ್ತಿರುವ ಪ್ರತಿಭಟನೆಯಲ್ಲಿ ಎಸ್‌ಕೆಎಂ ಭಾಗಿಯಾಗಿಲ್ಲ.

ರೈತರನ್ನು ಒಗ್ಗೂಡಿಸುವ ಉದ್ದೇಶದಿಂದ ಎಸ್‌ಕೆಎಂ ಅನ್ನು ರಚಿಸಲಾಯಿತು. ಕೃಷಿ ಕಾನೂನುಗಳ ವಿರುದ್ಧ ಹೋರಾಡಲು ಎಸ್‌ಕೆಎಂ ಬ್ಯಾನರ್ ಅಡಿಯಲ್ಲಿ 41 ಸಂಘಟನೆಗಳು ಒಗ್ಗೂಡಿದ್ದವು. ಈ ಹೋರಾಟದ ಬಳಿಕ ಕೇಂದ್ರ ಸರ್ಕಾರವು ಹೊಸ ರೈತ ಸಂಘಗಳನ್ನು ರಚಿಸುವ ಮೂಲಕ ರೈತರನ್ನು ವಿಭಜಿಸಿದೆ. ಇದು ಪಿತೂರಿಯ ಭಾಗವಾಗಿದೆ ಎಂದು ಆರೋಪಿಸಿದರು.

ಕರ್ನಾಟಕ ಸರ್ಕಾರ
ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ
#542, 5ನೇ ಮಹಡಿ, 2ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001
ದೂ. 080–22353938, 22032561 ಮಿಂಚಂಚೆ : kmeagok@karnataka.gov.in,
ಜಾಲತಾಣ : www.kmea.karnataka.gov.in

ಕೆಎಂಇಎ 18 ಪ್ರೊಕ್ 2023 ದಿನಾಂಕ: 16.04.2024

ತಿದ್ದುಪಡಿ ಪ್ರಕಟಣೆ

ಈ ದಿನಪತ್ರಿಕೆಯಲ್ಲಿ ದಿನಾಂಕ 16/04/2024 ರಂದು ಅರ್ಜಿ ಸಲ್ಲಿಕೆಗಾಗಿ ಅವಧಿ ವಿಸ್ತರಣೆ ಬಗ್ಗೆ ಪ್ರಕಟಗೊಂಡ ಪ್ರಕಟಣೆ ಸಂಖ್ಯೆ ಕೆಎಂಇಎ 18 ಪ್ರೊಕ್ 2023 ದಿನಾಂಕ 10/04/2024 ರ ಅನ್ವಯ ಕೆಎಂಇಎಯಲ್ಲಿ ಸಂಶೋಧನಾ ಅಭ್ಯರ್ಥಿಗಳಾಗಿ ಕಾರ್ಯ ನಿರ್ವಹಿಸುವ ಹುದ್ದೆಗಾಗಿ ಆಹ್ವಾನಿಸಲಾದ **"ಪ್ರಕಟಣೆ–2ನೇ ಕರೆ"** ಎಂಬ ಶೀರ್ಷಿಕೆಯನ್ನು (Heading) **"ಅವಧಿ ವಿಸ್ತರಣೆ ಪ್ರಕಟಣೆ"** ಎಂದು ಓದಿಕೊಳ್ಳುವುದು.

ಸಹಿ/–
ಮುಖ್ಯ ಮೌಲ್ಯಮಾಪನಾಧಿಕಾರಿ
ವಾ.ಸಾ.ಸಂ.ಇ/ವಾಪ್ರ/26/ಆಕಾರ್/2024–25 ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ವೈಫಲ್ಯ ಎಂಬುದು ಯಾವುದೇ ಒಂದು ಕೆಲಸವನ್ನು ಹೆಚ್ಚು ಬುದ್ಧಿವಂತಿಕೆಯಿಂದ ಪುನರಾರಂಭಿಸಲು ಸಿಗುವ ಅವಕಾಶ.
-ಹೆನ್ರಿ ಫೋರ್ಡ್

ಬಿಜೆಪಿಯ ಪ್ರಣಾಳಿಕೆಯಲ್ಲಿ ಪಕ್ಷಕ್ಕಿಂತ ಮೋದಿಗೇ ಪ್ರಾಧಾನ್ಯ

ಲೋಕಸಭೆ ಚುನಾವಣೆಗಾಗಿ ಬಿಜೆಪಿ ಸಿದ್ಧಪಡಿಸಿರುವ ಪ್ರಣಾಳಿಕೆಯ ತುಂಬೆಲ್ಲ ಪ್ರಧಾನಿ ನರೇಂದ್ರ ಮೋದಿ ಅವರೇ ಆವರಿಸಿಕೊಂಡಿದ್ದಾರೆ; ಮೋದಿ ಅವರಷ್ಟು ಪ್ರಾಧಾನ್ಯ ಪಕ್ಷಕ್ಕೆ ಸಿಕ್ಕಿಲ್ಲ. ಪ್ರಣಾಳಿಕೆಗೆ 'ಮೋದಿಯವರ ಗ್ಯಾರಂಟಿ' ಎಂದೇ ಹೆಸರನ್ನೂ ಇರಿಸಲಾಗಿದೆ. ಜನರ ಆಶೋತ್ತರಗಳನ್ನು ಈಡೇರಿಸುವುದೇ ತಮ್ಮ ಧ್ಯೇಯ ಎಂದು ಮೋದಿ ಅವರು ಭರವಸೆ ಕೊಟ್ಟಿದ್ದಾರೆ. ತಮ್ಮ ಸರ್ಕಾರವು ಹತ್ತು ವರ್ಷಗಳಲ್ಲಿ ಮಾಡಿರುವ ಸಾಧನೆಯನ್ನು ಇನ್ನಷ್ಟು ವಿಸ್ತರಿಸುವುದಾಗಿ ಹೇಳಿದ್ದಾರೆ. ಜಿಎಸ್‌ಟಿ ಜಾರಿಯಂತಹ ಸುಧಾರಣೆ ಮತ್ತು 370ನೇ ವಿಧಿ ಅಡಿಯಲ್ಲಿ ಜಮ್ಮು–ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನ ರದ್ದತಿಯಂತಹ ವಿಚಾರಗಳನ್ನು ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಲಾಗಿದೆ. ಮೂಲಸೌಕರ್ಯ ಅಭಿವೃದ್ಧಿ, ವಸತಿ, ಆರೋಗ್ಯ, ಉಚಿತ ಪಡಿತರ ವಿತರಣೆಯಂತಹ ಸಾಮಾಜಿಕ ಅಭಿವೃದ್ಧಿ ಯೋಜನೆಗಳಿಗೆ ಪ್ರಣಾಳಿಕೆಯು ಮಹತ್ವ ನೀಡಿದೆ. ಸಮಾಜದ ಪ್ರತಿಯೊಂದು ವರ್ಗಕ್ಕೂ ಏನಾದರೂ ಒಂದು ಕೊಡುಗೆಯನ್ನು ಪ್ರಕಟಿಸಲಾಗಿದೆ. ಮರಳಿ ಅಧಿಕಾರಕ್ಕೆ ಬರುವುದು ಖಚಿತ ಎಂದು ಪಕ್ಷವು ಬಲವಾಗಿ ನಂಬಿದೆ. ಹಾಗಾಗಿಯೇ ಮುಂದಿನ ಐದು ವರ್ಷಗಳ ನಂತರವೂ ಕೆಲವು ಯೋಜನೆಗಳು ಮುಂದುವರಿಯಲಿವೆ ಎಂಬಂತಹ ಭರವಸೆಗಳನ್ನು ಕೊಡಲಾಗಿದೆ.

ಬಿಜೆಪಿಯ ಸಂವಹನ ಸಾಮರ್ಥ್ಯದ ದೊಡ್ಡ ಸವಾಲನ್ನು ವಿರೋಧ ಪಕ್ಷಗಳು ಎದುರಿಸಬೇಕಾಗಿದೆ

ಏಕರೂಪ ನಾಗರಿಕ ಸಂಹಿತೆ ಮತ್ತು ವಿವಾದಾತ್ಮಕ ವಿಚಾರವಾದ 'ಒಂದು ದೇಶ, ಒಂದು ಚುನಾವಣೆ'ಯನ್ನು ಜಾರಿ ಮಾಡಲಾಗುವುದು ಎಂಬುದನ್ನು ಪುನರುಚ್ಚರಿಸಲಾಗಿದೆ. ಬುಲೆಟ್ ರೈಲು ಮತ್ತು ವಂದೇಭಾರತ್ ರೈಲುಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು ಎಂಬ ಭರವಸೆ ನೀಡಲಾಗಿದೆ. ಒಲಿಂಪಿಕ್ಸ್‌ನ ಆತಿಥ್ಯ ವಹಿಸಲು ಯತ್ನ, ಎಲ್ಲರಿಗೂ ಪೈಪ್ ಮೂಲಕ ಎಲ್‌ಪಿಜಿ ಪೂರೈಕೆ, ಮೂರು ಕೋಟಿ ಬಡವರಿಗೆ ಮನೆ ನಿರ್ಮಾಣ ಮತ್ತು ಮಹಿಳೆಯರಿಗೆ ವಿವಿಧ ಯೋಜನೆಗಳನ್ನು ಜಾರಿಗೊಳಿಸುವ ವಾಗ್ದಾನವೂ ಇದೆ. ಜಗತ್ತಿನಲ್ಲಿ 10ನೇ ಅತಿ ದೊಡ್ಡ ಆರ್ಥಿಕತೆಯಾಗಿದ್ದ ಭಾರತವನ್ನು ಐದನೇ ಅತಿ ದೊಡ್ಡ ಆರ್ಥಿಕತೆಯಾಗಿ ಬೆಳೆಸಲಾಗಿದೆ ಎಂದು ಹೇಳಿಕೊಳ್ಳಲಾಗಿದೆ. ಪ್ರಣಾಳಿಕೆ ಮತ್ತು ಸರ್ಕಾರದ ಸಾಧನೆಯನ್ನು ಕೊಟ್ಟ ಭರವಸೆಗಳ ಮೂಲಕ ಅಳೆಯಲಾಗದು; ಬದಲಿಗೆ ಅವುಗಳ ಅನುಷ್ಠಾನದ ಮೇಲೆ ಮೌಲ್ಯಮಾಪನ ಮಾಡಬೇಕಾಗುತ್ತದೆ. ಹಾಗಾಗಿ, ಬಿಜೆಪಿ ಹೇಳಿಕೊಂಡ ಹಲವು ಅಂಶಗಳನ್ನು ನಿಕಷಕ್ಕೆ ಒಡ್ಡಬೇಕಾಗಿದೆ.

ಬಿಜೆಪಿಯ ಪ್ರಣಾಳಿಕೆಯು ಸುಳ್ಳುಗಳ ಕಂತೆ ಎಂದು ವಿರೋಧ ಪಕ್ಷಗಳು ಟೀಕಿಸಿವೆ. ನಿರುದ್ಯೋಗ ಮತ್ತು ಹಣದುಬ್ಬರದ ಉಲ್ಲೇಖವೇ ಇಲ್ಲ ಎಂದು ಟೀಕಿಸಿವೆ. ಮೋದಿ ಅವರ ಹತ್ತು ವರ್ಷಗಳ ಆಳ್ವಿಕೆಯಲ್ಲಿ ಜಿಡಿಪಿ ಪ್ರಗತಿಯು ಮನಮೋಹನ್ ಸಿಂಗ್ ಅವರ ಹತ್ತು ವರ್ಷಗಳ ಆಳ್ವಿಕೆಗೆ ಹೋಲಿಸಿದರೆ ಕಡಿಮೆ ಎಂದು ಹೇಳಲಾಗಿದೆ. ಉದ್ಯೋಗ ಸೃಷ್ಟಿ ಮತ್ತು ರೈತರ ಆದಾಯ ದುಪ್ಪಟ್ಟುಗೊಳಿಸುವ ಭರವಸೆಗಳನ್ನು ಈಡೇರಿಸಲಾಗಿಲ್ಲ ಎಂದು ವಿರೋಧ ಪಕ್ಷಗಳು ಹೇಳಿವೆ. ಹಾಗಿದ್ದರೂ ಈಗ ಪಕ್ಷಗಳು ಭರವಸೆಗಳನ್ನು ನೀಡುತ್ತಿಲ್ಲ, ಬದಲಿಗೆ 'ಗ್ಯಾರಂಟಿ'ಗಳನ್ನು ನೀಡುತ್ತಿವೆ. ಬಿಜೆಪಿ ಮತ್ತು ಕಾಂಗ್ರೆಸ್‌ನ ಪ್ರಣಾಳಿಕೆಗಳನ್ನು ಹೋಲಿಸಿ ನೋಡಿದರೆ 2024ರಲ್ಲಿ ಈ ಎರಡೂ ಪಕ್ಷಗಳು 2014ಕ್ಕೆ ಮರಳಿವೆ ಎಂಬುದನ್ನು ಕಂಡುಕೊಳ್ಳಬಹುದು. ಆರ್ಥಿಕ ಪ್ರಗತಿಯನ್ನು ಖಾತರಿಪಡಿಸಲಾಗುವುದು, ಸೆಮಿಕಂಡಕ್ಟರ್, ಬ್ಯಾಟರಿಚಾಲಿತ ವಾಹನ ಉದ್ಯಮಕ್ಕೆ ಉತ್ತೇಜನ ನೀಡಲಾಗುವುದು ಎಂಬ ಭರವಸೆಗಳನ್ನು ಬಿಜೆಪಿ ನೀಡಿದೆ. ನವೋದ್ಯಮಕ್ಕೆ ಹೆಚ್ಚಿನ ನಿಧಿ ಒದಗಿಸಲಾಗುವುದು ಎಂದು ಹೇಳಲಾಗಿದೆ. ಆರ್ಥಿಕ ಪ್ರಗತಿಯ ಪ್ರಯೋಜನವು ತಳಮಟ್ಟದ ಜನರಿಗೆ ದೊರೆಯುವಂತಹ ಕಾರ್ಯಸೂಚಿ ಅನುಸರಿಸಲಾಗುವುದು ಎಂದು ಬಿಜೆಪಿ ಭರವಸೆ ಕೊಟ್ಟಿದೆ. ಸಾಮಾಜಿಕ ಅಭಿವೃದ್ಧಿ ಯೋಜನೆಗಳನ್ನು ಹೆಚ್ಚಿಸುವ ಭರವಸೆಯನ್ನು ಕಾಂಗ್ರೆಸ್ ಕೊಟ್ಟಿದೆ. ಉದ್ಯೋಗ ಖಾತರಿ ಯೋಜನೆ, ಆಹಾರ ಭದ್ರತೆ ಕಾಯ್ದೆಯಂತಹವು ಜಾರಿಗೆ ಬರಲು ಸಾಧ್ಯವಾದ ಯುಪಿಎ ಕಾಲದ ಹಕ್ಕು ಆಧಾರಿತ ಕಾರ್ಯಸೂಚಿ ಅನುಸರಿಸಲಾಗುವುದು ಎಂದು ಕಾಂಗ್ರೆಸ್ ಹೇಳಿದೆ. ಕಳೆದ 10 ವರ್ಷಗಳಲ್ಲಿ ಜಿಡಿಪಿ ಪ್ರಗತಿಯಾಗಿದೆ ಎಂಬುದು ನಿಜ. ಆದರೆ, ಶ್ರೀಮಂತರು ಮತ್ತು ಬಡವರ ನಡುವಣ ಅಂತರ ಅಪಾಯಕಾರಿ ಮಟ್ಟದಲ್ಲಿ ಹೆಚ್ಚಳವಾದ ಸಂದರ್ಭದಲ್ಲಿ, ಉದ್ಯೋಗ ಖಾತರಿ ಯೋಜನೆ ಮತ್ತು 80 ಕೋಟಿ ಜನರಿಗೆ ಉಚಿತ ಪಡಿತರ ಪೂರೈಕೆಯನ್ನು ಮುಂದುವರಿಸಿದ್ದರಿಂದಾಗಿ ಜನರು ಬದುಕುಳಿಯುವುದು ಸಾಧ್ಯವಾಗಿದೆ ಎಂದು ಹೇಳಲಾಗಿದೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಕಾರ್ಯಕ್ಷಮತೆಯನ್ನು ಒರೆಗೆ ಹಚ್ಚುವಾಗ ದೇಶದಲ್ಲಿ ಆಗಿರುವ ಸಾಮಾಜಿಕ ಮತ್ತು ರಾಜಕೀಯ ಧ್ರುವೀಕರಣ ಹಾಗೂ ಪ್ರಜಾಪ್ರಭುತ್ವದ ಮೇಲೆ ಹೇರಲಾಗಿರುವ ಒತ್ತಡವನ್ನೂ ಪರಿಗಣಿಸಬೇಕಾಗುತ್ತದೆ ಎಂದು ವಿರೋಧ ಪಕ್ಷಗಳು ಹೇಳಿವೆ. ಅದೇನೇ ಇದ್ದರೂ ಬಿಜೆಪಿಯನ್ನು ಎದುರಿಸುವಲ್ಲಿ ವಿರೋಧ ಪಕ್ಷಗಳಿಗೆ ದೊಡ್ಡ ಸವಾಲು ಇದೆ. ಅದು ಏನೆಂದರೆ, ಬಿಜೆಪಿಯಲ್ಲಿ ಇರುವ ಸಂವಹನ ಸಾಮರ್ಥ್ಯವು ವಿರೋಧ ಪಕ್ಷಗಳಿಗಿಂತ ಹೆಚ್ಚು ದಕ್ಷವಾಗಿದೆ.

ದಿನದ ಟ್ವೀಟ್

ಪರಿಶ್ರಮಕ್ಕೆ ಬಡತನವಿಲ್ಲ

ತೆಲಂಗಾಣದ ಬೀಡಿ ಕಾರ್ಮಿಕರೊಬ್ಬರ ಮಗ ಯಾವುದೇ ಕೋಚಿಂಗ್ ಪಡೆಯದೆ ಐಎಎಸ್ ಅಧಿಕಾರಿಯಾಗಿದ್ದಾರೆ. ಕರೀಂನಗರದ ನಂದಾಲ ಸಾಯಿಕಿರಣ್ 2023ರ ಯುಪಿಎಸ್‌ಸಿ ಪರೀಕ್ಷೆಯಲ್ಲಿ 27ನೇ ರ್‍ಯಾಂಕ್ ಪಡೆದಿದ್ದಾರೆ. ಕೈಮಗ್ಗ ಕಾರ್ಮಿಕರಾಗಿದ್ದ ಅವರ ತಂದೆ ಕಾಂತಾರಾವ್ 2016ರಲ್ಲಿ ಕ್ಯಾನ್ಸರ್ ಕಾರಣಕ್ಕಾಗಿ ಸಾವಪ್ಪಿದರು. ಅವರ ತಾಯಿ ಲಕ್ಷ್ಮಿ ಬೀಡಿ ಕಾರ್ಮಿಕರಾಗಿದ್ದಾರೆ.

ಸುಧಾಕರ ಉದುಮುಲ, ಪತ್ರಕರ್ತ, ಲೇಖಕ

ಕಿಡಿನುಡಿ

ಪ್ರಧಾನಿ ನರೇಂದ್ರ ಮೋದಿ ಮತ್ತು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಅವರನ್ನು ತಮ್ಮವರು ಎಂದು ಪರಿಗಣಿಸದವರು ತಮ್ಮ ತಂದೆಯನ್ನೂ ತಮ್ಮವರೆಂದು ಪರಿಗಣಿಸುವುದಿಲ್ಲ, ಅಂಥವರು ದೇಶದ್ರೋಹಿಗಳು ಎಂದು ಬಿಜೆಪಿ ಸಂಸದ ಮಹೇಶ್ ಶರ್ಮಾ ಹೇಳಿದ್ದಾರೆ. ಶರ್ಮಾ ಅವರು ತಮ್ಮ ತಂದೆಯನ್ನು ಮತಯಂತ್ರಗಳ ಮೂಲಕ ಆಯ್ಕೆ ಮಾಡಿಕೊಂಡಿಲ್ಲ ಎಂಬುದನ್ನು ಅವರಿಗೆ ದಯವಿಟ್ಟು ಯಾರಾದರೂ ನೆನಪಿಸಿ.

ಅಭಿಷೇಕ್, ಪತ್ರಕರ್ತ

25 ವರ್ಷಗಳ ಹಿಂದೆ

ಭಾನುವಾರ, 18-4-1999

● ವಿಶ್ವಾಸಮತಕ್ಕೆ ಸೋಲು: ವಾಜಪೇಯಿ ನೇತೃತ್ವದ ಸರ್ಕಾರ ಪತನ

ನವದೆಹಲಿ, ಏ. 17– ಕೊನೇ ಗಳಿಗೆಯಲ್ಲಿ ಬದಲಾದ ಬಿಎಸ್‌ಪಿಯ ನಿಲುವು, ಆಳುವ ಮಿತ್ರಪಕ್ಷಗಳಲ್ಲಿನ ನ್ಯಾಷನಲ್ ಕಾನ್ಫರೆನ್ಸ್‌ನಲ್ಲಿಯ ಒಡಕು ಮತ್ತು ಲೋಕಸಭೆ ಸದಸ್ಯತ್ವ ಉಳಿಸಿಕೊಂಡಿರುವ ಒರಿಸ್ಸಾದ ಮುಖ್ಯಮಂತ್ರಿಯು ಇಂದಿನ ನಿರ್ಣಾಯಕವಾದ ವಿಶ್ವಾಸಮತದ ವಿರುದ್ಧ ಮತ ಚಲಾಯಿಸಿದ್ದರಿಂದ, ಹದಿಮೂರು ತಿಂಗಳ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರ ಕೇವಲ ಒಂದು ಮತದ ಅಂತರದಲ್ಲಿ ಪತನಹೊಂದಿತು.

ಎಐಎಡಿಎಂಕೆಯು ತನ್ನ 18 ಸದಸ್ಯರ ಬೆಂಬಲ ಹಿಂತೆಗೆದುಕೊಂಡ ಹಿನ್ನೆಲೆಯಲ್ಲಿ ರಾಷ್ಟ್ರಪತಿ ಆದೇಶದ ಮೇರೆಗೆ ಪ್ರಧಾನಿ ವಾಜಪೇಯಿ ಅವರು ಕೋರಿದ್ದ ವಿಶ್ವಾಸಮತವನ್ನು ಲೋಕಸಭೆಯು ಇಂದು ತಿರಸ್ಕರಿಸಿತು.

ಮತದಾನದಲ್ಲಿ ಭಾಗವಹಿಸಿದ್ದ ಒಟ್ಟು 539 ಸದಸ್ಯರು ಚಲಾಯಿಸಿದ ಮತಗಳಲ್ಲಿ ವಿಶ್ವಾಸಮತದ ಪರವಾಗಿ 269 ಮತ್ತು ವಿರುದ್ಧವಾಗಿ 270 ಮತಗಳು ಬಂದಿದ್ದರಿಂದ ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರದ ಆಡಳಿತ ಇಂದು ಕೊನೆಗೊಂಡಿತು.

50 ವರ್ಷಗಳ ಹಿಂದೆ

ಗುರುವಾರ, 18-4-1974

● ಎಸ್ಸೆಸ್ಸೆಲ್ಸಿ ಉತ್ತರಪತ್ರಿಕೆಗಳ ಮೌಲ್ಯಮಾಪನ ಸ್ಥಗಿತ

ಬೆಂಗಳೂರು, ಏ. 17– ಶೇ 80ರಷ್ಟಕ್ಕಿಂತ ಹೆಚ್ಚು ಮಂದಿ ಅಧ್ಯಾಪಕರು ಎಸ್ಸೆಸ್ಸೆಲ್ಸಿ ಪರೀಕ್ಷೆಯ ಉತ್ತರಪತ್ರಿಕೆಗಳ ಮೌಲ್ಯಮಾಪನಕ್ಕೆ ಇಂದು ಇಲ್ಲಿ ಬಹಿಷ್ಕಾರವನ್ನು ಆರಂಭಿಸಿ ಭಾರಿ ಶಾಂತಿಯುತವಾದ ಮೆರವಣಿಗೆ ನಡೆಸಿದರು.

ಮೌಲ್ಯಮಾಪನ ಕಾರ್ಯ ಆರಂಭವಾದ ಕೇಂದ್ರಗಳ ಪೈಕಿ 6 ಕೇಂದ್ರಗಳಲ್ಲಿ ಶೇ 20ರಷ್ಟು ಮಂದಿ ಅಧ್ಯಾಪಕರು ಹಾಜರಿದ್ದರೆಂದು ಸೆಕೆಂಡರಿ ಶಿಕ್ಷಣದ ಪರೀಕ್ಷಾ ಮಂಡಲಿಯ ವಕ್ತಾರರು ಸಂಜೆ ತಿಳಿಸಿದರು.

ನ್ಯಾಷನಲ್ ಕಾಲೇಜ್ ಕೇಂದ್ರದಲ್ಲಿ ಒಬ್ಬ ಅಧ್ಯಾಪಕರೂ ಹಾಜರಿರಲಿಲ್ಲ. ಉಳಿದ ಎರಡು ಕೇಂದ್ರಗಳಲ್ಲಿ ಮಧ್ಯಾಹ್ನದ ನಂತರ ಮೌಲ್ಯಮಾಪನವನ್ನು ನಿಲ್ಲಿಸಲಾಯಿತು.

● ಕಲಬೆರಕೆ ಪತ್ತೆಗೆ ನೆರವು ಬೇಕೆ...?

ಬೆಂಗಳೂರು, ಏ. 17– ತಾವು ಕೊಳ್ಳುವ ಪದಾರ್ಥಗಳಲ್ಲಿ ಕಡಿಮೆ ತೂಕ ಹಾಗೂ ಕಲಬೆರಕೆಯನ್ನು ಸಂದೇಹಿಸುವಿರಾ?

ಹಾಗಾದರೆ ಸದ್ಯದಲ್ಲೇ 'ಫ್ರೆಂಡ್ಸ್ ವರ್ಲ್ಡ್' ಸ್ವಯಂಸೇವಕರು ತೆರೆಯಲಿರುವ ಕೇಂದ್ರಗಳಿಗೆ ಹೋಗಿ ನೆರವು ಪಡೆಯಿರಿ. ತೂಕ ಮಾಡುವ ಹಾಗೂ ಕಲಬೆರಕೆ ಪತ್ತೆ ಮಾಡುವ ಸಾಧನಗಳೊಡನೆ ಈ ಸೇವಕರು ಸಿದ್ಧರಾಗಿರಲಿದ್ದಾರೆ.

'ಸಾಮಾಜಿಕ ದೋಷಗಳ' ನಿವಾರಣೆಯ ವಿರುದ್ಧ 'ನೈತಿಕ ವಿರೋಧ' ನಿರ್ಮಾಣ ಕಾರ್ಯಕ್ರಮದ ಅಂಗವಾಗಿ ಮೊದಲಲ್ಲಿ ಮಲ್ಲೇಶ್ವರಂ, ಬಸವನಗುಡಿ ಹಾಗೂ ಶಿವಾಜಿನಗರ ಪ್ರದೇಶಗಳಲ್ಲಿ ಮೋಸ ಪತ್ತೆ ಮಾಡುವ ಕೇಂದ್ರಗಳನ್ನು ತೆರೆಯಲಿದ್ದಾರೆ.

ರಾಜ್ಯಗಳಿಗೆ ತೆರಿಗೆ ವರಮಾನ ಹಂಚಿಕೆಯಲ್ಲಿ ಆಗಿರುವ ಅನ್ಯಾಯ ಸರಿದೂಗಿಸಬೇಕಿದೆ

ತೆರಿಗೆ ಹಂಚಿಕೆ ಮತ್ತು ಒಕ್ಕೂಟ ವ್ಯವಸ್ಥೆ

ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

ಕೇಂದ್ರ ಹಾಗೂ ರಾಜ್ಯಗಳ ನಡುವಿನ ಸಂಘರ್ಷ ಇಂದು ನಿನ್ನೆಯದಲ್ಲ. ತೆಲುಗುದೇಶಂ ನಾಯಕ ಎನ್.ಟಿ.ರಾಮರಾವ್ ಬಹಳ ಹಿಂದೆಯೇ 'ಭಾರತವನ್ನು ಆಳುತ್ತಿರುವುದೇ ರಾಜ್ಯಗಳು. ಕೇಂದ್ರ ಬರೀ ಒಂದು ಪರಿಕಲ್ಪನೆ' ಎಂದಿದ್ದರು. ಹಲವು ವಿಷಯಗಳಲ್ಲಿ ಕೇಂದ್ರ ಹಾಗೂ ರಾಜ್ಯಗಳ ನಡುವೆ ಘರ್ಷಣೆಗಳು ನಡೆಯುತ್ತಿರುತ್ತವೆ. ಇತ್ತೀಚಿನ ದಿನಗಳಲ್ಲಿ, ಕೇಂದ್ರದ ಕೈಸೇರುವ ತೆರಿಗೆಯ ಹಣವನ್ನು ರಾಜ್ಯಗಳಿಗೆ ಹಂಚುವ ವಿಷಯದಲ್ಲಿ ವಿವಾದ ತೀವ್ರವಾಗಿದೆ.

ಕೇಂದ್ರಕ್ಕೆ ತೆರಿಗೆಯನ್ನು ಸಂಗ್ರಹಿಸುವುದಕ್ಕೆ ಹೆಚ್ಚು ಅವಕಾಶ ಇರುತ್ತದೆ. ಆದರೆ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸುವ ಜವಾಬ್ದಾರಿ ರಾಜ್ಯಗಳಿಗೆ ಹೆಚ್ಚಿಗೆ ಇರುತ್ತದೆ. ಈ ಕಾರಣದಿಂದಾಗಿ ಕೇಂದ್ರದಿಂದ ರಾಜ್ಯಗಳಿಗೆ ಹಾಗೂ ರಾಜ್ಯಗಳ ನಡುವೆ ಸಂಪನ್ಮೂಲ ನ್ಯಾಯಯುತವಾಗಿ ಹಂಚಿಕೆಯಾಗಬೇಕೆನ್ನುವ ಉದ್ದೇಶದಿಂದ ಹಣಕಾಸು ಆಯೋಗವನ್ನು ನೇಮಿಸಲು ಸಂವಿಧಾನದಲ್ಲೇ ಅವಕಾಶವನ್ನು ಮಾಡಿಕೊಡಲಾಗಿದೆ. ಕೇಂದ್ರವು ಸಂಗ್ರಹಿಸಿದ ಒಟ್ಟು ತೆರಿಗೆಯಲ್ಲಿ ರಾಜ್ಯಗಳಿಗೆ ಹಂಚುವುದಕ್ಕಾಗಿಯೇ ನಿರ್ದಿಷ್ಟ ಮೊತ್ತವನ್ನು ಮೀಸಲಿಡಲಾಗುತ್ತದೆ. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ಜವಾಬ್ದಾರಿ ಹೆಚ್ಚುತ್ತಿರುವುದರಿಂದ ವಿವಿಧ ಹಣಕಾಸು ಆಯೋಗಗಳು ರಾಜ್ಯಗಳ ಪಾಲನ್ನು ಕ್ರಮೇಣ ಹೆಚ್ಚಿಸುತ್ತಾ ಬಂದಿವೆ.

ವೈ.ವಿ.ರೆಡ್ಡಿ ಅವರು ಅಧ್ಯಕ್ಷರಾಗಿದ್ದ 14ನೇ ಹಣಕಾಸು ಆಯೋಗವು ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ದಿಸೆಯಲ್ಲಿ ದೊಡ್ಡ ಹೆಜ್ಜೆ ಇಟ್ಟಿತ್ತು. ರಾಜ್ಯಗಳನ್ನು ಬಲಗೊಳಿಸುವ ದೃಷ್ಟಿಯಿಂದ ಅವುಗಳ ತೆರಿಗೆ ಪಾಲನ್ನು ಶೇ 32ರಿಂದ ಶೇ 42ಕ್ಕೆ ಏರಿಸಿತು. ರಾಜ್ಯಗಳಿಗೆ ಯಾವುದೇ ಷರತ್ತುಗಳಿಲ್ಲದೆ ಅನುದಾನ ನೀಡಿ ತಮ್ಮದೇ ಆದ ಯೋಜನೆಗಳನ್ನು ರೂಪಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿತು. ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಅವಕಾಶ ತಗ್ಗಿಸಿ, ರಾಜ್ಯಗಳ ವ್ಯವಹಾರಗಳಲ್ಲಿ ಕೇಂದ್ರದ ಹಸ್ತಕ್ಷೇಪವನ್ನು ಮಿತಿಗೊಳಿಸಲು ಪ್ರಯತ್ನಿಸಿತ್ತು.

ಆಯೋಗವು ಸಲ್ಲಿಸಿದ ವರದಿಯಲ್ಲಿನ ಶಿಫಾರಸುಗಳು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪಥ್ಯವಾಗಲಿಲ್ಲ. ಕೇಂದ್ರೀಕರಣವು ಅವರ ಯೋಜನೆಯಾಗಿತ್ತು. ರಾಜ್ಯಗಳ ತೆರಿಗೆ ಪಾಲನ್ನು ಇಳಿಸಲು ಪ್ರಯತ್ನಿಸಿದರು. ಆದರೆ ರೆಡ್ಡಿಯವರು ಒಪ್ಪಲಿಲ್ಲ. ಶಿಫಾರಸನ್ನು ಒಪ್ಪಿಕೊಳ್ಳುವುದು ಮೋದಿಯವರಿಗೆ ಅನಿವಾರ್ಯವಾಯಿತು. ತಮ್ಮ ಉದ್ದೇಶ ಸಾಧಿಸುವುದಕ್ಕೆ ಬೇರೆ ದಾರಿ ಹಿಡಿದರು. ತೆರಿಗೆ ಏರಿಸುವ ಬದಲು ಸೆಸ್ ಮತ್ತು ಸರ್‌ಚಾರ್ಜ್ ಅನ್ನು ಏರಿಸತೊಡಗಿದರು. ಸೆಸ್ ಹಾಗೂ ಸರ್‌ಚಾರ್ಜ್ ಅನ್ನು ರಾಜ್ಯಗಳ ಜೊತೆ ಹಂಚಿಕೊಳ್ಳಬೇಕಾಗಿಲ್ಲ. 2017- 18ರಿಂದ 2023-24ರವರೆಗೆ ಸಂಗ್ರಹವಾದ ₹ 27,66,588 ಕೋಟಿಯಷ್ಟು ಸೆಸ್ ಹಾಗೂ ಸರ್‌ಚಾರ್ಜ್ ಅನ್ನು ರಾಜ್ಯಗಳೊಂದಿಗೆ ಹಂಚಿಕೊಂಡಿದ್ದರೆ ಕರ್ನಾಟಕವೊಂದಕ್ಕೇ ₹ 55,000 ಕೋಟಿ ಬರುತ್ತಿತ್ತು. ಕೊನೆಗೂ ರಾಜ್ಯಗಳ ಪಾಲನ್ನು ಶೇ 34ಕ್ಕೆ ಸೀಮಿತಗೊಳಿಸುವಲ್ಲಿ ಕೇಂದ್ರ ಯಶಸ್ವಿಯಾಯಿತು. ಸಾಲದು ಎಂಬಂತೆ ಬಜೆಟ್ಟಿನಲ್ಲೂ ರಾಜ್ಯಗಳಿಗೆ ನೀಡಬೇಕಾಗಿದ್ದ ಹಣದಲ್ಲಿ ಕಡಿತ ಮಾಡಲಾಯಿತು.

15ನೇ ಹಣಕಾಸು ಆಯೋಗವನ್ನು ನೇಮಿಸುವಾಗ ಕೇಂದ್ರ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಯಿತು. ಆಯೋಗಕ್ಕೆ ನೀಡುವ ಉಲ್ಲೇಖದಲ್ಲೇ (ಟರ್ಮ್ಸ್ ಆಫ್ ರೆಫರೆನ್ಸ್) ಕೇಂದ್ರೀಕರಣದ ಪ್ರಕ್ರಿಯೆ ಪ್ರಾರಂಭವಾಗಿಬಿಟ್ಟಿತು. 14ನೇ ಆಯೋಗವು ತೆರಿಗೆಯಲ್ಲಿ ರಾಜ್ಯಗಳಿಗೆ ನೀಡಿದ್ದ ಶೇ 42ರಷ್ಟು ಪಾಲಿನ ಶಿಫಾರಸನ್ನು ಮರುಪರಿಶೀಲಿಸಲು ಸೂಚಿಸಲಾಗಿತ್ತು. ರಾಜ್ಯಗಳು ಜಾರಿಗೊಳಿಸುವ ಜನಪ್ರಿಯ ಕಾರ್ಯಕ್ರಮಗಳನ್ನು ನಿಯಂತ್ರಿಸುವ ದಿಸೆಯಲ್ಲಿ ಯೋಚಿಸಲು ಕೇಳಲಾಗಿತ್ತು. ರಾಜ್ಯಗಳಿಗೆ ತೆರಿಗೆ ವರಮಾನದ ಹಂಚಿಕೆ ಮಾಡುವಾಗ ಕೇಂದ್ರದ ಯೋಜನೆಗಳನ್ನು ರಾಜ್ಯಗಳು ಹೇಗೆ ಜಾರಿಗೊಳಿಸಿವೆ ಎಂಬುದನ್ನೂ ಗಮನಿಸಬೇಕೆಂದು ಸೂಚಿಸಲಾಯಿತು. ಲೆಕ್ಕಾಚಾರಕ್ಕೆ 2011ರ ಜನಗಣತಿಯ ಜನಸಂಖ್ಯೆಯನ್ನು ಪರಿಗಣಿಸುವಂತೆ ಸೂಚಿಸಲಾಯಿತು. ರಕ್ಷಣಾ ವೆಚ್ಚದ ಕೊರತೆಯನ್ನು ಭರಿಸಲು ರಾಜ್ಯಗಳ ನಿಧಿಯಿಂದ ಹಣ ನೀಡಲು ಕೇಳಲಾಯಿತು. ಇದೊಂದು ರೀತಿಯಲ್ಲಿ ಕೇಂದ್ರದ ಜವಾಬ್ದಾರಿಯನ್ನು ರಾಜ್ಯಗಳಿಗೆ ವರ್ಗಾಯಿಸುವ ಪ್ರಯತ್ನ. ಈ ಕ್ರಮಗಳಿಂದ ರಾಜ್ಯಗಳು, ಅಂತಿಮವಾಗಿ ಒಕ್ಕೂಟ ವ್ಯವಸ್ಥೆ ದುರ್ಬಲಗೊಳ್ಳುತ್ತದೆ.

ರಾಜ್ಯಗಳ ನಡುವೆ ಸಂಪನ್ಮೂಲವನ್ನು ಹಂಚಲು ಸೂತ್ರವನ್ನು ರೂಪಿಸುವುದಕ್ಕೆ ವರಮಾನದ ಅಂತರ, ಜನಸಂಖ್ಯೆ, ಪೌಷ್ಟಿಕತೆ, ಆರೋಗ್ಯ ಹಾಗೂ ವಿತ್ತೀಯ ಸಾಧನೆ ಇವೆಲ್ಲವನ್ನೂ ಪರಿಗಣಿಸಲಾಗುತ್ತದೆ. ಜನಸಂಖ್ಯೆಗೆ 1971ರ ಜನಗಣತಿಯ ಅಂಕಿಅಂಶವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು. ಯಾಕೆಂದರೆ, ದಕ್ಷಿಣದ ಬಹುತೇಕ ರಾಜ್ಯಗಳಲ್ಲಿ 1971ರ ನಂತರ ಜನಸಂಖ್ಯಾ ನಿಯಂತ್ರಣದ ಕ್ರಮಗಳಿಂದಾಗಿ ಜನಸಂಖ್ಯೆ ಹೆಚ್ಚಳದ ಪ್ರಮಾಣ ಕಡಿಮೆಯಾಗಿತ್ತು. ಜನಸಂಖ್ಯೆಯನ್ನು ನಿಯಂತ್ರಿಸಿರುವ ರಾಜ್ಯಗಳಿಗೆ ಅನ್ಯಾಯವಾಗಬಾರದೆಂದು 'ಜನಸಂಖ್ಯೆಯ ನಿರ್ವಹಣೆ' ಎಂಬ ಹೊಸ ಸೂಚಿಯನ್ನು ಆಯೋಗವು ಸೇರಿಸಿಕೊಂಡಿತು. ಆದರೂ ಕರ್ನಾಟಕ, ಮಿಜೋರಾಂ ಹಾಗೂ ತೆಲಂಗಾಣಕ್ಕೆ ನಷ್ಟವಾಯಿತು.

ಕರ್ನಾಟಕದ ಪಾಲು ಶೇ 4.71ರಿಂದ ಶೇ 3.64ಕ್ಕೆ ಇಳಿಯಿತು. ತನ್ನ ಶಿಫಾರಸಿನಿಂದ ಕರ್ನಾಟಕಕ್ಕೆ ಆಗಿರುವ ನಷ್ಟವನ್ನು ಸರಿದೂಗಿಸುವುದಕ್ಕೆ ಆಯೋಗವು ₹ 5,495 ಕೋಟಿಯ ವಿಶೇಷ ಅನುದಾನವನ್ನು ಮಂಜೂರು ಮಾಡಿತ್ತು. ಇದು ಅಂತಿಮ ವರದಿಯಲ್ಲಿ ಇಲ್ಲ ಎಂದು ಕೇಂದ್ರ ತಿರಸ್ಕರಿಸಿತು. ಆದರೆ ಮಧ್ಯಂತರ ಹಾಗೂ ಅಂತಿಮ ವರದಿ ಎಂದು ಯಾವುದೂ ಇಲ್ಲ. ಆಗಿನ ಆರ್ಥಿಕ ಹಿಂಜರಿತ ಹಾಗೂ ಹೊಸದಾಗಿ ಜಾರಿಗೆ ತಂದ ಜಿಎಸ್‌ಟಿಯಿಂದ ಆರ್ಥಿಕ ಬೆಳವಣಿಗೆಯನ್ನು ಅಂದಾಜು ಮಾಡುವುದು ಕಷ್ಟವಾಗುತ್ತಿತ್ತು. ಆದ್ದರಿಂದ ಆಯೋಗಕ್ಕೆ ಎರಡು ವರದಿಗಳನ್ನು ಮಂಡಿಸಲು ಕೇಳಿಕೊಳ್ಳಲಾಗಿತ್ತು. ಅದರಂತೆ ಆಯೋಗವು 2020- 21ರ ಹಣಕಾಸು ವರ್ಷಕ್ಕೆ ಮೊದಲ ವರದಿಯನ್ನು ಹಾಗೂ 2021- 22ರಿಂದ 2025- 26ರ ಅವಧಿಗೆ ಅಂತಿಮ ವರದಿಯನ್ನು ಮಂಡಿಸಿತು. ಎರಡೂ ಅಂತಿಮ ವರದಿಗಳೆ. ವಾಸ್ತವವೆಂದರೆ, ಕೇಂದ್ರವು ಈ ಶಿಫಾರಸನ್ನು ಮರುಪರಿಶೀಲಿಸಲು ಆಯೋಗವನ್ನು ಕೇಳಿಕೊಂಡಿತ್ತು.

ಹಣಕಾಸು ಆಯೋಗ ನೀಡಿರುವ ಅಥವಾ ರಾಜ್ಯಗಳಿಗೆ ಬರಬೇಕಾದ ಇತರ ಅನುದಾನಗಳನ್ನೂ ಕೇಂದ್ರವು ನೀಡುತ್ತಿಲ್ಲ. ಉದಾಹರಣೆಗೆ, ಆಯೋಗವು ರಾಜ್ಯಗಳಿಗೆ ನೀಡುವ ನಿರ್ದಿಷ್ಟ ಅನುದಾನದಡಿ ಕರ್ನಾಟಕಕ್ಕೆ ಶಿಫಾರಸು ಮಾಡಿದ್ದ ₹ 6,000 ಕೋಟಿ ಅನುದಾನ ಬಿಡುಗಡೆಯಾಗಿಲ್ಲ. ಬಜೆಟ್ಟಿನಲ್ಲಿ ಘೋಷಿಸಿದ ಯೋಜನೆಗಳ ಹಣವೂ ಬಿಡುಗಡೆಯಾಗಿಲ್ಲ. ಭದ್ರಾ ಮೇಲ್ದಂಡೆ ಯೋಜನೆಗೆ ₹ 5,300 ಕೋಟಿ ಬಿಡುಗಡೆಯಾಗಬೇಕಿತ್ತು. ಬರದಂತಹ ಸಂಕಷ್ಟಕ್ಕೆ ನೆರವು ಪಡೆಯಲೂ ಸುಪ್ರೀಂ ಕೋರ್ಟ್‌ಗೆ ಹೋಗಬೇಕಾದ ಸ್ಥಿತಿ ಸೃಷ್ಟಿಯಾಗಿದೆ.

ಕೇಂದ್ರದ ಎಷ್ಟೋ ನಿರ್ಧಾರಗಳಿಂದ ರಾಜ್ಯಗಳಿಗೆ ತೊಂದರೆಯಾಗುತ್ತಿದೆ. ಕಾರ್ಪೊರೇಟ್ ತೆರಿಗೆಯಲ್ಲಿ ಕಡಿತ ಮಾಡಿದ್ದರಿಂದ 2020- 21ರಲ್ಲಿ ರಾಜ್ಯಗಳು ₹ 65,000 ಕೋಟಿಯನ್ನು ಕಳೆದುಕೊಂಡವು. ಆರ್‌ಬಿಐಯ ಲಾಭದಿಂದ ಕೇಂದ್ರ ತನ್ನ ನಷ್ಟವನ್ನು ಸರಿದೂಗಿಸಿಕೊಂಡಿತು. ಆದರೆ ರಾಜ್ಯಗಳಿಗೆ ಅಂತಹ ಅವಕಾಶವಿಲ್ಲ. ತಮ್ಮ ವೆಚ್ಚದಲ್ಲೇ ಕಡಿತ ಮಾಡಿಕೊಳ್ಳಬೇಕಾಗುತ್ತದೆ. ಹಾಗೆಯೇ ಜಿಎಸ್‌ಟಿ ವ್ಯವಸ್ಥೆಯಿಂದ ಕರ್ನಾಟಕವೊಂದಕ್ಕೇ ಸುಮಾರು ₹ 59,294 ಕೋಟಿ ನಷ್ಟವಾಗಿದೆ. ಜಿಎಸ್‌ಟಿಗೆ ಸಂಬಂಧಿಸಿದ ನಿರ್ಧಾರಗಳನ್ನು ತೆಗೆದುಕೊಳ್ಳುವ ಜಿಎಸ್‌ಟಿ ಮಂಡಳಿಯಲ್ಲಿ ಕೇಂದ್ರದ್ದೇ ಮೇಲುಗೈ. ನೀತಿ ಆಯೋಗವೂ ಹಣಕಾಸು ಸಚಿವಾಲಯದ ಭಾಗವೇ ಆಗಿರುವುದರಿಂದ ರಾಜ್ಯಗಳು ಎಲ್ಲದಕ್ಕೂ ಈ ಸಚಿವಾಲಯವನ್ನೇ ಆಶ್ರಯಿಸಬೇಕಾಗಿದೆ. ಆರ್ಥಿಕ ವ್ಯವಸ್ಥೆ ಹೆಚ್ಚೆಚ್ಚು ಕೇಂದ್ರೀಕರಣವಾದಷ್ಟೂ ರಾಜ್ಯಗಳು ದುರ್ಬಲವಾದಷ್ಟೂ ಒಕ್ಕೂಟ ವ್ಯವಸ್ಥೆ ಶಿಥಿಲಗೊಳ್ಳುತ್ತಾ ಹೋಗುತ್ತದೆ.

ರಾಜ್ಯ ಸರ್ಕಾರಗಳು ಜನಕಲ್ಯಾಣ ಕಾರ್ಯಕ್ರಮ ಹಮ್ಮಿಕೊಂಡರೆ ಅವುಗಳಿಗೆ ರಾಜಕೀಯ ಮಾನ್ಯತೆ ಸಿಕ್ಕಿಬಿಡುತ್ತದೆ ಅನ್ನುವ ಆತಂಕ ಕೇಂದ್ರಕ್ಕೆ. ಹಾಗಾಗಿ, ರಾಜ್ಯಗಳಿಗೆ ವಿತ್ತೀಯ ಸಾಮರ್ಥ್ಯ ಸಿಗದಂತೆ ನೋಡಿಕೊಳ್ಳುವುದೇ ಕೇಂದ್ರದ ರಾಜಕೀಯವಾಗಿದೆ. ಹಣದ ಕೊರತೆಯಿಂದ ರಾಜ್ಯಗಳು ಹೆಚ್ಚೆಚ್ಚು ಕೇಂದ್ರ ಪ್ರಾಯೋಜಿತ ಕಾರ್ಯಕ್ರಮಗಳನ್ನು ಅವಲಂಬಿಸುವುದು ಅನಿವಾರ್ಯವಾಗುತ್ತದೆ. ಅಂತಹ ಯೋಜನೆಗಳಲ್ಲಿ ಅರ್ಧಕ್ಕಿಂತ ಹೆಚ್ಚು ವೆಚ್ಚ ಭರಿಸುವುದು ರಾಜ್ಯಗಳು, ಆದರೆ ಕೀರ್ತಿ ಕೇಂದ್ರಕ್ಕೆ.

16ನೇ ಹಣಕಾಸು ಆಯೋಗವು ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ದಿಸೆಯಲ್ಲಿ ಯೋಚಿಸಬೇಕು. ರಾಜ್ಯಗಳಿಗೆ ಚಾರಿತ್ರಿಕವಾಗಿ ಆಗಿರುವ ಅನ್ಯಾಯವನ್ನು ಸರಿದೂಗಿಸಿಕೊಡಬೇಕು. ಸೆಸ್ ಹಾಗೂ ಸರ್‌ಚಾರ್ಜ್‌ಗೆ ಒಂದು ಮಿತಿಯನ್ನು ಹಾಕಬೇಕು. ತಮ್ಮ ಶಿಫಾರಸುಗಳು ಜಾರಿಯಾಗುವ ದಿಸೆಯಲ್ಲೂ ಯೋಚಿಸಬೇಕು. ಇಲ್ಲದೇ ಹೋದರೆ ಶಿಫಾರಸುಗಳಿಗೆ ಅರ್ಥವೇ ಇರುವುದಿಲ್ಲ.

ಚುರುಮುರಿ

ಇಡ್ಲಿ ಪುರಾಣ

● ಆನಂದ

'ಮಲ್ಲಿಗೆ ಇಡ್ಲಿ ಗೊತ್ತು, ಮಲ್ಲಿಗೆ ದೋಸೆ ಕೇಳಿದ್ದೀರಾ?' ಮಡದಿ ಕೇಳಿದಾಗ 'ಇಲ್ಲ' ಎಂದೆ.

'ಮೈಸೂರಿನಲ್ಲಿ ಸಿಗುತ್ತಂತೆ'.

'ನೆಕ್ಸ್ಟ್ ಟೈಂ ಹೋದಾಗ ತಿಂದೇ ಬಿಡೋಣ' ಎಂದು ಪ್ರಾಮಿಸ್ ಮಾಡಿದೆ.

'ದೋಸೆಗಿಂತ ಇಡ್ಲೀನೆ ಹೆಚ್ಚು ಹೆಸರುವಾಸಿ ಅಲ್ಲವೆ? ದೋಸೇಲಿ ಎಷ್ಟು ವೆರೈಟಿ ಇದೆ ಮಹಾ? ಮಸಾಲೆ, ಸಾದಾ, ಸೆಟ್, ಈರುಳ್ಳಿ ಮಿಕ್ಸ್ ಮಾಡಿದರೆ ಈರುಳ್ಳಿ ದೋಸೆ, ರವೆ ಬೆರೆಸಿದರೆ ರವಾ ದೋಸೆ, ನೀರು ದೋಸೆ... ಮುಗೀತಲ್ಲ ಅದರ ಅವತಾರಗಳು' ಎಂದಳು.

'ಇಡ್ಲಿ ಅವತಾರಗಳು ಬಹಳಷ್ಟಿವೆ. ಮಲ್ಲಿಗೆ ಇಡ್ಲಿ, ಸಾದಾ ಇಡ್ಲಿ, ಮಸಾಲಾ ಇಡ್ಲಿ, ರವಾ ಇಡ್ಲಿ, ಪೋಡಿ ಇಡ್ಲಿ, ಕಾಂಚೀಪುರಂ ಇಡ್ಲಿ...'

'ಕಾಂಚೀಪುರಂ ಸಿಲ್ಕ್ ಸೀರೆ ಗೊತ್ತು. ಇಡ್ಲಿ ಬೇರೆ ಇದೆಯೇನು?'

'ಇದೆ. ತಟ್ಟೆ ಇಡ್ಲಿ, ಘೀ ಇಡ್ಲಿ, ಬಟನ್ ಇಡ್ಲಿ... ಖುಷ್ಬೂ ಇಡ್ಲಿ ಅಂತಾನೂ ಸಿಗುತ್ತಂತೆ ಕೊಯಮತ್ತೂರಿನಲ್ಲಿ'.

'ಖುಷ್ಬೂ? ಆಕೆ ಇಡ್ಲಿ ತರಹ ಇಲ್ಲವಲ್ಲ?'

'ಅದೇನೋ ಆ ಹೆಸರು ಬಂದಿದೆ. ಅಂದಹಾಗೆ ಇಡ್ಲಿ ಎಲ್ಲಿ ಹೋದರೂ ಇಡ್ಲೀನೇ. ದೋಸೆ ಮಾತ್ರ ದೋಶೆ, ದೋಸಾ, ದೋಸೈ ಹೀಗೆ ಅನೇಕರ ಬಾಯಿಯಲ್ಲಿ ಸಿಕ್ಕಿ ನಲುಗಿದೆ'.

'ಇರಬಹುದು. ಇದು ಗಮನಿಸಿದ್ದೀಯಾ? ಈ ಇಡ್ಲಿಯು ಉದ್ದಿನ ವಡೆ ಜತೆ ಮಾತ್ರ ಹೋಗುತ್ತೆ. ಇಡ್ಲಿ ವಡೆ ಅಂತಾನೇ ಆರ್ಡರ್ ಮಾಡ್ತಾರೆ ಹೋಟೆಲಿನಲ್ಲಿ, ಪೂರಿ ಸಾಗು ತರಹ. ಆದರೆ ಇಡ್ಲಿ ದೋಸೆ? ನೊ ನೊ'

'ಅದೇನೊ ಅವರಿಬ್ಬರದೂ ಅವಿನಾಭಾವ ಸಂಬಂಧ'.

'ದೋಸೆ ಭಾರತದ್ದೇ ಇರಬಹುದು, ಆದರೆ ಇಡ್ಲಿ ಫಾರಿನ್ ಮಾಲು'.

'ಫಾರಿನ್?!'

'ಅದು ಮೊದಲು ತಯಾರಾಗಿದ್ದು ಇಂಡೊನೇಷ್ಯಾದಲ್ಲಂತೆ. ಆಗ ಅದರ ಹೆಸರು ಇಡ್ಡಲಿಗೆ. ಕರ್ನಾಟಕಕ್ಕೆ ಬಂದ ಮೇಲೆ ಇಡ್ಲಿ ಆಯಿತು ಎನ್ನುತ್ತೆ ಇಡ್ಲಿ ಚರಿತ್ರೆ'.

'ಆದರೆ ವಡೆ ನಮ್ಮದೇ. ಇಡ್ಲಿ ಜತೆ ಹೊಂದಿಕೊಂಡಿದೆ'.

'ಸಾಕು, ನಿಮ್ಮ ಇಡ್ಲಿ ಪುರಾಣ. ಹೋಗಿ ತಟ್ಟೆ ಇಡ್ಲಿ ಪಾರ್ಸಲ್ ತನ್ನಿ. ಸಾಂಬಾರ್ ಮರೀಬೇಡಿ'.

ಸಂಗತ

ಕಠಿಣ ಕಣ್ಗಾವಲು: ಪರೀಕ್ಷೆಗೇ ಪರೀಕ್ಷೆ!

ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸುವುದು ಗುಣಮಟ್ಟದ ಶಿಕ್ಷಣದ ದೃಷ್ಟಿಯಿಂದ ಬಹಳ ಪ್ರಮುಖವಾದ ಅಂಶ

● ಎಚ್.ಬಿ.ಚಂದ್ರಶೇಖರ್

ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಗಿದು, ಪರೀಕ್ಷೆ ಬರೆದ ಮಕ್ಕಳು ಹಾಗೂ ಪರೀಕ್ಷಾ ಕಾರ್ಯ ನಡೆಸಿದ ಸಿಬ್ಬಂದಿ ನಿರಾಳರಾಗಿ ಫಲಿತಾಂಶವನ್ನು ಎದುರು ನೋಡುತ್ತಿದ್ದಾರೆ. ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶಾಲಾ ಶಿಕ್ಷಣ ಇಲಾಖೆ ಕೈಗೊಂಡ ವಿನೂತನ ಪ್ರಯತ್ನದಿಂದ 'ಪರೀಕ್ಷೆಗಳಿಗೇ ಪರೀಕ್ಷೆ' ಒಡ್ಡಿದಂತಾಯಿತು.

ಹಿಂದಿನ ಕೆಲ ವರ್ಷಗಳಿಂದ ಪರೀಕ್ಷಾ ಕೊಠಡಿಯಲ್ಲಿ ಸಿ.ಸಿ. ಟಿ.ವಿ. ಕ್ಯಾಮೆರಾದ ಕಣ್ಗಾವಲು ವ್ಯವಸ್ಥೆಯ ಪರಿಪಾಟವಿತ್ತು. ಆದಾಗ್ಯೂ ಸಿ.ಸಿ. ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗುವ ದೃಶ್ಯಗಳನ್ನು ಪರಿಶೀಲಿಸಿ, ಸಂದರ್ಭಾನುಸಾರ ಕ್ರಮ ಜರುಗಿಸದಿದ್ದಲ್ಲಿ ಯಾವುದೇ ಪರಿಣಾಮ ಇರದು. ಈ ಕಾರಣದಿಂದ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪರೀಕ್ಷಾ ಕೊಠಡಿಗಳ ಸಿ.ಸಿ. ಟಿ.ವಿ. ಕ್ಯಾಮೆರಾಗಳ ದೃಶ್ಯಗಳನ್ನು ವೆಬ್‌ಹೋಸ್ಟ್ ಮಾಡಿಸಿ, ಪರೀಕ್ಷಾ ಕೊಠಡಿಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಇಲಾಖೆಯ ಆಯ್ದ ಅಧಿಕಾರಿಗಳು ಕೂಲಂಕಷವಾಗಿ ಪರಿಶೀಲಿಸಿ, ಅನುಮಾನಾಸ್ಪದ ಪ್ರಕರಣಗಳ ಕುರಿತು ಅಗತ್ಯ ಕ್ರಮ ಕೈಗೊಳ್ಳುವ ವ್ಯವಸ್ಥೆ ಜಾರಿಗೊಳಿಸಲಾಯಿತು. ಇದರಿಂದ, ಕೆಲವೆಡೆ ನಡೆಯುತ್ತಿದ್ದ ಪರೀಕ್ಷಾ ಅಕ್ರಮ ಪ್ರಕರಣಗಳನ್ನು ಸಮರ್ಥವಾಗಿ ತಡೆಯಲು ಸಹಕಾರಿಯಾಯಿತು ಹಾಗೂ ಆ ಮೂಲಕ ಪರೀಕ್ಷೆಗಳ ಕುರಿತು ಕಠಿಣ ಸಂದೇಶ ನೀಡಲಾಯಿತು. ಇಲಾಖೆಯ ಈ ಹೊಸ ಹೆಜ್ಜೆಯನ್ನು ಕೆಲವರು ಪ್ರಶಂಸಿಸಿ ಪದ್ಯಗಳನ್ನು ರಚಿಸಿದ್ದು, ಅವುಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹೆಚ್ಚಾಗಿ ಹಂಚಿಕೊಳ್ಳಲಾಗಿದೆ.

ಸಂಚಾರ ನಿಯಮ ಉಲ್ಲಂಘಿಸುವವರನ್ನು ಸಿ.ಸಿ. ಟಿ.ವಿ. ಕ್ಯಾಮೆರಾ ಮೂಲಕ ಗುರುತಿಸಿ, ದಂಡ ವಿಧಿಸುವ ಕ್ರಮಗಳು ಜಾರಿಯಲ್ಲಿವೆ. ಸಾರ್ವಜನಿಕ ವಲಯದಲ್ಲಿ ಈ ಕುರಿತು ಸಹಮತವೂ ಇದೆ. ಬೇರೆ ಬೇರೆ ಬಗೆಯ ಅಕ್ರಮಗಳನ್ನು ತಡೆಗಟ್ಟಲು ಸಹ ತಂತ್ರಜ್ಞಾನದ ಸಹಾಯ ಪಡೆಯಲಾಗುತ್ತಿದೆ. ಅದೇರೀತಿ ಗುಣಮಟ್ಟದ ಶಿಕ್ಷಣಕ್ಕೆ ದೊಡ್ಡ ಅಡ್ಡಿಯಾಗಿರುವ ಪರೀಕ್ಷಾ ಅಕ್ರಮಗಳ ತಡೆಗೆ ಸಿ.ಸಿ. ಟಿ.ವಿ. ಕ್ಯಾಮೆರಾ, ವೆಬ್‌ಹೋಸ್ಟಿಂಗ್‌ನಂತಹ ಕ್ರಮಗಳು ನೆರವು ನೀಡುತ್ತವೆ.

ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸುವುದು ಗುಣಮಟ್ಟದ ಶಿಕ್ಷಣದ ದೃಷ್ಟಿಯಿಂದ ಬಹಳ ಪ್ರಮುಖವಾದ ಅಂಶವಾಗಿದೆ. ಪರೀಕ್ಷೆಗಳನ್ನು ಗಂಭೀರವಾಗಿ ನಡೆಸದಿದ್ದರೆ ಪರೀಕ್ಷಾ ಪಾವಿತ್ರ್ಯವೇ ಇಲ್ಲದಂತೆ ಆಗಿಬಿಡುತ್ತದೆ. ಪಠ್ಯವನ್ನು ಸರಿಯಾಗಿ ಓದಿದವರಿಗೂ ಓದದೆ ಇರುವವರಿಗೂ ಯಾವುದೇ ವ್ಯತ್ಯಾಸ ಇಲ್ಲದಂತೆ ಆಗುತ್ತದೆ. ಎಸ್‌ಎಲ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ನಕಲು ಮಾಡಿ ಪಾಸಾಗಬಹುದು ಎಂಬ ಸಂದೇಶ ವ್ಯಾಪಕವಾದಲ್ಲಿ ಕೆಳಹಂತದ ತರಗತಿಗಳ ವಿದ್ಯಾರ್ಥಿಗಳೂ ಕಲಿಕೆಯನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ.

'ಎಲ್ಲರೂ ನಕಲು ಮಾಡಿಯೇ ಪಾಸಾಗಿರುತ್ತಾರೆ' ಎಂಬ ಭಾವನೆ ಕೆಲವು ವಿದ್ಯಾರ್ಥಿಗಳಲ್ಲಿ ಬೇರೂರಿರುವುದನ್ನು ನಾವು ಗಮನಿಸಬಹುದು. ಖಾಸಗಿ ಶಾಲೆಯೊಂದರ ಆಡಳಿತ ಮಂಡಳಿಯ ಸದಸ್ಯರೊಬ್ಬರು 'ಬೇರೆ ಬೋರ್ಡ್‌ನವರು ಮಕ್ಕಳನ್ನು ಉದಾರವಾಗಿ ಪಾಸು ಮಾಡುವ ವ್ಯವಸ್ಥೆ ಇರುವಾಗ, ರಾಜ್ಯ ಪಠ್ಯಕ್ರಮ ಓದುವ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ಇಷ್ಟೊಂದು ಕಠಿಣವಾಗಿ ನಡೆಸಿದರೆ ಹೇಗೆ? ಹೀಗಾದಲ್ಲಿ ಹೆಚ್ಚಿನ ಶಾಲೆಗಳು ಉದಾರ ಧೋರಣೆಯ ಬೋರ್ಡ್‌ಗಳ ಶಿಕ್ಷಣಕ್ಕೆ ಬದಲಾಗುತ್ತಾರೆ' ಎಂದರು.

ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಕಲು ಮಾಡುವುದು ಅಥವಾ ಶಿಕ್ಷಕರು ಒಂದಷ್ಟು ಉತ್ತರಗಳನ್ನು ಹೇಳಿಕೊಡುವುದು ತಪ್ಪಿಲ್ಲ ಎಂಬ ಭಾವನೆಯನ್ನು ಕೆಲ ಪೋಷಕರೂ ಹೊಂದಿದ್ದಾರೆ. ಪರೀಕ್ಷೆಗಳನ್ನು ವಸ್ತುನಿಷ್ಠವಾಗಿ ನಡೆಸುವುದು ಅಗತ್ಯವಾಗಿ ಮಾಡಲೇಬೇಕಾದ ಕಾರ್ಯ ಎಂಬ ಅಂಶವನ್ನು ಶಿಕ್ಷಣದ ಭಾಗೀದಾರರೆಲ್ಲರಿಗೂ ಮನದಟ್ಟು ಮಾಡುವ ಅಗತ್ಯವಿದೆ.

ಶಾಲಾ ಹಂತದಲ್ಲಿ ಎಲ್ಲಾ ತರಗತಿಗಳಿಗೆ ನಡೆಸುವ ಸಮಗ್ರ ಮತ್ತು ವ್ಯಾಪಕ ಮೌಲ್ಯಮಾಪನ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ವಿವಿಧ ತರಗತಿಗಳಿಗೆ ನಡೆಸುವ ಮೌಲ್ಯಾಂಕನ ಪರೀಕ್ಷೆಗಳು ಹಾಗೂ

ವಾರ್ಷಿಕ ಪರೀಕ್ಷೆಗಳನ್ನು ಮಕ್ಕಳಸ್ನೇಹಿ ವಾತಾವರಣದಲ್ಲಿ ಪಾರದರ್ಶಕವಾಗಿ, ವಸ್ತುನಿಷ್ಠವಾಗಿ ನಡೆಸುವ ಪರಿಪಾಟ ಸೃಷ್ಟಿಯಾಗಬೇಕು. ಇದಕ್ಕೆ ಹೊಂದಿಕೊಳ್ಳುವ ವಿದ್ಯಾರ್ಥಿಗಳು ಬೋರ್ಡ್ ಪರೀಕ್ಷೆಗಳನ್ನು ಸಮಗ್ರ ತಯಾರಿಯ ಸಹಿತ ಎದುರಿಸಲು ಸಜ್ಜಾಗುತ್ತಾರೆ.

ಪರೀಕ್ಷಾ ಅಕ್ರಮ ಎನ್ನುವುದು ಒಂದು ಜಾಗತಿಕ ಪಿಡುಗಾಗಿದೆ. ದಕ್ಷಿಣ ಆಫ್ರಿಕಾದ ನೈಜೀರಿಯ ಹಾಗೂ ಘಾನಾ ದೇಶದಲ್ಲಿ ಶಿಕ್ಷಣದ ಎಲ್ಲಾ ಹಂತಗಳಲ್ಲಿ ನಡೆಸುವ ಪರೀಕ್ಷೆಗಳಲ್ಲಿ ಅಕ್ರಮಗಳು ವ್ಯಾಪಕವಾಗಿ ನಡೆಯುವ ಪರಿಸ್ಥಿತಿಯಿದ್ದು, ಶಿಕ್ಷಣದ ಗುಣಮಟ್ಟಕ್ಕೆ ದೊಡ್ಡ ಹೊಡೆತ ನೀಡಿರುವ ಬಗ್ಗೆ ಅಧ್ಯಯನ ವರದಿಗಳಿವೆ. ಪರೀಕ್ಷೆ ಅಥವಾ ವಿವಿಧ ಮೌಲ್ಯಾಂಕನಗಳಲ್ಲಿ ಅಕ್ರಮಗಳು ನಡೆದಾಗ, ಅವುಗಳಿಂದ ಬಂದ ಫಲಿತಾಂಶವನ್ನು ವಿದ್ಯಾರ್ಥಿ, ಶಾಲೆ, ತಾಲ್ಲೂಕು, ಜಿಲ್ಲೆ, ರಾಜ್ಯ, ದೇಶಗಳ ನಡುವೆ ಹೋಲಿಸುವ ಪ್ರಕ್ರಿಯೆಯು ತಾರತಮ್ಯದಿಂದ ಕೂಡಿರುತ್ತದೆ ಮತ್ತು ಇದು ಅನೇಕ ಸಮಸ್ಯೆಗಳನ್ನು ಸೃಷ್ಟಿಸುತ್ತದೆ.

ಪಾರದರ್ಶಕ ಪರೀಕ್ಷಾ ವ್ಯವಸ್ಥೆಯಿಂದ ಬರುವ ಫಲಿತಾಂಶವು ಶಿಕ್ಷಣ ವ್ಯವಸ್ಥೆಯ ಕೈಗನ್ನಡಿಯಾಗಿ ನೈಜ ಬಿಂಬವನ್ನು ಪ್ರತಿಬಿಂಬಿಸುತ್ತದೆ. ಇದರ ಆಧಾರದ ಮೇಲೆ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಲು ಅಗತ್ಯವಾದ ದೂರಗಾಮಿ ಕಾರ್ಯತಂತ್ರ ಹಾಗೂ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ದಿಸೆಯಲ್ಲಿ ದೃಢವಾದ ಹೆಜ್ಜೆಗಳನ್ನಿರಿಸಲು ಇದು ಸಕಾಲ.

ವಾಚಕರ ವಾಣಿ

ನಾವು ನೀರು ಸೃಷ್ಟಿಸಬಲ್ಲೆವೇ?

ರಾಜ್ಯದಾದ್ಯಂತ ನೀರಿನ ಅಭಾವದಿಂದಾಗಿ ಹಾಹಾಕಾರದ ಪರಿಸ್ಥಿತಿ ಉಂಟಾಗಿದೆ. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಜನ, ಜಾನುವಾರುಗಳು, ಪಕ್ಷಿ, ಪ್ರಾಣಿ ಸಂಕುಲಕ್ಕೆ ಕುಡಿಯಲು ಸಹ ಸರಿಯಾಗಿ ನೀರಿಲ್ಲದೆ ವ್ಯಥೆಪಡುವಂತಾಗಿದೆ. ಕಾಡುಪ್ರಾಣಿಗಳು ಇತ್ತೀಚೆಗೆ ನೀರು, ಆಹಾರವನ್ನು ಅರಸಿ ನಾಡಿಗೆ ನುಗ್ಗುತ್ತಿವೆ. ಇಂತಹ ಸ್ಥಿತಿಯಲ್ಲಿ ಜಲಜಾಗೃತಿಯ ಆಂದೋಲನ ಆಗಬೇಕಾಗಿದೆ. ಇದರ ನಡುವೆಯೂ ಅಧಿಕಾರಿಗಳು ಮತ್ತು ಶ್ರೀಮಂತರು ದರ್ಪದಿಂದ ಈಜುಕೊಳ, ಬಾತ್‌ಟಬ್, ವಾಟರ್‌ಪಾರ್ಕ್‌ನಲ್ಲಿ ನೀರು ತುಂಬಿಸಿ ಅದರಲ್ಲಿ ಮೋಜು ಮಸ್ತಿ ಮಾಡುವಂತಹ ಕೆಟ್ಟ ಸಂಸ್ಕೃತಿ ನಿರ್ಮಾಣವಾಗಿರುವುದು ದುರದೃಷ್ಟಕರ. ಇದು ಎಷ್ಟು ಸರಿ? ಇಂತಹವರು ಸಾಮಾಜಿಕ ಬದ್ಧತೆ ತೋರಿಸಬೇಕಾದ ಅಗತ್ಯವಿದೆ.

ಮೂರ್ನಾಲ್ಕು ವರ್ಷಗಳ ಹಿಂದೆ ಐಎಎಸ್ ಅಧಿಕಾರಿಯೊಬ್ಬರು ಜಿಲ್ಲಾಧಿಕಾರಿಯಾಗಿದ್ದಾಗ ತಮ್ಮ ಅಧಿಕೃತ ಸರ್ಕಾರಿ ನಿವಾಸದಲ್ಲಿ ಈಜುಕೊಳವನ್ನು ಕಟ್ಟಿಸಿಕೊಂಡಿದ್ದು ಸುದ್ದಿಯಾಗಿತ್ತು. ಶ್ರೀಮಂತರು ತಮ್ಮ ಹಣಬಲದಿಂದ ಮತ್ತು ಅಧಿಕಾರಿಗಳು ತಮ್ಮ ಅಧಿಕಾರದ ದರ್ಪದಿಂದ ಒಂದು ಹನಿಯಷ್ಟಾದರೂ ನೀರನ್ನು ಉತ್ಪಾದಿಸಲು ಸಾಧ್ಯವೇ? ಇಂತಹ ಸಂವೇದನಾರಹಿತ ವ್ಯಕ್ತಿಗಳಿಂದ ಬಡವರು ಮತ್ತು ಮಧ್ಯಮವರ್ಗದವರಿಗೆ ತುಂಬಾ ತೊಂದರೆಯಾಗುತ್ತಿದೆ. ಈ ದಿಸೆಯಲ್ಲಿ ಅಧಿಕಾರಸ್ಥರು ಹಾಗೂ ಉಳ್ಳವರು ಸಾಮಾಜಿಕ ಪ್ರಜ್ಞೆ ಬೆಳೆಸಿಕೊಳ್ಳಬೇಕಾದ, ನೈಸರ್ಗಿಕ ಸಂಪನ್ಮೂಲಗಳ ಬಗ್ಗೆ ಕಾಳಜಿ ಮತ್ತು ಬದ್ಧತೆಯನ್ನು ತೋರಬೇಕಾದ ಅವಶ್ಯಕತೆ ಇದೆ. ಈ ಕುರಿತು ಸರ್ಕಾರ ಸಹ ಸೂಕ್ತ ಕ್ರಮಗಳನ್ನು ಕೈಗೊಳ್ಳಲಿ.

ನ್ಯಾಯಮೂರ್ತಿ ಹಂಚಾಟೆ ಸಂಜೀವ್‌ಕುಮಾರ್, ಬೆಂಗಳೂರು

ಮತದಾನದ ಗೋಪ್ಯತೆ ಕಾಯುತ್ತಿದ್ದ ಆ ದಿನಗಳು...

ತುರ್ತುಪರಿಸ್ಥಿತಿಯ ಕರಾಳ ದಿನಗಳು ಸರಿದು ದಶಕವೂ ಸಂದಿರಲಿಲ್ಲ. ಬಹುಶಃ ಇಂದಿರಾ ಗಾಂಧಿ ಅವರ ಹತ್ಯೆಯ ನಂತರದ ಲೋಕಸಭಾ ಚುನಾವಣೆಯಲ್ಲಿ ನನ್ನ ಅಪ್ಪ-ಅಮ್ಮ ಮತ ಹಾಕಿಬಂದಾಗ, ನಾವು ಕುತೂಹಲದಿಂದ 'ಯಾವ ಪಕ್ಷಕ್ಕೆ ವೋಟ್ ಹಾಕಿದ್ರಿ' ಎಂದು ಕೇಳಿದೆವು. ಆ ಪ್ರಶ್ನೆಗೆ ಅವರು 'ಹಾಗೆಲ್ಲಾ ಕೇಳಬಾರ್ದು, ಅದು ಹೇಳುವಂಥದ್ದಲ್ಲ, ನೀವು ಕೇಳುವಂಥದ್ದಲ್ಲ' ಎಂದು ತಿಳಿಹೇಳಿದ್ದುದು ಇಂದಿಗೂ ಕಿವಿಯಲ್ಲಿ ಅನುರಣಿಸುತ್ತದೆ. ಆದರೆ, ಇಂದು...? ಲೋಕಸಭಾ ಚುನಾವಣೆ ಘೋಷಣೆಯಾದ ದಿನದಿಂದಲೇ ವಿದ್ಯುನ್ಮಾನ ಮಾಧ್ಯಮಗಳ ಹಲವಾರು ವಾಹಿನಿಗಳ ಪ್ರತಿನಿಧಿಗಳು ಸಮೀಕ್ಷೆಯ ನೆಪದಲ್ಲಿ, ಅದೂ ವಿಚಿತ್ರ ದಿರಿಸಿನಲ್ಲಿ ಮತದಾರರನ್ನು ಸಂದರ್ಶಿಸುವ ರೀತಿ ಅಸಹ್ಯ ಹುಟ್ಟಿಸುವಂತೆ ಇರುತ್ತದೆ. ಈ ಪ್ರತಿನಿಧಿಗಳು ಮತದಾರರನ್ನು ನೇರವಾಗಿ, 'ನೀವು ಯಾವ ಪಕ್ಷಕ್ಕೆ ವೋಟ್ ಹಾಕ್ತೀರಾ?' ಎಂದು ಕೇಳುವ ಮೂಲಕ ಚುನಾವಣೆಯ ಪಾವಿತ್ರ್ಯವನ್ನು ಇನ್ನಿಲ್ಲದಂತೆ ಹಾಳುಗೆಡವುತ್ತಿದ್ದಾರೆ.

ಇಂತಹ ಅವಿವೇಕದ ನಡೆಯು ಪಾರದರ್ಶಕ, ನ್ಯಾಯಪರ ಚುನಾವಣೆ ಪ್ರಕ್ರಿಯೆಯ ದಾರಿ ತಪ್ಪಿಸುತ್ತಿದೆ. ಪ್ರಜ್ಞಾವಂತ, ಸುಶಿಕ್ಷಿತ ಮತದಾರರೂ ಇಂತಹ ಪ್ರಶ್ನೆಗಳಿಗೆ ಹಿಂದೆ ಮುಂದೆ ಯೋಚಿಸದೆ, ತಾವು ಇಂತಹ ಪಕ್ಷಕ್ಕೇ ವೋಟ್ ಹಾಕುವುದಾಗಿ ಉತ್ತರಿಸುತ್ತಿರುವುದು ಹೇಯವಾದುದು. ಈ ಹಿಂದಿನ ಚುನಾವಣೆಯಲ್ಲಿ ಮತದಾನ ಮಾಡಿದ್ದನ್ನು ವಿಡಿಯೊ ಮಾಡಿ ಪ್ರದರ್ಶಿಸಿದ ಮತದಾರನ ಮೇಲೆ ಚುನಾವಣಾ ಆಯೋಗ ಪ್ರಕರಣ ದಾಖಲಿಸಿದ ನಿದರ್ಶನ ಇದೆ. ಈಗ ಇಂತಹ ಪ್ರತಿನಿಧಿಗಳು ಮತ್ತು ಅದನ್ನು ಪ್ರಸಾರ ಮಾಡುವವರ ಮೇಲೆ ಆಯೋಗ ಏಕೆ ಕ್ರಮ ಕೈಗೊಳ್ಳುತ್ತಿಲ್ಲ? ವಾಹಿನಿಗಳು ಕೂಡ ತಮ್ಮ ಪ್ರತಿನಿಧಿಗಳು ಎಂಥ ಪ್ರಶ್ನೆಗಳನ್ನು ಮತದಾರರಲ್ಲಿ ಕೇಳಬೇಕು, ಸಮೀಕ್ಷಾ ಪ್ರಶ್ನೆಗಳ ಸ್ವರೂಪ ಹೇಗಿರಬೇಕು, ನಾಗರಿಕರೊಂದಿಗೆ ಹೇಗೆ ನಡೆದುಕೊಳ್ಳಬೇಕು ಎಂಬಂತಹ 'ಮಾಧ್ಯಮ ವಿವೇಕದ ಮಾರ್ಗ'ವನ್ನು ತೋರಿಸುವುದು ಔಚಿತ್ಯ.

ಸಿದ್ಧಲಿಂಗಸ್ವಾಮಿ ಹಿರೇಮಠ, ಮೈಸೂರು

ಈವರೆಗೆ ಸುಮ್ಮನಿದ್ದುದೇಕೆ?

ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಆಸ್ತಿಪಾಸ್ತಿ ಸಂಗ್ರಹಕ್ಕೆ ಸಂಬಂಧಿಸಿದಂತೆ ಮಾಡುತ್ತಿರುವ ಆರೋಪಗಳನ್ನು ಪತ್ರಿಕೆಯಲ್ಲಿ ಓದಿ ಗಾಬರಿಯಾಯಿತು. ಅವರ ಬಳಿ ಇದಕ್ಕೆ ಸಂಬಂಧಿಸಿದ ದಾಖಲೆಗಳೂ ಇವೆಯಂತೆ. ಈ ರೀತಿಯ ಪ್ರಕರಣಗಳು ಅವರ ಗಮನಕ್ಕೆ ಬಂದಿದ್ದರೂ, ಸಂಬಂಧಿಸಿದ ದಾಖಲೆಗಳಿದ್ದರೂ ಇದುವರೆಗೂ ಕುಮಾರಸ್ವಾಮಿ ಅವರು ಕಾನೂನು ರೀತ್ಯ ಕ್ರಮ ಕೈಗೊಳ್ಳಲು ಮುಂದಾಗದಿರುವುದಕ್ಕೆ ಕಾರಣವೇನು ಎಂಬುದು ತಿಳಿಯಲಿಲ್ಲ. ಈಗಿನ ನಾಯಕರು ಪರಸ್ಪರ ಮಾಡಿಕೊಳ್ಳುತ್ತಿರುವ ಆರೋಪ, ಪ್ರತ್ಯಾರೋಪಗಳನ್ನು ಗಮನಿಸಿದರೆ, ಪಕ್ಷಾತೀತವಾಗಿ ಇಂತಹ ಹಲವಾರು ಪ್ರಕರಣಗಳ ಬಗ್ಗೆ ಮಹತ್ವದ ಪುರಾವೆಗಳು ಹಲವಾರು ರಾಜಕೀಯ ವ್ಯಕ್ತಿಗಳ ಬಳಿ ಇರುವಂತೆ ಕಾಣುತ್ತಿದೆ! ಇಂತಹ ಮಹಾನುಭಾವರು ಈ ದಾಖಲೆಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ಸಲ್ಲಿಸಿ, ಕ್ರಮಕ್ಕೆ ಆಗ್ರಹಿಸಿದರೆ ಮಾತ್ರ ಅವರ ಮಾತುಗಳಿಗೆ ಒಂದು ತೂಕ ಇರುತ್ತದೆ.

ಹರೀಶ್, ಬೆಂಗಳೂರು

ಅವಹೇಳನ: ತುರ್ತು ಕ್ರಮ ಜರುಗಲಿ

ಬಿಜೆಪಿ ಸಂಸದೆ ಹೇಮಾಮಾಲಿನಿ ಅವರ ವಿರುದ್ಧ ಕಾಂಗ್ರೆಸ್ ಮುಖಂಡ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ನೀಡಿದ್ದ ಅವಹೇಳನಕಾರಿ ಹೇಳಿಕೆಗೆ ಪ್ರತಿಯಾಗಿ ಚುನಾವಣಾ ಆಯೋಗ ಅವರಿಗೆ 48 ಗಂಟೆಗಳ ಕಾಲ ಪ್ರಚಾರ ಮಾಡದಂತೆ ನಿರ್ಬಂಧ ಹೇರಿರುವ ಸುದ್ದಿ ತಿಳಿದು ಸಮಾಧಾನವಾಯಿತು. ಆದರೆ, ಚುನಾವಣಾ ನಿಯಮ ಉಲ್ಲಂಘಿಸುವ ಪ್ರಕರಣಗಳನ್ನು ಮತ್ತಷ್ಟು ತ್ವರಿತವಾಗಿ ಇತ್ಯರ್ಥಪಡಿಸಿ, ನಿಯಮಗಳನ್ನು ಗಾಳಿಗೆ ತೂರುವವರ ವಿರುದ್ಧ ಆಯೋಗ ಕೂಡಲೇ ಕ್ರಮ ಕೈಗೊಳ್ಳಬೇಕು. ಏಕೆಂದರೆ, ಸುರ್ಜೇವಾಲಾ ಅವರ ವಿರುದ್ಧ ಕ್ರಮ ಜರುಗಿಸಲು ಆಯೋಗ ಒಂದು ತಿಂಗಳಷ್ಟು ಸಮಯ ತೆಗೆದುಕೊಂಡಿದೆ. ಚುನಾವಣೆಗಳು ಸೀಮಿತ ಅವಧಿಯಲ್ಲಿ ಜರುಗುವುದರಿಂದ ವಿಳಂಬ ನೀತಿ ಅನುಸರಿಸುವುದು ಸಾಧುವಲ್ಲ.

ತಮ್ಮ ಇಲ್ಲವೇ ತಮ್ಮ ಪಕ್ಷದ ಅಭ್ಯರ್ಥಿಗಳ ಗೆಲುವಿಗಾಗಿ ರಾಜಕಾರಣಿಗಳು ಸುಳ್ಳು ಭರವಸೆ ನೀಡುವುದು, ಹಣ, ವಸ್ತುಗಳು, ಆಭರಣದಂತಹ ಆಮಿಷವೊಡ್ಡುವುದು, ಮತದಾರರನ್ನು ಬೆದರಿಸುವಂತಹ ಪ್ರಯತ್ನಗಳನ್ನು ಮಾಡಿಯೇ ತೀರುತ್ತಾರೆ. ನಿಯಮ ಉಲ್ಲಂಘಿಸುವಂತಹ ಮುಖಂಡರ ವಿರುದ್ಧ ಕನಿಷ್ಠ 24 ಗಂಟೆಗಳ ಒಳಗಾಗಿ ಸೂಕ್ತ ತನಿಖೆ ನಡೆಸಿ ಕ್ರಮ ಜರುಗಿಸಬೇಕಿದೆ. ದ್ವೇಷ ಭಾಷಣ ಮಾಡುವವರ ವಿರುದ್ಧ ತಕ್ಷಣ ಕಠಿಣ ಕ್ರಮ ಕೈಗೊಳ್ಳಬೇಕು.

ಎಂ.ಜಿ.ರಂಗಸ್ವಾಮಿ, ಹಿರಿಯೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅರೇಬಿಯಾ ಉಪಖಂಡ

ಮರಳುಗಾಡಲ್ಲಿ ಮಹಾಮಳೆ

• ಜಯಸಿಂಹ ಆರ್., ಸುಕೃತ ಎಸ್.

ಯುಎಇ ಸೇರಿದಂತೆ ಮಧ್ಯಪ್ರಾಚ್ಯ ಮತ್ತು ಪಶ್ಚಿಮ ಏಷ್ಯಾದ ದೇಶಗಳಲ್ಲಿ ಸದಾ ಒಣಹವೆ ಇರುತ್ತದೆ. ವರ್ಷವೊಂದರಲ್ಲಿ ತೀರಾ ಕಡಿಮೆ ಎನ್ನುವಷ್ಟು ಮಳೆಯಾಗುತ್ತದೆ. ಆದರೆ ಅದಕ್ಕೆ ಅಪವಾದ ಎಂಬಂತೆ ಹಲವು ವರ್ಷಗಳಿಗೆ ಒಮ್ಮೆ ನೆಲವೇ ಕೊಚ್ಚಿ ಹೋಗುವಷ್ಟು ಮಳೆಯಾಗುತ್ತದೆ. ಒಂದೆರಡು ವರ್ಷಗಳಲ್ಲಿ ಆಗುವಷ್ಟು ಮಳೆ ಒಂದೇ ದಿನದಲ್ಲಿ ಸುರಿದುಬಿಡುತ್ತದೆ. ಮಂಗಳವಾರ ಯುಎಇಯಲ್ಲಿ ಆಗಿದ್ದೂ ಇಂಥದ್ದೇ ಮಳೆ ಎಂದು ವಿಜ್ಞಾನಿಗಳು ವಿವರಿಸಿದ್ದಾರೆ. ದುಬೈ ಮಾತ್ರವಲ್ಲ ಪಕ್ಕದ ಸೌದಿ ಅರೇಬಿಯಾ, ಒಮಾನ್, ಯೆಮನ್, ಕುವೈತ್, ಜೋರ್ಡನ್‌ನಲ್ಲೂ ಒಂದು ವಾರದಿಂದೀಚೆಗೆ ಇಂಥದ್ದೇ ಮಳೆ ಸುರಿಯುತ್ತಿದೆ. ಈ ಹಿಂದೆಯೂ ಇಂಥ ಮಳೆಯಾಗಿದ್ದರೂ ಈಗ ಸುರಿಯುತ್ತಿರುವ ಮಳೆಯ ಪ್ರಮಾಣ ವಿಪರೀತ ಎನಿಸುವಷ್ಟು ಇದೆ. ಇದಕ್ಕೆ ಕಾರಣಗಳೇನು ಎಂಬುದನ್ನು ವಿವರಿಸಲು ವಿಜ್ಞಾನಿಗಳು ಯತ್ನಿಸಿದ್ದಾರೆ.

1975ರ ಫೆಬ್ರುವರಿ 16–17ರ ಮಧ್ಯರಾತ್ರಿಯಲ್ಲಿ ಸೌದಿ ಅರೇಬಿಯಾದ ಪೂರ್ವ ಭಾಗದಲ್ಲಿ ಮತ್ತು ಜೋರ್ಡನ್‌ನ ಭಾಗದಲ್ಲಿ ಕೆಲವೇ ಗಂಟೆಗಳಲ್ಲಿ 10 ಸೆಂಟಿಮೀಟರ್‌ಗಿಂತಲೂ ಹೆಚ್ಚು ಮಳೆ ಸುರಿದು, ಪ್ರವಾಹದ ಸ್ಥಿತಿ ನಿರ್ಮಾಣವಾಗಿತ್ತು. 1977ರಲ್ಲಿ ಮತ್ತು 1981ರಲ್ಲಿ ಅಂಥದ್ದೇ ಮಳೆ ಮರುಕಳಿಸಿತ್ತು. ಮಧ್ಯಪ್ರಾಚ್ಯದ ದೇಶಗಳಲ್ಲಿ ಮಳೆಮಾಪನ ಆರಂಭವಾಗಿದ್ದು 1949ರಲ್ಲಿ. 1975, 1977 ಮತ್ತು 1981ರಲ್ಲಿ ಸುರಿದ ವಿಪರೀತ ಮಳೆಯು 1949ರಿಂದ ಆವರೆಗೆ ಸುರಿದ ಅತಿಹೆಚ್ಚಿನ ಮಳೆಯಾಗಿತ್ತು. ಮತ್ತು ಈ ಎಲ್ಲಾ ಮಳೆಗಳು ಫೆಬ್ರುವರಿ–ಮಾರ್ಚ್–ಏಪ್ರಿಲ್ ಅವಧಿಯಲ್ಲಿ ಸಂಭವಿಸಿದ್ದವು. ಆ ರೀತಿಯ ಮಳೆ ಆಗುವುದು ಏಕೆ ಎಂಬುದನ್ನು ಕಂಡುಕೊಳ್ಳುವ ಯತ್ನ ಆರಂಭವಾಗಿದ್ದು ಆನಂತರವೇ. ಅಂತಹ ಮಳೆ ಆಗುವುದು ಏಕೆ ಎಂಬುದನ್ನು ವಿವರಿಸಿಕೊಳ್ಳಲು ವಿಜ್ಞಾನಿಗಳಿಗೆ ಸಾಧ್ಯವಾಗಿದ್ದು ಹಲವು ವರ್ಷಗಳ ಅಧ್ಯಯನದ ನಂತರವೇ.

ಈ ಅಧ್ಯಯನದ ಫಲವಾಗಿ 1985ರಲ್ಲಿ ವಿಜ್ಞಾನಿಗಳು ಒಂದು ವಿವರಣೆ ನೀಡಿದರು. ಆಫ್ರಿಕಾದ ಈಶಾನ್ಯ ಭಾಗದಿಂದ ಅರೇಬಿಯಾ ಉಪಕಂಡ ಮತ್ತು ಪಶ್ಚಿಮ ಏಷ್ಯಾದತ್ತ ಹವಾ ಮಾರುತಗಳು (ಜೆಟ್ ಸ್ಟ್ರೀಂ) ಬೀಸುತ್ತವೆ. ಸಾಮಾನ್ಯವಾಗಿ ಈ ಹವಾ ಮಾರುತಗಳು ಅಕ್ಟೋಬರ್‌ನಿಂದ ಜೂನ್‌ವರೆಗೆ ಹೆಚ್ಚು ಸಕ್ರಿಯವಾಗಿರುತ್ತವೆ. ಮಧ್ಯಪ್ರಾಚ್ಯದ ದೇಶಗಳಿಗೆ ವರ್ಷದಲ್ಲಿ ಅಲ್ಲೊಂದಿಷ್ಟು, ಇಲ್ಲೊಂದಿಷ್ಟು ಮಳೆ ತರುವುದೂ ಈ ಹವಾ ಮಾರುತಗಳೇ. ಆದರೆ ಭೂಮಿಯ ಮೇಲ್ಮನಲ್ಲಿ ಹವಾಮಾನ ಬದಲಾಗುವ ಕಾರಣದಿಂದ ಈ ಹವಾ ಮಾರುತಗಳು ಆಗೊಮ್ಮೆ–ಈಗೊಮ್ಮೆ ವಿಪರೀತ ಮಳೆ ಸುರಿಸುತ್ತವೆ ಎಂದು ವಿಜ್ಞಾನಿಗಳು ವಿವರಿಸಿದ್ದರು.

ಸ್ವಲ್ಪ ಪ್ರಮಾಣದ ತೇವಾಂಶದಿಂದ ಕೂಡಿರುವ ಈ ಹವಾ ಮಾರುತಗಳು ಹೊರ್ಮುಜ್ ಕೊಲ್ಲಿ ದಾಟುವಾಗ, ಇನ್ನಷ್ಟು ಆವಿಯನ್ನು ಕ್ರೋಡೀಕರಿಸಿಕೊಳ್ಳುತ್ತವೆ. ಅರೇಬಿಯಾ ಉಪಖಂಡವನ್ನು ಮುಟ್ಟುವಾಗ ಅಲ್ಪ ಪ್ರಮಾಣದ ಮಳೆ ತರುತ್ತವೆ. ಆದರೆ ಅರೇಬಿಯಾ ಉಪಖಂಡದ ಮೇಲೆ ಉಷ್ಣಾಂಶ ಹೆಚ್ಚಾಗಿದ್ದರೆ ಈ ಆವಿಯ ಪ್ರಮಾಣ ಇನ್ನಷ್ಟು ಹೆಚ್ಚಾಗುತ್ತದೆ. ಅತಿಉಷ್ಣಾಂಶದ ಕಾರಣದಿಂದ ಅದೇ ಸಂದರ್ಭದಲ್ಲಿ ಅರಬ್ಬಿ ಸಮುದ್ರದ ವಾಯವ್ಯ ಭಾಗದಲ್ಲಿ (ಯೆಮನ್ ಮತ್ತು ಒಮಾನ್ ಕರಾವಳಿ ಬಳಿ) ವಾಯುಭಾರ ಕುಸಿದಿರುತ್ತದೆ. ಇದು ಸಹ ವಾತಾವರಣದಲ್ಲಿ ನೀರಾವಿಯ ಪ್ರಮಾಣವನ್ನು ಉಂಟು ಮಾಡುತ್ತದೆ. ಜತೆಗೆ ದಟ್ಟ ಮೋಡಗಳನ್ನು ಸೃಷ್ಟಿಸುತ್ತದೆ. ಇವಿಷ್ಟೇ ಸಂಭವಿಸಿದರೆ ಅತಿಮಳೆಯಾಗುವುದಿಲ್ಲ. ಜತೆಗೆ ಉತ್ತರ ಧ್ರುವದಿಂದ ದಕ್ಷಿಣ ಭಾಗಕ್ಕೆ ಬೀಸುವ ಶೀತ ಮಾರುತಗಳೂ ಮಧ್ಯಪ್ರಾಚ್ಯವನ್ನು ತಲುಪಬೇಕು. ಹೀಗೆ ಪೂರ್ವದಿಂದ ಬರುವ ಹವಾ ಮಾರುತ, ಅರಬ್ಬಿ ಸಮುದ್ರದಿಂದ ವಾಯವ್ಯ ದಿಕ್ಕಿಗೆ ಚಲಿಸುವ ವಾಯುಭಾರ ಕುಸಿತದ ಸ್ಥಿತಿ ಮತ್ತು ಉತ್ತರದಿಂದ ದಕ್ಷಿಣದತ್ತ ಬೀಸುವ ಶೀತ ಮಾರುತ, ಈ ಮೂರೂ ಮಧ್ಯಪ್ರಾಚ್ಯದಲ್ಲಿ ಒಗ್ಗೂಡಬೇಕು. ಅವು ಪರಸ್ಪರ ಸಂಘರ್ಷಕ್ಕೆ ಈಡಾದಾಗ ಅಲ್ಲಿನ ನೀರಾವಿಯ ಸಾಂದ್ರತೆ ಹೆಚ್ಚಾಗುತ್ತದೆ, ಅಪಾರವಾದ ಮಳೆ ಸುರಿಯುತ್ತದೆ. ಒಂದಿಡೀ ವರ್ಷದಲ್ಲಿ ಸುರಿಯಬೇಕಾದಷ್ಟು ಮಳೆ ಕೆಲವೇ ಗಂಟೆಗಳಲ್ಲಿ ಸುರಿದು ಬಿಡುತ್ತದೆ ಎಂಬುದನ್ನು ವಿಜ್ಞಾನಿಗಳು ಕಂಡುಕೊಂಡರು.

ಈಗ ಯುಎಇಯಲ್ಲಿ ಮಂಗಳವಾರ ಸುರಿದ ಮತ್ತು ಅಕ್ಕಪಕ್ಕದ ದೇಶಗಳಲ್ಲಿ ವಾರದಿಂದ ಸುರಿಯುತ್ತಿರುವ ಮಳೆಗೂ ಇಂಥದ್ದೇ ಹವಾಮಾನ ವಿದ್ಯಮಾನವೇ ಕಾರಣ ಎಂದು ಯುಎಇ ಮತ್ತು ಅಮೆರಿಕದ ಹವಾಮಾನ ಇಲಾಖೆಗಳ ವಿಜ್ಞಾನಿಗಳು ಹೇಳಿದ್ದಾರೆ. 2022ರಲ್ಲಿ, 2023ರಲ್ಲಿ ಮತ್ತು ಈಗ 2024ರಲ್ಲೂ ಇಂಥ ಮಳೆ ಸುರಿದಿದೆ. ವರ್ಷದಿಂದ ವರ್ಷಕ್ಕೆ ಇಂತಹ ಮಳೆಯ ತೀವ್ರತೆ ಹೆಚ್ಚಾಗುತ್ತಲೇ ಇದೆ. ಹೀಗೆ ಇಂತಹ ಮಳೆಯ ತೀವ್ರತೆ ಹೆಚ್ಚಾಗಲು ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಯೇ ಕಾರಣ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಅತಿಮಳೆಯ ಅಪರೂಪದ ವಿದ್ಯಮಾನ





ಅರೇಬಿಯಾ ಉಪಖಂಡದ ಮೇಲೆ ರೂಪುಗೊಂಡಿರುವ ಮೋಡಗಳು – ಭಾರತೀಯ ಹವಾಮಾನ ಇಲಾಖೆಯ ಇನ್‌ಸ್ಯಾಟ್ ಉಪಗ್ರಹ ಚಿತ್ರ

‘ದುಬೈನಲ್ಲಿ ಪ್ರವಾಹ: ಮೋಡ ಬಿತ್ತನೆಯೇ ಕಾರಣವಲ್ಲ’

ಮೋಡ ಬಿತ್ತನೆ ಕಾರ್ಯವೇ ದುಬೈನಲ್ಲಾದ ಪ್ರವಾಹಕ್ಕೆ ಕಾರಣ ಎಂಬ ಸುದ್ದಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಹಲವು ಸುದ್ದಿ ಸಂಸ್ಥೆಗಳೂ ಮೋಡ ಬಿತ್ತನೆಯೇ ಕಾರಣ ಎಂದು ಅಂದಾಜಿಸಿ ವರದಿ ಮಾಡಿವೆ. ಆದರೆ, ಮೋಡ ಬಿತ್ತನೆ ಕುರಿತು ಕೆಲಸ ಮಾಡುತ್ತಿರುವವರು, ವಿಜ್ಞಾನಿಗಳು ಹೇಳುತ್ತಿರುವುದೇ ಬೇರೆ.

ದುಬೈನಂತಹ ನಗರಗಳಲ್ಲಿ ಏರುತ್ತಲೇ ಇರುವ ಜನಸಂಖ್ಯೆಯ ಕಾರಣದಿಂದಾಗಿ ಯುಎಇ ಸರ್ಕಾರವು ಮೋಡ ಬಿತ್ತನೆ ಕಾರ್ಯವನ್ನು ಕಳೆದ ಕೆಲವು ದಶಕಗಳಿಂದ ಮಾಡುತ್ತಿದೆ. ಇದಕ್ಕಾಗಿ ಇಲಾಖೆಯನ್ನೂ ಅದಕ್ಕೆ ಬೇಕಾದ ವ್ಯವಸ್ಥೆಯೊಂದನ್ನು ಸರ್ಕಾರ ರೂಪಿಸಿಕೊಂಡಿದೆ. ಈ ವರ್ಷದ ಆರಂಭದಿಂದಲೂ ಮೋಡ ಬಿತ್ತನೆ ಕಾರ್ಯವನ್ನು ಯುಎಇನ ಹವಾಮಾನ ಇಲಾಖೆ ನಡೆಸಿದೆ. ಆದರೆ, ಮಂಗಳವಾರ ದುಬೈನಾದ್ಯಂತ ಸುರಿದ ಮಳೆಗೂ, ಉಂಟಾದ ಪ್ರವಾಹಕ್ಕೂ ಮೋಡ ಬಿತ್ತನೆಯೇ ಕಾರಣ ಎಂದು ಹೇಳಲಾಗುವುದಿಲ್ಲ ಎಂದು ವಿಜ್ಞಾನಿಗಳು ಹೇಳುತ್ತಾರೆ.

ಮೋಡ ಬಿತ್ತನೆ ಕಾರ್ಯದಿಂದ ಮಳೆ ಬರುತ್ತದೆ ನಿಜ. ಆದರೆ, ಕರಾರುವಕ್ಕಾಗಿ ಇಷ್ಟೇ ಪ್ರಮಾಣದಲ್ಲಿ ಮಳೆ ಸುರಿಯುತ್ತದೆ ಎಂಬುದಕ್ಕೆ ಈವರೆಗೂ ಉತ್ತರ ದೊರೆತಿಲ್ಲ. ಯುಎಇನ ಹವಾಮಾನ ಇಲಾಖೆಯೇ ಹೇಳುವಂತೆ ಮೋಡ ಬಿತ್ತನೆಯಿಂದ ಮಳೆ ಪ್ರಮಾಣದಲ್ಲಿ ಶೇ 10ರಿಂದ ಶೇ 30ರಷ್ಟಕ್ಕೆ ಏರಿಕೆಯಾಗಲಿದೆ. ‘ಮೋಡ ಬಿತ್ತನೆಯು ಆ ಪ್ರದೇಶದಲ್ಲಿ ಎಷ್ಟು ಮಳೆಯಾಗುತ್ತದೆಯೊ ಅದಕ್ಕಿಂತ ತುಸು ಹೆಚ್ಚಿನ ಮಳೆಯನ್ನು ಸುರಿಸುತ್ತದೆಯೇ ವಿನಾ ಪ್ರವಾಹ ಉಂಟು ಮಾಡುವುದಿಲ್ಲ’ ಎನ್ನುತ್ತಾರೆ ಆಸ್ಟ್ರೇಲಿಯಾದ ಇಂಧನ, ಹವಾಮಾನ ಮತ್ತು ವಿಪತ್ತು ಪರಿಹಾರದ ರಾಷ್ಟ್ರೀಯ ವಿಶ್ವವಿದ್ಯಾಲಯದ ವಿಪತ್ತು ಪರಿಹಾರ ವಿಭಾಗದ ಮುಖ್ಯಸ್ಥ ರೊಸ್ಲಿನ್ ಪ್ರಿನ್ಸ್‌ಲೇ.

ಒಮಾನ್‌ನಲ್ಲಿಯೂ ಭಾರಿ ಮಳೆಯಾಗಿದೆ. 18 ಮಂದಿ ಮೃತಪಟ್ಟಿದ್ದಾರೆ. ಇರಾನ್‌ನ ದಕ್ಷಿಣ ಭಾಗಗಳಲ್ಲಿಯೂ ಮಳೆಯಾಗುತ್ತಿದೆ. ಅಫ್ಗಾನಿಸ್ತಾನದಲ್ಲಿಯೂ ಮಳೆ ಸುರಿಯುತ್ತಿದೆ. ‘ದುಬೈನಲ್ಲಾದ ಪ್ರವಾಹಕ್ಕೆ ಮೋಡ ಬಿತ್ತನೆ ಕಾರಣವಾದರೆ, ಪಕ್ಕದ ಒಮಾನ್‌ನಲ್ಲಿ ಮೋಡ ಬಿತ್ತನೆ ನಡೆಸಿಲ್ಲ. ಹಾಗಾದರೆ, ಅಲ್ಲಿ ಮಳೆಯಾಗುತ್ತಿರುವುದೇಕೆ’ ಎಂದು ಪ್ರಶ್ನಿಸುತ್ತಾರೆ ಯುಎಇನ ಮೋಡ ಬಿತ್ತನೆ ಕಾರ್ಯದ ಕುರಿತು ವರದಿ ಮಾಡುತ್ತಿರುವ ಅಮಿತ್ ಕಟ್ವಾಲಾ.

ಎಂದಿನ ಚರ್ಚೆ: ಯುಎಇನಲ್ಲಿ ಇತ್ತೀಚೆಗೆ ಪ್ರತಿ ವರ್ಷವೂ ಹಿಂದಿನ ವರ್ಷಕ್ಕಿಂದ ಹೆಚ್ಚಿನ ಪ್ರಮಾಣದ ಮಳೆ ಸುರಿಯುತ್ತಿದೆ, ಪ್ರವಾಹವೂ ಉಂಟಾಗುತ್ತಿದೆ. ಹೀಗೆ ಹೆಚ್ಚಿನ ಮಳೆ ಸುರಿದಾಗಲೆಲ್ಲಾ, ಮೋಡ ಬಿತ್ತನೆಯಿಂದಲೇ ಹೆಚ್ಚಿಗೆ ಮಳೆಯಾಗಿದೆ ಎನ್ನಲಾಗುತ್ತಿದೆ. ಈ ಕುರಿತು ಯುಎಇನ ಪ್ರಮುಖ ಸುದ್ದಿ ಸಂಸ್ಥೆಗಳು ಸುದ್ದಿಗಳನ್ನೂ ಪ್ರಕಟಿಸಿವೆ. ಹೀಗೆ ಸುದ್ದಿಯಾದಾಗಲೆಲ್ಲ, ‘ಯುಎಇನಲ್ಲಿನ ಮಳೆಗೆ ಹವಾಮಾನ ವೈಪರೀತ್ಯವೇ ಕಾರಣ’ ಎನ್ನುತ್ತಾರೆ ಹವಾಮಾನ ತಜ್ಞರು.

ಭಾರಿ ಮಳೆಯಿಂದಾಗಿ ಯುಎಇನ ಶಾರ್ಜಾ ನಗರದ ಸ್ಥಿತಿ –ಎಎಫ್‌ಪಿ ಚಿತ್ರ

ಇಲ್ಲದ ಮಳೆನೀರು ಕಾಲುವೆ ವ್ಯವಸ್ಥೆ

ದುಬೈನಲ್ಲಿ ಮಂಗಳವಾರ ಒಂದೇ ದಿನ ಸುರಿದ ಮಳೆದ ಪ್ರಮಾಣ 14 ಸೆಂ.ಮೀ. ಇದು ದುಬೈಯನ್ನು ಪ್ರವಾಹಕ್ಕೆ ದೂಡಿದೆ. ನಗರದಲ್ಲಿ ಪ್ರವಾಹ ಸ್ಥಿತಿ ನಿರ್ಮಾಣವಾಗಲು ಪ್ರಮುಖ ಕಾರಣವಾಗಿದ್ದು, ನಗರದಲ್ಲಿ ಮಳೆನೀರು ಕಾಲುವೆ ವ್ಯವಸ್ಥೆ ಇಲ್ಲದಿರುವುದು.

ಮೂಲತಃ ಯುಎಇ ಒಂದು ಮರಳುಗಾಡು ಪ್ರದೇಶ. ಇಲ್ಲೆಲ್ಲಾ ಮಳೆಯಾಗುವುದು ತೀರಾ ಅಪರೂಪ ಮತ್ತು ಅತಿ ಸಣ್ಣ ಪ್ರಮಾಣದ ಮಳೆ ಸುರಿಯುತ್ತದೆ. ಇದೇ ಕಾರಣಕ್ಕೆ ಯುಎಇ ದೇಶದಲ್ಲಿ ಮಳೆನೀರು ಹರಿದು ಹೋಗುವ ವ್ಯವಸ್ಥೆಯನ್ನೂ ರೂಪಿಸಿಕೊಂಡಿಲ್ಲ. ಎಲ್ಲವೂ ಕಾಂಕ್ರೀಟ್‌ಮಯ ಪ್ರದೇಶ. ಇಷ್ಟೊಂದು ದೊಡ್ಡ ಪ್ರಮಾಣದ ಪ್ರವಾಹ ಕಾಣಿಸಿಕೊಂಡದ್ದು ಇದೇ ಕಾರಣಕ್ಕೆ. ದೇಶದಾದ್ಯಂತ ಪಂಪಿಂಗ್ ಕೇಂದ್ರಗಳಿವೆ. ರಸ್ತೆಯಲ್ಲಿ, ಮನೆಯಲ್ಲಿ ಮಳೆಯ ಕಾರಣದಿಂದಾಗಿ ನೀರು ತುಂಬಿಕೊಂಡರೆ, ಈ ಕೇಂದ್ರದವರು ದೊಡ್ಡ ದೊಡ್ಡ ಟ್ರಕ್‌ಗಳಲ್ಲಿ ಪ್ರವಾಹದ ನೀರನ್ನು ಎತ್ತಿಕೊಂಡು ಹೋಗುತ್ತಾರೆ. ದೇಶದಾದ್ಯಂತ ಇಂಥ ಸಾವಿರಾರು ಕೇಂದ್ರಗಳಿಗೆ, ಇದಕ್ಕಾಗಿಯೇ ಸಹಾಯವಾಣಿಯೂ ಇದೆ.

ಆದರೆ, ಯುಎಇ ಸರ್ಕಾರವು ಇತ್ತೀಚಿನ ವರ್ಷಗಳಲ್ಲಿ ದುಬೈ ಸೇರಿದಂತೆ ದೇಶದಲ್ಲೆಡೆ ಈ ಸಮಸ್ಯೆಯನ್ನು ಬಗೆಹರಿಸಿಕೊಂಡು, ಪಂಪಿಂಗ್ ಕೇಂದ್ರಗಳನ್ನು ಕಡಿಮೆ ಮಾಡಿಕೊಳ್ಳುವತ್ತ ಯೋಜನೆ ರೂಪಿಸಿಕೊಂಡಿದೆ. ಮಳೆನೀರು ಹರಿದು ಹೋಗಲೆಂದೇ ದೊಡ್ಡ ದೊಡ್ಡ ಸುರಂಗಗಳನ್ನು ಕೊರೆಯುವ, ಆ ಮೂಲಕ ಪ್ರವಾಹವನ್ನು ತಡೆಗಟ್ಟುವ ಯೋಜನೆಯನ್ನು ಈಗಾಗಲೇ ಕಾರ್ಯಗತಗೊಳಿಸುತ್ತಿದೆ.

ಆಧಾರ: ಅಮೆರಿಕದ ನ್ಯಾಷನಲ್ ಓಷ್ಯಾನಿಕ್ ಅಟ್ಮೋಸ್ಪಿಯರ್ ಅಡ್ಮಿನ್ಸ್ಟ್ರೇಷನ್ ವರದಿಗಳು, ಇಸ್ರೇಲ್‌ನ ಹೀಬ್ರೂ ವಿಶ್ವವಿದ್ಯಾಲಯದ ಇನ್‌ಸ್ಟಿಟ್ಯೂಟ್ ಆಫ್ ಅಟ್ಮಾಸ್ಪಿಯರ್ ಸೈನ್ಸ್ ವಿಭಾಗದ ಅಧ್ಯಯನ ವರದಿ–1985, ನ್ಯಾಷನಲ್ ಅಂಟಾರ್ಕ್ಟಿಕ್ ರಿಸರ್ಚ್ ಸೆಂಟರ್‌ನ ಅಧ್ಯಯನ ವರದಿ–2011, ರಾಯಿಟರ್ಸ್, ಎಪಿ, ಗಲ್ಫ್ ನ್ಯೂಸ್, ಯುಎಇ ಚರಂಡಿ ಯೋಜನೆಯ ವೆಬ್‌ಸೈಟ್, ಟೈಮ್ ಮ್ಯಾಗಜಿನ್

ಸಂದೇಶ್ ಹೊಸ ಪ್ರಾಜೆಕ್ಟ್ ‘ಗುಂಮ್ಟಿ’

‘ಕತ್ತಲೆ ಕೋಣೆ’ ಮತ್ತು ‘ಇನಾಮ್ದಾರ್’ ಸಿನಿಮಾಗಳನ್ನು ನಿರ್ದೇಶಿಸಿದ್ದ ಸಂದೇಶ್ ಶೆಟ್ಟಿ ತಮ್ಮ ಹೊಸ ಪ್ರಾಜೆಕ್ಟ್ ಘೋಷಿಸಿದ್ದಾರೆ. ಸಂದೇಶ್, ತಮ್ಮ ಮೂರನೇ ಸಿನಿಮಾಕ್ಕೆ ‘ಗುಂಮ್ಟಿ’ ಎಂದು ಹೆಸರಿಟ್ಟಿದ್ದು, ನಿರ್ದೇಶನದ ಜೊತೆಗೆ ನಾಯಕನಾಗಿಯೂ ಇಲ್ಲಿ ಕಾಣಿಸಿಕೊಳ್ಳಲಿದ್ದಾರೆ.

‘ಗುಂಮ್ಟಿ’ ಸಿನಿಮಾದಲ್ಲಿ ಕರ್ನಾಟಕದ ಕರಾವಳಿ ತೀರದ ಕುಡುಬಿ ಜನಾಂಗದ ಕಥೆಯೊಂದು ತೆರೆಮೇಲೆ ಅನಾವರಣಗೊಳ್ಳಲಿದೆ. ಕುಡುಬಿ ಜನಾಂಗದ ಸಂಪ್ರದಾಯ, ಆಚಾರ-ವಿಚಾರ, ಬದುಕು ಮತ್ತು ಆಧುನಿಕತೆಯ ನಡುವಿನ ಸಂಘರ್ಷವನ್ನು ಸಿನಿಮಾ ಹೊಂದಿದೆ ಎಂದಿದೆ ಚಿತ್ರತಂಡ. ಉಡುಪಿ, ಕುಂದಾಪುರ, ಶಿರಸಿ, ಬೆಳಗಾವಿ, ಮಹಾರಾಷ್ಟ್ರದ ಸೊಲ್ಲಾಪುರ ಹೀಗೆ ಕರಾವಳಿ-ಮಲೆನಾಡು ಮತ್ತು ಪಶ್ಚಿಮ ಘಟ್ಟದ ಸುತ್ತಮುತ್ತ ಸುಮಾರು 25ಕ್ಕೂ ಹೆಚ್ಚು ದಿನ ಚಿತ್ರತಂಡ ಚಿತ್ರೀಕರಣ ನಡೆಸಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸಗಳಲ್ಲಿ ಚಿತ್ರತಂಡ ನಿರತವಾಗಿದೆ. ಶೀಘ್ರದಲ್ಲೇ ಸಿನಿಮಾ ತೆರೆಗೆ ಬರಲಿದೆ.

ಸಿನಿಮಾವನ್ನು ವಿಕಾಸ್ ಎಸ್. ಶೆಟ್ಟಿ ನಿರ್ಮಿಸಿದ್ದು, ವೈಷ್ಣವಿ ನಾಡಿಗ್ ನಾಯಕಿಯಾಗಿ ನಟಿಸಿದ್ದಾರೆ. ರಂಜನ್ ಛತ್ರಪತಿ, ಕರಣ್ ಕುಂದರ್, ಯಶ್ ಆಚಾರ್ಯ, ಪ್ರಭಾಕರ ಕುಂದರ್, ರಘು ಪಾಂಡೇಶ್ವರ, ಚೇತನ ನೈಲಾಡಿ ಮತ್ತಿತರರು ತಾರಾಬಳಗದಲ್ಲಿದ್ದಾರೆ. ಅನೀಶ್ ಡಿಸೋಜಾ ಛಾಯಾಚಿತ್ರಗ್ರಹಣ, ಮೋಹನ್ ಸಂಗೀತ ಚಿತ್ರಕ್ಕಿದೆ.

‘ಅಲೈಕ್ಯಾ’ ಟ್ರೇಲರ್ ಬಿಡುಗಡೆ

ಚಿತ್ರತಂಡ

ಬಹುತೇಕ ಹೊಸಬರಿಂದಲೇ ಕೂಡಿರುವ ‘ಅಲೈಕ್ಯಾ’ ಚಿತ್ರದ ಟ್ರೇಲರ್ ಮತ್ತು ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ನಟ ಸುಚೇಂದ್ರಪ್ರಸಾದ್ ಹಾಗೂ ನಟಿ ಸಂಜನಾ ನಾಯ್ಡು ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

ಹಾರರ್, ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರಕ್ಕೆ ಸಾತ್ವಿಕ್ ಎಂ.ಭೂಪತಿ ಕಥೆ ಬರೆದು, ಆ್ಯಕ್ಷನ್–ಕಟ್ ಹೇಳಿದ್ದಾರೆ. ‘ಒಂದಷ್ಟು ಸ್ನೇಹಿತರು ವೀಕೆಂಡ್ ಕಳೆಯಲು ಗೆಸ್ಟ್‌ಹೌಸ್‌ಗೆ ಹೋಗುತ್ತಾರೆ. ಅಲ್ಲಿ ಅನಿರೀಕ್ಷಿತವಾಗಿ ನಡೆದ ಕೆಲವು ಘಟನೆಗಳಿಗಳಿಂದ ಆ ಅತಿಥಿ ಗೃಹದಲ್ಲಿ ಆತ್ಮಗಳಿರುವುದು ಗೊತ್ತಾಗಿ ಅಲ್ಲಿಂದ ತಪ್ಪಿಸಿಕೊಂಡು ಬರಲು ಪ್ರಯತ್ನಿಸಿ ವಿಫಲರಾಗುತ್ತಾರೆ. ಈ ಪಯಣವೇ ಚಿತ್ರದ ಕಥೆ’ ಎಂದರು ನಿರ್ದೇಶಕರು. ಎಂ.ಭೂಪತಿ ಬಂಡವಾಳ ಹೂಡಿರುವ ಈ ಚಿತ್ರ ಬಿಡುಗಡೆಗೆ ಸಿದ್ಧವಿದೆ. ಬೆಂಗಳೂರು, ಚಿಕ್ಕಮಗಳೂರು, ಮೇಲುಕೋಟೆ ಸುತ್ತಮುತ್ತ ಚಿತ್ರೀಕರಣಗೊಂಡಿದೆ. ಸಾಯಿ ಸೋಮೇಶ್ ಸಂಗೀತ, ಬುಗುಡೆ ವೀರೇಶ್ ಛಾಯಾಚಿತ್ರಗ್ರಹಣ, ಮುತ್ತುರಾಜ್ ಸಂಕಲನ ಈ ಚಿತ್ರಕ್ಕಿದೆ. ದರ್ಶಿನಿ ಆರ್.ಒಡೆಯರ್, ನಿಸರ್ಗ ಮನ್ವೀರ್ ಚವ್ಹಾನ್, ವಿವೇಕ ಚಕ್ರವರ್ತಿ ಮುಂತಾದವರು ನಟಿಸಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಸಮಯಪ್ರಜ್ಞೆಯೆಂಬ ವರ

ನುಡಿ ಬೆಳಗು

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಮಹಾರಾಷ್ಟ್ರದ ಮಾಲೇಗಾಂವ್‌ನ ಜನನಿಬಿಡ ಪ್ರದೇಶವೊಂದರಲ್ಲಿ ಕಳೆದ ತಿಂಗಳು ನಡೆದ ಘಟನೆಯೊಂದರ ವಿಡಿಯೊ ವೈರಲ್ ಆಯಿತು. ಮೋಹಿತ್ ಎಂಬ ಹನ್ನೆರಡು ವರ್ಷದ ಬಾಲಕ ಕಚೇರಿಯೊಂದರ ಬಾಗಿಲಿನ ಪಕ್ಕದ ಸೋಫಾದ ಮೇಲೆ ಕುಳಿತು ಮೊಬೈಲ್‌ನಲ್ಲಿ ಆಟವಾಡುತ್ತಿದ್ದ. ಇದ್ದಕ್ಕಿದ್ದಂತೆ ಬಾಗಿಲಿನಿಂದ ಅಪರೂಪದ ಅತಿಥಿಯೊಬ್ಬರು ಒಳಗೆ ಪ್ರವೇಶಿಸಿದರು. ಆ ಅತಿಥಿ ಬೇರೆ ಯಾರೂ ಅಲ್ಲ, ಒಂದು ಚಿರತೆ. ಊಟದ ಸಮಯವಾಗಿದ್ದರಿಂದ ಆಗ ಕಚೇರಿಯಲ್ಲಿ ಇದ್ದವನು ಮೋಹಿತ್ ಮಾತ್ರ. ಚಿರತೆ ಬಂದಿದ್ದನ್ನು ನೋಡಿದ ಹುಡುಗ ಮೊದಲು ಆಟ ನಿಲ್ಲಿಸಿದ. ನಂತರ ಸದ್ದೇ ಮಾಡದೇ ಹಗೂರಕ್ಕೆ ಸೋಫಾದಿಂದ ಇಳಿದು ಚಾರ್ಜ್‌ಗೆ ಹಾಕಿದ್ದ ಮೊಬೈಲ್ ತೆಗೆದುಕೊಂಡು ತಕ್ಷಣ ಕೋಣೆಯಿಂದ ಹೊರಬಂದು ಬಾಗಿಲು ಹಾಕಿ ಅಲ್ಲಿನ ಕಾವಲುಗಾರನಾಗಿದ್ದ ಅಪ್ಪನಿಗೆ ವಿಷಯ ಹೇಳಿದ. ನಂತರ ಮಾಲೇಗಾಂವ್‌ನಿಂದ ಬಂದ ಅರಣ್ಯ ಅಧಿಕಾರಿಗಳು ಚಿರತೆಯನ್ನು ಹಿಡಿದು ಮರಳಿ ಕಾಡಿಗೆ ಬಿಟ್ಟರು.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಕೈ ಚಾಚಿದರೆ ಸಿಗುವಷ್ಟು ಹತ್ತಿರವಿದ್ದ ಬಾಗಿಲಿನಿಂದ ಒಳಬಂದ ಕ್ರೂರ ಪ್ರಾಣಿಯನ್ನು ನೋಡಿದರೂ ಆ ಪುಟ್ಟ ಬಾಲಕ ಎದೆಗುಂದದಿರುವುದು. ಜತೆಗೆ ಆ ಒತ್ತಡದ ಕ್ಷಣಗಳಲ್ಲೂ ಶಾಂತರೀತಿಯಿಂದ ವರ್ತಿಸಿ ಕೆಳಗಿಳಿದು ಮೌನವಾಗಿ ಹೊರಬಂದು ಕೋಣೆಯ ಬಾಗಿಲು ಹಾಕಿದ್ದು. ಆತ ಉದ್ವೇಗಕ್ಕೊಳಗಾಗಿ ಕೂಗಾಡಿ ಕಿರುಚಿದ್ದರೆ ಬಹುಶಃ ಅವನಿಗೂ ಸಮಸ್ಯೆಯಾಗುತ್ತಿತ್ತು, ಬೆದರಿದ ಚಿರತೆ ಎಲ್ಲ ಕಡೆ ಓಡಾಡಿ ಇತರರಿಗೂ ತೊಂದರೆಯಾಗುತ್ತಿತ್ತು. ಆಗಬಹುದಾಗಿದ್ದ ದೊಡ್ಡದೊಂದು ಅನಾಹುತ ಈ ಚಿಕ್ಕ ಹುಡುಗನ ಸಮಯಪ್ರಜ್ಞೆಯಿಂದಾಗಿ ತಪ್ಪಿತು.

ಸಮಯಪ್ರಜ್ಞೆಎಂದರೆ ತಮ್ಮ ಸುತ್ತಲಿನ ಪರಿಸರ, ಪರಿಸ್ಥಿತಿಯನ್ನು ಅರ್ಥೈಸಿಕೊಂಡು ಶಾಂತಚಿತ್ತದಿಂದ ಘಟನೆಯೊಂದಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸುವ ಕಲೆ. ಸಂಕಷ್ಟದ ಸಂದರ್ಭದಲ್ಲಿ ತಣ್ಣಗೆ ಯೋಚಿಸುವ ಮತ್ತು ತೀರ್ಮಾನ ತೆಗೆದುಕೊಳ್ಳುವ ಪ್ರಬುದ್ಧತೆ ಅಷ್ಟು ಸುಲಭವಾಗಿ ಎಲ್ಲರಿಗೂ ಒಲಿಯುವಂಥದ್ದಲ್ಲ. ದೊಡ್ಡವರಿಗೇ ಕಷ್ಟಸಾಧ್ಯವಾದ ಈ ಮನಃಸ್ಥಿತಿ ಹನ್ನೆರಡರ ಪುಟ್ಟ ಹುಡುಗನಿಗಿದ್ದಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಎಲ್ಲರ ಬದುಕಿನಲ್ಲೂ ಅಷ್ಟೇ. ಅಹಿತಕರ ಘಟನೆಗಳು ಅನಿರೀಕ್ಷಿತವಾಗಿ ನಡೆದೇ ನಡೆಯುತ್ತವೆ. ಅಂತಹ ಸಂದರ್ಭದಲ್ಲಿ ತಾಳ್ಮೆಯಿಂದ ನಿರ್ಧಾರ ಕೈಗೊಳ್ಳಬೇಕು. ಭವಿಷ್ಯದಲ್ಲಿ ಬರಬಹುದಾದ ಸಮಸ್ಯೆಗಳನ್ನು ಕಲ್ಪನೆ ಮಾಡಿಕೊಂಡು ಸದಾ ಭಯದಿಂದಲೇ ಬದುಕುವ ನಮಗೆ ವರ್ತಮಾನಕ್ಕೆ ಸೂಕ್ತವಾಗಿ ಸ್ಪಂದಿಸಿದ ಮೋಹಿತ್‌ನ ಈ ಸಮಚಿತ್ತ ಒಂದು ಮಾದರಿ. ಸಮಯಪ್ರಜ್ಞೆ ಇರುವವರ ಭಾವನೆಗಳು ಅವರ ಹಿಡಿತದಲ್ಲಿಯೇ ಇರುತ್ತವೆ. ಇದರಿಂದ ಅವರ ವೈಯಕ್ತಿಕ ಮತ್ತು ವೃತ್ತಿಜೀವನದ ಮೇಲೆ ಧನಾತ್ಮಕ ಪರಿಣಾಮ ಉಂಟಾಗುತ್ತದೆ. ಶಿಸ್ತು ಮತ್ತು ತಾಳ್ಮೆಯಿಂದ ಪ್ರಯತ್ನಿಸಿದರೆ ಸಂದರ್ಭಕ್ಕೆ ಸೂಕ್ತವಾಗಿ ಸ್ಪಂದಿಸುವುದನ್ನು ಎಲ್ಲರೂ ಕಲಿತುಕೊಳ್ಳಬಹುದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಏಪ್ರಿಲ್ 18, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ದಶಮಿ ಗಂ. 17-32 ನಕ್ಷತ್ರ: ಆಶ್ಲೇಷ ಗಂ. 07-57 ಯೋಗ: ಗಂಡ ಗಂ. 24-43 ಕರಣ: ಗರ ಗಂ. 17-32, ಮೇಷ ಮಾಸದ 06 ನೇ ದಿನ, ಮಳೆನಕ್ಷತ್ರ: ಅಶ್ವಿನಿ 2.
ರಾಹುಕಾಲ : ಮಧ್ಯಾಹ್ನ 01-30 - 03-00
ಸೂರ್ಯೋದಯ : 06-19 ಸೂರ್ಯಾಸ್ತ : 06-40
ಮುಸ್ಲಿಂ ದಿನಾಂಕ : 08 ಶವ್ವಾಲ್
ಅದೃಷ್ಟ ಸಂಖ್ಯೆ : 1, 10

ಮೇಷ : ಈ ದಿನ ಎಂದಿನಂತಲ್ಲದೆ ಮನಸ್ಸು ಉಲ್ಲಾಸದಿಂದ ಕೂಡಿರುವುದರಿಂದ ಕೆಲಸ ಕಾರ್ಯಗಳು ಸರಾಗವಾಗಿ ನಡೆಯುವುದು. ರಾಜಕೀಯ ಪಕ್ಷದ ನಾಯಕರು ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸುವಿರಿ.

ವೃಷಭ: ಸಂಗೀತ, ಸಾಹಿತ್ಯದಂಥ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿರುವ ವ್ಯಕ್ತಿಗಳು ಹಿರಿಯ ಕಲಾವಿದರನ್ನು ಭೇಟಿ ಮಾಡುವ ಅವಕಾಶವಿದೆ. ವೃತ್ತಿಭೂಮಿಕೆಯಲ್ಲಿ ಕೆಲವರು ನಾಯಕರಾಗುವ ಸಂಭವವಿದೆ. ಹಿತಶತ್ರುಗಳ ಗಮನವಿರಲಿ.

ಮಿಥುನ: ಸಮೀಪವರ್ತಿಗಳ ಸಹಕಾರದಿಂದ ವ್ಯಾಪಾರ ವಹಿವಾಟುಗಳ ಆದಾಯದಲ್ಲಿ ಗಣನೀಯ ಏರಿಕೆ ಕಾಣಲಿರುವಿರಿ. ಹತ್ತಿರದ ಸಂಬಂಧಿಗಳಿಂದ ಮನಸ್ಸಿಗೆ ಮುದವಾಗುವ ವಾರ್ತೆ ಕೇಳುವಿರಿ.

ಕರ್ಕಾಟಕ: ನಿಮ್ಮದಲ್ಲದ ಕ್ಷೇತ್ರದವರಿಗೆ ಸಲಹೆ ಸೂಚನೆಗಳನ್ನು ನೀಡಲು ಹೋಗಿ ಮುಖಭಂಗ ಮಾಡಿಕೊಳ್ಳದಿರಿ. ಮಿತ್ರರ ಸಹಾಯದಿಂದ ಬಾಕಿ ಕೆಲಸಗಳೆಲ್ಲವನ್ನು ಮುಗಿಸಿಕೊಳ್ಳುವಿರಿ. ಲಾರಿ, ಬಸ್ ಚಾಲಕರು ಕಾಳಜಿವಹಿಸಿ.

ಸಿಂಹ: ಇದೀಗ ತಾನೇ ಚಿತ್ರರಂಗಕ್ಕೆ ಸೇರಿದ ಕಲಾವಿದರಿಗೆ ಪ್ರಯತ್ನವು ಪ್ರಾಮಾಣಿಕವಾಗಿದ್ದಲ್ಲಿ ದೊಡ್ಡ ಮಟ್ಟದ ಪ್ರಚಾರ ದೊರೆಯುವುದು. ವ್ಯಾಪಾರ ಕ್ಷೇತ್ರದಲ್ಲಿರುವವರಿಗೆ ಕಠಿಣ ಸವಾಲುಗಳು ಎದುರಾಗುತ್ತವೆ.

ಕನ್ಯಾ: ದೀರ್ಘಕಾಲಿಕ ಯೋಜನೆಗಳ ಕೆಲಸವನ್ನು ಪ್ರಾರಂಭ ಮಾಡುವ ಮೊದಲು ಸಂಕ್ಷಿಪ್ತ ಸಭೆಯೊಂದಿಗೆ ಪಾಲುದಾರರಿಗೂ ಧ್ಯೇಯೋದ್ದೇಶಗಳನ್ನು ತಿಳಿಸಿ. ಹೆಚ್ಚುವರಿ ಜವಾಬ್ದಾರಿಗಳನ್ನು ಜಾಗರೂಕತೆಯಿಂದ ನಿರ್ವಹಿಸಿ.

ತುಲಾ: ಕುಟುಂಬದೊಟ್ಟಿಗೆ ನಡೆದ ವೈಮನಸ್ಯವನ್ನು ಕ್ಷಮಾಯಾಚನೆಯೊಂದಿಗೆ ಮುಕ್ತಗೊಳಿಸಿಕೊಳ್ಳಿ. ಸ್ನೇಹಿತರೊಂದಿಗೆ ಮರೆಯಲಾಗದ ಕ್ಷಣಗಳನ್ನು ಕಳೆಯುವಿರಿ. ವಿದ್ಯಾರ್ಥಿಗಳಿಗೆ ಪ್ರಯತ್ನ ಅತ್ಯಗತ್ಯ.

ವೃಶ್ಚಿಕ: ಉದ್ವೇಗವನ್ನು ಶಾಂತಗೊಳಿಸಲು ಮನಸ್ಸಿಗೆ ಸಮಾಧಾನವಾಗುವಂಥ ಸಂಗೀತವನ್ನು ಕೇಳಿ. ಗಣಕಯಂತ್ರದ ಮುಂದೆ ಕೂತು ಕೆಲಸ ನಡೆಸುವವರು ಕಣ್ಣಿನ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ.

ಧನು: ಇಚ್ಛಾಶಕ್ತಿಯೊಂದಿಗೆ ಪ್ರಯತ್ನವೂ ಉತ್ತಮವಾಗಿರುವುದರಿಂದ ನೀವಂದುಕೊಂಡ ಕಾರ್ಯ ಅದ್ಭುತವಾಗಿ ನಡೆಯಲಿದೆ. ಚಿತ್ರಕಲಾ ಪ್ರದರ್ಶನದಲ್ಲಿ ಪಾಲ್ಗೊಳ್ಳುವಂಥ ಅವಕಾಶ ಲಭಿಸುವುದು.

ಮಕರ: ವೇದ ಶಾಸ್ತ್ರ ಪಾರಂಗತರು ಕೂಪ ಮಂಡೂಕದ ಭಾವನೆಯನ್ನು ಕಳಚಿಕೊಂಡು ಮುನ್ನುಗ್ಗಿದಲ್ಲಿ ಅತ್ಯಂತ ಒಳ್ಳೆಯ ಅವಕಾಶಗಳನ್ನು ಪಡೆಯುವಿರಿ. ಮನೆಯಲ್ಲಿ ಸುಖ ಶಾಂತಿ ನೆಲೆಸುತ್ತದೆ.

ಕುಂಭ: ವಿದ್ಯಾಭ್ಯಾಸಕ್ಕಾಗಿ ಮನೆಯಿಂದ ದೂರ ಇರುವ ವ್ಯಕ್ತಿಗಳಿಗೆ ಮನೆಗೆ ಹೋಗಿಬರುವ ಅವಕಾಶ ಶೀಘ್ರ ಲಭಿಸಲಿರುವ ಕಾರಣ ಸಂತೋಷವಾಗಲಿದೆ. ಓದಿನಲ್ಲಿ ಏಕಾಗ್ರತೆ ಸಾಧಿಸದಿದ್ದರೆ ಅಭ್ಯುದಯ ಅಸಾಧ್ಯ.

ಮೀನ: ತಾಯಿಗೆ ನುರಿತ ವೈದ್ಯರಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಲು ವಿಶ್ವಾಸಿಗಳಿಂದ ವೈದ್ಯರ ಸಂಪರ್ಕ ಮತ್ತು ಸಹಾಯಹಸ್ತ ಸಿಗುವುದು. ಹೃದಯದ ಮಾತಿಗೆ ಬೆಲೆ ಕೊಡುವುದು ಈ ದಿನ ಬಹಳ ಮುಖ್ಯವಾಗಿದೆ.

ಪದಬಂಧ 5654

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಕಸ್ತೂರಿಯನ್ನು ನೀಡುವ ಜಿಂಕೆ (5)
4.ಪರವಾಗಿ ಹಿಡಿದಿರುವ ಕೊಡಲಿ (3)
5.ಹಸಿರು ಬಣ್ಣವಿದು (3)
8.ಸದನದಲ್ಲಿರುವ ಜಾನುವಾರು (2)
9.ಸರಸ್ವತಿ ಹಿಡಿದಿರುವ ತಂತಿವಾದ್ಯ (2)
10.ಸಂತನಿಂದಾದ ಆನಂದ (3)
11.ಕಂಬನಿ ಸುರಿದ ಜಾಗದಲ್ಲಿನ ಸ್ತಂಭ (2)
12.ನಗರದಲ್ಲಿ ಖರೀದಿಸಿರುವ ಆಭರಣ (2)
13.ಮನೆಯಲ್ಲಿ ಉಲ್ಟಾ ಕಾಣುತ್ತಿದೆ (3)
14.ವಿವಾದವಿಲ್ಲದೇ ನೆರವೇರಿದ ಲಗ್ನ (3)
15.ಈತ ಅರಣ್ಯ ರಕ್ಷಕ (5)

ಮೇಲಿಂದ ಕೆಳಕ್ಕೆ
1.ಹರಕೆಗೆ ಬಲಿಯಾಗುವ ಪ್ರಾಣಿ (2)
2.ಉಲ್ಟಾ ಪಲ್ಟಾ ಬಿದ್ದಿರುವ ಗಿಳಿ (2)
3.ಇದು ಸುಲಭವಲ್ಲದುದು (3)
4.ವಿದ್ಯಾರ್ಹತೆಯ ಪ್ರಶಸ್ತಿಯನ್ನು ಕೊಡುವುದು (5)
6.ಶಿರೋನಾಮೆ ಇಲ್ಲಿದೆ (5)
7.ಸಂದರ್ಭ ಹೀಗೆ ಬಂದಿದೆ (3)
8.ನಮ್ಮ ನಾಡ ಹಬ್ಬ (3)
12.ಉಡುಗೆಯಲ್ಲಿ ಉಲ್ಟಾ ಪಲ್ಟಾ ಆಗಿಬಿಟ್ಟಿದೆ (3)
14.ಕವಿತೆ ಬರೆಯುವವನು ಏಕೋ ತಿರುಗಿದ್ದಾನಲ್ಲಾ? (2)
16.ಕಣ್ಣಿನ ಗುಡ್ಡೆ (2)



5653ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.3ಲ 3.ವಿಧಾತ
5.ಸಮರ 7.ರಸಭಂಗ
9.ಹೊಯಿಗೆ
10.ಸಂಸಾರ 11.ಸುಮಧುರ
13.ಆಲಸಿ 15.ನವಾಬ
16.ಕಚ

ಮೇಲಿಂದ ಕೆಳಕ್ಕೆ:
2.ರಭಸ 3.ವಿವರ
4.ತಸ್ಕರ 6.ಮಚ್ಚಿಗೆ
8.ಗಗನ 9.ಹೊಲಸು
10.ಸಂಕುಲ 12.ರಸನ
13.ಆರಂಬ 14.ಸಿಡುಕ

ಸುಡೊಕು 6039

8				1				
		9		5		7		3
	1	5			3		2	
	4					8		
3			8		1			2
1	9			2				7
	8						7	
2		4	9		7	1		6
	5			3				9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6038 ಸುಡೊಕು

8	7	2	3	4	6	1	9	5
5	1	4	8	2	9	7	6	3
9	3	6	5	1	7	2	8	4
3	8	9	1	6	5	4	2	7
4	2	1	9	7	3	8	5	6
6	5	7	2	8	4	3	1	9
7	4	8	6	9	2	5	3	1
1	9	5	7	3	8	6	4	2
2	6	3	4	5	1	9	7	8

ಮೊದಲ ಮತದ ಸಂಭ್ರಮ

ಸಂತೋಷ ಕುಮಾರ, ಕಲಬುರಗಿ

ಮತದಾನ ಎಲ್ಲ ದಾನಕ್ಕಿಂತ ಶ್ರೇಷ್ಠವಾದ ದಾನ. ದೇಶದ ಹಿತ, ಜನರ ರಕ್ಷಣೆ ಮತ್ತು ಪ್ರಜಾಪ್ರಭುತ್ವದ ಉಳಿವಿಗೆ ಮತದಾನ ಕಡ್ಡಾಯ. ಆಸೆ, ಆಮಿಷಗಳಿಗೆ ಬಲಿಯಾಗಿ ಮತ ಮಾರಿಕೊಳ್ಳದೆ ಉತ್ತಮ ಜನಪ್ರತಿನಿಧಿಗಳ ಆಯ್ಕೆಯ ಹೊಣೆ ನಮ್ಮ ಮೇಲಿದೆ. ಇದನ್ನು ತಲೆಯಲ್ಲಿ ಇಟ್ಟುಕೊಂಡು ನನ್ನ ಮೊದಲ ಮತ ಚಲಾಯಿಸುತ್ತೇನೆ.

ಮಂಜುಳಾ ರಾಮಲಿಂಗ ಭಂಗಿ
ಚಿಂಚೋಳಿ, ಕಲಬುರಗಿ ಜಿಲ್ಲೆ

ನಿಸ್ವಾರ್ಥ ಭಾವದಿಂದ ದೇಶವನ್ನು ಮುನ್ನಡೆಸುವವರಿಗೆ ನನ್ನ ಮತ. ರಾಜಕಾರಣಿಗಳ ಆರೋಪ– ಪ್ರತ್ಯಾರೋಪಗಳು ಕೇಳಿ ಬೇಸರವಾಗುತ್ತಿದೆ. ಚುನಾವಣಾ ಪ್ರಚಾರದಲ್ಲಿ ದೇಶವನ್ನು ಸರಿಯಾದ ದಾರಿಗೆ ತೆಗೆದುಕೊಂಡು ಹೋಗುವಂತಹ ದೂರದೃಷ್ಟಿಯ ಯೋಜನೆಗಳನ್ನು ಮುಂದಿಟ್ಟುಕೊಂಡು ಚರ್ಚೆ, ಸಂವಾದಗಳು ನಡೆಯಲಿ.

ಮತ ಆಮಿಷ: ಆಯೋಗದ ವಶ

₹56.18 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹ 80.24 ಕೋಟಿ
ಮದ್ಯ	₹ 173.93 ಕೋಟಿ (1.45 ಕೋಟಿ ಲೀ)
ಮಾದಕವಸ್ತು	₹ 10.40 ಕೋಟಿ (470 ಕೆ.ಜಿ.)
ಚಿನ್ನ	₹ 56.86 ಕೋಟಿ (107.40 ಕೆ.ಜಿ.)
ಬೆಳ್ಳಿ	₹ 1.13 ಕೋಟಿ (296.79 ಕೆ.ಜಿ.)

ಎಂಥಾ ಮಾತು!

ಬಿಜೆಪಿ ಬಳಿ ಐ.ಟಿ ಮತ್ತು ಇ.ಡಿ ಅಸ್ತ್ರ ಬಿಟ್ಟರೆ ಬೇರೇನೂ ಇಲ್ಲ. ಚುನಾವಣೆಯಲ್ಲಿ ಸೋಲಿನ ಭೀತಿಯಿಂದಾಗಿ ಐ.ಟಿ ಮತ್ತು ಇ.ಡಿ ದಾಳಿಯ ಅಸ್ತ್ರಗಳನ್ನು ನಮ್ಮ ಮೇಲೆ ಪ್ರಯೋಗಿಸುತ್ತಿದೆ. ಪ್ರತಿ ಚುನಾವಣೆ ಸಂದರ್ಭದಲ್ಲೂ ನಡೆಯುವ ಈ ದಾಳಿಗಳು ನಮಗೇನೂ ಹೊಸದಲ್ಲ. ಏನಾದರೂ ಮಾಡಿ ನಮ್ಮನ್ನು ಮತ್ತು ಕಾಂಗ್ರೆಸ್ ಪಕ್ಷವನ್ನು ಕಟ್ಟಿ ಹಾಕಬೇಕೆಂಬ ಅವರ ಪ್ರಯತ್ನ ಯಶಸ್ವಿಯಾಗುವುದಿಲ್ಲ. ತಾಕತ್ತಿದ್ದರೆ ಪ್ರಧಾನಿ ಮೋದಿ ಅವರು ಬೆಲೆ ಏರಿಕೆ, ಹತ್ತು ವರ್ಷಗಳಲ್ಲಿ ದೇಶದ ಜನರಿಗೆ ಕೊಟ್ಟಿರುವ ಭರವಸೆಗಳ ಕುರಿತು ಮಾತನಾಡಲಿ

ಡಿ.ಕೆ. ಸುರೇಶ್, ಕಾಂಗ್ರೆಸ್ ಅಭ್ಯರ್ಥಿ, ಬೆಂಗಳೂರು ಗ್ರಾಮಾಂತರ (ತಮ್ಮ ಆಪ್ತರ ಮೇಲೆ ನಡೆದ ಐ.ಟಿ ದಾಳಿ ಕುರಿತು ಪ್ರತಿಕ್ರಿಯೆ)

ನಮ್ಮ ಪಕ್ಷದ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಅವರು ಮುಂದೆ ಮುಖ್ಯಮಂತ್ರಿಯಾಗುತ್ತೇನೆ ಎಂದು ಹೇಳಿದ್ದಾರೆ. ಅವರ ಕನಸು ಈಡೇರಿದರೆ ಒಳ್ಳೆಯದೇ. ಉತ್ತರ ಕರ್ನಾಟಕದವರೊಬ್ಬರು ಮುಖ್ಯಮಂತ್ರಿಯಾದರೆ ನಾವೂ ಖುಷಿಪಡುತ್ತೇವೆ. ಯತ್ನಾಳ ಅವರು ನಮ್ಮ ಕುಟುಂಬದ ಬಗ್ಗೆ ಟೀಕೆ ಮಾಡಿಲ್ಲ. ಸಚಿವರಾದ ಸತೀಶ ಜಾರಕಿಹೊಳಿ ಅವರನ್ನು ಟೀಕಿಸಿದ್ದಾರೆ. ಅದಕ್ಕೆ ಸಚಿವರೇ ಉತ್ತರಿಸಬೇಕೇ ವಿನಃ ನಾನಲ್ಲ

ಬಾಲಚಂದ್ರ ಜಾರಕಿಹೊಳಿ, ಶಾಸಕ

‘ಕಾಂಗ್ರೆಸ್‌ನಲ್ಲಿ ಕೋಲಾಹಲ ಖಚಿತ

‘ಲೋಕಸಭೆ ಚುನಾವಣೆ ಬಳಿಕ ಕಾಂಗ್ರೆಸ್‌ನಲ್ಲಿ ಅಲ್ಲೋಲ ಕಲ್ಲೋಲ ಆಗೋದು ನೂರಕ್ಕೆ ನೂರು ಗ್ಯಾರಂಟಿ’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು. ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

● ಎಸ್. ರವಿಪ್ರಕಾಶ್

● **ಎಷ್ಟು ಸ್ಥಾನ ಗೆಲ್ಲುತ್ತೀರಿ?**

ಒಂದು ತಿಂಗಳಿಂದ ರಾಜ್ಯದಾದ್ಯಂತ ಪ್ರವಾಸ ಮಾಡುತ್ತಿದ್ದೇನೆ. ಇಡೀ ರಾಜ್ಯದಲ್ಲಿ ಮೋದಿ, ಬಿಜೆಪಿ ಮತ್ತು ಎನ್‌ಡಿಎ ಪರವಾದ ವಾತಾವರಣವಿದೆ. 2014 ಮತ್ತು 2019ರಲ್ಲಿ ನಾವು ನೋಡಿದ್ದ ಮೋದಿ ಅಲೆಗಿಂತಲೂ ಈ ಬಾರಿ ಮೋದಿ ಹವಾ ಜೋರಾಗಿದೆ. ಎನ್‌ಡಿಎ 28 ಸ್ಥಾನಗಳನ್ನೂ ಗೆಲ್ಲುತ್ತದೆ.

● **ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಕಠಿಣ ಪರಿಸ್ಥಿತಿ ಎದುರಿಸುತ್ತಿದ್ದಾರೆ ಎಂಬ ಅಭಿಪ್ರಾಯವಿದೆ. ಅಲ್ಲಿ ಗೆಲ್ಲುವ ತಂತ್ರಗಾರಿಕೆ ಏನು?**

ಕಠಿಣ ಪರಿಸ್ಥಿತಿ ಎದುರಿಸುತ್ತಿರುವುದು ನಾವಲ್ಲ, ಕಾಂಗ್ರೆಸ್ ಅಭ್ಯರ್ಥಿ. ನಾವು ಒಳ್ಳೆಯ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದೇವೆ. ಡಾ. ಮಂಜುನಾಥ್ ಅವರಿಗೆ ತಮ್ಮದೇ ಆದ ವರ್ಚಸ್ಸಿದೆ, ಜನಮನ್ನಣೆ ಇದೆ. ನಮ್ಮ ಹೃದಯವಂತ ವೈದ್ಯರ ಜನಪ್ರಿಯತೆ ನೋಡಿ ಕಾಂಗ್ರೆಸ್‌ನ ಕಟುಕ ಹೃದಯಿಗಳಿಗೆ ಏದುಸಿರು ಹೆಚ್ಚಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಇದು ವೈಯಕ್ತಿಕ ಪ್ರತಿಷ್ಠೆ, ಭವಿಷ್ಯದ ಪ್ರಶ್ನೆಯಾಗಿದೆ.

● **ಚುನಾವಣೆ ಬಳಿಕ ರಾಜ್ಯದಲ್ಲಿ ರಾಜಕೀಯ ಪಲ್ಲಟಗಳಾಗುತ್ತವೆ ಎಂದು ನೀವೆಲ್ಲ ಹೇಳುತ್ತಿದ್ದೀರಿ? ಇದರ ಗುಟ್ಟೇನು?**

ಆ ಲಕ್ಷಣಗಳು ಗೋಚರಿಸುತ್ತಿವೆ. ಒಂದು ಕಡೆ ಸಿದ್ದರಾಮಯ್ಯ 60 ಸಾವಿರ ಲೀಡ್ ಕೊಟ್ಟರೆ ನನ್ನನ್ನು ಯಾರೂ ಮುಟ್ಟಲಿಕ್ಕೆ ಆಗುವುದಿಲ್ಲ ಅಂತ ವರುಣದಲ್ಲಿ ಹೇಳಿದ್ದಾರೆ. ನಾನು ಇರಬೇಕಾ ಬೇಡವಾ ಎಂದೂ ಕೇಳಿದ್ದಾರೆ. ಕಾಂಗ್ರೆಸ್ ಸೋತರೆ ಸಿದ್ದರಾಮಯ್ಯ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕಾಗುತ್ತದೆ ಎಂದು ಶಾಸಕ ಗುಬ್ಬಿ ಶ್ರೀನಿವಾಸ್ ಹೇಳಿದ್ದಾರೆ. ದೆಹಲಿಯಲ್ಲಿ ಏನು ತೀರ್ಮಾನ ಆಗಬೇಕೋ ಅದು ಆಗಿದೆ. ಇನ್ನು ಜಾಸ್ತಿ ದಿನ ಇಲ್ಲ, ತಡೆದುಕೊಳ್ಳಿ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಇವೆಲ್ಲಾ ನೋಡುತ್ತಿದ್ದರೆ ಲೋಕಸಭೆ ಚುನಾವಣೆ ಆದ ಮೇಲೆ ಕಾಂಗ್ರೆಸ್ ಪಕ್ಷದಲ್ಲಿ ಅಲ್ಲೋಲ ಕಲ್ಲೋಲ ಆಗೋದು ನೂರಕ್ಕೆ ನೂರು ಗ್ಯಾರಂಟಿ ಅನ್ನಿಸುತ್ತೆ.

● **ಕೇಂದ್ರ ಸರ್ಕಾರ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ ಎಂಬ ವಿಷಯವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಪ್ರಚಾರಕ್ಕೆ ಇಳಿದಿದೆ. ಅವರ ಉತ್ಸಾಹ ನಿಮ್ಮ ಓಟಕ್ಕೆ ತಡೆ ಒಡ್ಡಿದೆಯೇ?**

ತೆರಿಗೆ ಹಂಚಿಕೆ ಆಗಲಿ, ಕೇಂದ್ರದ ಅನುದಾನ ಆಗಿರಲಿ, ಎನ್‌ಡಿಆರ್‌ಎಫ್ ಪರಿಹಾರ ಆಗಿರಲಿ, ಯುಪಿಎ ಸರ್ಕಾರಕ್ಕೆ ಹೋಲಿಸಿದರೆ ಎನ್‌ಡಿಎ ಸರ್ಕಾರದಲ್ಲಿ ರಾಜ್ಯಕ್ಕೆ 2-3 ಪಟ್ಟು ಹೆಚ್ಚು ಬಂದಿದೆ. ಇನ್ನೂ ಏನಾದರೂ ಸಮಸ್ಯೆ ಇದ್ದರೆ ಒಕ್ಕೂಟ ವ್ಯವಸ್ಥೆಯಲ್ಲಿ ಅದನ್ನು ಮಾತುಕತೆ ಮೂಲಕ ಪರಿಹಾರ ಮಾಡಿಕೊಳ್ಳಬೇಕೇ ಹೊರತು ರಾಜಕೀಯ ಪ್ರೇರಿತ ಸಂಘರ್ಷಕ್ಕೆ ಇಳಿಯುವುದರಿಂದ ಏನೂ ಉಪಯೋಗವಿಲ್ಲ. ಹೈಕಮಾಂಡ್ ಮೆಚ್ಚಿಸಲು ಇವೆಲ್ಲ ನಾಟಕ. ಮೋದಿ ಅವರ ಬಗ್ಗೆ ಟೀಕೆ ಮಾಡುವುದಕ್ಕೆ ಇವೆಲ್ಲ ಆಟ.

‘ದೊಡ್ಡ ರಾಜಕೀಯ ಪಕ್ಷದಲ್ಲಿ ಇವೆಲ್ಲ ಸಹಜ’

● **ಹಲವು ಕ್ಷೇತ್ರಗಳಲ್ಲಿ ನಿಮ್ಮ ಪಕ್ಷದ ಅಭ್ಯರ್ಥಿಗಳ ವಿರುದ್ಧವೇ ಬಂಡಾಯ ಎದ್ದವರು ಮತ್ತು ಅಸಮಾಧಾನಿತರು ಇದ್ದಾರೆ. ಇವರಿಂದ ನಿಮ್ಮ ಗೆಲುವಿಗೆ ಅಡ್ಡಿ ಆಗುವುದಿಲ್ಲವೇ?**

ನಮ್ಮದು ದೊಡ್ಡ ಪಕ್ಷ. ಬಿಜೆಪಿ ವಿಶ್ವದ ಅತ್ಯಂತ ದೊಡ್ಡ ರಾಜಕೀಯ ಸಂಘಟನೆ ಎನ್ನುವುದನ್ನು ಮರೆಯಬಾರದು. ನಮ್ಮದು ಕುಟುಂಬ ಆಧಾರಿತ ಪಕ್ಷವಲ್ಲ. ಆಂತರಿಕ ಪ್ರಜಾಪ್ರಭುತ್ವ, ಆರೋಗ್ಯಕರ ಪೈಪೋಟಿ ಇರುವ ‘ಕೇಡರ್ ಬೇಸ್ಡ್’ ಪಕ್ಷ. ಅದರಲ್ಲೂ ಸತತವಾಗಿ ಮೂರನೇ ಅವಧಿಗೆ ನಾವೇ ಗೆಲ್ಲುತ್ತೇವೆ ಎಂದು ಎಲ್ಲ ಸಮೀಕ್ಷೆಗಳು ಹೇಳುತ್ತಿವೆ. ಇಂತಹ ಸಂದರ್ಭದಲ್ಲಿ ಹಲವಾರು ಆಕಾಂಕ್ಷಿಗಳಿರುವುದು ಅತ್ಯಂತ ಸಹಜ. ಅಂತಿಮವಾಗಿ ಟಿಕೆಟ್ ಸಿಗದಿದ್ದಾಗ ಅವರ ಬೆಂಬಲಿಗರಿಗೆ, ಕಾರ್ಯಕರ್ತರಿಗೆ ಬೇಸರ ಆಗುವುದೂ ಅಷ್ಟೇ ಸಹಜ. ಈಗ ಅವಕಾಶ ಸಿಗದವರಿಗೆ ಮುಂದೆ ಸಿಗುತ್ತೆ. ಪ್ರತಿಭೆ, ಸಾಮರ್ಥ್ಯಕ್ಕೆ ಬೆಲೆ ಕೊಡುವ ಪಕ್ಷ ನಮ್ಮದು. ಪಕ್ಷ ಯಾರನ್ನೂ ಕೈಬಿಡುವುದಿಲ್ಲ.

ಪ್ರಜಾವಾಣಿ ಸಂದರ್ಶನ
ಆರ್. ಅಶೋಕ

28 ಕ್ಷೇತ್ರಗಳಲ್ಲಿ ಸಮರ್ಥ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲು ಕಾಂಗ್ರೆಸ್ ತಿಣುಕಾಡುತ್ತಿತ್ತು. ಅಭ್ಯರ್ಥಿಗಳು ಸಿಗದೇ ಸಚಿವರ ಮಕ್ಕಳು, ಪತ್ನಿಯರು, ಅಳಿಯಂದಿರಿಗೆ ಟಿಕೆಟ್ ನೀಡಿದ್ದಾರೆ. 20 ಸ್ಥಾನಗಳನ್ನು ಹೇಗೆ ಗೆಲ್ಲುತ್ತಾರೆ ಹೇಳಿ?

● **ಗ್ಯಾರಂಟಿಗಳು ಕೈ ಹಿಡಿಯುತ್ತವೆ ಎಂಬ ದೃಢ ವಿಶ್ವಾಸದಲ್ಲಿ ಕಾಂಗ್ರೆಸ್ ನಾಯಕರಿದ್ದಾರೆ?**

ಗ್ಯಾರಂಟಿಗಳು ಕೈಹಿಡಿಯುತ್ತವೆ ಎನ್ನುವ ವಿಶ್ವಾಸ ಸ್ವತಃ ಕಾಂಗ್ರೆಸ್ ನಾಯಕರಿಗೇ ಇಲ್ಲ. ಅದಕ್ಕಾಗಿಯೇ ನೂರಾರು ಕೋಟಿ ಖರ್ಚು ಮಾಡಿ ಗ್ಯಾರಂಟಿ ಅನುಷ್ಠಾನ ಸಮಿತಿ, ಗ್ಯಾರಂಟಿ ಸಮೀಕ್ಷೆ ಅಂತೆಲ್ಲ ದುಂಬಾಲು ಬೀಳುತ್ತಿರುವುದು ಏಕೆ? ನಿಜವಾಗಿಯೂ ಗ್ಯಾರಂಟಿಗಳು ಅವರ ಕೈಹಿಡಿದಿವೆ ಎನ್ನುವ ವಿಶ್ವಾಸ ಇದ್ದಿದ್ದರೆ ಇಷ್ಟೆಲ್ಲಾ ಆತಂಕ, ಅನುಮಾನ ಯಾಕೆ?

ಷರತ್ತುಗಳನ್ನು ಹಾಕಿ ಗ್ಯಾರಂಟಿ ಫಲಾನುಭವಿಗಳನ್ನು ಕಡಿಮೆ ಮಾಡಿದ್ದಾರೆ. ಸಾರಿಗೆ ಸಂಸ್ಥೆಗಳು ನಷ್ಟದಿಂದ ಬಸ್ಸುಗಳ ಓಡಾಟವನ್ನೇ ಕಡಿಮೆ ಮಾಡಿ, ವಿದ್ಯಾರ್ಥಿಗಳು ಪರದಾಡುವ ಪರಿಸ್ಥಿತಿ ತಂದಿಟ್ಟಿದ್ದಾರೆ. 200 ಯೂನಿಟ್ ವಿದ್ಯುತ್ ಉಚಿತ ಅಂತ ಹೇಳಿ ಕಡೆಗೆ ವರ್ಷದ ಸರಾಸರಿ ಅಂತ ವರಸೆ ಬದಲಿಸಿದ್ದಾರೆ. ಎಷ್ಟು ಜನ ಮಹಿಳೆಯರಿಗೆ ಗೃಹ ಲಕ್ಷ್ಮಿ ಸಿಗುತ್ತಿದೆ? ಎಷ್ಟು ಜನ ಯುವಕರಿಗೆ ಯುವನಿಧಿ ಸಿಗುತ್ತಿದೆ?

● **ಜೆಡಿಎಸ್ ಜತೆ ಹೊಂದಾಣಿಕೆ ಬಿಜೆಪಿಗೆ ಎಷ್ಟರ ಮಟ್ಟಿಗೆ ಅನುಕೂಲವಾಗುತ್ತದೆ?**

ಬಿಜೆಪಿ–ಜೆಡಿಎಸ್ ಮೈತ್ರಿಯಿಂದ ಎರಡೂ ಪಕ್ಷಗಳಿಗೆ ಇಡೀ ರಾಜ್ಯದಲ್ಲಿ ಎಲ್ಲ 28 ಕ್ಷೇತ್ರಗಳಲ್ಲೂ ಅನುಕೂಲವಾಗುತ್ತದೆ. ಇದು ಚುನಾವಣೆಗಾಗಿ ಮಾಡಿಕೊಂಡ ಮೈತ್ರಿ ಅಲ್ಲ. ದೇಶ ಮತ್ತು ರಾಜ್ಯದ ಹಿತದೃಷ್ಟಿಯಿಂದ ಮೋದಿ ಮತ್ತು ದೇವೇಗೌಡರು ಮಾಡಿರುವ ನಿರ್ಧಾರ.

● **ಚುನಾವಣೆಗಾಗಿ ಒಕ್ಕಲಿಗ ಸಮುದಾಯ ಮತ್ತು ಆದಿಚುಂಚನಗಿರಿ ಸ್ವಾಮೀಜಿಗಳನ್ನು ಎಳೆದು ತರುವ ಅಗತ್ಯವಿತ್ತೇ?**

ಕಳೆದ 10 ವರ್ಷಗಳಲ್ಲಿ ನಿಷ್ಕಳಂಕ, ಭ್ರಷ್ಟಾಚಾರರಹಿತ ಆಡಳಿತ ನೀಡಿರುವ ಮೋದಿ ಸರ್ಕಾರದ ಮೇಲೆ ಟೀಕೆ ಮಾಡಲು ಕಾಂಗ್ರೆಸ್‌ಗೆ ವಿಷಯಗಳೇ ಇಲ್ಲ. ಇನ್ನು ‘ಇಂಡಿಯಾ’ ಮೈತ್ರಿ ಕೂಟದ ಪ್ರಧಾನಿ ಅಭ್ಯರ್ಥಿ ಯಾರು ಅಂತ ಅವರಿಗೇ ಗೊತ್ತಿಲ್ಲ. ರಾಹುಲ್‌ಗಾಂಧಿ ಪ್ರಚಾರಕ್ಕೆ ಬರದಿದ್ದರೆ ಒಳ್ಳೆಯದು ಎನ್ನುವ ಸ್ಥಿತಿ ಕಾಂಗ್ರೆಸ್‌ನದು. ಹೀಗಾಗಿ ಗೊಂದಲ ಸೃಷ್ಟಿಸಲು ಒಕ್ಕಲಿಗ ಸಮುದಾಯ ಮತ್ತು ಆದಿಚುಂಚನಗಿರಿ ಸ್ವಾಮೀಜಿಯವರನ್ನು ಅವರು ಎಳೆದು ತಂದಿದ್ದಾರೆ. ❖

ಬಿಜೆಪಿ ತ್ಯಜಿಸಿ ‘ಕೈ’ ಹಿಡಿದ ಸಂಗಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಪ್ಪಳದಲ್ಲಿ ಮತ್ತೆ ಕಣಕ್ಕಿಳಿಯಲು ಅವಕಾಶ ಸಿಗಲಿಲ್ಲವೆಂದು ಮುನಿಸಿಕೊಂಡು ಬಿಜೆಪಿ ಪ್ರಾಥಮಿಕ ಸದಸ್ಯತ್ವ ಮತ್ತು ಸಂಸದ ಸ್ಥಾನಕ್ಕೆ ಮಂಗಳವಾರ ರಾಜೀನಾಮೆ ನೀಡಿದ್ದ ಸಂಗಣ್ಣ ಕರಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮ್ಮುಖದಲ್ಲಿ ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ಕಾಂಗ್ರೆಸ್ ಸೇರಿದರು.

ಇದೇ ಸಂದರ್ಭದಲ್ಲಿ ಅರಕಲಗೂಡಿನ ನಿವೃತ್ತ ಐಎಎಸ್ ಅಧಿಕಾರಿ ಎ.ಎಸ್. ಪುಟ್ಟಸ್ವಾಮಿ, ರಾಜಾಜಿನಗರದ ಕೃಷ್ಣಮೂರ್ತಿ, ಮೂರು ಬಾರಿ ಶಾಸಕರಾಗಿದ್ದ ಶಿವಪುತ್ರ ಮಾಳಗಿ ಕೂಡ ಕಾಂಗ್ರೆಸ್ ಸೇರಿದರು. ಸಚಿವ ಶಿವರಾಜ್ ತಂಗಡಗಿ, ಶಾಸಕ ಲಕ್ಷ್ಮಣ ಸವದಿ ಇದ್ದರು.

ಕಾಂಗ್ರೆಸ್ ಸೇರಿದ ಬಳಿಕ ಮಾತನಾಡಿದ ಸಂಗಣ್ಣ, ‘ಬಿಜೆಪಿ ತ್ಯಜಿಸಿ ಕಾಂಗ್ರೆಸ್ ಸೇರಲು ಲಕ್ಷ್ಮಣ ಸವದಿ ಮೂಲ ಕಾರಣ. ನಾನು ವೈಯಕ್ತಿಕ ಅಧಿಕಾರಕ್ಕಾಗಿ ಕಾಂಗ್ರೆಸ್‌ಗೆ ಬಂದಿಲ್ಲ. ಈ ಪಕ್ಷದ ತತ್ವ, ಸಿದ್ಧಾಂತ ಮೆಚ್ಚಿ ಸೇರ್ಪಡೆ ಆಗಿದ್ದೇನೆ. ಕೊಪ್ಪಳದ ಕಾಂಗ್ರೆಸ್ ಅಭ್ಯರ್ಥಿ ರಾಜಶೇಖರ ಹಿಟ್ನಾಳ್ ಅವರನ್ನು ಗೆಲ್ಲಿಸುವ ಸವಾಲನ್ನು ಎಲ್ಲರೂ ತೆಗೆದುಕೊಂಡಿದ್ದೇವೆ’ ಎಂದರು.

ಸಿದ್ದರಾಮಯ್ಯ ಮಾತನಾಡಿ, ‘ಬಿಜೆಪಿಯಲ್ಲಿ ಬಿ.ಎಸ್. ಯಡಿಯೂರಪ್ಪ ಮತ್ತು ಬಿ.ಎಲ್. ಸಂತೋಷ್ ಎಂಬ ಎರಡು ಬಣವಿದೆ. ಯಡಿಯೂರಪ್ಪ ಅವರನ್ನು ಒಪ್ಪದವರಿಗೆ ಲೋಕಸಭೆ ಟಿಕೆಟ್ ತಪ್ಪಿಸಲಾಗಿದೆ’ ಎಂದು ಹೇಳಿದರು.

‘ಕರಡಿ ಸಂಗಣ್ಣ ತಮ್ಮ ಕ್ಷೇತ್ರದಲ್ಲಿ ಉತ್ತಮ ಹೆಸರು ಹೊಂದಿದ್ದರು. ಒಳ್ಳೆಯ ಕೆಲಸ ಮಾಡಿದ್ದರು. ಹಾಗಿದ್ದರೂ ಬಿಜೆಪಿಯವರು ಅವರಿಗೆ ಏಕೆ ಟಿಕೆಟ್ ತಪ್ಪಿಸಿದರೆಂದು ಅರ್ಥ ಆಗಿಲ್ಲ. ಕರ್ನಾಟಕದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಆಡಳಿತ ವಿರೋಧಿ ಅಲೆ ಇದೆ. ಗೆಲ್ಲುವ ವಿಶ್ವಾಸ ಬಿಜೆಪಿಯವರಿಗಿಲ್ಲ. ಅದಕ್ಕೆ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಬದಲಿಸಿದ್ದಾರೆ’ ಎಂದರು.

ಡಿ.ಕೆ. ಶಿವಕುಮಾರ್ ಮಾತನಾಡಿ, ‘ಇಡೀ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಮತ್ತು ಗ್ಯಾರಂಟಿಗಳ ಅಲೆಯಿದೆ. ಕಾಂಗ್ರೆಸ್‌ನ ಗ್ಯಾರಂಟಿಗಳನ್ನು ಮುಟ್ಟುವುದು ಬಿಜೆಪಿ- ಜೆಡಿಎಸ್ ಹಣೆಯಲ್ಲಿ ಬರೆದಿಲ್ಲ’ ಎಂದರು.

‘ಕಾಂಗ್ರೆಸ್ ಪಕ್ಷದ ಮೇಲಿನ ಜನರ ಪ್ರೀತಿ ಕಂಡು ಬಿಜೆಪಿ, ಜೆಡಿಎಸ್‌ನವರಿಗೆ ಅಸೂಯೆ ಆಗಿದೆ. ಆದಕಾರಣ ನಮ್ಮ ತಾಯಂದಿರ ಬಗ್ಗೆ ಮಾತನಾಡುತ್ತಿದ್ದಾರೆ. ತಾಯಂದಿರು ದಾರಿ ತಪ್ಪಿದ್ದಾರೆ ಎಂದು ಹೇಳಿಕೆ ನೀಡಿರುವ ಜೆಡಿಎಸ್‌ನವರಿಗೆ ರಾಜ್ಯದ ಜನ ಉತ್ತರ ನೀಡಲಿದ್ದಾರೆ’ ಎಂದರು.

ನಮ್ಮ ಆಂತರಿಕ ವರದಿ ಪ್ರಕಾರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 20 ಸ್ಥಾನ ಗೆಲ್ಲಲಿದೆ. ಸಂಗಣ್ಣ ಕರಡಿ ಪಕ್ಷಕ್ಕೆ ಬಂದ ಬಳಿಕ ಕೊಪ್ಪಳದಲ್ಲಿ ಇನ್ನಷ್ಟು ಶಕ್ತಿ ಬಂದಿದೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಂಗಣ್ಣ ಕರಡಿ ಅವರನ್ನು ಇಂದೇ ಭೇಟಿ ಮಾಡಿ ಮಾತನಾಡಬೇಕು ಎಂದುಕೊಂಡಿದ್ದೆ. ಅಷ್ಟರಲ್ಲಿ ಕಾಂಗ್ರೆಸ್ ಸೇರಿದ್ದಾರೆ. ರಾಜಕೀಯದಲ್ಲಿ ಇದೆಲ್ಲ ಸ್ವಾಭಾವಿಕ

ಬಿ.ಎಸ್.ಯಡಿಯೂರಪ್ಪ
ಸದಸ್ಯ, ಬಿಜೆಪಿ ಸಂಸದೀಯ ಮಂಡಳಿ

ಸಂಗಣ್ಣ ಪಕ್ಷ ತೊರೆದರೂ ಲಿಂಗಾಯತ ಮತಗಳು ಒಡೆಯೊಲ್ಲ. ಟಿಕೆಟ್ ಸಿಗದ ಕಾರಣಕ್ಕೆ ಅವರು ಹೀಗೆ ನಡೆದುಕೊಂಡಿದ್ದು ದುರದೃಷ್ಟಕರ. ಕೊಪ್ಪಳದಲ್ಲಿ ಬಿಜೆಪಿ ಅಭ್ಯರ್ಥಿಯೇ ಗೆಲ್ಲುವರು

ಬಸವರಾಜ ಬೊಮ್ಮಾಯಿ, ಮಾಜಿ ಸಿ.ಎಂ

ಬಿಜೆಪಿ ತ್ಯಜಿಸಿ ಕಾಂಗ್ರೆಸ್ ಸೇರಿದ ಕೊಪ್ಪಳದ ಮಾಜಿ ಸಂಸದ ಸಂಗಣ್ಣ ಕರಡಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪಕ್ಷದ ಶಾಲು ಹೊದಿಸಿ, ಬಾವುಟ ನೀಡಿ ಪಕ್ಷಕ್ಕೆ ಬರಮಾಡಿಕೊಂಡರು —ಪ್ರಜಾವಾಣಿ ಚಿತ್ರ

‘ಹಿಂದುತ್ವ’ ಹಣಿಯಲು ‘ಜಾತಿ’ ಅಸ್ತ್ರ

ಕ್ಷೇತ್ರ ಸಮೀಕ್ಷೆ — ದಕ್ಷಿಣ ಕನ್ನಡ

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ 77.97%



ಬ್ರಿಜೇಶ್ ಚೌಟ (ಬಿಜೆಪಿ)

ಆರ್.ಪದ್ಮರಾಜ್ (ಕಾಂಗ್ರೆಸ್)

ಕ್ಷೇತ್ರವನ್ನು ಕಾಡುವ ವಿಷಯಗಳು

- ಜಿಲ್ಲೆಯ ಜನರು ಉದ್ಯೋಗಕ್ಕಾಗಿ ವಲಸೆ ಹೋಗಬೇಕಾದ ಸ್ಥಿತಿ ಇದೆ
- ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗುತ್ತದೆ
- ಕಡಲ್ಕೊರೆತ ಸಮಸ್ಯೆಗೆ ಶಾಶ್ವತ ಪರಿಹಾರ ಈಗಲೂ ಮರೀಚಿಕೆ
- ಅರಬ್ಬಿ ಸಮುದ್ರದಲ್ಲಿ ಮೀನಿನ ಕ್ಷಾಮದಿಂದ ಮೀನುಗಾರಿಕೆಗೆ ಹೊಡೆತ ಬಿದ್ದಿದೆ
- ಪಶ್ಚಿಮ ಘಟ್ಟದ ತಪ್ಪಲಿನ ಊರುಗಳಲ್ಲಿನ ಮಾನವ–ವನ್ಯಜೀವಿ ಸಂಘರ್ಷವಿದೆ



ಶಾಸಕರ ಬಲಾಬಲ
- ಕಾಂಗ್ರೆಸ್
- ಬಿಜೆಪಿ
- ಜೆಡಿಎಸ್

1. ಬೆಳ್ತಂಗಡಿ
2. ಸುಳ್ಯ
3. ಪುತ್ತೂರು
4. ಬಂಟ್ವಾಳ
5. ಮೂಡುಬಿದಿರೆ
6. ಮಂಗಳೂರು ಉತ್ತರ
7. ಮಂಗಳೂರು
8. ಮಂಗಳೂರು ದಕ್ಷಿಣ

ಬ್ರಿಜೇಶ್ ಚೌಟ (ಬಿಜೆಪಿ)

👍 ನಿವೃತ್ತ ಸೇನಾಧಿಕಾರಿ ಎಂಬುದನ್ನು ಮುಂದಿಟ್ಟು ಮತದಾರರ ಒಲವು ಗಳಿಕೆಗೆ ಯತ್ನ

👍 ಕಂಬಳ ಹಾಗೂ ಮಂಗಳೂರು ಸಾಹಿತ್ಯ ಉತ್ಸವ ಆಯೋಜನೆಯಲ್ಲಿ ತೊಡಗಿಸಿಕೊಂಡಿದ್ದರಿಂದ ಸಿಕ್ಕ ಜನಪ್ರಿಯತೆ

👎 ಮಿಲಿಟರಿ ಜೀವನ ಶೈಲಿಯು ಜನರಿಗೆ ಹೆಚ್ಚು ಆಪ್ತರಾಗಲು ಅಡ್ಡಿ

👎 ಕಾರ್ಯಕರ್ತರು ಹಾಗೂ ಪಕ್ಷದ ಶಾಸಕರ ಜೊತೆ ತಳಮಟ್ಟದಲ್ಲಿ ಕಾರ್ಯನಿರ್ವಹಿಸಿದ ಅನುಭವ ಇಲ್ಲ

ಆರ್.ಪದ್ಮರಾಜ್ (ಕಾಂಗ್ರೆಸ್)

👍 ಗುರುಬೆಳದಿಂಗಳು ಟ್ರಸ್ಟ್, ಕುದ್ರೋಳಿ ಗೋಕರ್ಣನಾಥ ಕ್ಷೇತ್ರ ಖಜಾಂಚಿಯಾಗಿ ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳಲ್ಲಿ ಸಕ್ರಿಯ

👍 ಜಿಲ್ಲೆಯಲ್ಲಿ ಅತಿ ಹೆಚ್ಚು ಸಂಖ್ಯೆಯ ಮತದಾರರನ್ನು ಹೊಂದಿರುವ ಬಿಲ್ಲವ ಸಮುದಾಯಕ್ಕೆ ಸೇರಿರುವುದು

👎 ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಿದ್ದು ಕಳೆದ ವಿಧಾನಸಭೆ ಚುನಾವಣೆಯ ಬಳಿಕ. ರಾಜಕೀಯ ಅನುಭವ ಇಲ್ಲ

👎 ತಳಮಟ್ಟದ ಕಾರ್ಯಕರ್ತರ ನಿಕಟ ಒಡನಾಟ ಇಲ್ಲ

● ಪ್ರವೀಣ್ ಕುಮಾರ್ ಪಿ.ವಿ

ಮಂಗಳೂರು: ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ‘ಹಿಂದುತ್ವವಾದ’ವನ್ನೇ ಮುಂದಿಟ್ಟುಕೊಂಡು 33 ವರ್ಷಗಳಿಂದ ಪ್ರಾಬಲ್ಯ ಮೆರೆದಿದೆ. ಸತತ ಒಂಬತ್ತು ಸಲ ಗೆದ್ದಿದ್ದ ಕಾಂಗ್ರೆಸ್, 1991ರ ಬಳಿಕ ಒಮ್ಮೆಯೂ ಗೆಲುವಿನ ಮುಖ ನೋಡಿಲ್ಲ. ಈ ಸಲ ಕ್ಷೇತ್ರವನ್ನು ಶತಾಯ ಗತಾಯ ‘ಕೈ’ವಶ ಮಾಡಿಕೊಳ್ಳುವ ಛಲದಿಂದ, ಎದುರಾಳಿಯ ‘ಹಿಂದುತ್ವವಾದ’ಕ್ಕೆ ಪ್ರತಿಯಾಗಿ ‘ಜಾತಿವಾದ’ದ ಅಸ್ತ್ರವನ್ನು ಬಳಸಿದೆ.

ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಪೈಪೋಟಿ ಇದೆ. ಜೆಡಿಎಸ್ ಪ್ರಾಬಲ್ಯ ಇಲ್ಲದ ಕಾರಣ ಮೈತ್ರಿಯು ಪರಿಣಾಮ ಬೀರಿಲ್ಲ. ಬಿಜೆಪಿಯಿಂದ ಮಾಜಿ ಸೇನಾಧಿಕಾರಿ, ಬಂಟ ಸಮುದಾಯದ ಕ್ಯಾ.ಬ್ರಿಜೇಶ್ ಚೌಟ ಹಾಗೂ ಕಾಂಗ್ರೆಸ್‌ನಿಂದ ಕ್ಷೇತ್ರದಲ್ಲಿ ಅತಿ ಹೆಚ್ಚು ಸಂಖ್ಯೆಯ ಮತದಾರರಿರುವ ಬಿಲ್ಲವ ಸಮುದಾಯದ ವಕೀಲ ಆರ್.ಪದ್ಮರಾಜ್ ಹುರಿಯಾಳುಗಳು. ಇಬ್ಬರಿಗೂ ಇದು ಮೊದಲ ಚುನಾವಣೆ.

ದಕ್ಷಿಣ ಕನ್ನಡ

ಹಿಂದೂ ಜಾಗರಣ ವೇದಿಕೆಯ ನೇತಾರರಾಗಿದ್ದ ಸತ್ಯಜಿತ್ ಸುರತ್ಕಲ್ ಈ ಸಲ ‘ಬಿಲ್ಲವ ಅಭ್ಯರ್ಥಿ’ಗೆ ಬೆಂಬಲ ಸೂಚಿಸಿದ್ದಾರೆ. ‘ಸೌಜನ್ಯಾ ಸಾವಿಗೆ ನ್ಯಾಯ ಕೊಡಿಸಿ’ ಎಂದು ಹೋರಾಟ ನಡೆಸುತ್ತಿರುವ ಮಹೇಶ್ ಶೆಟ್ಟಿ ತಿಮರೋಡಿ ‘ನೋಟಾ’ ಚಲಾಯಿಸುವಂತೆ ಹೇಳುತ್ತಿದ್ದಾರೆ. ಈ ಸಲ ಎಸ್‌ಡಿಪಿಐ ಅಭ್ಯರ್ಥಿಯನ್ನು ಕಣಕ್ಕಿಳಿಸಿಲ್ಲ. ಇವು ಈ ಬಾರಿ ಹೊಸ ಬೆಳವಣಿಗೆಗಳು.

ಮುಸ್ಲಿಂ ಅಭ್ಯರ್ಥಿ ಕಣದಲ್ಲಿ ಇಲ್ಲದಿರುವುದು ಕಾಂಗ್ರೆಸ್‌ಗೆ ಅನುಕೂಲ. ಪದ್ಮರಾಜ್ ಹೊಸಮುಖವಾಗಿರುವುದರಿಂದ ಕಾಂಗ್ರೆಸ್‌ನ ಸ್ಥಳೀಯ ಭಿನ್ನಮತಗಳು ಶಮನವಾಗಿವೆ.

ಕಾರ್ಯಕರ್ತರ ಕೋಪಕ್ಕೆ ಗುರಿಯಾಗಿದ್ದ ಸಂಸದ ನಳಿನ್ ಕುಮಾರ್ ಕಟೀಲ್ ಅವರಿಗೆ ಬಿಜೆಪಿ ಟಿಕೆಟ್ ನಿರಾಕರಿಸಿ, ಆಡಳಿತ ವಿರೋಧಿ ಅಲೆಯನ್ನು ತಕ್ಕಮಟ್ಟಿಗೆ ತಣಿಸಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಂಡಾಯ ಅಭ್ಯರ್ಥಿಯಾಗಿ 62,458 ಮತ ಪಡೆದಿದ್ದ ಅರುಣ್ ಕುಮಾರ್ ಪುತ್ತಿಲ ಪಕ್ಷಕ್ಕೆ ಮರಳಿರುವುದು ಬಿಜೆಪಿಯ ತಲೆನೋವನ್ನು ಕಡಿಮೆ ಮಾಡಿದೆ.

‘ಗೆಲುವು ಸುಲಭವಲ್ಲ’ ಎಂಬುದು ಉಭಯಪಕ್ಷಗಳ ನಾಯಕರಿಗೂ ಅರಿವಿದೆ. ಕಾರ್ಯಕರ್ತರಲ್ಲಿ ಹುಮ್ಮಸ್ಸು ತುಂಬಲು ಬಿಜೆಪಿಯವರು ಪ್ರಧಾನಿ ನರೇಂದ್ರ ಮೋದಿಯವರ ವರ್ಚಸ್ಸನ್ನು ನೆಚ್ಚಿಕೊಂಡಿದ್ದಾರೆ. ಕಾಂಗ್ರೆಸ್ ನಾಯಕರು ಸೌಹಾರ್ದ ಮಂತ್ರ ಪಠಿಸುತ್ತಲೇ, ‘ಲೋಕಸಭೆ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಬಿಜೆಪಿ ಒಮ್ಮೆಯೂ ಬಿಲ್ಲವರಿಗೆ ಅವಕಾಶ ನೀಡಿಲ್ಲ’ ಎಂಬುದನ್ನೂ ಹೇಳುತ್ತಿದ್ದಾರೆ.

ಜಿಲ್ಲೆಯಲ್ಲಿ ‘ಜಾತಿ ರಾಜಕಾರಣ’ ಈ ಸಲ ಪ್ರಮುಖ ಪಾತ್ರ ವಹಿಸಬಹುದು ಎಂಬುದನ್ನು ಬಿಜೆಪಿ ಅಭಿಮಾನಿಯಾಗಿರುವ ಕೈಕಂಬದ ಬಾಲಕೃಷ್ಣ ಅಡಪ ಅವರೂ ಒಪ್ಪುತ್ತಾರೆ. ‘ಹಿಂದೆಲ್ಲ ಚುನಾವಣೆಯಲ್ಲಿ ಜಾತಿ ವಿಚಾರ ಗೌಣವಾಗಿತ್ತು. ಆದರೆ, ಈ ಸಲ ಸ್ಥಿತಿ ಹಾಗಿಲ್ಲ. ಆದರೂ ಜಿಲ್ಲೆಯ ಜನ ಮೋದಿಯವರ ಮುಖ ನೋಡಿಯಾದರೂ ಬಿಜೆಪಿಗೇ ಮತ ಹಾಕುತ್ತಾರೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ನಾವೂರ ಗ್ರಾಮದ ವಿಜಯ್, ‘ಹಿಂದಿನಿಂದಲೂ ಜಿಲ್ಲೆಯಲ್ಲಿ ಬಿಜೆಪಿಗೆ ಬಿಲ್ಲವ ಸಮುದಾಯ ಶಕ್ತಿ ತುಂಬುತ್ತಿದೆ. ಈ ಸಲ ಬಿಲ್ಲವರ ಮುಖಗಳು ಬಿಜೆಪಿ ಜೊತೆ ಅಷ್ಟಾಗಿ ಕಾಣಿಸಿಕೊಳ್ಳುತ್ತಿಲ್ಲ. ಆದರೂ ಬಿರುಸಿನ ಪೈಪೋಟಿ ಖಂಡಿತ ಇದೆ’ ಎಂದರು.

ನೂಜಿಬಾಳ್ತಿಲದ ಸತೀಶ್, ‘ಜಿಲ್ಲೆಯಲ್ಲಿರುವ ಹಿಂದೂ ಸಮುದಾಯದವರಿಗೆ ಬಿಜೆಪಿ ಬಗ್ಗೆ ಒಲವಿದೆ. ಅವರನ್ನು ಕಾಂಗ್ರೆಸ್‌ನತ್ತ ಸೆಳೆಯುವುದು ಸುಲಭದ ಮಾತಲ್ಲ. ಆದರೂ ಈ ಸಲ ತುಸು ಬದಲಾವಣೆ ಕಾಣಿಸಿದೆ’ ಎಂದು ಅಭಿಪ್ರಾಯಪಟ್ಟರು.

‘ಗ್ಯಾರಂಟಿ’ಗಳು ಕೈ ಹಿಡಿಯಲಿವೆ ಎಂಬುದು ಕಾಂಗ್ರೆಸ್‌ನ ನಿರೀಕ್ಷೆ. ‘ಗ್ಯಾರಂಟಿ ಗಿಮಿಕ್’ ಜಿಲ್ಲೆಯಲ್ಲಿ ನಡೆಯದು ಎಂಬುದು ಬಿಜೆಪಿಯವರ ವಾದ. ❖

ಎಚ್‌ಡಿಕೆ ಸುತ್ತ ‘ಏಳು ಸುತ್ತಿನ ಕೋಟೆ’

ಕ್ಷೇತ್ರ ಸಮೀಕ್ಷೆ — ಮಂಡ್ಯ

● ಎಂ.ಎನ್.ಯೋಗೇಶ್

ಮಂಡ್ಯ: ‘ಈ ಚುನಾವಣೆ ಸೋತರೆ ಇದ್ದರೂ ಸತ್ತಂತೆ’ ಎಂದು ಘೋಷಿಸಿರುವ ಮೈತ್ರಿ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ಪ್ರತಿಷ್ಠೆಯನ್ನೇ ಪಣಕ್ಕಿಟ್ಟಿದ್ದಾರೆ. ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಹಳ್ಳಿಗಳನ್ನು ಸುತ್ತುತ್ತಿರುವ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ತಮ್ಮ ಸುತ್ತ ಪಕ್ಷದ 7 ಶಾಸಕರ ಏಳು ಸುತ್ತಿನ ಕೋಟೆ ಕಟ್ಟಿಕೊಂಡು ಪ್ರಬಲ ಪೈಪೋಟಿ ನೀಡುತ್ತಿದ್ದಾರೆ.

ಎಚ್‌ಡಿಕೆ ಪ್ರಚಾರ ತಾಲ್ಲೂಕು ಕೇಂದ್ರಗಳಿಗಷ್ಟೇ ಸೀಮಿತವಾಗಿದ್ದರೂ ಮಗ ನಿಖಿಲ್ ತಂದೆಯ ಪರವಾಗಿ ಎಲ್ಲೆಡೆ ಸಂಚರಿಸುತ್ತಿದ್ದಾರೆ. ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರೂ ಪುತ್ರನ ಪರವಾಗಿ ಪ್ರಚಾರ ಸಭೆ ನಡೆಸುತ್ತಿದ್ದಾರೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸೋತು ಸುಣ್ಣವಾಗಿರುವ ಪಕ್ಷದ ನಾಯಕರು, ಕುಮಾರಸ್ವಾಮಿ ಮೂಲಕ ಗೆಲುವಿಗಾಗಿ ಹಂಬಲಿಸುತ್ತಿದ್ದಾರೆ.

ಮಂಡ್ಯ

‘ಹಾಸನ ಜನ್ಮಭೂಮಿ, ರಾಮನಗರ ಕರ್ಮಭೂಮಿ, ಮಂಡ್ಯ ಹೃದಯಲ್ಲಿರುವ ನೆಲ’ ಎಂದು, ಭಾವನಾತ್ಮಕ ವಿಚಾರಗಳಿಗೆ ಒತ್ತು ನೀಡುತ್ತಾ, ಅನಾರೋಗ್ಯ, ಪುತ್ರನ ಸರಣಿ ಸೋಲುಗಳನ್ನು ಮುಂದಿಡುತ್ತಿರುವ ಕುಮಾರಸ್ವಾಮಿ, ಅನುಕಂಪ ಪಡೆಯಲೆತ್ನಿಸುತ್ತಿದ್ದಾರೆ. ಹಳೆಯ ಕೋಪತಾಪಗಳನ್ನು ಬಿಟ್ಟಿರುವ ಅವರು ಸಂಸದೆ ಸುಮಲತಾ, ಬಿಜೆಪಿ ಮುಖಂಡ ಕೆ.ಸಿ.ನಾರಾಯಣಗೌಡ ಸೇರಿ ಸಣ್ಣಪುಟ್ಟ ಕಾರ್ಯಕರ್ತರ ಮನೆಗಳಿಗೂ ಹೋಗಿಬರುತ್ತಿದ್ದಾರೆ.

‘ಕುಮಾರಸ್ವಾಮಿ ಗೆದ್ದರೆ ಕೇಂದ್ರದಲ್ಲಿ ಕೃಷಿ ಸಚಿವರಾಗುತ್ತಾರೆ, ಪ್ರಧಾನಿ ಮೋದಿ ಮೂಲಕ ಕಾವೇರಿ ಸಮಸ್ಯೆಗೆ ಪರಿಹಾರ ಕೊಡಿಸುತ್ತಾರೆ, ಮೇಕೆದಾಟು ಯೋಜನೆಗೆ ಅನುಮತಿ ತರುತ್ತಾರೆ’ ಎಂಬ ಭರವಸೆಗಳು ಅಬ್ಬರಿಸುತ್ತಿವೆ.

ಈ ಚುನಾವಣೆಯನ್ನು ‘ಕುಮಾರಸ್ವಾಮಿ ಮತ್ತು ಸಚಿವ ಚಲುವರಾಯಸ್ವಾಮಿ ನಡುವಣ ಹಣಾಹಣಿ’ ಎಂದೇ ಬಣ್ಣಿಸಲಾಗುತ್ತಿದ್ದು, ಸ್ಟಾರ್ ಚಂದ್ರು ಗೆಲ್ಲಿಸಿಕೊಳ್ಳಲು ಅವರು ಬೀದಿಗಿಳಿದು ಮತಯಾಚಿಸುತ್ತಿದ್ದಾರೆ. ಕೆ.ಆರ್.ಪೇಟೆ ಹೊರತುಪಡಿಸಿ ಮೈಸೂರು ಜಿಲ್ಲೆಯ ಕೆ.ಆರ್.ನಗರ ಸೇರಿದಂತೆ 7 ತಾಲ್ಲೂಕುಗಳ ಶಾಸಕರು ಪ್ರತಿ ಪಂಚಾಯ್ತಿಗಳಲ್ಲೂ ಅಭ್ಯರ್ಥಿಯೊಂದಿಗೆ ಸುತ್ತುತ್ತಿದ್ದಾರೆ.

‘ಕುಮಾರಸ್ವಾಮಿ ಹೊರಗಿನವರು’ ಎನ್ನುತ್ತಿರುವ ಕಾಂಗ್ರೆಸ್, ತಮ್ಮ ಅಭ್ಯರ್ಥಿ ಸ್ಥಳೀಯರೆಂದು ಪ್ರತಿಪಾದಿಸಿದೆ. ಸ್ಟಾರ್ ಚಂದ್ರು ಮಂಡ್ಯದಲ್ಲಿ ಮನೆಯನ್ನೂ ಖರೀದಿಸಿದ್ದಾರೆ. 3 ತಿಂಗಳ ಮೊದಲೇ ಸ್ಪರ್ಧೆ ಖಾತ್ರಿಯಾಗಿದ್ದರಿಂದ ನಾಲ್ಕೈದು ಸುತ್ತಿನ ಪ್ರಚಾರ ಪೂರ್ಣಗೊಳಿಸಿದ್ದಾರೆ.

ಕ್ಷೇತ್ರದಲ್ಲಿ ಬಹುಸಂಖ್ಯಾತ ಒಕ್ಕಲಿಗ ಸಮುದಾಯದ ಬೆಂಬಲ ಪಡೆಯಲು ಅಭ್ಯರ್ಥಿಗಳಿಬ್ಬರೂ ಪೈಪೋಟಿಯಲ್ಲಿದ್ದಾರೆ. ‘ಎಚ್‌ಡಿಡಿ, ಎಚ್‌ಡಿಕೆ ಒಕ್ಕಲಿಗರ ಪರಮೋಚ್ಛ ನಾಯಕ’ ಎಂದು ಮೈತ್ರಿ ಮುಖಂಡರು ಅಸ್ತ್ರ ಹೂಡಿದ್ದಾರೆ. ‘ಎಚ್‌ಡಿಕೆ ಸರ್ಕಾರದಲ್ಲಿ ಚುಂಚಶ್ರೀ ಫೋನ್ ಕದ್ದಾಲಿಸಲಾಗಿತ್ತು’ ಎಂದು ಕಾಂಗ್ರೆಸ್‌ನವರು ಪ್ರತ್ಯಸ್ತ್ರ ಪ್ರಯೋಗಿಸಿದ್ದಾರೆ.

ಕುಮಾರಸ್ವಾಮಿ ಅವರ ಮೇಲೆ ಜನರಿಗಿರುವ ‘ತೀವ್ರ ಅಭಿಮಾನ’ ಮತವಾಗಿ ಬದಲಾಗಲಿದೆ ಎಂಬುದು ಜೆಡಿಎಸ್– ಬಿಜೆಪಿ ನಂಬಿಕೆ. ಕಾಂಗ್ರೆಸ್ಸಿಗರು ಸ್ವಾಭಿಮಾನದ ಸೊಲ್ಲೆತ್ತಿದ್ದು ‘ಹೊರಗಿನವರು ಇಲ್ಲೇಕೆ ಬರಬೇಕು’ ಎಂದು ಪ್ರಶ್ನಿಸಿದ್ದಾರೆ. ಕ್ಷೇತ್ರದಲ್ಲಿ ಬಿಜೆಪಿ ದುರ್ಬಲವಾಗಿದ್ದು, ಅಲ್ಲಿನ ಮತಗಳು ನಿರ್ಣಾಯಕ ವಾಗಲಾರವು ಎಂಬ ವಿಶ್ಲೇಷಣೆಯೂ ನಡೆದಿದೆ.

ಒಕ್ಕಲಿಗೇತರ ಮತಗಳ ಕ್ರೋಡೀಕರಣಕ್ಕೆ ಮುಂದಾಗಿರುವ ಕಾಂಗ್ರೆಸ್, ದಲಿತರು, ಶೋಷಿತರು, ಹಿಂದುಳಿದ, ಅಲ್ಪ ಸಂಖ್ಯಾತರ ಸಮಾವೇಶಗಳಿಗೆ ಪ್ರಾಯೋಜಕತ್ವ ನೀಡುತ್ತಿದೆ. ಸಂಸದೆ ಸುಮಲತಾ ಬಿಜೆಪಿ ಸೇರಿದ್ದರೂ ಎಚ್‌ಡಿಕೆ ಪರ ಪ್ರಚಾರ ನಡೆಸಲು ಹಿಂದೇಟು ಹಾಕುತ್ತಿರುವುದು ಕುತೂಹಲ ಮೂಡಿಸಿದೆ. ❖

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ 80.81%



ಕ್ಷೇತ್ರವನ್ನು ಕಾಡುವ ವಿಷಯಗಳು

- ಮೈಸೂರು– ಬೆಂಗಳೂರು ನಡುವೆ ಅಭಿವೃದ್ಧಿ ಕಾಣದೆ ದೊಡ್ಡ ಹಳ್ಳಿಯಂತಿರುವ ಜಿಲ್ಲಾ ಕೇಂದ್ರ
- ಜಿಲ್ಲೆಯ ಕೊನೆ ಭಾಗದ ಗದ್ದೆಗಳಿಗೆ ತಲುಪದ ಕೆಆರ್‌ಎಸ್ ನೀರು
- ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್‌ವೇಗೆ ಇಲ್ಲದ ಆಗಮನ– ನಿರ್ಗಮನ ಪಥ
- ಸರ್ಕಾರಿ ಸ್ವಾಮ್ಯದ ಏಕೈಕ ಮೈಷುಗರ್ ಕಾರ್ಖಾನೆ ಪುನಶ್ಚೇತನ ಆಗಿಲ್ಲ



ಶಾಸಕರ ಬಲಾಬಲ
- ಕಾಂಗ್ರೆಸ್
- ಬಿಜೆಪಿ
- ಜೆಡಿಎಸ್
- ಸರ್ವೋದಯ ಕರ್ನಾಟಕ ಪಕ್ಷ (ಕಾಂಗ್ರೆಸ್ ಬೆಂಬಲಿತ)

1. ನಾಗಮಂಗಲ
2. ಮಂಡ್ಯ, 3. ಮದ್ದೂರು
4. ಮಳವಳ್ಳಿ, 5. ಶ್ರೀರಂಗಪಟ್ಟಣ
6. ಮೇಲುಕೋಟೆ
7. ಕೆ.ಆರ್.ಪೇಟೆ
8. ಕೆ.ಆರ್.ನಗರ (ಮೈಸೂರು ಜಿಲ್ಲೆ)



ಎಚ್‌ಡಿ.ಕುಮಾರಸ್ವಾಮಿ (ಜೆಡಿಎಸ್)

ಕಾಂಗ್ರೆಸ್‌ನ ಮಹಿಳೆಯರು ಮಾತ್ರ ಗೋ ಬ್ಯಾಕ್ ಎನ್ನುತ್ತಿರುವುದು. ಮಂಡ್ಯ ಜಿಲ್ಲೆಯ ಜನ ಕಂ ಬ್ಯಾಕ್ ಎನ್ನುತ್ತಿದ್ದಾರೆ

👍 ಮುಖ್ಯಮಂತ್ರಿ ಹುದ್ದೆಯಲ್ಲಿದ್ದಾಗ ಮಂಡ್ಯ ಜಿಲ್ಲೆಗೆ ಗಣನೀಯ ಕೊಡುಗೆ

👍 ಅನಾರೋಗ್ಯ, ಮಗನ ಸತತ ಸೋಲಿನ ಅನುಕಂಪ ಮತ್ತು ಭಾವನಾತ್ಮಕ ವಿಷಯಗಳು

👎 ರಾಮನಗರದಿಂದ ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ವಲಸೆ ಬಂದಿರುವುದು

👎 ಬಿಜೆಪಿ–ಜೆಡಿಎಸ್ ಮೈತ್ರಿಕೂಟದಲ್ಲಿ ಜಿಲ್ಲೆಯಲ್ಲಿ ಒಗ್ಗಟ್ಟಿನ ಕೊರತೆ


ವೆಂಕಟರಮಣೇಗೌಡ (ಸ್ಟಾರ್ ಚಂದ್ರು) (ಕಾಂಗ್ರೆಸ್)

ನಾನು ರಾಜಕೀಯಕ್ಕೆ ಹೊಸಬನಲ್ಲ. ಹುಟ್ಟಿದಾಗಿನಿಂದಲೂ ಮಂಡ್ಯ ಜಿಲ್ಲೆಯ ರಾಜಕೀಯ ನೋಡಿಕೊಂಡು ಬೆಳೆದಿದ್ದೇನೆ

👍 ನಾನು ಸ್ಥಳೀಯ ವ್ಯಕ್ತಿ ಎಂಬ ಪ್ರತಿಪಾದನೆಯೊಂದಿಗೆ ಮತ ಕೇಳುತ್ತಿದ್ದಾರೆ

👍 ಸಚಿವರು, ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ಬಲವಾಗಿ ಬೆನ್ನಿಗೆ ನಿಂತಿದ್ದಾರೆ

👎 ರಾಜಕಾರಣಕ್ಕೆ ಹೊಸಬರಾಗಿರುವುದರಿಂದ ಜನರಿಗೆ ಹೆಚ್ಚು ಪರಿಚಯ ಇಲ್ಲ

👎 ಎದುರಾಳಿ ಅಭ್ಯರ್ಥಿಗೆ ಹೋಲಿಸಿದರೆ ವೈಯಕ್ತಿಕ ವರ್ಚಸ್ಸಿನ ಕೊರತೆ

ಉತ್ತರ ಪ್ರದೇಶದ ಪಶ್ಚಿಮ ಭಾಗ: ಬಿಜೆಪಿ ವಿರುದ್ಧ ರಜಪೂತರ ಮುನಿಸು • ಜಾಟರು ಪಕ್ಷದತ್ತ ವಾಲುವ ವಿಶ್ವಾಸ

ಜಾತಿ ಸಮೀಕರಣದ ಸುತ್ತ ಮತ ಗಣಿತ

• ಮಂಜುನಾಥ ಹೆಬ್ಬಾರ್

ಉತ್ತರ ಪ್ರದೇಶದ ಪಶ್ಚಿಮ ಭಾಗವು ಕಬ್ಬಿನ ನಾಡೆಂದೇ ಹೆಸರುವಾಸಿಯಾಗಿದೆ. ಗಂಗಾ– ಯಮುನಾ ನದಿಯ ನೀರಿನಿಂದಾಗಿ ಸಮೃದ್ಧ ಹಸಿರು ರಾಶಿ ಹೊಂದಿರುವ ಪ್ರದೇಶವಿದು. ಈ ಪ್ರದೇಶದಲ್ಲಿ ಈಗ ಲೋಕಸಭೆಯ ಚುನಾವಣೆಯ ಕಾವು ಜೋರಾಗಿದೆ. ಇಲ್ಲಿನ ಎಂಟು ಕ್ಷೇತ್ರಗಳಲ್ಲಿ ಇದೇ 19ರಂದು ಮತದಾನ ನಡೆಯಲಿದೆ. ಜಾತಿ ಸಮೀಕರಣದ ಮೇಲೆ ಚುನಾವಣೆಗಳು ನಡೆಯುವುದು ಸತ್ಯ. ಈ ಮಾತಿಗೆ ಈ ಪ್ರದೇಶವೂ ಹೊರತಲ್ಲ


ಚರಣ್ ಸಿಂಗ್

ಜಯಂತ್ ಚೌಧರಿ

ಯೋಗಿ ಆದಿತ್ಯನಾಥ

ವಿ.ಕೆ.ಸಿಂಗ್

ನವದೆಹಲಿ: ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಮುಸ್ಲಿಮರು, ಗುಜ್ಜಾರರು, ಯಾದವರು, ಜಾಟರು ಹಾಗೂ ರಜಪೂತರು ಹಸಿರು ಕ್ರಾಂತಿಯ ಲಾಭ ಪಡೆದು ಬದುಕು ಹಸನು ಮಾಡಿಕೊಂಡವರು. ಮಾಜಿ ಪ್ರಧಾನಿ ಚೌಧರಿ ಚರಣ್ ಸಿಂಗ್ ಅವರು ಮಧ್ಯಮ ವರ್ಗದ ಈ ರೈತಾಪಿಗಳನ್ನು 'ಮಜ್‌ಗರ್ (ಸಾಮಾಜಿಕ ಮೈತ್ರಿಕೂಟ)' ಹೆಸರಲ್ಲಿ ಸಂಘಟಿಸಿ ಮತ ಬ್ಯಾಂಕ್ ಮಾಡಿಕೊಂಡು ಅಧಿಕಾರದ ಸುಖ ಅನುಭವಿಸಿದವರು. ಈಚಿನ ವರ್ಷಗಳಲ್ಲಿ 'ಮಜ್‌ಗರ್' ಅಡಿಗಲ್ಲು ಕುಸಿದು ಚೆಲ್ಲಾಪಿಲ್ಲಿಯಾಗಿದೆ. ಆದರೆ, ಲೋಕಸಭಾ ಚುನಾವಣೆಯ ಹೊತ್ತಲ್ಲಿ ಚರಣ್ ಸಿಂಗ್ ಅವರಿಗೆ ಅತ್ಯುನ್ನತ ನಾಗರಿಕ ಸೇವಾ ಪ್ರಶಸ್ತಿ 'ಭಾರತ ರತ್ನ' ನೀಡುವ ಮೂಲಕ ಜಾಟರ ಮತಗಳನ್ನು ಮತ್ತೆ ಸೆಳೆಯುವ ಮಹಾ ಪ್ರಯತ್ನವನ್ನು ಬಿಜೆಪಿ ಮಾಡಿದೆ.

ದಶಕದಿಂದ ವಿಪಕ್ಷಗಳ ಕೂಟದಲ್ಲಿ ಆಗಾಗ ಕಾಣಿಸಿಕೊಳ್ಳುತ್ತಿದ್ದ ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಮತ್ತೆ ಕೇಸರಿ ಪಡೆಯ 'ದೋಸ್ತಿ' ಕುದುರಿಸಿಕೊಂಡಿದೆ. ಚುನಾವಣಾ ಮೈತ್ರಿಯಿಂದಾಗಿ ಲೋಕದಳದಿಂದ ಮುಸ್ಲಿಮರು ದೂರವಾಗುವ ಸಾಧ್ಯತೆ ದಟ್ಟವಾಗಿದೆ. ಇನ್ನೊಂದೆಡೆ, ರಜಪೂತರು ಚುನಾವಣೆಯ ಹೊತ್ತಿನಲ್ಲಿ ಬಿಜೆಪಿ ವಿರುದ್ಧ ಮುನಿಸಿಕೊಂಡಿದ್ದಾರೆ. ಲೋಕಸಭಾ ಟಿಕೆಟ್ ಹಂಚಿಕೆಯಲ್ಲಿ ತಮ್ಮ ಸಮುದಾಯದವರಿಗೆ ಬಿಜೆಪಿ ಅನ್ಯಾಯ ಮಾಡಿದೆ ಎಂಬುದು ಅವರ ಕೋಪಕ್ಕೆ ಕಾರಣ. ರಜಪೂತರು ಹಾಗೂ ಮುಸ್ಲಿಮರ ಮತ ಸೆಳೆಯಲು 'ಇಂಡಿಯಾ' ಮೈತ್ರಿಕೂಟ ಹಾಗೂ ಬಹುಜನ ಸಮಾಜ ಪಕ್ಷಗಳ (ಬಿಎಸ್‌ಪಿ) ನಡುವೆ ತುರುಸಿನ ಪೈಪೋಟಿ ಏರ್ಪಟ್ಟಿದೆ.

ಕಬ್ಬಿನ ಸೀಮೆಯಲ್ಲಿ ಯಾರ ಮತವೆಷ್ಟು?

ಈ ಸೀಮೆಯ 26 ಜಿಲ್ಲೆಗಳಲ್ಲಿ ಮುಸ್ಲಿಮರ ಪ್ರಮಾಣ ಶೇ 23ರಿಂದ 27ರಷ್ಟಿದೆ. ಜಾಟರು ಶೇ 15ರಿಂದ 20ರಷ್ಟು ಇದ್ದಾರೆ. ರಜಪೂತರ ಸಂಖ್ಯೆ ಶೇ 10ರಿಂದ ಶೇ 13ರಷ್ಟಿದೆ. ಲೋಕಸಭಾ ಚುನಾವಣೆಯಲ್ಲಿ ಇಲ್ಲಿನ ಕ್ಷೇತ್ರಗಳಲ್ಲಿ ಗೆಲುವಿನ ದಡ ಮುಟ್ಟಲು ಬಿಜೆಪಿ ಈ ಸಲವೂ ಧ್ರುವೀಕರಣ ರಾಜಕಾರಣದ ಮೊರೆ ಹೋಗಿದೆ. ಚುನಾವಣೆಯ ಹೊತ್ತಲ್ಲಿ ಮಾಡಿಕೊಂಡ 'ಹೊಂದಾಣಿಕೆ'ಯಿಂದ ಜಾಟರ ಮುನಿಸು ಮರೆಯಾಗಿ ಪಕ್ಷಕ್ಕೆ ಉತ್ತಮ ಮತ ಫಸಲು ಸಿಗಲಿದೆ ಎಂಬ ಅಮಿತ ವಿಶ್ವಾಸ ಕಮಲ ಪಾಳಯದ ನಾಯಕರದ್ದು. ರಜಪೂತರ ಒಡಕು ಧ್ವನಿಯಿಂದ ಅಲ್ಪ ಹೊಡೆತ ಬೀಳಬಹುದು ಎಂಬ ಆತಂಕವೂ ಅವರಿಗೆ ಇದೆ. ಮೋದಿ–ಯೋಗಿ ಚರಿಷ್ಮಾ ಹಾಗೂ ರಾಮಮಂದಿರದ ಪ್ರಭಾವಳಿ ಮುಂದೆ ಇಂತಹ ಕೂಗೆಲ್ಲ ಗಂಗೆಯಲ್ಲಿ ತೇಲಿ ಹೋಗಲಿದೆ ಎಂದೂ ಬಿಜೆಪಿ ನಾಯಕರು ವಿಶ್ವಾಸ ವ್ಯಕ್ತಪಡಿಸುತ್ತಾರೆ.

ನಿರ್ಲಕ್ಷ್ಯದ ವಿರುದ್ಧ ರಜಪೂತರ ಮಹಾ ಪಂಚಾಯಿತಿ

ಪಶ್ಚಿಮ ಉತ್ತರ ಪ್ರದೇಶದಲ್ಲಿ ಒಂದು ಕ್ಷೇತ್ರದಲ್ಲಿ ಮಾತ್ರ ರಜಪೂತರಿಗೆ ಟಿಕೆಟ್ ನೀಡಲಾಗಿದೆ. ಗಾಜಿಯಾಬಾದ್‌ನಲ್ಲಿ ಎರಡು ಸಲ ಗೆದ್ದಿದ್ದ ಕೇಂದ್ರ ಸಚಿವ ವಿ.ಕೆ. ಸಿಂಗ್ ಅವರಿಗೆ ಈ ಸಲ ಟಿಕೆಟ್ ನಿರಾಕರಿಸಲಾಗಿದೆ. ಈ ಬೆಳವಣಿಗೆಗಳಿಂದ ರಜಪೂತರು ಕುಪಿತಗೊಂಡಿದ್ದಾರೆ. ಬಿಜೆಪಿ ತಮ್ಮನ್ನು ಕಡೆಗಣಿಸುತ್ತಿದೆ ಎಂಬುದು ಅವರ ಕೋಪಕ್ಕೆ ಕಾರಣ. ಕೇಸರಿ ಪಾಳಯದ ಕೆಲವು ಸಂಸದರ ಹಾಗೂ ಶಾಸಕರ ಹೇಳಿಕೆಗಳಿಂದ ತಮ್ಮ ಸ್ವಾಭಿಮಾನಕ್ಕೆ ಧಕ್ಕೆಯಾಗಿದೆ ಎಂಬುದು ಅವರ ಆರೋಪ. ಬಿಜೆಪಿ ನಡೆಯನ್ನು ವಿರೋಧಿಸಿ ಸಹರಾನ್‌ಪುರ, ಮೀರತ್, ಗಾಜಿಯಾಬಾದ್, ಮುಜಾಫರ್‌ನಗರ ಮತ್ತಿತರ ಕಡೆಗಳಲ್ಲಿ ಮಹಾ ಪಂಚಾಯಿತಿಗಳನ್ನು ನಡೆಸಿದ್ದಾರೆ. ಮುಜಾಫರ್‌ನಗರದ ಅಭ್ಯರ್ಥಿಯೂ ಆಗಿರುವ ಕೇಂದ್ರ ಸಚಿವ ಸಂಜೀವ್ ಬಲ್ಯಾನ್ ಅವರ ಪ್ರಚಾರದ ರ‍್ಯಾಲಿಯ ಸಂದರ್ಭದಲ್ಲಿ ಠಾಕೂರರು ತಮ್ಮ ಕೋಪತಾಪ ಪ್ರದರ್ಶಿಸಿದ್ದಾರೆ. 'ನಾವು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅಭಿಮಾನಿಗಳು. ಆದರೆ, ಬಿಜೆಪಿಯಿಂದ ಘೋರ ಅನ್ಯಾಯವಾಗಿದೆ' ಎಂದೂ ಠಾಕೂರರು ಹೇಳುತ್ತಾರೆ. ಉತ್ತರ ಪ್ರದೇಶದಲ್ಲಿ ಬಿಜೆಪಿ ಗರಿಷ್ಠ ಸಂಖ್ಯೆಯ ಸ್ಥಾನಗಳನ್ನು ಗೆದ್ದರೆ ಯೋಗಿ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ವರಿಷ್ಠರು ಕೆಳಗಿಳಿಸಬಹುದು ಎಂಬ ಆತಂಕವೂ ಠಾಕೂರರನ್ನು ಕಾಡುತ್ತಿದೆ. ಠಾಕೂರರ ಈ ನಡೆಯಿಂದಾಗಿ ಬಿಜೆಪಿಯ ಮತ ಬ್ಯಾಂಕ್ ಮೇಲೆ ಪರಿಣಾಮ ಬೀರುವ ಸಾಧ್ಯತೆಯೂ ಇದೆ. ರಜಪೂತರ ಮತಗಳನ್ನು ಸೆಳೆಯಲು ಸಮಾಜವಾದಿ ಪಕ್ಷ ಕಸರತ್ತು ಆರಂಭಿಸಿದೆ.

ಜಾಟರು ಮತ್ತೆ ಒಲಿಯುವರೇ?

ಜಾಟರು ಮೊದಲಿನಿಂದಲೂ ಆರ್‌ಎಲ್‌ಡಿಯ ಸಾಂಪ್ರದಾಯಿಕ ಮತ ಬ್ಯಾಂಕ್. 2013ರ ಮುಜಾಫರ್ ನಗರದ ಕೋಮು ದಂಗೆಯ ಬಳಿಕ ಜಾಟರ ಒಲವು ಬಿಜೆಪಿ ಕಡೆಗೆ ವರ್ಗಾವಣೆಯಾಗಿತ್ತು. ಲೋಕದಳದ ವರಿಷ್ಠ ನಾಯಕರಾದ ಅಜಿತ್ ಸಿಂಗ್ ಹಾಗೂ ಜಯಂತ್ ಚೌಧರಿ ಅವರು 2014ರ ಲೋಕಸಭಾ ಚುನಾವಣೆಯಲ್ಲಿ ಸೋಲಿನ ಕಹಿ ಅನುಭವಿಸಿದ್ದರು. 2019ರಲ್ಲಿ ಕ್ಷೇತ್ರ ಬದಲಿಸಿದರೂ ಗೆಲುವಿನ ಸಿಹಿ ಸಿಗಲಿಲ್ಲ. ದಶಕದಲ್ಲಿ ಪಕ್ಷದ ಮತ ಪ್ರಮಾಣವೂ ಗಣನೀಯ ಕುಸಿತ ಕಂಡಿತ್ತು. ಈ ನಡುವೆ, ಎಸ್‌ಪಿ ಜತೆಗೆ ಆರ್‌ಎಲ್‌ಡಿ ಮೈತ್ರಿ ಮಾಡಿಕೊಂಡಿತ್ತು. ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತಾಪಿಗಳು 2021ರಲ್ಲಿ ಆಂದೋಲನ ನಡೆಸಿದ್ದರು. ಈ ಹೋರಾಟದ ಮುಂಚೂಣಿಯಲ್ಲಿದ್ದವರು ಜಾಟರು. 2022ರ ಪಂಚ ರಾಜ್ಯಗಳ ಚುನಾವಣೆಗೆ ಮೊದಲು ಕಾಯಕ ಜೀವಿಗಳ ಹೋರಾಟಕ್ಕೆ ಕೇಂದ್ರ ಸರ್ಕಾರ ತಲೆಬಾಗಿತ್ತು. ಕನಿಷ್ಠ ಬೆಂಬಲ ಬೆಲೆಗೆ ಆಗ್ರಹಿಸಿ ರೈತರು ಲೋಕಸಭಾ ಚುನಾವಣೆಗೆ ಮುನ್ನ ಬೀದಿಗಿಳಿದಿದ್ದರು.

ಉತ್ತರ ಪ್ರದೇಶದಲ್ಲಿ ಜಾಟರ ಮತಗಳು ಎಸ್‌ಪಿ–ಆರ್‌ಎಲ್‌ಡಿ ಮೈತ್ರಿಕೂಟದ ಪಾಲಾಗಬಹುದು ಎಂಬ ಆತಂಕ ಬಿಜೆಪಿ ವರಿಷ್ಠರನ್ನು ಕಾಡಿದ್ದಂತೂ ಸತ್ಯ. ಲೋಕಸಭಾ ಚುನಾವಣೆಗೆ ಮುನ್ನ ಚರಣ್ ಸಿಂಗ್ ಅವರಿಗೆ 'ಭಾರತರತ್ನ' ಘೋಷಣೆ ಮಾಡುವ ಮೂಲಕ ಎಲ್ಲ ರಾಜಕೀಯ ಲೆಕ್ಕಾಚಾರಗಳನ್ನು ಬಿಜೆಪಿ ಏರುಪೇರು ಮಾಡಿತು. ಎನ್‌ಡಿಎ ಮೈತ್ರಿಕೂಟಕ್ಕೆ ಆರ್‌ಎಲ್‌ಡಿ ಸೇರಿಕೊಂಡಿತು. 'ಬಿಜೆಪಿ ಜತೆಗೆ ಕೈಜೋಡಿಸಿದ್ದರಿಂದ ಮುಸ್ಲಿಮರು ಪಕ್ಷದಿಂದ ದೂರ ಸರಿಯಬಹುದು. ಆದರೆ, ಹಿಂದೂ ಮತಗಳ ಧ್ರುವೀಕರಣದಿಂದ ಪಕ್ಷಕ್ಕೆ ಅನುಕೂಲವಾಗಲಿದೆ' ಎಂಬುದು ಆರ್‌ಎಲ್‌ಡಿ ನಾಯಕರ ಲೆಕ್ಕಾಚಾರ. ಜಾಟರ ಮತಗಳು ಗಣನೀಯ ಪ್ರಮಾಣದಲ್ಲಿ ಸಿಕ್ಕರೆ ಪಶ್ಚಿಮ ಉತ್ತರ ಪ್ರದೇಶದಲ್ಲಿ ಪಕ್ಷಕ್ಕೆ ಭಾರಿ ಅನುಕೂಲವಾಗಲಿದೆ ಎಂಬುದು ಬಿಜೆಪಿ ನಾಯಕರ ಆಲೋಚನೆ.

ಚುನಾವಣಾ ಕಣದಲ್ಲಿ...

ಟಿಎಂಸಿ ಪ್ರಣಾಳಿಕೆ ಬಿಡುಗಡೆ

ಕೋಲ್ಕತ್ತ (ಪಿಟಿಐ): ಲೋಕಸಭಾ ಚುನಾವಣೆ ಅಂಗವಾಗಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಬುಧವಾರ ಪ್ರಣಾಳಿಕೆ ಬಿಡುಗಡೆ ಮಾಡಿದೆ.

ವಿಪಕ್ಷಗಳ ಒಕ್ಕೂಟ 'ಇಂಡಿಯಾ' ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ರದ್ದು ಮಾಡುವುದು ಸೇರಿದಂತೆ ಅನೇಕ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿ ಮಾಡುವುದಾಗಿ ಭರವಸೆ ನೀಡಿದೆ.

ಪಕ್ಷದ ಇಲ್ಲಿನ ಕೇಂದ್ರ ಕಚೇರಿಯಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಿ ಮಾತನಾಡಿದ ಟಿಎಂಸಿ ನಾಯಕ ಅಮಿತ್ ಮಿಶ್ರಾ, 'ಬೆಲೆ ಸ್ಥಿರತೆ ಸೂತ್ರದ ಮೂಲಕ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ನಿಯಂತ್ರಿಸುತ್ತೇವೆ. ರಾಷ್ಟ್ರೀಯ ಪೌರತ್ವ ನೋಂದಣಿಯನ್ನು (ಎನ್‌ಆರ್‌ಸಿ) ರದ್ದು ಮಾಡುತ್ತೇವೆ' ಎಂದು ಹೇಳಿದರು. ಮನೆ ಬಾಗಿಲಿಗೆ ಪಡಿತರ ವ್ಯವಸ್ಥೆ ಮತ್ತು ಬಿಪಿಎಲ್ ಕುಟುಂಬಗಳಿಗೆ ಉಚಿತವಾಗಿ 10 ಅಡುಗೆ ಅನಿಲ ಸಿಲಿಂಡರ್ ನೀಡುವುದಾಗಿ ಆಶ್ವಾಸನೆ ನೀಡಿದರು.

ರಾಜ್ಯದಲ್ಲಿ ಸೀಟು ಹಂಚಿಕೆ ವಿಷಯವಾಗಿ ಒಮ್ಮತಕ್ಕೆ ಬರಲು ಸಾಧ್ಯವಾಗದೆ ಟಿಎಂಸಿಯು ಕಳೆದ ಜನವರಿಯಲ್ಲಿ ಇಂಡಿಯಾ ಒಕ್ಕೂಟದಿಂದ ಹೊರಬಂದಿತ್ತು. ಆದರೆ ರಾಷ್ಟ್ರ ಮಟ್ಟದಲ್ಲಿ 'ಇಂಡಿಯಾ' ಬೆಂಬಲಿಸುವುದಾಗಿ ಮಮತಾ ಬ್ಯಾನರ್ಜಿ ನೇತೃತ್ವದ ಪಕ್ಷ ಘೋಷಿಸಿದೆ.

ಎರಡು ಕ್ಷೇತ್ರಗಳಿಂದ ಪಟ್ನಾಯಕ್ ಸ್ಪರ್ಧೆ

ಭುವನೇಶ್ವರ (ಪಿಟಿಐ): ಬಿಜೆಡಿ ಅಧ್ಯಕ್ಷ ಹಾಗೂ ಒಡಿಶಾದ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ವಿಧಾನಸಭಾ ಚುನಾವಣೆಯಲ್ಲಿ, ಕಾಂತಾಬಾಂಜಿ ಮತ್ತು ಹಿಂಜಿಲಿ ಕ್ಷೇತ್ರಗಳಿಂದ ಸ್ಪರ್ಧಿಸಲಿದ್ದಾರೆ.

ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ 5ನೇ ಪಟ್ಟಿಯನ್ನು ಬುಧವಾರ ಬಿಡುಗಡೆಗೊಳಿಸಿದ ಬಳಿಕ ಅವರು ಈ ವಿಚಾರವನ್ನು ಪ್ರಕಟಿಸಿದರು.

2019ರ ವಿಧಾನಸಭಾ ಚುನಾವಣೆಯಲ್ಲೂ ನವೀನ್ ಅವರು ಎರಡು ಕ್ಷೇತ್ರಗಳಿಂದ ಸ್ಪರ್ಧಿಸಿ, ಎರಡರಲ್ಲೂ ಗೆದ್ದಿದ್ದರು. 5ನೇ ಪಟ್ಟಿಯಲ್ಲಿ ಒಂಬತ್ತು ಮಂದಿ ಅಭ್ಯರ್ಥಿಗಳ ಹೆಸರುಗಳನ್ನು ಘೋಷಿಸಲಾಗಿದೆ.

ಪ್ರಧಾನಿಗೆ ಕಾರ್ಮಿಕರ ಭಯ: ಖೇರಾ

ಶಿವಸಾಗರ (ಪಿಟಿಐ): ಚಹಾ ತೋಟದ ಕಾರ್ಮಿಕರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸದ ಕಾರಣ, ಭಯದಿಂದ ಪ್ರಧಾನಿ ನರೇಂದ್ರ ಮೋದಿ ಅವರು ಅಪ್ಪರ್ ಅಸ್ಸಾಂ ಪ್ರದೇಶದಲ್ಲಿ ಪ್ರಚಾರಕ್ಕೆ ಬಂದಿಲ್ಲ ಎಂದು ಕಾಂಗ್ರೆಸ್ ಮುಖಂಡ ಪವನ್ ಖೇರಾ ಬುಧವಾರ ಹೇಳಿದರು.

'ಅಸ್ಸಾಂನಲ್ಲಿ ಚತುಷ್ಪಥ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿ ಪೂರ್ಣಗೊಂಡಿಲ್ಲ. ಚಹಾ ತೋಟದ ಕಾರ್ಮಿಕರ ದಿನಗೂಲಿ ಈಗಲೂ ₹250ಕ್ಕಿಂತ ಹೆಚ್ಚಳವಾಗಿಲ್ಲ' ಎಂದರು.

ಬಿಜೆಪಿ ಓಟಕ್ಕೆ ತಡೆಯೊಡ್ಡುವುದೇ ಎಎಪಿ?

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ದೆಹಲಿಯ ಏಳು ಕ್ಷೇತ್ರಗಳಲ್ಲಿ ಸತತ ಮೂರನೇ ಬಾರಿಗೆ ಗೆಲ್ಲುವ ಕನಸು ಕಾಣುತ್ತಿದ್ದರೆ, ಎಎಪಿ ಅರವಿಂದ ಕೇಜ್ರಿವಾಲ್ ಬಂಧನದ ಅನುಕಂಪವನ್ನು ಚುನಾವಣಾ ವಿಷಯವನ್ನಾಗಿ ಮಾಡಿಕೊಂಡು, ಬಿಜೆಪಿಯ ಜಯದ ಓಟಕ್ಕೆ ತಡೆಯೊಡ್ಡುವ ಚಿಂತನೆಯಲ್ಲಿದೆ.

ದೆಹಲಿಯಲ್ಲಿ 'ಇಂಡಿಯಾ' ಕೂಟದ ಮಿತ್ರಪಕ್ಷಗಳಾದ ಎಎಪಿ ಮತ್ತು ಕಾಂಗ್ರೆಸ್ ಲೋಕಸಭಾ ಚುನಾವಣೆಯನ್ನು ಒಟ್ಟಿಗೆ ಎದುರಿಸುತ್ತಿದ್ದು, ಬಿಜೆಪಿಯೊಂದಿಗೆ ನೇರ ಹಣಾಹಣಿ ನಡೆಸುತ್ತಿವೆ. ಎಎಪಿ ನಾಲ್ಕು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದರೆ, ಕಾಂಗ್ರೆಸ್ ಮೂರು ಕ್ಷೇತ್ರಗಳಲ್ಲಿ ಉಮೇದುವಾರರನ್ನು ನಿಲ್ಲಿಸಿದೆ. ಪೂರ್ವಾಂಚಲದವರು ಮತ್ತು ಮುಸ್ಲಿಮರೇ ಬಹುಸಂಖ್ಯಾತರಾಗಿರುವ ಈಶಾನ್ಯ ದೆಹಲಿಯಲ್ಲಿ ಬಿಹಾರ ಮೂಲದ ಇಬ್ಬರು ಅಭ್ಯರ್ಥಿಗಳ ನಡುವೆ ಹಣಾಹಣಿ ನಡೆಯಲಿದೆ. ಬಿಜೆಪಿಯಿಂದ ಮನೋಜ್ ತಿವಾರಿ ಕಣಕ್ಕಿಳಿದಿದ್ದು, ಲೋಕಸಭಾ ಚುನಾವಣೆಯಲ್ಲಿ ಮೂರನೇ ಬಾರಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಕಾಂಗ್ರೆಸ್‌ನಿಂದ ಕನ್ಹಯ್ಯ ಕುಮಾರ್ ಕ್ಷೇತ್ರದಲ್ಲಿ ಮೊದಲ ಬಾರಿಗೆ ಉಮೇದುವಾರರಾಗಿದ್ದಾರೆ.

ಬಿಜೆಪಿಯ ಮುಖಂಡರೊಬ್ಬರು ಹೇಳುವ ಪ್ರಕಾರ, ತಿವಾರಿ ಕ್ಷೇತ್ರವನ್ನು ಉಳಿಸಿಕೊಳ್ಳುವ ಸಾಧ್ಯತೆಗಳಿದ್ದು, ಎಡಪಂಥೀಯ ವಿದ್ಯಾರ್ಥಿ ನಾಯಕರಾಗಿದ್ದ ಕನ್ಹಯ್ಯ ಕುಮಾರ್ ಮತ ಧ್ರುವೀಕರಣ ಮಾಡುವ ಸಾಧ್ಯತೆ ಇದೆ.

ಎಎಪಿಗೆ ಮತ ಧ್ರುವೀಕಣದ ಭರವಸೆ: ಬಿಜೆಪಿ ಮುಖಂಡರು ಪಕ್ಷವು 2014ರಿಂದ ಹಿಡಿತ ಸಾಧಿಸಿರುವ ಎಲ್ಲ ಕ್ಷೇತ್ರಗಳನ್ನು ಉಳಿಸಿಕೊಳ್ಳಲಿದೆ ಎನ್ನುವ ವಿಶ್ವಾಸದಲ್ಲಿದ್ದಾರೆ. 2019ರ ಚುನಾವಣೆಯಲ್ಲಿ ಏಳು ಕ್ಷೇತ್ರಗಳಲ್ಲಿ ಪಕ್ಷದ ಪ್ರತಿ ಅಭ್ಯರ್ಥಿ ಗಳಿಸಿದ ಮತಗಳು ಕಾಂಗ್ರೆಸ್‌ನ ಎಲ್ಲ ಕ್ಷೇತ್ರಗಳ ಅಭ್ಯರ್ಥಿಗಳು ಪಡೆದ ಮತಗಳಿಗಿಂತ ಅಧಿಕವಾಗಿವೆ ಎಂದು ಅವರು ಹೇಳುತ್ತಾರೆ.

2019ರ ಚುನಾವಣೆಯಲ್ಲಿ ದೆಹಲಿಯಲ್ಲಿ ಬಿಜೆಪಿ ಶೇ 56.5 ಮತ ಪ್ರಮಾಣ ಪಡೆದರೆ, ಕಾಂಗ್ರೆಸ್ ಶೇ 22 ಮತ್ತು ಎಎಪಿ ಶೇ 18.1 ರಷ್ಟು ಮತ ಪ್ರಮಾಣ ಪಡೆದಿದ್ದವು. ಈ ಬಾರಿ ಕಾಂಗ್ರೆಸ್ ಮತ್ತು ಬಿಜೆಪಿ ಒಂದಾಗಿರುವುದರಿಂದ ಬಿಜೆಪಿ ವಿರೋಧ ಮತಗಳು ಕ್ರೋಡೀಕರಣಗೊಳ್ಳಲಿವೆ ಎಂದು ಎಎಪಿ ಮುಖಂಡರು ಹೇಳುತ್ತಿದ್ದಾರೆ.

ಕೇಜ್ರಿವಾಲ್ ಪರ ಅನುಕಂಪದ ಅಲೆ

ಎಎಪಿಯ ಚುನಾವಣಾ ಪ್ರಚಾರವು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನವನ್ನು ಕೇಂದ್ರೀಕರಿಸಿದೆ.

'ಸದ್ಯಕ್ಕೆ, ದೆಹಲಿಯ ಹೊರಗೆ ಪರಿಸ್ಥಿತಿ ಹೇಗಿದೆಯೋ ನನಗೆ ಗೊತ್ತಿಲ್ಲ. ಆದರೆ, ದೆಹಲಿಯಲ್ಲಿ ಕೇಜ್ರಿವಾಲ್ ಪರ ಭಾರಿ ಅನುಕಂಪದ ಅಲೆ ಇದೆ. ಬಿಜೆಪಿಯನ್ನು ಬೆಂಬಲಿಸುವವರೂ ಕೂಡ ಇದು ಅತಿಯಾಯಿತು, ಈ ರೀತಿ ಮಾಡಬಾರದಿತ್ತು ಎನ್ನುವ ಭಾವನೆ ಹೊಂದಿದ್ದಾರೆ' ಎಂದು ಪಿಟಿಐ ಸಂಪಾದಕರೊಂದಿಗಿನ ಸಂವಾದದಲ್ಲಿ ದೆಹಲಿ ಸಚಿವ ಸೌರಭ್ ಭಾರದ್ವಾಜ್ ಹೇಳಿದ್ದರು.

ಪ್ರಚಾರ

ಜಮ್ಮು ಮತ್ತು ಕಾಶ್ಮೀರದ ಕುಲ್ಗಾಂನಲ್ಲಿ ಬುಧವಾರ ಚುನಾವಣಾ ಪ್ರಚಾರ ಕಾರ್ಯದಲ್ಲಿ ಪಾಲ್ಗೊಂಡಿದ್ದ ವೇಳೆ ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಅವರನ್ನು ಬೆಂಬಲಿಗರು ಸುತ್ತುವರಿದರು –ಪಿಟಿಐ ಚಿತ್ರ

'ಆಪ್ ಕಾ ರಾಮರಾಜ್ಯ' ವೆಬ್‌ಸೈಟ್ ಬಿಡುಗಡೆ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ದೆಹಲಿಯಲ್ಲಿ ರಾಮನ ಆದರ್ಶಗಳನ್ನು ಜಾರಿ ಮಾಡಲು ಪ್ರಯತ್ನಿಸಿದರು ಎಂದು ಪ್ರತಿಪಾದಿಸಿರುವ ಎಎಪಿಯು, ಪಕ್ಷದ 'ರಾಮರಾಜ್ಯ' ಪರಿಕಲ್ಪನೆಯನ್ನು ಆಧರಿಸಿ ಬುಧವಾರ 'ಆಪ್ ಕಾ ರಾಮರಾಜ್ಯ' ಎನ್ನುವ ವೆಬ್‌ಸೈಟ್ ಬಿಡುಗಡೆ ಮಾಡಿದೆ.

ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನ ಶುಕ್ರವಾರ ನಡೆಯಲಿದ್ದು, ಅದಕ್ಕಾಗಿ ರಾಮ ನವಮಿಯಂದು ಎಎಪಿ ವೆಬ್‌ಸೈಟ್ ಅನಾವರಣಗೊಳಿಸಿದೆ.

ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಾಜ್ಯಸಭಾ ಸಂಸದ ಸಂಜಯ್ ಸಿಂಗ್, 'ಎಎಪಿ ಸರ್ಕಾರಗಳು ಮಾಡಿದ ಕೆಲಸಗಳನ್ನು ವೆಬ್‌ಸೈಟ್ ಒಳಗೊಂಡಿದೆ. ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಕಳೆದ 10 ವರ್ಷದಿಂದ ಅದ್ಭುತ ಕೆಲಸ ಮಾಡಿ 'ರಾಮರಾಜ್ಯ'ವನ್ನು ಸಾಕಾರಗೊಳಿಸಿದ್ದಾರೆ' ಎಂದು ಹೇಳಿದರು.

ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಪ್ರಧಾನಿ ನರೇಂದ್ರ ಮೋದಿ

'ಮೋದಿ ಗ್ಯಾರಂಟಿಗೆ ಈಶಾನ್ಯ ಭಾರತ ಸಾಕ್ಷಿ'

ನಲ್ಬರಿ/ಅಗರ್ತಲಾ (ಪಿಟಿಐ): 2014ರಲ್ಲಿ ಭರವಸೆಯೊಂದಿಗೆ, 2019ರಲ್ಲಿ ನಂಬಿಕೆಯಿಂದ ಜನರ ಬಳಿಗೆ ಹೋಗಿದ್ದ ತಾವು 2024ರಲ್ಲಿ ಗ್ಯಾರಂಟಿಯೊಂದಿಗೆ ಅದೇ ಜನರಲ್ಲಿಗೆ ಹೋಗುತ್ತಿರುವುದಾಗಿ ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದರು.

ಇಲ್ಲಿನ ಬೋರ್ಕುರಾ ಮೈದಾನದಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಈಶಾನ್ಯ ಭಾಗವು ಮೋದಿ ಗ್ಯಾರಂಟಿಗೆ ಸಾಕ್ಷಿಯಾಗಿದೆ. ಕಾಂಗ್ರೆಸ್ ಈ ಭಾಗದಲ್ಲಿ ಸಮಸ್ಯೆಗಳನ್ನು ಸೃಷ್ಟಿಸಿದರೆ, ಬಿಜೆಪಿ ಇದನ್ನು ಸಾಧ್ಯತೆಗಳ ನೆಲೆಯನ್ನಾಗಿ ಮಾಡಿತು' ಎಂದು ಹೇಳಿದರು.

'ಕಾಂಗ್ರೆಸ್ ಬಂಡುಕೋರರರನ್ನು ಪ್ರಚೋದಿಸಿತು. ಆದರೆ, ಮೋದಿ ಜನರನ್ನು ಅಪ್ಪಿಕೊಂಡ ಮತ್ತು ಪ್ರಾಂತ್ಯದಲ್ಲಿ ಶಾಂತಿ ಮೂಡಿಸಿದ. ಕಾಂಗ್ರೆಸ್ 60 ವರ್ಷದಿಂದ ಸಾಧಿಸಲು ಆಗದೇ ಇದ್ದುದನ್ನು ಮೋದಿ ಹತ್ತು ವರ್ಷದಲ್ಲಿ ಸಾಧಿಸಿದ' ಎಂದು ಹೇಳಿಕೊಂಡರು.

'ಕಾಂಗ್ರೆಸ್ ಈಶಾನ್ಯ ಪ್ರದೇಶವನ್ನು ನಿರ್ಲಕ್ಷಿಸಿ, ಭ್ರಷ್ಟಾಚಾರ ಮತ್ತು ಲೂಟಿಯಲ್ಲಿ ತೊಡಗಿತ್ತು. ಈಗ ಪರಿಸ್ಥಿತಿ ಬದಲಾಗಿದ್ದು, ಇಲ್ಲಿನ ಜನ ಸಬ್ ಕಾ ಸಾಥ್, ಸಬ್ ಕಾ ವಿಕಾಸ್‌ನ ಪ್ರಯೋಜನಗಳನ್ನು ಪಡೆಯುತ್ತಿದ್ದಾರೆ' ಎಂದು ಅವರು ಪ್ರತಿಪಾದಿಸಿದರು. 'ಪ್ರಣಾಳಿಕೆಯಲ್ಲಿ ನೀಡಲಾಗಿರುವ ಎಲ್ಲ ಭರವಸೆಗಳನ್ನು ಈಡೇರಿಸಲಾಗುವುದು. ಅದರಿಂದ ಬಡವರಿಗೆ, ರೈತರಿಗೆ, ದಲಿತರಿಗೆ ಮತ್ತು ಚಹಾ ತೋಟಗಳ ಕಾರ್ಮಿಕರಿಗೆ ಅನುಕೂಲವಾಗಲಿದೆ' ಎಂದು ಹೇಳಿದರು.

ತ್ರಿಪುರಾದಲ್ಲಿಯೂ ಚುನಾವಣಾ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಅಲ್ಲಿಯೂ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಅಗರ್ತಲಾದಲ್ಲಿ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸಹಾ ಮತ್ತು ಬಿಜೆಪಿ ಅಭ್ಯರ್ಥಿ ವಿಪ್ಲವ್ ಕುಮಾರ್ ದೇವ್ ಭಾಗವಹಿಸಿದ್ದರು –ಪಿಟಿಐ ಚಿತ್ರ

ಪ್ರಧಾನಿ ಮೋದಿಗೆ ಕಾಂಗ್ರೆಸ್ ತಿರುಗೇಟು

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು 2014ರ ಭರವಸೆಗಳನ್ನು ನುಚ್ಚುನೂರು ಮಾಡಿದರು, 2019ರಿಂದ ಜನರ ನಂಬಿಕೆಗೆ ದ್ರೋಹ ಬಗೆದರು ಮತ್ತು 2024ರಲ್ಲಿ ಅವರ ನಿರ್ಗಮನವು ಗ್ಯಾರಂಟಿಯಾಗಿದೆ ಎಂದು ಕಾಂಗ್ರೆಸ್ ತಿರುಗೇಟು ನೀಡಿದೆ.

ಮಣಿಪುರದ ಹಿಂಸಾಚಾರ ಮತ್ತು ಚೀನಾದ ಅತಿಕ್ರಮಣದಂಥ ಪ್ರಕರಣಗಳಿಂದ ಈಶಾನ್ಯ ಭಾರತದ ಜನ ಯಾವುದೇ ರಂಗದಲ್ಲಿ ಅಭಿವೃದ್ಧಿ ಹೊಂದದಂತೆ ಮೋದಿ ಸರ್ಕಾರ ತಡೆದಿದೆ ಎನ್ನುವುದು ಸಾಬೀತಾಗುತ್ತದೆ ಎಂದು ಎಂದು ಕಾಂಗ್ರೆಸ್ ಬುಧವಾರ ಆರೋಪಿಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಈ ಬಗ್ಗೆ 'ಎಕ್ಸ್' ವೇದಿಕೆಯಲ್ಲಿ ಪೋಸ್ಟ್ ಮಾಡಿದ್ದಾರೆ.

'ಮಣಿಪುರದ ಹಿಂಸಾಚಾರ, ಈಶಾನ್ಯದ ಅನುದಾನಲ್ಲಿ ಅತ್ಯಂತ ಕಡಿಮೆ ಬಳಕೆ, ಕಾಡುಗಳು ಅಪಾಯವನ್ನು ಎದುರಿಸುತ್ತಿರುವುದು, ಅರುಣಾಚಲ ಪ್ರದೇಶದಲ್ಲಿ ಚೀನಾ ಅತಿಕ್ರಮಣ, ನಾಗಾ ಶಾಂತಿ ಮಾತುಕತೆಗೆ ಹಿನ್ನಡೆ' ಎಂದು ಪೋಸ್ಟ್‌ನಲ್ಲಿ ಉಲ್ಲೇಖಿಸಲಾಗಿದೆ.

ಮೊಬೈಲ್ ಲೈಟ್ ಆನ್ ಮಾಡಲು ಕರೆ

ಅಯೋಧ್ಯೆಯಲ್ಲಿ 500 ವರ್ಷಗಳ ನಂತರ ರಾಮನ ಜನ್ಮದಿನವನ್ನು 'ಸೂರ್ಯ ತಿಲಕ'ದೊಂದಿಗೆ ಆಚರಿಸಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

'ನಾವು ಅಯೋಧ್ಯೆಯಲ್ಲಿನ ಆಚರಣೆಗಳಲ್ಲಿ ಭಾಗವಹಿಸಲು ಸಾಧ್ಯವಿಲ್ಲ. ಆದರೆ, ನಮ್ಮ ಮೊಬೈಲ್ ಫ್ಲಾಶ್‌ಲೈಟ್‌ಗಳನ್ನು ಆನ್ ಮಾಡುವ ಮೂಲಕ ರಾಮನಿಗೆ ಬೆಳಕು ಮತ್ತು ಪ್ರಾರ್ಥನೆ ತಲುಪಿಸೋಣ' ಎಂದು ಮೋದಿ ಜನರಿಗೆ ಕರೆ ನೀಡಿದರು.

ರಾಮಮಂದಿರದಲ್ಲಿ ರಾಮನ ಜನ್ಮದಿನ ಆಚರಣೆಯಿಂದ ಇಡೀ ದೇಶದಲ್ಲಿ ಹೊಸ ವಾತಾವರಣ ಮೂಡಿದೆ ಎಂದು ಅಭಿಪ್ರಾಯಪಟ್ಟರು.

ಚುಟುಕು

'ಮೋದಿ ಭರವಸೆಯನ್ನು ನಂಬುವುದಿಲ್ಲ'

ಪಾಲಕ್ಕಾಡ್ (ಪಿಟಿಐ): ಚುನಾವಣಾ ರ‍್ಯಾಲಿಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನೀಡುತ್ತಿರುವ ಭರವಸೆಗಳನ್ನು ರಾಜ್ಯದ ಜನರು ನಂಬುವುದಿಲ್ಲ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಬುಧವಾರ ಹೇಳಿದರು.



ಕೇಂದ್ರದ ಬಿಜೆಪಿ ಸರ್ಕಾರವು ದೇಶದಲ್ಲಿ ಆರ್‌ಎಸ್‌ಎಸ್ ಕಾರ್ಯಸೂಚಿಯನ್ನು ಅನುಷ್ಠಾನಗೊಳಿಸುತ್ತಿದೆ ಎಂದು ಆರೋಪಿಸಿದ ಅವರು, ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆಯ (ಸಿಎಎ) ಕುರಿತು ಉಲ್ಲೇಖಿಸದ್ದಕ್ಕೆ ಹರಿಹಾಯ್ದರು.

ಪಾಲಕ್ಕಾಡ್‌ನ ಪಟ್ಟಾಂಬಿಯಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ಜನರು ಒಮ್ಮೆ ಮೋಸ ಹೋಗಬಹುದು. ಆದರೆ, ಅವರಿಗೆ ಪದೇ ಪದೇ ಮೋಸ ಮಾಡಲು ಸಾಧ್ಯವಿಲ್ಲ' ಎಂದು ಹೇಳಿದರು.'ಎರಡನೇ ಅವಧಿಯ ಯುಪಿಎ ಸರ್ಕಾರದ ಕುರಿತು ಜನರಲ್ಲಿ ಅತೃಪ್ತಿ ಇದ್ದಾಗ, ಹಲವಾರು ಭರವಸೆಗಳನ್ನು ನೀಡಿ ಮೋದಿ ಸರ್ಕಾರ 2014ರಲ್ಲಿ ಅಧಿಕಾರಕ್ಕೆ ಬಂದಿತ್ತು. ಆದರೆ ಅಧಿಕಾರಕ್ಕೆ ಬಂದ ಬಳಿಕ ಬಿಜೆಪಿ ಸರ್ಕಾರ ಕೂಡ ಕಾಂಗ್ರೆಸ್ ಸರ್ಕಾರದ ಆರ್ಥಿಕ ನೀತಿಗಳನ್ನೇ ಜಾರಿಗೊಳಿಸಿದೆ' ಎಂದರು.

ಬಿಜೆಪಿ ಅಭ್ಯರ್ಥಿಗಳಿಗೆ ಬಹಿಷ್ಕಾರ

ಮುಜಾಫರ್‌ನಗರ (ಪಿಟಿಐ): ರಜಪೂತರು ಮಹಾಪಂಚಾಯತ್ ನಡೆಸಿ ಮುಜಾಫರ್‌ನಗರ, ಕೈರಾನ ಮತ್ತು ಸಹರಾನ್‌ಪುರ ಲೋಕಸಭಾ ಕ್ಷೇತ್ರಗಳ ಬಿಜೆಪಿ ಅಭ್ಯರ್ಥಿಗಳನ್ನು ಬಹಿಷ್ಕರಿಸಲು ನಿರ್ಧರಿಸಿದ್ದಾರೆ ಎಂದು ಸಮುದಾಯದ ಮುಖಂಡರೊಬ್ಬರು ಬುಧವಾರ ತಿಳಿಸಿದ್ದಾರೆ.

ಕಿಸಾನ್ ಮಜ್ದೂರ್ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಮತ್ತು ಸಮುದಾಯದ ಮುಖಂಡ ಠಾಕೂರ್ ಪೂರನ್ ಸಿಂಗ್ ಮಂಗಳವಾರ ಖೇಡದಲ್ಲಿ ಮಹಾಪಂಚಾಯತ್‌ಗೆ ಕರೆ ನೀಡಿದ್ದರು. ಅದರಲ್ಲಿ ಮುಜಾಫರ್‌ನಗರ ಕ್ಷೇತ್ರ ಮತ್ತು ಸುತ್ತಮುತ್ತಲಿನ ಜಿಲ್ಲೆಗಳ ಚೌಬಿಸ ರಜಪೂತ ಸಮುದಾಯದವರು ಭಾಗವಹಿಸಿದ್ದರು.

'ಬಿಜೆಪಿಯು ಟಿಕೆಟ್ ವಿತರಣೆಯಲ್ಲಿ ಸಮುದಾಯವನ್ನು ನಿರ್ಲಕ್ಷಿಸಿದ್ದರ ವಿರುದ್ಧ ಪ್ರತಿಭಟನೆಯ ಸಂಕೇತವಾಗಿ ಬಹಿಷ್ಕಾರ ಹಾಕಲಾಗಿದೆ. ಈ ಪ್ರದೇಶಗಳ ರಜಪೂತ ಸಮುದಾಯದ ಮತದಾರರು ಬಿಜೆಪಿ ಅಭ್ಯರ್ಥಿಗಳಿಗೆ ಮತ ಚಲಾಯಿಸುವುದಿಲ್ಲ. ಅವರ ಬದಲು ಇತರೆ ಪಕ್ಷಗಳ ಪ್ರಬಲ ಅಭ್ಯರ್ಥಿಯನ್ನು ಬೆಂಬಲಿಸುತ್ತೇವೆ' ಎಂದು ಸಿಂಗ್ ಹೇಳಿದರು.

ಎಂಥಾ ಮಾತು!

ರಾಮ ದೇವರು ನಮ್ಮ ಸಂಸ್ಕೃತಿಯ ಪ್ರತೀಕ. ಆದರೆ, ಕಾಂಗ್ರೆಸ್ ಮತ್ತು ಸಿಪಿಎಂ ಅದನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ. ರಾಮಮಂದಿರ ನಿರ್ಮಾಣಕ್ಕೆ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿತ್ತು. ಇವತ್ತು ದೇಶದಲ್ಲಿ ಆ ಪಕ್ಷದ ಸ್ಥಿತಿ ಏನಾಗಿದೆ ಎಂಬುದನ್ನು ನೋಡಬಹುದು. ಯಾರೆಲ್ಲಾ ರಾಮನನ್ನು ವಿರೋಧಿಸಿದ್ದಾರೋ ಅವರೆಲ್ಲಾ ಅವನತಿಯ ಅಂಚಿಗೆ ತಲುಪಿದ್ದಾರೆ ಎಂಬುದು ದೇಶದ ಇತಿಹಾಸವನ್ನು ಗಮನಿಸಿದರೆ ತಿಳಿಯುತ್ತದೆ

ರಾಜನಾಥ್ ಸಿಂಗ್, ಕೇಂದ್ರ ರಕ್ಷಣಾ ಸಚಿವ

ಲೋಕಸಭಾ ಚುನಾವಣೆಯಲ್ಲಿ 400ಕ್ಕೂ ಹೆಚ್ಚು ಕ್ಷೇತ್ರಗಳನ್ನು ಗೆಲ್ಲುವುದಾಗಿ ಬಿಜೆಪಿಯವರು ಘೋಷವಾಕ್ಯ ಹೇಳುತ್ತಿದ್ದಾರೆ. ದೇಶದ ಸಂವಿಧಾನವನ್ನು ಬದಲಿಸಲು ಮತ್ತು ಜನರಿಂದ ಮತದಾನದ ಹಕ್ಕನ್ನು ಕಸಿದುಕೊಳ್ಳಲು ಆ ಪಕ್ಷವು ಇಷ್ಟು ಬಹುಮತವನ್ನು ಬಯಸುತ್ತಿದೆ. ಸರ್ಕಾರವು ಸಂವಿಧಾನಬದ್ಧವಾಗಿ ಆಡಳಿತ ನಡೆಸಿದರೆ, ಯಾವುದೇ ಸಮುದಾಯದ ವಿರುದ್ಧ ಪೂರ್ವಗ್ರಹ ಇಟ್ಟುಕೊಳ್ಳುವ ಪ್ರಮೇಯವೇ ಇರುವುದಿಲ್ಲ. ಆದರೆ, ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಳಿಕ ಜನರಿಗೆ ನ್ಯಾಯ ಒದಗಿಸಿಲ್ಲ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಅಧ್ಯಕ್ಷ

ಕ್ಷೇತ್ರ ಮಹಾತ್ಮೆ



ಮಹಾತ್ಮ ಗಾಂಧಿ ಅವರು ಸ್ಥಾಪಿಸಿರುವ 'ಸೇವಾ ಗ್ರಾಮ' ಆಶ್ರಮವಿರುವ ಮಹಾರಾಷ್ಟ್ರದ ವಾರ್ಧಾ ಲೋಕಸಭಾ ಕ್ಷೇತ್ರವು ತೀವ್ರ ಪೈಪೋಟಿಗೆ ಸಜ್ಜಾಗಿದೆ. ಎರಡು ಬಾರಿ ಇಲ್ಲಿಂದ ಜಯಭೇರಿ ಬಾರಿಸಿರುವ ರಾಮದಾಸ್ ತಡಸ್ ಅವರನ್ನೇ ಮೂರನೇ ಬಾರಿಯೂ ಬಿಜೆಪಿಯು ಅಖಾಡಕ್ಕಿಳಿಸಿದೆ. ಇವರಿಗೆ ಪೈಪೋಟಿ ನೀಡಲು ಎನ್‌ಸಿಪಿ ಶರದ್ ಪವಾರ್ ಬಣವು ಅಮರ್ ಕಾಳೆ ಅವರನ್ನು ಸ್ಪರ್ಧೆಗಿಳಿಸಿದೆ. ಪ್ರಕಾಶ್ ಅಂಬೇಡ್ಕರ್ ಅವರ ವಂಚಿತ್ ಬಹುಜನ ಅಘಾಡಿ (ವಿಬಿಎ) ಕೂಡ ರಾಜೇಂದ್ರ ಸಾಳುಂಖೆ ಅವರನ್ನು ಕಣಕ್ಕಿಳಿಸಿದೆ. ಬಿಎಸ್‌ಪಿಯು ಮೋಹನ್ ರಾಯಕ್‌ವಾರ್ ಅವರನ್ನು ಸ್ಪರ್ಧಿಯಾಗಿಸಿದೆ. ರಾಮದಾಸ್ ಅವರು 2019ರ ಚುನಾವಣೆಯಲ್ಲಿ 1,87,191 ಮತಗಳ ಅಂತರದಿಂದ ಕಾಂಗ್ರೆಸ್‌ನ ಚಾರುಲತಾ ಟೋಕಸ್ ಅವರನ್ನು ಪರಾಭವಗೊಳಿಸಿದ್ದರು. ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದ ಈ ಕ್ಷೇತ್ರವು ಕಳೆದೆರಡು ಚುನಾವಣೆಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಅಲೆಯಿಂದಾಗಿ ಕಮಲ ಪಕ್ಷದ ಪಾಲಾಗಿತ್ತು. ಕಾಂಗ್ರೆಸ್ ಇದೇ ಮೊದಲ ಬಾರಿ ಈ ಕ್ಷೇತ್ರದಿಂದ ಅಭ್ಯರ್ಥಿಯನ್ನು ಕಣಕ್ಕಿಳಿಸಿಲ್ಲ. ಎನ್‌ಸಿಪಿ ಶರದ್ ಪವಾರ್ ಬಣವು 'ಇಂಡಿಯಾ' ಒಕ್ಕೂಟದ ಜೊತೆಗಿರುವುದರಿಂದ ಈ ಬಾರಿ ಕಾಂಗ್ರೆಸ್ ಪರವಾಗಿರುವ ಮತಗಳು ಎನ್‌ಸಿಪಿ ಅಭ್ಯರ್ಥಿಗೆ ಲಭಿಸುವ ಸಾಧ್ಯತೆ ಇದೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ವಿಬಿಎ ಅಭ್ಯರ್ಥಿಯನ್ನು ಕಣಕ್ಕಿಳಿಸಿರುವುದರಿಂದ ಬಿಜೆಪಿ ವಿರೋಧಿ ಮತಗಳು ವಿಭಜನೆಯಾಗುವ ಸಾಧ್ಯತೆ ಇದ್ದು, ಇದರಿಂದ ಬಿಜೆಪಿ ಅಭ್ಯರ್ಥಿಗೆ ಲಾಭವಾಗಲಿದೆ. ಬಿಎಸ್‌ಪಿ ಅಭ್ಯರ್ಥಿ ಕೂಡ ಕಣದಲ್ಲಿರುವುದರಿಂದ ಬಿಜೆಪಿ ಅಭ್ಯರ್ಥಿಗೆ ಅನುಕೂಲವಾಗಲಿದೆ ಎಂದೂ ಹೇಳಲಾಗುತ್ತಿದೆ.

ಮುಖಾಮುಖಿ

ಗಢವಾಲ್ (ಉತ್ತರಾಖಂಡ)

ಅನಿಲ್ ಬಲೂನಿ
(ಬಿಜೆಪಿ)

ಗಣೇಶ್ ಗೋದಿಯಾಲ್
(ಕಾಂಗ್ರೆಸ್)

V/S

ಉತ್ತರಾಖಂಡದ ಪ್ರತಿಷ್ಠಿತ ಲೋಕಸಭಾ ಕ್ಷೇತ್ರಗಳಲ್ಲೊಂದಾದ ಗಢವಾಲ್‌ನಿಂದ ಬಿಜೆಪಿಯು ಈ ಬಾರಿ ಅನಿಲ್ ಬಲೂನಿ ಅವರನ್ನು ಕಣಕ್ಕಿಳಿಸಿದೆ. ಬಿಜೆಪಿಯ ವರಿಷ್ಠ ನಾಯಕರಿಗೆ ಆಪ್ತರಾಗಿರುವ ಅನಿಲ್ ಅವರು ದೆಹಲಿಯಲ್ಲಿರುವ ಪಕ್ಷದ ಮುಖ್ಯಕಚೇರಿಯಲ್ಲಿ ಮಾಧ್ಯಮ ಸಂಯೋಜನೆಯ ಉಸ್ತುವಾರಿಯಾಗಿಯೂ ಕಾರ್ಯನಿರ್ವಹಿಸಿದ್ದರು. 2019ರಲ್ಲಿ ಈ ಕ್ಷೇತ್ರದಿಂದ ಸ್ಪರ್ಧಿಸಿದ್ದ ಬಿಜೆಪಿಯ ತೀರತ್ ಸಿಂಗ್ ರಾವತ್ ಅವರು 3,02,669 ಮತಗಳ ಅಂತರದಿಂದ ಕಾಂಗ್ರೆಸ್‌ನ ಮನೀಶ್ ಖಂಡೂರಿ ಅವರನ್ನು ಸೋಲಿಸಿದ್ದರು. ಉತ್ತರಖಂಡದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದ ಅನಿಲ್ ಅವರು ಇದೇ ಮೊದಲ ಬಾರಿ ಲೋಕಸಭಾ ಚುನಾವಣೆಯಲ್ಲಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. 2014ರ ಚುನಾವಣೆಯಲ್ಲಿ ಉತ್ತರಾಖಂಡದ ಮಾಜಿ ಮುಖ್ಯಮಂತ್ರಿ ಭುವನ್ ಚಂದ್ರ ಖಂಡೂರಿ ಅವರು ಈ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಭರ್ಜರಿ ಗೆಲುವು ತಮ್ಮದಾಗಿಸಿಕೊಂಡಿದ್ದರು.

ಗಢವಾಲ್ ಕ್ಷೇತ್ರದಲ್ಲಿ ಅನಿಲ್ ಬಲೂನಿ ಅವರನ್ನು ಮಣಿಸಲು ಕಾಂಗ್ರೆಸ್, ಪಕ್ಷದ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಗಣೇಶ್ ಗೋದಿಯಾಲ್ ಅವರನ್ನು ಕಣಕ್ಕಿಳಿಸಿದೆ. ಪಕ್ಷ ಸಂಘಟನೆಯ ಮೂಲಕ ಕ್ಷೇತ್ರದ ಜನರಿಗೆ ಚಿರಪರಿಚಿತರಾಗಿರುವ ಇವರು ಸ್ಥಳೀಯವಾಗಿಯೂ ಪ್ರಭಾವಿ ಮುಖಂಡರಾಗಿದ್ದಾರೆ. ಈ ಬಾರಿಯಾದರೂ ಈ ಕ್ಷೇತ್ರವನ್ನು ಮತ್ತೆ ಪಕ್ಷದ ತೆಕ್ಕೆಗೆ ಪಡೆದುಕೊಳ್ಳಬೇಕೆಂದು ಕಾಂಗ್ರೆಸ್ ಮುಖಂಡರು ಅವಿರತ ಶ್ರಮಿಸುತ್ತಿದ್ದಾರೆ. ಗಢವಾಲ್ ಪ್ರದೇಶದ ಹಲವು ಮಂದಿ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಈ ಕಾರಣಕ್ಕೆ ಗಣೇಶ್ ಅವರು 'ಅಗ್ನಿವೀರ್' ಯೋಜನೆಯನ್ನು ಪ್ರಮುಖ ಚುನಾವಣಾ ವಿಚಾರವಾಗಿ ಬಳಸಿಕೊಳ್ಳುತ್ತಿದ್ದಾರೆ. ಜೊತೆಗೆ ಕಾರ್ಮಿಕರ ವಲಸೆ, ನಿರುದ್ಯೋಗ ವಿಷಯಗಳನ್ನು ಮುನ್ನೆಲೆಗೆ ತರುವ ಮೂಲಕ ಕೇಂದ್ರದ ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ಜನರ ಮುಂದಿರಿಸುತ್ತಿದ್ದಾರೆ. 2009ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ಸತ್ಪಾಲ್ ಮಹಾರಾಜ್ ಅವರು ಇಲ್ಲಿಂದ ಲೋಕಸಭೆಗೆ ಆಯ್ಕೆಯಾಗಿದ್ದರು.

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹179
ಆರ್‌ಎಸ್‌ಎಸ್-5	₹172.50
ಗುಡ್ ಲಾಟ್	₹162.50

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹485
12 ಕ್ಕೆ	₹65
ಮೈಸೂರು	
100ಕ್ಕೆ	₹487

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹947 (970)
ಸೂರ್ಯಕಾಂತಿ (ರಿಫೈನ್ಡ್)	₹945 (955)
ಪಾಮೋಲಿನ್	₹945 (965)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹233-456
ದ್ವಿತಳಿ (ಬಿ.ವಿ)	₹233-570

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹16350
ಎಸಿ	₹9800
ಆರ್‌ಪಿ	₹16350
ಆರ್‌ಸಿ	₹1009

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7500-9200
ಮಧುಗಿರಿ	₹7450-8000
ತಿಪಟೂರು	₹8000-9001

ಅಂಬುಜಾ ಸಿಮೆಂಟ್ಸ್ ಅದಾನಿ ಕುಟುಂಬದ ಪಾಲು ಹೆಚ್ಚಳ

ನವದೆಹಲಿ (ಪಿಟಿಐ): ಉದ್ಯಮಿ ಗೌತಮ್ ಅದಾನಿ ಅವರ ಕುಟುಂಬವು ಅಂಬುಜಾ ಸಿಮೆಂಟ್ಸ್‌ನ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕಂಪನಿಯಲ್ಲಿ ಹೆಚ್ಚುವರಿಯಾಗಿ ₹8,339 ಕೋಟಿಯನ್ನು ಹೂಡಿಕೆ ಮಾಡಿದೆ.

ಇದರಿಂದ ಕಂಪನಿಯಲ್ಲಿ ಕುಟುಂಬದ ಷೇರುಗಳ ಮೇಲಿನ ಒಡೆತನವು ಶೇ 70.3ಕ್ಕೆ ಮುಟ್ಟಿದೆ.

2022ರ ಅಕ್ಟೋಬರ್‌ನಲ್ಲಿ ಅದಾನಿ ಕುಟುಂಬವು ₹5 ಸಾವಿರ ಕೋಟಿ ಮತ್ತು ಪ್ರಸಕ್ತ ವರ್ಷದ ಮಾರ್ಚ್‌ನಲ್ಲಿ ₹6,661 ಕೋಟಿ ಹೂಡಿಕೆ ಮಾಡಿತ್ತು. ಒಟ್ಟಾರೆ ಹೂಡಿಕೆ ಮೊತ್ತವು ₹20 ಸಾವಿರ ಕೋಟಿಗೆ ಮುಟ್ಟಿದೆ ಎಂದು ಕಂಪನಿ ತಿಳಿಸಿದೆ.

ಕಳೆದ ವರ್ಷದ ಡಿಸೆಂಬರ್ ಅಂತ್ಯಕ್ಕೆ ಕಂಪನಿಯ ಒಟ್ಟು ಉತ್ಪಾದನಾ ಸಾಮರ್ಥ್ಯ 7.61 ಕೋಟಿ ಟನ್ ಆಗಿದೆ. ಇದನ್ನು 2028ರ ವೇಳೆಗೆ 14 ಕೋಟಿ ಟನ್‌ಗೆ ಹೆಚ್ಚಿಸಲು ಈ ಹೂಡಿಕೆಯು ನೆರವಾಗಲಿದೆ.

ಜೊತೆಗೆ, ಕಂಪನಿಯ ಹಣಕಾಸು ಸ್ಥಿತಿ, ಸಾಮರ್ಥ್ಯ ಮತ್ತು ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ಕಂಪನಿ ತಿಳಿಸಿದೆ.

2024–25ನೇ ಹಣಕಾಸು ವರ್ಷದಲ್ಲಿ ಜಿಡಿಪಿ ಬೆಳವಣಿಗೆ ಶೇ 6.8ರಷ್ಟು ಪ್ರಗತಿ ನಿರೀಕ್ಷೆ

ಭಾರತ ಬಲಿಷ್ಠ ಸಾಧಕ ರಾಷ್ಟ್ರ: ಐಎಂಎಫ್

ವಾಷಿಂಗ್ಟನ್ (ಪಿಟಿಐ): ಇಡೀ ವಿಶ್ವದಲ್ಲಿಯೇ ಭಾರತವು ಬಲಿಷ್ಠ ಸಾಧಕ ರಾಷ್ಟ್ರಗಳ ಪೈಕಿ ಒಂದಾಗಿದ್ದು, 2024-25ರ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆಯು ಶೇ 6.8ರಷ್ಟು ಪ್ರಗತಿ ಕಾಣಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯು (ಐಎಂಎಫ್) ಅಂದಾಜಿಸಿದೆ.

ಜನವರಿಯಲ್ಲಿ ಪ್ರಕಟಿಸಿದ್ದ ಮುನ್ನೋಟದಲ್ಲಿ ಜಿಡಿಪಿಯು ಶೇ 6.5ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಹೇಳಿತ್ತು. ಮಂಗಳವಾರ ಬಿಡುಗಡೆ ಮಾಡಿರುವ ವಿಶ್ವ ಆರ್ಥಿಕ ಮುನ್ನೋಟದ ವರದಿಯಲ್ಲಿ ಇದನ್ನು ಪರಿಷ್ಕರಿಸಿದೆ. ಇದೇ ಅವಧಿಯಲ್ಲಿ ಚೀನಾದ ಜಿಡಿಪಿಯು ಶೇ 4.6ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ವಿವರಿಸಿದೆ.

‘2025-26ನೇ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿಯು ಶೇ 6.5ರಷ್ಟು ಪ್ರಗತಿ ಕಾಣಲಿದೆ. ದೇಶೀಯ ಬೇಡಿಕೆಯ ದೃಢತೆ ಹಾಗೂ ದುಡಿಯುವ ವಯಸ್ಸಿನ ಜನಸಂಖ್ಯೆ ಹೆಚ್ಚಳವು ಆರ್ಥಿಕತೆಯ ಬೆಳವಣಿಗೆಗೆ ನೆರವಾಗಲಿದೆ’ ಎಂದು ಹೇಳಿದೆ.

‘ಭಾರತವು ಬಲಿಷ್ಠ ಸಾಧಕ ರಾಷ್ಟ್ರವಾಗಿದೆ. ಹಾಗಾಗಿಯೇ, ಆರ್ಥಿಕತೆ ಬೆಳವಣಿಗೆಯನ್ನು ಪರಿಷ್ಕರಿಸಲಾಗಿದೆ’ ಎಂದು ಐಎಂಎಫ್‌ನ ಮುಖ್ಯ ಅರ್ಥಶಾಸ್ತ್ರಜ್ಞ ಪಿಯರೆ ಒಲಿವಿಯರ್ ಗೌರಿಂಚಸ್ ತಿಳಿಸಿದ್ದಾರೆ.

ಆದರೆ, ಇದೇ ಅವಧಿಯಲ್ಲಿ ಏಷ್ಯಾದ ಬೆಳವಣಿಗೆಯು ಕುಸಿತ ಕಾಣಲಿದೆ ಎಂದು ವರದಿ ಹೇಳಿದೆ. 2023–24ರಲ್ಲಿ ಶೇ 5.6ರಷ್ಟಿದ್ದ ಜಿಡಿಪಿಯು, 2024–25ರಲ್ಲಿ ಶೇ 5.2ಕ್ಕೆ ಕುಸಿಯಲಿದೆ. 2025–26ರಲ್ಲಿಯೂ ಇದೇ ಸ್ಥಿತಿ ಮುಂದುವರಿಸಲಿದ್ದು, ಶೇ 4.9ಕ್ಕೆ ಇಳಿಕೆಯಾಗಲಿದೆ ಎಂದು ಅಂದಾಜಿಸಿದೆ.



2023–24ರಲ್ಲಿ ಶೇ5.2ರಷ್ಟಿದ್ದ ಚೀನಾದ ಜಿಡಿಪಿಯು, 2024–25ರಲ್ಲಿ ಶೇ 4.6ಕ್ಕೆ ಇಳಿಕೆಯಾಗಲಿದೆ. 2025–26ರಲ್ಲಿ ಶೇ4.1ರಷ್ಟು ದಾಖಲಾಗಲಿದೆ ಎಂದು ಅಂದಾಜಿಸಿದೆ.

ಯುಎನ್‌ಸಿಟಿಎಡಿ ವರದಿ ಬಿಡುಗಡೆ: 2024–25ನೇ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿಯು ಶೇ 6.5ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ವಿಶ್ವಸಂಸ್ಥೆಯ ವಿಶ್ವ ವಾಣಿಜ್ಯ ಮತ್ತು ಅಭಿವೃದ್ಧಿ ಸಮ್ಮೇಳನದ (ಯುಎನ್‌ಸಿಟಿಎಡಿ) ವರದಿ ತಿಳಿಸಿದೆ.

ಬಹುರಾಷ್ಟ್ರೀಯ ಕಂಪನಿಗಳು ಪೂರೈಕೆ ಸರಪಳಿಯ ವೈವಿಧ್ಯಕ್ಕೆ ಒತ್ತು ನೀಡುತ್ತವೆ. ಇದರಿಂದ ದೇಶದಲ್ಲಿನ ತಯಾರಿಕಾ ವಲಯದ ಪ್ರಕ್ರಿಯೆಯು ವಿಸ್ತರಣೆಯಾಗಲಿದೆ. ಇದು ದೇಶದ ರಫ್ತು ಹೆಚ್ಚಳದ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ ಎಂದು ವರದಿ ತಿಳಿಸಿದೆ.

2023–24ನೇ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿಯು ಶೇ 6.7ರಷ್ಟು ಪ್ರಗತಿ ದಾಖಲಿಸಲಿದೆ. ಪ್ರಸಕ್ತ ವರ್ಷದಲ್ಲಿಯೂ ಈ ವೇಗವನ್ನು ಕಾಯ್ದುಕೊಳ್ಳಲಿದ್ದು, ಇಡೀ ವಿಶ್ವದಲ್ಲಿಯೇ ಅತಿವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿ ಮುಂದುವರಿಯಲಿದೆ ಎಂದು ಹೇಳಿದೆ.

ಚೀನಾ: ಮೊದಲ ತ್ರೈಮಾಸಿಕದಲ್ಲಿ ಶೇ 5.3ರಷ್ಟು ದಾಖಲು

ಬೀಜಿಂಗ್ (ಪಿಟಿಐ): ರಿಯಾಲ್ಟಿ ವಲಯದಲ್ಲಿನ ಕುಸಿತದ ನಡುವೆಯೂ ಪ್ರಸಕ್ತ ವರ್ಷದ ಮೊದಲ ತ್ರೈಮಾಸಿಕದಲ್ಲಿ ಚೀನಾದ ಆರ್ಥಿಕತೆ ಬೆಳವಣಿಗೆಯು ಶೇ 5.3ರಷ್ಟು ಪ್ರಗತಿ ದಾಖಲಿಸಿದೆ.

ತ್ರೈಮಾಸಿಕ ಲೆಕ್ಕಾಚಾರದಲ್ಲಿ ಕಳೆದ ಮೂರು ತಿಂಗಳ ಅವಧಿಯಲ್ಲಿ ಆರ್ಥಿಕತೆಯು ಶೇ 1.6ರಷ್ಟು ಹೆಚ್ಚಳವಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಇಲಾಖೆಯ (ಎನ್‌ಬಿಎಸ್) ವರದಿ ತಿಳಿಸಿದೆ.

‘ಮೊದಲ ತ್ರೈಮಾಸಿಕದಲ್ಲಿ ಚೀನಾದ ಅಭಿವೃದ್ಧಿಯು ಹೊಸ ದಾಖಲೆ ಬರೆದಿದೆ. ದೇಶದ ಆರ್ಥಿಕತೆಯು ಸುಸ್ಥಿರ ಚೇತರಿಕೆಯ ಹಾದಿಗೆ ಮರಳಿದೆ. ಪ್ರಸಕ್ತ ವರ್ಷದಲ್ಲಿ ಉತ್ತಮ ಆರಂಭ ಕಂಡಿದೆ’ ಎಂದು ಎನ್‌ಬಿಎಸ್‌ನ ಉಪ ಮುಖ್ಯಸ್ಥ ಶೆಂಗ್ ಲೈಯುನ್ ತಿಳಿಸಿದ್ದಾರೆ.

ಉತ್ಪಾದನೆಗೆ ಬೇಡಿಕೆ ಹೆಚ್ಚಳದ ಜೊತೆಗೆ ಉದ್ಯೋಗ ಮತ್ತು ಬೆಲೆಯು ಸ್ಥಿರವಾಗಿದೆ. ಹಾಗಾಗಿ, ಮಾರುಕಟ್ಟೆ ಬೆಳವಣಿಗೆ ಕಂಡಿದೆ ಎಂದಿದ್ದಾರೆ.

2023–24ರಲ್ಲಿ ಚೀನಾದ ಜಿಡಿಪಿಯು ಶೇ 5.2ರಷ್ಟು ದಾಖಲಾಗಿದೆ.

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1700-2100
ಮಧ್ಯಮ	₹1200-1700
ಸಣ್ಣ	₹500-1200

ಮುಂಬೈ ಧಾರಣೆ

ಶೇಂಗಾ 17-4-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1500)
ಒಂದು ವಾರದ ಡೆಲಿವರಿ	1495 (1495)
ಸೋಯಾ ಕಚ್ಚಾ	905 (920)
ಪಾಮ್ ವಾರದ ಡೆಲಿವರಿ	943 (963)
ಸೂರ್ಯಕಾಂತಿ ಎಣ್ಣೆ ಕಚ್ಚಾ	875(880)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹73,700 (72,450)

ಬೆಳ್ಳಿ ಕೆ.ಜಿ ₹83,750 (83,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಜಮ್ಮು–ಕಾಶ್ಮೀರ: ಮೂರು ಕಚ್ಚಾ ಬಾಂಬ್‌ಗಳು ಪತ್ತೆ

ಮೇಂಧರ್/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಚ್‌ನಲ್ಲಿ ಮೂರು ಕಚ್ಚಾ ಬಾಂಬ್‌ಗಳು ಪತ್ತೆಯಾಗಿದ್ದು, ಅವುಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದರೊಂದಿಗೆ ಉಗ್ರರು ಯೋಜಿಸಿದ್ದ ಸಂಚಿನ ವಿರುದ್ಧ ಬಹುದೊಡ್ಡ ಯಶಸ್ಸು ಸಾಧಿಸಿದ್ದೇವೆ ಎಂದು ಅಧಿಕಾರಿಗಳು ತಿಳಿಸಿದರು.

‘ಪೊಲೀಸ್, ರಾಷ್ಟ್ರೀಯ ರೈಫಲ್ಸ್ ಮತ್ತು ಸಿಆರ್‌ಪಿಎಫ್ ಪಡೆಗಳು ಮೇಂಧರ್ ಉಪ ವಿಭಾಗದ ಸಮೀಪದ ಅರಣ್ಯ ಪ್ರದೇಶದಲ್ಲಿ ಜಂಟಿ ಶೋಧಕಾರ್ಯ ಕೈಗೊಂಡಿದ್ದ ವೇಳೆ 3ರಿಂದ 20 ಕೆ.ಜಿ ತೂಕದ ಮೂರು ಬಾಂಬ್‌ಗಳು ಪತ್ತೆಯಾಗಿವೆ. ಅವುಗಳನ್ನು ಗುಹೆಯೊಳಗೆ 5, 10 ಮತ್ತು 20 ಕೆ.ಜಿ ಸಾಮರ್ಥ್ಯದ ಸ್ಟೀಲ್ ಪಾತ್ರೆಗಳಲ್ಲಿ ಅವಿತಿಡಲಾಗಿತ್ತು. ಬಾಂಬ್ ನಿಷ್ಕ್ರಿಯ ದಳವು ಸ್ಥಳಕ್ಕೆ ಆಗಮಿಸಿ ಅವುಗಳನ್ನು ನಿಷ್ಕ್ರಿಯಗೊಳಿಸಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೆ ಯಾರನ್ನೂ ಬಂಧಿಸಿಲ್ಲ’ ಎಂದು ತಿಳಿಸಿದರು.

‘ಮೇಂಧರ್ ಉಪ ವಿಭಾಗದ ಪ್ರದೇಶದಲ್ಲಿ ಸಂದೇಹಾತ್ಮಕ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಇದನ್ನು ಆಧರಿಸಿ ವಿಶೇಷ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು’ ಎಂದು ಹೇಳಿದರು.

‘ಒಂದು ಕಚ್ಚಾ ಬಾಂಬ್ 15ರಿಂದ 20 ಕೆ.ಜಿ ತೂಕವಿತ್ತು, ಮತ್ತೊಂದು ಬಾಂಬ್ 8–10 ಕೆ.ಜಿ ತೂಕವಿತ್ತು ಮತ್ತು ಇನ್ನೊಂದು 3–5 ಕೆ.ಜಿ ತೂಕ ಹೊಂದಿತ್ತು’ಎಂದು ಹೇಳಿದರು.

‘ಇದು ಚುನಾವಣೆ ಸಮಯ. ಇಂಥ ಸಂಚಿನ ಮೂಲಕ ಚುನಾವಣೆಗೆ ಅಡ್ಡಿ ಮಾಡಲು ಉಗ್ರರು ಪ್ರಯತ್ನಿಸುತ್ತಿರುತ್ತಾರೆ’ ಎಂದು ಸಿಆರ್‌ಪಿಎಫ್ ಅಧಿಕಾರಿ ರಜ್ನೇಶ್ ಯಾದವ್ ತಿಳಿಸಿದರು.

ಟೆಸ್ಲಾ: ₹25 ಸಾವಿರ ಕೋಟಿ ಹೂಡಿಕೆ?

ನವದೆಹಲಿ (ರಾಯಿಟರ್ಸ್): ಅಮೆರಿಕದ ಎಲೆಕ್ಟ್ರಿಕ್ ಕಾರು ತಯಾರಿಕಾ ಕಂಪನಿ ಟೆಸ್ಲಾ, ಭಾರತದಲ್ಲಿ ₹16,700 ಕೋಟಿಯಿಂದ ₹25 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡುವ ನಿರೀಕ್ಷೆಯಿದೆ ಎಂದು ಬುಧವಾರ ಮೂಲಗಳು ತಿಳಿಸಿವೆ.

ಟೆಸ್ಲಾ ಕಂಪನಿ ಮುಖ್ಯಸ್ಥ ಇಲಾನ್ ಮಸ್ಕ್ ಅವರು, ಏಪ್ರಿಲ್ 22ರಂದು ಭಾರತಕ್ಕೆ ಭೇಟಿ ನೀಡಲಿದ್ದು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲಿದ್ದಾರೆ. ಈ ವೇಳೆ ಭಾರತದಲ್ಲಿ ಟೆಸ್ಲಾ ಕಂಪನಿಯ ಘಟಕದ ಸ್ಥಾಪನೆ ಬಗ್ಗೆ ಅಧಿಕೃತವಾಗಿ ಘೋಷಿಸುವ ಸಾಧ್ಯತೆಯಿದೆ ಎಂದು ಹೇಳಿವೆ.

ಭಾರತದಲ್ಲಿ ಎಲೆಕ್ಟ್ರಿಕ್ ವಾಹನಗಳ ಮಾರುಕಟ್ಟೆ ದೊಡ್ಡಮಟ್ಟದಲ್ಲಿ ಬೆಳವಣಿಗೆ ಕಂಡಿಲ್ಲ. ಆದರೆ, ವೇಗವಾಗಿ ಬೆಳವಣಿಗೆ ಕಾಣುತ್ತಿದ್ದು ದೇಶೀಯ ಮಾರುಕಟ್ಟೆಯಲ್ಲಿ ಟಾಟಾ ಮೋಟರ್ಸ್ ಹಿಡಿತ ಸಾಧಿಸಿದೆ.

ಇಲಾನ್ ಮಸ್ಕ್

2023ರಲ್ಲಿ ದೇಶದಲ್ಲಿ ಎಲೆಕ್ಟ್ರಿಕ್ ವಾಹನಗಳ ಮಾರಾಟವು ಶೇ 2ರಷ್ಟಿದೆ. 2030ರ ವೇಳೆಗೆ ಇವುಗಳ ಮಾರಾಟದ ಪ್ರಮಾಣವನ್ನು ಶೇ 30ರಷ್ಟಕ್ಕೆ ಹೆಚ್ಚಿಸುವುದು ಕೇಂದ್ರ ಸರ್ಕಾರದ ಗುರಿಯಾಗಿದೆ.

ಈ ನಡುವೆಯೇ ಅಮೆರಿಕ ಮತ್ತು ಚೀನಾ ಮಾರುಕಟ್ಟೆಯಲ್ಲಿ ಟೆಸ್ಲಾ ಕಂಪನಿಯ ಕಾರುಗಳ ಮಾರಾಟವು ಕುಸಿದಿದೆ. ಹಾಗಾಗಿಯೇ, ಬಂಡವಾಳ ವೆಚ್ಚಕ್ಕೆ ಕಡಿವಾಣ ಹಾಕುವ ದೃಷ್ಟಿಯಿಂದ ಕಂಪನಿಯಲ್ಲಿನ ಶೇ 10ರಷ್ಟು ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಲು ಮಸ್ಕ್ ನಿರ್ಧರಿಸಿದ್ದಾರೆ.

ಕೇಂದ್ರವು ಎಲೆಕ್ಟ್ರಿಕ್ ಕಾರುಗಳ ಮೇಲೆ ಹೆಚ್ಚಿನ ಸುಂಕ ವಿಧಿಸಿದ್ದ ಬಗ್ಗೆ ಮಸ್ಕ್ ಈ ಹಿಂದೆ ಆಕ್ಷೇಪ ವ್ಯಕ್ತಪಡಿಸಿದ್ದರು. ಸುಂಕವನ್ನು ಕಡಿತಗೊಳಿಸಬೇಕೆಂದು ಒತ್ತಾಯಿಸಿದ್ದರು.

ಇತ್ತೀಚೆಗೆ ಕೇಂದ್ರ ಸರ್ಕಾರವು ಹೊಸ ಎಲೆಕ್ಟ್ರಿಕ್ ವಾಹನ ನೀತಿಯನ್ನು ಘೋಷಿಸಿದೆ. ಇದರಡಿ ಕನಿಷ್ಠ ₹4,169 ಕೋಟಿ ಹೂಡಿಕೆಯೊಂದಿಗೆ ಭಾರತದಲ್ಲಿ ಉತ್ಪಾದನಾ ಘಟಕ ಸ್ಥಾಪಿಸುವ ಕಂಪನಿಗಳಿಗೆ ಆಮದು ಸುಂಕದಲ್ಲಿ ರಿಯಾಯಿತಿ ಪ್ರಕಟಿಸಲಾಗಿದೆ. ಇದು ಟೆಸ್ಲಾಗೆ ವರದಾನವಾಗಲಿದೆ ಎಂದು ಹೇಳಲಾಗಿದೆ.

ಈಗಾಗಲೇ ಟೆಸ್ಲಾ ಕಂಪನಿಯು ನವದೆಹಲಿ ಮತ್ತು ಮುಂಬೈನಲ್ಲಿ ಷೋ ರೂಂಗೆ ಸ್ಥಳದ ಹುಡುಕಾಟ ನಡೆಸಿದೆ. ಬರ್ಲಿನ್‌ನಲ್ಲಿರುವ ತನ್ನ ಘಟಕದಿಂದ ಭಾರತಕ್ಕೆ ಎಲೆಕ್ಟ್ರಿಕ್ ಕಾರುಗಳನ್ನು ರಫ್ತು ಮಾಡುವ ಗುರಿ ಹೊಂದಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಸರ್ಕಾರವು ನವದೆಹಲಿಯಲ್ಲಿ ಸ್ಪೇಸ್ ನವೋದ್ಯಮ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಇದರಲ್ಲಿ ಮಸ್ಕ್ ಭಾಗವಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಸ್ಕ್ ಅವರು ಅಮೆರಿಕದಲ್ಲಿ ‘ಸ್ಪೇಸ್‌ಎಕ್ಸ್’ ಹೆಸರಿನ ಖಾಸಗಿ ರಾಕೆಟ್ ಕಂಪನಿಯ ಒಡೆತನ ಹೊಂದಿದ್ದಾರೆ.

ಸುದ್ದಿ 2 ನಿಮಿಷ

ವೊಡಾಫೋನ್ ಐಡಿಯಾ ₹5,400 ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ವೊಡಾಫೋನ್ ಐಡಿಯಾ ಕಂಪನಿಯು ಷೇರು ಮಾರಾಟ ಪ್ರಕ್ರಿಯೆಗೂ (ಎಫ್‌ಪಿಒ) ಮುನ್ನವೇ, ಆರಂಭಿಕ ಹೂಡಿಕೆದಾರರಿಂದ (ಆ್ಯಂಕರ್ ಇನ್‌ವೆಸ್ಟರ್) ₹5,400 ಕೋಟಿ ಬಂಡವಾಳ ಸಂಗ್ರಹಿಸಿದೆ.

ಆರಂಭಿಕ ಹೂಡಿಕೆದಾರರಿಂದ ಒನ್‌97 ಕಮ್ಯುನಿಕೇಷನ್ಸ್ ₹8,235 ಕೋಟಿ ಹಾಗೂ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ₹5,627 ಕೋಟಿ ಬಂಡವಾಳ ಸಂಗ್ರಹಿಸಿತ್ತು. ಈಗ ವೊಡಾಫೋನ್ ಐಡಿಯಾ ಸಂಗ್ರಹಿಸಿರುವುದು ಮೂರನೇ ಅತಿದೊಡ್ಡ ಮೊತ್ತವಾಗಿದೆ.

ವೊಡಾಫೋನ್ ಐಡಿಯಾವು ಎಫ್‌ಪಿಒ ಮೂಲಕ ₹18 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ನಿರ್ಧರಿಸಿದೆ. ಏಪ್ರಿಲ್ 18ರಂದು ಎಫ್‌ಪಿಒ ಆರಂಭವಾಗಲಿದ್ದು, ಪ್ರತಿ ಷೇರಿಗೆ ₹10ರಿಂದ ₹11 ಬೆಲೆ ನಿಗದಿಪಡಿಸಿದೆ.

ಪ್ರತಿ ಷೇರಿಗೆ ₹11ರಂತೆ 490.9 ಕೋಟಿ ಷೇರುಗಳನ್ನು 74 ನಿಧಿಗಳಿಗೆ ಮಾರಾಟ ಮಾಡುವ ಮೂಲಕ ಈ ಬಂಡವಾಳ ಸಂಗ್ರಹಿಸಲಾಗಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ದೇಶೀಯ ಮ್ಯೂಚುವಲ್ ಫಂಡ್‌ಗಳಿಗೆ 79.52 ಕೋಟಿ ಷೇರುಗಳನ್ನು (ಶೇ 16.2ರಷ್ಟು) ಹಂಚಿಕೆ ಮಾಡಲಾಗಿದೆ. ಮೋತಿಲಾಲ್ ಓಸ್ವಾಲ್ ಮ್ಯೂಚುವಲ್ ಫಂಡ್, ಎಚ್‌ಡಿಎಫ್‌ಸಿ ಮ್ಯೂಚುವಲ್ ಫಂಡ್, ಎಸ್‌ಬಿಐ ಜನರಲ್ ಇನ್ಶೂರೆನ್ಸ್ ಹಾಗೂ ಕ್ವಾಂಟ್ ಮ್ಯೂಚುವಲ್ ಫಂಡ್‌ಗೆ ಷೇರುಗಳು ಹಂಚಿಕೆಯಾಗಿವೆ ಎಂದು ತಿಳಿಸಿದೆ.

ವಿದ್ಯುತ್ ಬಳಕೆ ಪ್ರಮಾಣ ಏರಿಕೆ

ನವದೆಹಲಿ (ಪಿಟಿಐ): ಆರ್ಥಿಕ ಚಟುವಟಿಕೆಯ ಸುಧಾರಣೆ ಮತ್ತು ಬಳಕೆ ಪ್ರಮಾಣದ ಹೆಚ್ಚಳದಿಂದಾಗಿ ಈ ತಿಂಗಳ ಮೊದಲ 15 ದಿನಗಳ ಅವಧಿಯಲ್ಲಿ ದೇಶದಲ್ಲಿ ವಿದ್ಯುತ್ ಬಳಕೆಯು ಶೇ 10ರಷ್ಟು ಏರಿಕೆಯಾಗಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ 6,424 ಕೋಟಿ ಯೂನಿಟ್ ವಿದ್ಯುತ್ ಬಳಕೆ ಆಗಿತ್ತು. ಈಗ 7,066 ಕೋಟಿ ಯೂನಿಟ್‌ಗೆ ಹೆಚ್ಚಳವಾಗಿದೆ ಎಂದು ಕೇಂದ್ರ ವಿದ್ಯುತ್ ಸಚಿವಾಲಯ ತಿಳಿಸಿದೆ.

ದಿನದ ಗರಿಷ್ಠ ಬೇಡಿಕೆಯು 206 ಗಿಗಾವಾಟ್‌ನಿಂದ 218 ಗಿಗಾವಾಟ್‌ಗೆ ಹೆಚ್ಚಳವಾಗಿದೆ. ವಿದ್ಯುತ್ ಬೇಡಿಕೆಯು ಬೇಸಿಗೆ ಕಾಲದಲ್ಲಿ (ಏಪ್ರಿಲ್–ಜೂನ್‌ವರೆಗೆ) ಗರಿಷ್ಠ 260 ಗಿಗಾವಾಟ್‌ಗೆ ಮುಟ್ಟಲಿದೆ ಎಂದು ಸಚಿವಾಲಯ ಅಂದಾಜಿಸಿದೆ.

ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ವಿದ್ಯುತ್ ಬೇಡಿಕೆಯು 243 ಗಿಗಾವಾಟ್ ತಲುಪಿದ್ದು, ಸಾರ್ವಕಾಲಿಕ ದಾಖಲೆಯಾಗಿತ್ತು.

ಮಾರುಕಟ್ಟೆ ಧಾರಣೆ

ಅಡಿಕೆ

(ಬಂಟ್ವಾಳ)	
ಕೋಕ	18000-28500
ಹೊಸತು	28500-36500
ಹಳತು	36500-44500
ಕಾರ್ಕಳ	
ಹೊಸತು	25000-36500
ಹಳತು	30000-44500
ಕುಮಟ	
ಬೆಟ್ಟೆ	38009-40509
ಚಿಪ್ಪು	25689-28599
ಕೋಕ	12569-24189
ಫ್ಯಾಕ್ಟರಿ	11669-21249
ಹಳೆಚಾಲಿ	37089-39199
ಹೊಸಚಾಲಿ	30999-34509
ಪುತ್ತೂರು	
ಹೊಸತು	26500-36500
ಶಿವಮೊಗ್ಗ	
ಬೆಟ್ಟೆ	46899-56100
ಗೊರಬಲು	16929-34299
ರಾಶಿ	32062-51096
ಸರಕು	47000-84450
ಸಿದ್ದಾಪುರ	
ಬಿಳಿಗೋಟು	26300-29599
ಚಾಲಿ	32469-35399
ಕೋಕ	25899-29100
ಹಳೆಚಾಲಿ	35299-35929
ಕೆಂಪುಗೋಟು	27089-30899
ರಾಶಿ	42899-48419
ತಟ್ಟಿಬೆಟ್ಟೆ	36369-46099
ಶಿರಸಿ	
ಬೆಟ್ಟೆ	36119-44099
ಬಿಳಿಗೋಟು	24089-29800
ಚಾಲಿ	32099-35899
ಕೆಂಪುಗೋಟು	25200-33099
ರಾಶಿ	44099-48899

ಮನೆ ಮಾಡಿದ ಮೌನ...

ಕಾಂಕೇರ್ (ಪಿಟಿಐ): ಭದ್ರತಾ ಪಡೆಗಳ ಜೊತೆಗಿನ ಎನ್‌ಕೌಂಟರ್‌ನಲ್ಲಿ 29 ನಕ್ಸಲೀಯರ ಹತ್ಯೆಯಾದ ಛತ್ತೀಸಗಢದ ಕಂಕೇರ್ ಜಿಲ್ಲೆಯ ಹಿಡೂರ್ ಮತ್ತು ಕಲ್ಪಾರ್ ಹಳ್ಳಿಗಳ ಬೆಟ್ಟ ಪ್ರದೇಶದಲ್ಲಿ ಮೌನ ಮನೆಮಾಡಿದೆ.

ರಾಜ್ಯದಲ್ಲಿ ನಡೆದ ಅತಿದೊಡ್ಡ ಎನ್‌ಕೌಂಟರ್ ಇದು. ಎನ್‌ಕೌಂಟರ್ ಪೂರ್ಣಗೊಂಡ ಕೆಲವು ತಾಸುಗಳ ನಂತರ ಇಲ್ಲಿಗೆ ಭೇಟಿ ನೀಡಿದಾಗ, ಮರಗಳ ಮೇಲೆ ಗುಂಡಿನ ಗುರುತುಗಳು ಕಾಣುತ್ತಿದ್ದವು. ಬಿದಿರಿನ ಎಲೆಗಳಿಂದ ಮುಚ್ಚಿದ್ದ ನೆಲದ ಮೇಲೆ ರಕ್ತದ ಕಲೆಗಳೂ ಇದ್ದವು. ಸಮೀಪದ ಹಳ್ಳಿಗಳ ಆದಿವಾಸಿ ಸಮುದಾಯಕ್ಕೆ ಸೇರಿದವರು ತಾವು ಕಂಡಿದ್ದನ್ನು, ಕೇಳಿದ್ದನ್ನು ಹೊರಗಿನವರ ಜೊತೆ ಹಂಚಿಕೊಳ್ಳಲು ಹಿಂದೇಟು ಹಾಕುತ್ತಿದ್ದರು. ಸಮೀಪದ ಹಳ್ಳಿಯ ಲಿಂಗರಾಮ್ ಅವರು ತಮ್ಮ ಸಂಬಂಧಿ, ಸಕ್ರಿಯ ನಕ್ಸಲೀಯ ಸುಕ್ಕು ಎನ್‌ಕೌಂಟರ್‌ನಲ್ಲಿ ಮೃತಪಟ್ಟಿದ್ದಾನೆ ಎಂದು ತಿಳಿಸಿದರು.

ಸುಕ್ಕು ನಿಷೇಧಿತ ಸಿಪಿಐ (ಮಾವೊವಾದಿ) ಸಂಘಟನೆಗೆ ಚಿಕ್ಕ ವಯಸ್ಸಿನಲ್ಲಿಯೇ ಸೇರಿದ್ದ. ಮನೆಯವರ ವಿರೋಧ ಇದ್ದರೂ ಆ ಸಂಘಟನೆಯ ಜೊತೆ ಉಳಿದಿದ್ದ. ಸುಕ್ಕುವಿನ ಮೃತದೇಹವನ್ನು ಪಡೆದುಕೊಳ್ಳಲು ಕುಟುಂಬದ ಸದಸ್ಯರು ಪೊಲೀಸರನ್ನು ಇನ್ನಷ್ಟೇ ಸಂಪರ್ಕಿಸಬೇಕಿದೆ ಎಂದು ಲಿಂಗರಾಮ್ ಹೇಳಿದರು.

ಎನ್‌ಕೌಂಟರ್ ನಡೆದ ಸ್ಥಳದತ್ತ ಸಾಗಲು ಕಚ್ಚಾ ರಸ್ತೆಗಳನ್ನು ಅಲ್ಲಲ್ಲಿ ಅಗೆದುಹಾಕಲಾಗಿದೆ. ಲೋಕಸಭಾ ಚುನಾವಣೆ ಬಹಿಷ್ಕರಿಸುವಂತೆ ಕರೆ ನೀಡಿ ನಕ್ಸಲೀಯರು ಅಳವಡಿಸಿರುವ ಪೋಸ್ಟರ್‌ಗಳು ಕಾಣುತ್ತವೆ.

ಈ ಪ್ರದೇಶ ತಲುಪಲು ಕೋಟರಿ ನದಿಯನ್ನು ದಾಟಬೇಕು. ಇದು ಬೇಸಿಗೆಯಲ್ಲಿ ಬತ್ತಿರುತ್ತದೆ. ಇಲ್ಲಿ ಸೇತುವೆ ನಿರ್ಮಿಸಲು ಸ್ಥಳೀಯ ಆಡಳಿತ ಯತ್ನಿಸುತ್ತಿದೆಯಾದರೂ, ಸ್ಥಳೀಯರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ಹೇಳಿದರು.

ಬಿಜೆಪಿ ‘ಭಾವನೆ’, ಕಾಂಗ್ರೆಸ್ ‘ಬದುಕು’: ರಾಹುಲ್

ಒಂದನೇ ಪುಟದಿಂದ...

ಚೊಕ್ಕಂಡಹಳ್ಳಿ ಗೇಟ್‌ನಲ್ಲಿನ ಸಮಾವೇಶದಲ್ಲಿ ರಾಹುಲ್ ಸುಮಾರು 35 ನಿಮಿಷ ಭಾಷಣ ಮಾಡಿದರು. ದೇಶದ 22 ಶ್ರೀಮಂತ ಉದ್ಯಮಿಗಳ ಸಾಲವನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮನ್ನಾ ಮಾಡಿದೆ ಎಂದು ಆರೋಪಿಸಿದ ಅವರು ರೈತರಿಗೆ ಆಗಿದೆ ಎನ್ನಲಾದ ಮೋಸವನ್ನು ಎಳೆ, ಎಳೆಯಾಗಿ ಬಿಡಿಸಿಟ್ಟರು.

‘ಮಿಸ್ಟರ್ ನರೇಂದ್ರ ಮೋದಿ, ನೀವು ಅದಾನಿ, ಅಂಬಾನಿಗೆ ಕೋಟಿ ಕೋಟಿ ಹಣ ಕೊಟ್ಟರೆ ನಾವು ಬಡ ಮಹಿಳೆಯರಿಗೆ ಕೋಟಿ ಕೋಟಿ ಹಣ ಕೊಡುತ್ತೇವೆ. ರಾಜ್ಯ ಕಾಂಗ್ರೆಸ್ ಸರ್ಕಾರ ತಾಯಂದಿರಿಗೆ ವರ್ಷಕ್ಕೆ ₹24 ಸಾವಿರ ಕೊಡುತ್ತಿದೆ. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದು ಬಡ ಮಹಿಳೆಗೆ ವರ್ಷಕ್ಕೆ ತಲಾ ₹1 ಲಕ್ಷ ಕೊಡುತ್ತೇವೆ’ ಎಂದು ಹೇಳಿದರು.

‘ರೈತರ ಎಲ್ಲಾ ಸಾಲಮನ್ನಾ ಮಾಡುತ್ತೇವೆ. ಈ ದೇಶದಲ್ಲಿ ತಾರತಮ್ಯ ಮುಂದುವರಿಯಲು ಬಿಡಲ್ಲ. ಬಡವರಿಗೆ, ರೈತರಿಗೆ, ದಲಿತರಿಗೆ, ಹಿಂದುಳಿದ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ ಅನ್ಯಾಯ ಆಗಲು ಬಿಡಲ್ಲ’ ಎಂದು ಭರವಸೆ ನೀಡಿದರು. ‘ನಾವು ಜಾತಿ ಗಣತಿ ಮಾತೆತ್ತಿದರೆ ಮೋದಿ ಮೌನವಾಗುತ್ತಾರೆ. ಮೋದಿಯವರೇ, ನೀವು ಜಾತಿ ಗಣತಿ ವಿರುದ್ಧವೋ ಪರವೋ ಈ ದೇಶದ ಪ್ರಜೆಗಳಿಗೆ ಉತ್ತರ ಕೊಡಿ’ ಎಂದು ಆಗ್ರಹಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

WORK FROM Home: ಮನೆಯಲ್ಲಿ ಕುಳಿತು 10,000–20,000 ದುಡಿಯಬಹುದು. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516, ಶಿವಮೊಗ್ಗ 8095555517

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ,ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 7899235388, 9606385001

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

TRAVEL CORNER

KENYA 8 days in Wild
Amboseli• Nakuru• Naivasha• Masai Mara
18 June 2024
₹178000/-
ಕನ್ನಡದವರೊಂದಿಗೆ ಕನ್ನಡದಲ್ಲಿ
Call: 9448073129 9449984859
raise www.raise.in

ಪ್ರವಾಸ

Travel

ದೆಹಲಿ ಯುಮುನೋತ್ರಿ, ಗಂಗೋತ್ರಿ ಕೇದಾರನಾಥ್ ಬದರಿನಾಥ್ 13.05.2024 08.06.2024 ರಿಂದ 14 ದಿನಗಳು. ಸ್ವಯಂಭೂ ಅಮರನಾಥ್ ವೈಷ್ಣೋದೇವಿ ದೆಹಲಿ ಅಮೃತಸರ್ 28.06.2024 03.07.2024 ರಿಂದ 14,7 ದಿನಗಳು. ಅಯೋಧ್ಯ. ಪ್ರಯಾಗ್ ಕಾಶಿ,ಗಯಾ,ಬೈದ್ಯನಾಥ. 03.05.2024 06.05.2024 ರಿಂದ 8 ದಿನಗಳು. ಕಾಶ್ಮೀರ್ ಗುಲ್ಮಾರ್ಗ್ ಪಹಲ್‌ಗಾಂ ಸೋನಾಮಾರ್ಗ್ 12.05.2024 18.05.2024 ರಿಂದ 8 ದಿನಗಳು. ಸಂಪರ್ಕಿಸಿ. 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು.18

02.05.2024 ರಿಂದ 7 ದಿನಗಳ ಶ್ರೀರಾಮಲಲ್ಲಾ ದರ್ಶನ ಅಯೋಧ್ಯ,ಕಾಶಿ,ಗಯಾ ಪ್ರಯಾಗ್‌ರಾಜ್ ನೈಮಿಶಾರಣ್ಯ. 15.06.2024 ರಿಂದ 12 ದಿನಗಳ ಚಾರ್‌ಧಾಮ್ ಯಾತ್ರೆ ಯುಮುನೋತ್ರಿ ಗಂಗೋತ್ರಿ ಕೇದಾರನಾಥ್ ಬದರಿನಾಥ್ ಹರಿದ್ವಾರ. 21.07.2024 ರಿಂದ 6,8,10 ದಿನಗಳ ಕಾಶ್ಮೀರ್ ಅಮರನಾಥ್ ಯಾತ್ರೆ ವೈಷ್ಣೋದೇವಿ ದರ್ಶನ ಅಮೃತ್ಸರ್ ವಾಘಬಾರ್ಡರ್ ಚಂಡಿಘಡ. ಸಂಪರ್ಕಿಸಿ: ತತ್ವಮಸಿ ಟೂರ್ಸ್ 9742778477 7349228006

05.05.2024ರಿಂದ 25ದಿನಗಳ ಚಾರಧಾಮ್`ಸಮೇತ, ವೈಷ್ಣೋದೇವಿ,ಅಮೃತಸರ್`, ಕಾಶಿ, ಅಯೋಧ್ಯ, ಹರಿದ್ವಾರ್, ಆಗ್ರಾ ಇತ್ಯಾದಿ. 01.07.2024 ಮತ್ತು 12.07.2024ರಿಂದ 12ದಿನಗಳು ಅಮರನಾಥ್`ಸಮೇತ ಕಾಶ್ಮೀರ್, ಶ್ರೀನಗರ,ಗುಲ್ಮಾರ್ಗ್, ಅವಂತಿಪುರ,ವಾಘಬಾರ್ಡರ್`,ಇತ್ಯಾದಿ. ವಿಷ್ಣನ್`ಟ್ರಾವಲ್`ಲೈನ್ಸ್, ನಂ.20,`ಆರ್.ವಿ.ರಸ್ತೆ, ಬೆಂಗಳೂರು-04. 8105657052, 9480182865.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
*Conditions apply
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9731810277
9886213331
9845114560

‘ಎನ್‌ಕೌಂಟರ್: ನಕ್ಸಲರಿಗೆ ಹಿನ್ನಡೆ’

ನಿಷೇಧಿತ ಸಂಘಟನೆಯ ಅಕ್ರಮ ಹಣ ಸಂಗ್ರಹ, ಪೂರೈಕೆ ಮೇಲೆ ಪ್ರಹಾರ

ಕಾಂಕೇರ್(ಛತ್ತೀಸಗಢ)(ಪಿಟಿಐ): ಕಾಂಕೇರ್ ಜಿಲ್ಲೆಯಲ್ಲಿ ನಡೆಸಿದ ಕಾರ್ಯಾಚರಣೆಯಿಂದಾಗಿ ಉತ್ತರ ಬಸ್ತಾರ್ ವಿಭಾಗದ ನಕ್ಸಲರ ಸಮಿತಿಗೆ ಭಾರಿ ಹಿನ್ನಡೆ ಆಗಿದೆ. ನಿಷೇಧಿತ ನಕ್ಸಲ್ ಸಂಘಟನೆಯ ಕಾನೂನುಬಾಹಿರ ಹಣ ಸಂಗ್ರಹಣೆ ಹಾಗೂ ಪೂರೈಕೆಯನ್ನು ಇದೇ ಸಮಿತಿ ನಿರ್ವಹಣೆ ಮಾಡುತ್ತಿದ್ದುದು ಇದಕ್ಕೆ ಕಾರಣ ಎಂದು ಪೊಲೀಸರು ಬುಧವಾರ ಹೇಳಿದ್ದಾರೆ.

‘ನಕ್ಸಲರ ನಿಗ್ರಹಕ್ಕೆ ಸಂಬಂಧಿಸಿ ಮಾಡಬೇಕಾದ ಕೆಲಸ ಸಾಕಷ್ಟಿದೆ. ಆದರೆ, ಈ ನಿಟ್ಟಿಯಲ್ಲಿ ಪೊಲೀಸರು ಸರಿಯಾದ ದಿಕ್ಕಿನಲ್ಲಿಯೇ ಸಾಗುತ್ತಿದ್ದಾರೆ’ ಎಂದು ಬಸ್ತಾರ್ ವಲಯದ ಐಜಿಪಿ ಪಿ.ಸುಂದರರಾಜ್ ಹೇಳಿದ್ದಾರೆ.

ಕಾಂಕೇರ್ ಜಿಲ್ಲೆಯಲ್ಲಿ ಮಂಗಳವಾರ ನಡೆದ ಗುಂಡಿನ ಚಕಮಕಿಯಲ್ಲಿ ಭದ್ರತಾ ಪಡೆ ಸಿಬ್ಬಂದಿ ಕನಿಷ್ಠ 29 ಮಂದಿ ನಕ್ಸಲರನ್ನು ಹೊಡೆದುರುಳಿಸಿದ್ದರು. ಈ ವರ್ಷದಲ್ಲಿ ನಡೆದ ಅತಿದೊಡ್ಡ ಸಂಘರ್ಷ ಇದಾಗಿದ್ದು, ಈ ಗುಂಡಿನ ಚಕಮಕಿಯಲ್ಲಿ ನಕ್ಸಲರ ಕೆಲ ನಾಯಕರೂ ಹತರಾಗಿದ್ದಾರೆ.

‘ಛತ್ತೀಸಗಢದ ಕಾಂಕೇರ್, ನಾರಾಯಣಪುರ ಹಾಗೂ ನೆರೆಯ ಮಹಾರಾಷ್ಟ್ರದ ಗಡಚಿರೋಲಿ ಜಿಲ್ಲೆಗಳು ಸಂಧಿಸುವ ಪ್ರದೇಶವು ನಕ್ಸಲರ ಸಂಘಟನೆಯ ಉತ್ತರ ಬಸ್ತಾರ್ ವಲಯದ ಈ ಸಮಿತಿಗೆ ಸುರಕ್ಷಿತ ತಾಣ ಎಂದೇ ಪರಿಗಣಿಸಲಾಗುತ್ತದೆ. ಹೀಗಾಗಿ, ಈ ಪ್ರದೇಶದಲ್ಲಿಯೇ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು’ ಎಂದು ಸುಂದರರಾಜ್ ಹೇಳಿದ್ದಾರೆ.

‘ಉತ್ತರ ಬಸ್ತಾರ್ ವಿಭಾಗದಲ್ಲಿ ರಾವ್‌ಘಾಟ್, ಪರ್ತಾಪುರ, ಕುವೆ ಹಾಗೂ ಕಿಸೊಡೊ ಎಂಬ ನಾಲ್ಕು ಸಮಿತಿಗಳಿದ್ದು, ಇವುಗಳಲ್ಲಿ 70–80 ಸದಸ್ಯರಿದ್ದಾರೆ’ ಎಂದೂ ತಿಳಿಸಿದ್ದಾರೆ.

ಬಸ್ತಾರ್ ವಲಯದ ಐಜಿಪಿ ಸುಂದರರಾಜ್ ಪಿ. ಅವರು ಮಂಗಳವಾರ ನಡೆದ ನಕ್ಸಲ್ ನಿಗ್ರಹ ಕಾರ್ಯಾಚರಣೆ ವೇಳೆ ವಶಪಡಿಸಿಕೊಂಡಿರುವ ಶಸ್ತ್ರಾಸ್ತ್ರಗಳನ್ನು ಕಾಂಕೇರ್‌ನಲ್ಲಿ ಬುಧವಾರ ಪರಿಶೀಲಿಸಿದರು —ಪಿಟಿಐ ಚಿತ್ರ

‘ಬೇರೆ ವಿಭಾಗದ ಸಮಿತಿಗಳು ಬೇರೆ ಬೇರೆ ಕಾರ್ಯ ನಿರ್ವಹಣೆ ಮಾಡುತ್ತವೆ. ಉತ್ತರ ಬಸ್ತಾರ್ ವಿಭಾಗದ ಸಮಿತಿಗಳು ಗುತ್ತಿಗೆದಾರರು ಮತ್ತು ಇತರರಿಂದ ಹಣ ವಸೂಲಿ ಮಾಡಿ, ಈ ಹಣ ಸಾಗಣೆಯ ಜಾಲವನ್ನು ನಿರ್ವಹಣೆ ಮಾಡುತ್ತವೆ’ ಎಂದು ಹೇಳಿದ್ದಾರೆ.

‘ಮಂಗಳವಾರ ನಡೆದ ಗುಂಡಿನ ಚಕಮಕಿಯಲ್ಲಿ ಹತರಾದ ನಕ್ಸಲರನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ. ಈ ವರೆಗೆ, ಶಂಕರರಾವ್ ಮತ್ತು ಲಲಿತಾ ಎಂಬುವವರನ್ನು ಗುರುತಿಸಲಾಗಿದೆ. ಹತ್ಯೆಯಾದವರಲ್ಲಿ 15 ಜನ ಮಹಿಳೆಯರು ಸೇರಿದ್ದಾರೆ. ಹತ್ಯೆಯಾದವರ ಪೈಕಿ ಹೆಚ್ಚಿನವರು ಪರ್ತಾಪುರ ಪ್ರದೇಶದ ಸಮಿತಿಗೆ ಸೇರಿದವರಿರಬಹುದು’ ಎಂದು ಸುಂದರರಾಜ್ ಹೇಳಿದ್ದಾರೆ.

‘ಇದೇ 19ರಂದು ಲೋಕಸಭಾ ಚುನಾವಣೆಯ ಮತದಾನ ನಡೆಯಲಿರುವ ಕಾರಣ, ಈ ಪ್ರದೇಶದಲ್ಲಿ ವ್ಯಾಪಕ ಭದ್ರತಾ ವ್ಯವಸ್ಥೆ ಮಾಡಲಾಗಿದೆ. ಕಾಂಕೇರ್ ಮತ್ತು ಬಸ್ತಾರ್‌ನಲ್ಲಿ (ಏಪ್ರಿಲ್ 26ರಂದು ಮತದಾನ) ಶಾಂತಿಯುತ ಮತದಾನ ನಡೆಯುವ ವಿಶ್ವಾಸ ಇದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ಸಂಖ್ಯೆ:ಕವಿನಿಆ/ಗ್ರೂಪ್ ಕ್ಯಾಪ್ಟಿವ್/ಸಿಟಿ–2/2023–24/ಕಡತ–3/55 ದಿನಾಂಕ: 17–04–2024

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಪರಿಷ್ಕೃತ ಕರಡು – ಕೆ.ಇ.ಆರ್.ಸಿ (ಕರ್ನಾಟಕ ರಾಜ್ಯದಲ್ಲಿನ ವಿದ್ಯುತ್ ಉತ್ಪಾದನಾ ಘಟಕಗಳು ಹಾಗೂ ಗ್ರಾಹಕರ ಕ್ಯಾಪ್ಟೀವ್ ಸ್ಥಿತಿಯ ಪರಿಶೀಲನೆ) ವಿನಿಯಮಗಳು, 2024.

ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವಂತೆ ಕೆ.ಇ.ಆರ್.ಸಿ (ಕರ್ನಾಟಕ ರಾಜ್ಯದಲ್ಲಿನ ವಿದ್ಯುತ್ ಉತ್ಪಾದನಾ ಘಟಕಗಳು ಹಾಗೂ ಗ್ರಾಹಕರ ಕ್ಯಾಪ್ಟೀವ್ ಸ್ಥಿತಿಯ ಪರಿಶೀಲನೆ) ವಿನಿಯಮಗಳು, 2024 ರ ಪರಿಷ್ಕೃತ ಕರಡು ಪ್ರತಿಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 22–03–2024 ರಂದು ಪ್ರಕಟಗೊಳಿಸಲಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಂತರ್ಜಾಲ ತಾಣ: https://kerc.karnataka.gov.in ದಲ್ಲಿ ಸದರಿ ಕರಡನ್ನು ಲಭ್ಯವಿರಿಸಲಾಗಿದೆ.

ಆಯೋಗವು ದಿನಾಂಕ: **30–04–2024 ರಂದು ಮಧ್ಯಾಹ್ನ 2.30 ಕ್ಕೆ** ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ ಸಾರ್ವಜನಿಕ ವಿಚಾರಣೆಯನ್ನು ಏರ್ಪಡಿಸಿದ್ದು, ಆಸಕ್ತರು ಈ ವಿಚಾರಣೆಯಲ್ಲಿ ಭಾಗವಹಿಸಿ ಆಯೋಗದ ಮುಂದೆ ಖುದ್ದಾಗಿ ಹಾಜರಾಗಬಹುದು ಮತ್ತು ಮೌಖಿಕ ಸಲ್ಲಿಕೆಗಳನ್ನು ಮಾಡಬಹುದು.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
ವಾಸಾಸಂಇ/ವಾ.ಪ್ರ/27/2024–25
ಚುನಾವಣಾ ಆಯೋಗದ ಅನುಮತಿ ಪತ್ರ
ಸಂಖ್ಯೆ: ಸಿಇಸುಇ 92 ಎಂಸಿಸಿ (ಅಮುಚುಅ–1) 2024, ದಿನಾಂಕ: 22.03.2024

‘ಪ್ರಜಾಸತ್ತಾತ್ಮಕ ಲಾಭಾಂಶ ಪಡೆಯದ ಭಾರತ’

ವಾಷಿಂಗ್ಟನ್ (ಪಿಟಿಐ): ಭಾರತವು ಪ್ರಜಾಸತ್ತಾತ್ಮಕ ಲಾಭಾಂಶವನ್ನು ಪಡೆಯುತ್ತಿಲ್ಲ ಎಂದು ಹೇಳಿರುವ ಆರ್‌ಬಿಐ ಮಾಜಿ ಗವರ್ನರ್ ರಘುರಾಮ್ ರಾಜನ್, ಮಾನವ ಬಂಡವಾಳವನ್ನು ಸುಧಾರಿಸಲು ಮತ್ತು ಕೌಶಲ ಹೆಚ್ಚಿಸಲು ಗಮನಹರಿಸಬೇಕಾದ ಅಗತ್ಯವಿದೆ ಎಂದು ಮಂಗಳವಾರ ಪ್ರತಿಪಾದಿಸಿದ್ದಾರೆ.

ಜಾರ್ಜ್ ವಾಷಿಂಗ್ಟನ್ ವಿಶ್ವವಿದ್ಯಾಲಯದಲ್ಲಿ ನಡೆದ ‘ಭಾರತವನ್ನು 2047ರ ಹೊತ್ತಿಗೆ ಸುಧಾರಿತ ಆರ್ಥಿಕತೆಯನ್ನಾಗಿ ಮಾಡುವುದು ಹೇಗೆ: ಅದರ ಅಗತ್ಯಗಳೇನು?’ ಎಂಬ ವಿಷಯ ಕುರಿತ ಸಮಾವೇಶದಲ್ಲಿ ಅವರು ಮಾತನಾಡಿದ್ದಾರೆ.

‘ನಮ್ಮ ಯುವ ಜನರಿಗೆ ಉದ್ಯೋಗಗಳನ್ನು ನೀಡದ ಕಾರಣ ಜನಸಂಖ್ಯೆಯ ಲಾಭಾಂಶವನ್ನು ಕಳೆದುಕೊಳ್ಳುತ್ತಿದ್ದೇವೆ’ ಎಂದು ಅವರು ಹೇಳಿದ್ದಾರೆ.

‘ಉದ್ಯೋಗಗಳನ್ನು ಹೇಗೆ ಸೃಷ್ಟಿಸಬಹುದು ಎಂಬ ಪ್ರಶ್ನೆ ಸಹಜವಾಗಿಯೇ ಎದುರಾಗುತ್ತದೆ. ಇದಕ್ಕೆ ನಮ್ಮ ಜನರ ಸಾಮರ್ಥ್ಯವನ್ನು ಭಾಗಶಃ ಹೆಚ್ಚಿಸಬೇಕು ಮತ್ತು ಲಭ್ಯವಿರುವ ಉದ್ಯೋಗಗಳ ಸ್ವರೂಪವನ್ನೂ ಭಾಗಶಃ ಬದಲಿಸಬೇಕು. ಈ ನಿಟ್ಟಿನಲ್ಲಿ ನಾವು ಕೆಲಸ ಮಾಡಬೇಕಿದೆ’ ಎಂದು ಅವರು ಹೇಳಿದ್ದಾರೆ.

ಟೈಮ್ಸ್ ನಿಯತಕಾಲಿಕ: ಪ್ರಭಾವಿ 100ರಲ್ಲಿ ಸಾಕ್ಷಿ, ಆಲಿಯಾ

ನವದೆಹಲಿ (ಪಿಟಿಐ): ಭಾರತೀಯ ಕುಸ್ತಿಪಟು, ಒಲಿಂಪಿಕ್ ಪದಕ ವಿಜೇತೆ ಸಾಕ್ಷಿ ಮಲಿಕ್ ಅವರು ಟೈಮ್ಸ್ ನಿಯತಕಾಲಿಕ ಪ್ರಕಟಿಸಿರುವ 2024ರ 100 ಅತ್ಯಂತ ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.


ಸಾಕ್ಷಿ ಮಲಿಕ್

ಪಟ್ಟಿಯಲ್ಲಿರುವ ಇತರ ಭಾರತೀಯರಲ್ಲಿ ವಿಶ್ವಬ್ಯಾಂಕ್ ಅಧ್ಯಕ್ಷ ಅಜಯ್ ಬಂಗಾ, ಬಾಲಿವುಡ್ ನಟಿ ಆಲಿಯಾ ಭಟ್, ಇಂಡೊ–ಬ್ರಿಟನ್ ನಟ ದೇವ್ ಪಟೇಲ್ ಮತ್ತು ಮೈಕ್ರೋಸಾಫ್ಟ್ ಸಿಇಒ ಸತ್ಯ ನಾದೆಲ್ಲಾ ಸೇರಿದ್ದಾರೆ.

ಅಮೆರಿಕದ ಇಂಧನ ಇಲಾಖೆಯ ಸಾಲ ಕಾರ್ಯಕ್ರಮ ಕಚೇರಿಯ ನಿರ್ದೇಶಕ ಜಿಗರ್ ಶಾ, ಯೇಲ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರಿಯಂವದಾ ನಟರಾಜನ್, ಭಾರತೀಯ ಮೂಲದ ರೆಸ್ಟೋರೆಂಟ್ ಮಾಲೀಕರಾದ ಅಸ್ಮಾ ಖಾನ್ ಅವರ ಹೆಸರುಗಳು ಪ್ರಭಾವಿ 100ರ ಪಟ್ಟಿಯಲ್ಲಿವೆ.

ಗಿಲ್ ಬಳಗದ ಕಳಪೆ ಬ್ಯಾಟಿಂಗ್ • ಕೀಪಿಂಗ್‌ನಲ್ಲಿ ಮಿಂಚಿದ ಪಂತ್ • ಡೆಲ್ಲಿಗೆ ಮೂರನೇ ಜಯ

ವೇಗಿಗಳ ದಾಳಿಗೆ ಕುಸಿದ ಟೈಟನ್ಸ್

ಅಹಮದಾಬಾದ್ (ಪಿಟಿಐ): ವೇಗದ ಜೋಡಿ ಮುಕೇಶ್ ಕುಮಾರ್ ಮತ್ತು ಇಶಾಂತ್ ಶರ್ಮಾ ಅವರ ಅಮೋಘ ಬೌಲಿಂಗ್ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ಅಮೋಘ ಜಯ ಸಾಧಿಸಿತು.

ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಡೆಲ್ಲಿ ತಂಡವು 6 ವಿಕೆಟ್‌ಗಳಿಂದ ಆತಿಥೇಯ ಗುಜರಾತ್ ವಿರುದ್ಧ ಜಯಿಸಿತು. ಟಾಸ್ ಗೆದ್ದ ಡೆಲ್ಲಿ ತಂಡದ ನಾಯಕ ರಿಷಭ್ ಪಂತ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು.

ಮುಕೇಶ್ (14ಕ್ಕೆ3) ಮತ್ತು ಇಶಾಂತ್ (8ಕ್ಕೆ2) ಅವರ ದಾಳಿಯ ಮುಂದೆ ಗುಜರಾತ್ ತಂಡವು 17.3 ಓವರ್‌ಗಳಲ್ಲಿ 89 ರನ್‌ಗಳ ಅಲ್ಪಮೊತ್ತ ಗಳಿಸಿ ಆಲೌಟ್ ಆಯಿತು. ಈ ಬಾರಿಯ ಐಪಿಎಲ್‌ನಲ್ಲಿ ದಾಖಲಾದ ಕನಿಷ್ಠ ಮೊತ್ತ ಇದು. ಇದಕ್ಕುತ್ತರವಾಗಿ ಡೆಲ್ಲಿ ತಂಡವು 8.5 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 92 ರನ್ ಗಳಿಸಿತು.

ಗುಜರಾತ್ ತಂಡದ ಎಂಟನೇ ಕ್ರಮಾಂಕದ ಬ್ಯಾಟರ್ ರಶೀದ್ ಖಾನ್ 24 ಎಸೆತಗಳಲ್ಲಿ 31 ರನ್ ಗಳಿಸಿದರು. ವೈಯಕ್ತಿಕ ಗರಿಷ್ಠ ಸ್ಕೋರ್ ಗಳಿಸಿದ ಆಟಗಾರನಾದರು. ಇಡೀ ಇನಿಂಗ್ಸ್‌ನಲ್ಲಿ ದಾಖಲಾದ ಏಕೈಕ ಸಿಕ್ಸರ್ ಕೂಡ ರಶೀದ್ ಕಾಣಿಕೆ. ಈ ಇನಿಂಗ್ಸ್‌ನಲ್ಲಿ ಒಟ್ಟು ಎಂಟು ಬೌಂಡರಿಗಳು ಮಾತ್ರ ದಾಖಲಾದವು.

ರಶೀದ್ ಬಿಟ್ಟರೆ ಸಾಯಿ ಸುದರ್ಶನ್ (12; 9ಎ) ಮತ್ತು ರಾಹುಲ್ ತೆವಾಟಿಯಾ (10; 15ಎ) ಅವರಿಬ್ಬರೇ ಎರಡಂಕಿ ಮುಟ್ಟಿದವರು. ಉಳಿದ ಬ್ಯಾಟರ್‌ಗಳೆಲ್ಲರೂ ವೈಫಲ್ಯ ಅನುಭವಿಸಿದರು.

ಗುಜರಾತ್ ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಗಿಲ್ ವಿಕೆಟ್ ಗಳಿಸಿದ ಇಶಾಂತ್ ತಂಡಕ್ಕೆ ಮೊದಲ ಯಶಸ್ಸು ಗಳಿಸಿಕೊಟ್ಟರು. ನಾಲ್ಕನೇ ಓವರ್‌ನಲ್ಲಿ ಮುಕೇಶ್ ಎಸೆತಕ್ಕೆ ವೃದ್ಧಿಮಾನ್ ಸಹಾ ಕ್ಲೀನ್‌ಬೌಲ್ಡ್ ಆದರು. ಸಾಯಿ ಅವರು ರನೌಟ್ ಆಗಿದ್ದು ತಂಡಕ್ಕೆ ಬಿದ್ದ ದೊಡ್ಡ ಪೆಟ್ಟು. ಇಶಾಂತ್ ಬೌಲಿಂಗ್‌ನಲ್ಲಿ ಡೇವಿಡ್ ಮಿಲ್ಲರ್ ಕೂಡ ಔಟಾದರು. ಬೌಲರ್‌ಗಳು ಬಿಗಿಪಟ್ಟು ಸಾಧಿಸಿದರು. ಇದರಿಂದಾಗಿ ಕೇವಲ 48 ರನ್‌ಗಳಿಗೆ 6 ವಿಕೆಟ್‌ಗಳು ಪತನವಾದವು.

ಡೆಲ್ಲಿ ತಂಡದ ಎಡಗೈ ವೇಗಿ ಖಲೀಲ್ ಅಹಮದ್, ಸ್ಪಿನ್ನರ್ ಅಕ್ಷರ್ ಪಟೇಲ್ ತಲಾ ಒಂದು ವಿಕೆಟ್ ಗಳಿಸಿದರು. ಟ್ರಿಸ್ಟನ್ ಸ್ಟಬ್ಸ್ ಒಂದೇ ಓವರ್‌ನಲ್ಲಿ ಎರಡು ವಿಕೆಟ್ ಕಬಳಿಸಿದರು.

ಡೆಲ್ಲಿ ತಂಡದ ನಾಯಕ, ವಿಕೆಟ್ ಕೀಪರ್ ರಿಷಭ್ ಪಂತ್ ಎರಡು ಕಠಿಣ ಕ್ಯಾಚ್‌ಗಳನ್ನು ಪಡೆಯುವಲ್ಲಿ ಯಶಸ್ವಿಯಾದರು. ಅಲ್ಲದೇ ಎರಡು ಚುರುಕಾದ ಸ್ಟಂಪಿಂಗ್ ಕೂಡ ಮಾಡಿದರು.

ಈ ಅಲ್ಪಮೊತ್ತವನ್ನು ರಕ್ಷಿಸಿಕೊಳ್ಳಲು ಆತಿಥೇಯ ತಂಡದ ಬೌಲರ್‌ಗಳು ಹೋರಾಟ ಮಾಡಿದರು. ಆದರೆ ಸಾಧ್ಯವಾಗಲಿಲ್ಲ. ಡೆಲ್ಲಿ ಆರಂಭಿಕ ಬ್ಯಾಟರ್ ಜೇಕ್ ಫ್ರೆಸರ್ ಮೆಕ್‌ಗುರ್ಕ್ (20; 10ಎ) ಬಿರುಸಿನ ಆರಂಭ ನೀಡಿದರು. ವೇಗಿ ಸಂದೀಪ್ ವಾರಿಯರ್ (40ಕ್ಕೆ2) ಅವರು ಪೃಥ್ವಿ ಶಾ ಮತ್ತು ಅಭಿಷೇಕ್ ಪೊರೆಲ್ ವಿಕೆಟ್‌ಗಳು ಗಳಿಸಿದರು. ರಶೀದ್ ಖಾನ್ ಮತ್ತು ಸ್ಪೆನ್ಸರ್ ಜಾನ್ಸನ್ ಕೂಡ ತಲಾ ಒಂದು ವಿಕೆಟ್ ಪಡೆದರು.

ರಿಷಭ್ 11 ಎಸೆತಗಳಲ್ಲಿ 16 ರನ್ ಗಳಿಸಿ ಔಟಾಗದೇ ಉಳಿದರು.ತಂಡವನ್ನು ಜಯದ ಗಡಿ ದಾಟಿಸಿದರು. 7ನೇ ಪಂದ್ಯ ಆಡಿದ ಡೆಲ್ಲಿ ತಂಡವು ಮೂರನೇ ಜಯ ಸಾಧಿಸಿತು. ಅಂಕಪಟ್ಟಿಯಲ್ಲಿ ಆರನೇ ಸ್ಥಾನಕ್ಕೇರಿತು. ಗಿಲ್ ಬಳಗಕ್ಕೆ ಇದು ನಾಲ್ಕನೇ ಸೋಲು.

ವಿಕೆಟ್ ಪಡೆದ ಮುಕೇಶ್ ಕುಮಾರ್ ಅವರನ್ನು ಡೆಲ್ಲಿ ಕ್ಯಾಪಿಟಲ್ಸ್‌ನ ನಾಯಕ ರಿಷಭ್ ಪಂತ್, ಇಶಾಂತ್ ಶರ್ಮಾ ಅಭಿನಂದಿಸಿದರು –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್: 89 (17.3 ಓವರುಗಳಲ್ಲಿ)
ವೃದ್ಧಿಮಾನ್ ಬಿ ಮುಕೇಶ್ 2 (10ಎ)
ಗಿಲ್ ಸಿ ಪೃಥ್ವಿ ಶಾ ಬಿ ಇಶಾಂತ್ 8 (6ಎ, 4x2)
ಸುದರ್ಶನ್ ರನೌಟ್ (ಸುಮಿತ್) 12 (9ಎ, 4x2)
ಮಿಲ್ಲರ್ ಸಿ ಪಂತ್ ಬಿ ಇಶಾಂತ್ 2 (6ಎ)
ಅಭಿನವ್ ಸ್ಟಂ ಪಂತ್ ಬಿ ಸ್ಟಬ್ಸ್ 8 (14ಎ, 4x1)
ತೆವಾಟಿಯಾ ಎಲ್‌ಬಿಡಬ್ಲ್ಯು ಬಿ ಅಕ್ಷರ್ 10 (15ಎ 4x1)
ಶಾರೂಕ್ ಸ್ಟಂ ಪಂತ್ ಬಿ ಸ್ಟಬ್ಸ್ 0 (1ಎ)
ರಶೀದ್ ಸಿ ಪಂತ್ ಬಿ ಮುಕೇಶ್ 31 (24ಎ, 4x2, 6x1)
ಮೋಹಿತ್ ಸಿ ಸುಮೀತ್ ಬಿ ಖಲೀಲ್ 2 (14ಎ)
ನೂರ್ ಅಹ್ಮದ್ ಬಿ ಮುಕೇಶ್ 1 (7ಎ)
ಜಾನ್ಸನ್ ಔಟಾಗದೇ 1 (1ಎ)
ಇತರೆ: 12 (ಲೆಗ್‌ಬೈ 5, ನೋಬಾಲ್ 2, ವೈಡ್ 5)
ವಿಕೆಟ್ ಪತನ: 1–11 (ಶುಭಮನ್ ಗಿಲ್, 1.5), 2–28 (ವೃದ್ಧಿಮಾನ್ ಸಹಾ, 3.5), 3–28 (ಸಾಯಿ ಸುದರ್ಶನ್, 4.1), 4–30 (ಡೇವಿಡ್ ಮಿಲ್ಲರ್, 4.6), 5–47 (ಅಭಿನವ್ ಮನೋಹರ್, 8.3), 6–48 (ಎಂ.ಶಾರೂಖ್ ಖಾನ್, 8.4), 7–66 (ರಾಹುಲ್ ತೆವಾಟಿಯಾ, 11.2), 8–78 (ಮೋಹಿತ್ ಶರ್ಮಾ, 14.6), 9–88 (ರಶೀದ್ ಖಾನ್, 17.1), 10–89 (ನೂರ್ ಅಹ್ಮದ್, 17.3).
ಬೌಲಿಂಗ್: ಖಲೀಲ್ ಅಹ್ಮದ್ 4–1–18–1; ಇಶಾಂತ್ ಶರ್ಮಾ 2–0–8–2; ಮುಕೇಶ್ ಕುಮಾರ್ 2.3–0–14–3; ಕುಲದೀಪ್ ಯಾದವ್ 4–0–16–0; ಟ್ರಿಸ್ಟನ್ ಸ್ಟಬ್ಸ್ 1–0–11–2; ಅಕ್ಷರ್ ಪಟೇಲ್ 4–0–17–1.

ಡೆಲ್ಲಿ ಕ್ಯಾಪಿಟಲ್ಸ್: 4ಕ್ಕೆ 92 (8.5 ಓವರುಗಳಲ್ಲಿ)
ಪೃಥ್ವಿ ಸಿ ಜಾನ್ಸನ್ ಬಿ ವಾರಿಯರ್ 7 (6ಎ, 4x1)
ಮೆಕ್‌ಗುರ್ಕ್ ಸಿ ಮನೋಹರ್ ಬಿ ಜಾನ್ಸನ್ 20 (10, 4x2, 6x2)
ಪೊರೆಲ್ ಬಿ ವಾರಿಯರ್ 15 (7ಎ, 4x2, 6x1)
ಹೋಪ್ ಸಿ ಮೋಹಿತ್ ಬಿ ರಶೀದ್ 19 (10, 4x1, 6x2)
ಪಂತ್ ಔಟಾಗದೇ 16 (11ಎ, 4x1, 6x1)
ಸುಮಿತ್ ಔಟಾಗದೇ 9 (9ಎ, 4x2)
ಇತರೆ: 6 (ಲೆಗ್‌ಬೈ 4, ವೈಡ್ 2)
ವಿಕೆಟ್ ಪತನ: 1–25 (ಜೇಕ್ ಫ್ರೇಸರ್ ಮೆಕ್‌ಗುರ್ಕ್, 1.6), 2–31 (ಪೃಥ್ವಿ ಶಾ, 2.4), 3–65 (ಅಭಿಷೇಕ್ ಪೊರೆಲ್, 4.6), 4–67 (ಶಾಯಿ ಹೋಪ್, 5.4).
ಬೌಲಿಂಗ್: ಸಂದೀಪ್ ವಾರಿಯರ್ 3–0–40–2; ಸ್ಪೆನ್ಸರ್ ಜಾನ್ಸನ್ 2–0–22–1; ರಶೀದ್ ಖಾನ್ 2–0–12–1; ನೂರ್ ಅಹ್ಮದ್ 1.5–0–14–0.
ಪಂದ್ಯದ ಆಟಗಾರ: ರಿಷಭ್ ಪಂತ್

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 6 ವಿಕೆಟ್ ಜಯ

ಮುಂಬೈ ಇಂಡಿಯನ್ಸ್‌ಗೆ ಪಂಜಾಬ್ ಕಿಂಗ್ಸ್ ಸವಾಲು

‘ಸಮ’ಬಲಶಾಲಿಗಳ ಹಣಾಹಣಿ ಇಂದು

ಮುಂಬೈ ಇಂಡಿಯನ್ಸ್ ತಂಡದ ಜಸ್‌ಪ್ರೀತ್ ಬೂಮ್ರಾ –ಪಿಟಿಐ ಚಿತ್ರ

ಬಲಾಬಲ	
31	ಪಂದ್ಯ
16	ಮುಂಬೈ ಜಯ
15	ಪಂಜಾಬ್ ಜಯ

ಮುಲ್ಲನಪುರ (ಪಿಟಿಐ): ಪಂಜಾಬ್ ಕಿಂಗ್ಸ್ ಮತ್ತು ಹಾರ್ದಿಕ್ ಪಾಂಡ್ಯ ಮುನ್ನಡೆಸುತ್ತಿರುವ ಮುಂಬೈ ಇಂಡಿಯನ್ಸ್ ತಂಡಗಳು ಗುರುವಾರ ಇಲ್ಲಿ ನಡೆಯಲಿರುವ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಅಂಕಪಟ್ಟಿಯಲ್ಲಿ ಉಭಯ ತಂಡಗಳು ಸೋಲು ಗೆಲುವಿನ ಲೆಕ್ಕಾಚಾರದಲ್ಲಿ ‘ಸಮಬಲ’ ಸಾಧಿಸಿವೆ. ತಲಾ ಆರು ಪಂದ್ಯಗಳನ್ನಾಡಿ ಎರಡರಲ್ಲಿ ಜಯಿಸಿ, ನಾಲ್ಕರಲ್ಲಿ ಸೋತಿವೆ. ನೆಟ್ ರನ್‌ರೇಟ್‌ನಲ್ಲಿ ತುಸು ಉತ್ತಮವಾಗಿರುವುದರಿಂದ ಪಂಜಾಬ್ (-0.218) 8ನೇ ಸ್ಥಾನದಲ್ಲಿದೆ. ಮುಂಬೈ (-0.234) ಅದರ ನಂತರದ ಸ್ಥಾನದಲ್ಲಿದೆ.

ಪಂಜಾಬ್ ತಂಡದಲ್ಲಿ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಮಿಂಚಬೇಕಿದೆ. ಜಾನಿ ಬೆಸ್ಟೊ ತಮ್ಮ ಅನುಭವಕ್ಕೆ ತಕ್ಕ ಲಯದಲ್ಲಿ ಇಲ್ಲ. ಅಥರ್ವ್ ತೈಡೆ, ಪ್ರಭಸಿಮ್ರನ್ ಸಿಂಗ್, ಜಿತೇಶ್ ಶರ್ಮಾ, ಲಿಯಾಮ್ ಲಿವಿಂಗ್‌ಸ್ಟೋನ್ ಅವರು ಮುಂಬೈನ ವೇಗಿ ಜಸ್‌ಪ್ರೀತ್ ಬೂಮ್ರಾ ನೇತೃತ್ವದ ಬೌಲಿಂಗ್ ಪಡೆಯನ್ನು ಎದುರಿಸಬೇಕಿದೆ.

ಗಾಯದಿಂದಾಗಿ ಧವನ್ ಏಳರಿಂದ ಹತ್ತು ದಿನ ಆಡಿರಲಿಲ್ಲ. ಈ ಪಂದ್ಯಕ್ಕೆ ಮರಳುವುದು ಇನ್ನೂ ಖಚಿತವಾಗಿಲ್ಲ. ಆದ್ದರಿಂದ ಸ್ಯಾಮ್ ಕರನ್ ಅವರೇ ಹಂಗಾಮಿ ನಾಯಕರಾಗಿ ಮುಂದುವರಿಯಬಹುದು. ಆದರೆ ಪಂಜಾಬ್ ತಂಡದಲ್ಲಿರುವ ಪ್ರತಿಭಾನ್ವಿತ ಆಟಗಾರರಾದ ಶಶಾಂಕ್ ಸಿಂಗ್ ಮತ್ತು ಆಷುತೋಷ್ ಶರ್ಮಾ ಅವರು ಮಧ್ಯಮ ಕ್ರಮಾಂಕದಲ್ಲಿ ಮಿಂಚುತ್ತಿದ್ದಾರೆ. ಅವರ ಮೇಲಷ್ಟೇ ತಂಡ ಭರವಸೆ ನೆಟ್ಟಿದೆ.

ಪಂಜಾಬ್ ತಂಡದ ಬೌಲಿಂಗ್ ಪಡೆ ಉತ್ತಮವಾಗಿದೆ. ಆರ್ಷದೀಪ್ ಸಿಂಗ್, ಕಗಿಸೊ ರಬಾಡ, ಹರ್ಷಲ್ ಪಟೇಲ್ ಹಾಗೂ ಹರಪ್ರೀತ್ ಬ್ರಾರ್ ಅವರಿರುವ ಬೌಲಿಂಗ್ ಪಡೆಯು ಮುಂಬೈನ ಸ್ಫೋಟಕ ಬ್ಯಾಟರ್‌ಗಳನ್ನು ಕಟ್ಟಿಹಾಕುವಲ್ಲಿ ಯಶಸ್ವಿಯಾಗುವರೇ ಎಂಬ ಕುತೂಹಲ ಗರಿಗೆದರಿದೆ.

ಒಂದು ಶತಕ ಬಾರಿಸಿರುವ ರೋಹಿತ್ ಶರ್ಮಾ ಅಮೋಘ ಲಯದಲ್ಲಿದ್ದಾರೆ. ಮಿಂಚಿನ ಬ್ಯಾಟರ್ ಸೂರ್ಯಕುಮಾರ್ ಯಾದವ್, ಇಶಾನ್ ಕಿಶನ್, ತಿಲಕ್ ವರ್ಮಾ, ಟಿಮ್ ಡೇವಿಡ್ ಮತ್ತು ರೊಮಾರಿಯೊ ಶೆಫರ್ಡ್ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿದರೆ ದೊಡ್ಡ ಮೊತ್ತವನ್ನು ಪೇರಿಸಬಲ್ಲರು.

ಪಂಜಾಬ್ ಕಿಂಗ್ಸ್ ತಂಡದ ಆಟಗಾರ ಆರ್ಷದೀಪ್ ಸಿಂಗ್

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

ಸುನಿಲ್ ವಿಂಡೀಸ್ ತಂಡಕ್ಕೆ ಮರಳಲಿ: ಪೊವೆಲ್ ಇಂಗಿತ

ಕೋಲ್ಕತ್ತ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ನಿವೃತ್ತಿಯನ್ನು ಹಿಂಪಡೆದು ತಮ್ಮ ತಂಡ ಸೇರಿಕೊಳ್ಳುವಂತೆ ಆಲ್‌ರೌಂಡರ್ ಸುನಿಲ್ ನಾರಾಯಣ್ ಅವರ ಮನವೊಲಿಸುವುದಾಗಿ ವೆಸ್ಟ್ ಇಂಡೀಸ್ ತಂಡದ ನಾಯಕ ರೋವ್ಮನ್ ಪೊವೆಲ್ ಹೇಳಿದ್ದಾರೆ.

ರೋವ್ಮನ್ ಪೊವೆಲ್

ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲಿ ಮಿಂಚುತ್ತಿರುವ ಸುನಿಲ್ ಮಂಗಳವಾರ ರಾಜಸ್ಥಾನ ರಾಯಲ್ಸ್ ಎದುರು ಅಮೋಘ ಶತಕ ದಾಖಲಿಸಿದ್ದರು. ಆದರೆ ಜೋಸ್ ಬಟ್ಲರ್ ಅವರ ಶತಕದ ಬಲದಿಂದ ರಾಯಲ್ಸ್ ಜಯಸಾಧಿಸಿತ್ತು. ರಾಯಲ್ಸ್ ತಂಡದಲ್ಲಿ ಪೊವೆಲ್ ಕೂಡ ಆಡುತ್ತಾರೆ.

‘ಕಳೆದ 12 ತಿಂಗಳುಗಳಿಂದ ನಾನು ಸುನಿಲ್ ಕಿವಿಯಲ್ಲಿ ಈ ಬಗ್ಗೆ ಪಿಸುಗುಟ್ಟುತ್ತಲೇ ಇದ್ದೇನೆ. ಪೊಲಾರ್ಡ್ (ಕೀರನ್), ಬ್ರಾವೊ (ಡ್ವೇನ್), ಪೂರನ್ (ನಿಕೊಲಸ್) ಅವರ ಮೂಲಕವೂ ಸುನಿಲ್ ಮನವೊಲಿಸುವ ಪ್ರಯತ್ನ ಮಾಡಿದೆ. ಸುನಿಲ್ ಎಲ್ಲರನ್ನೂ ‘ಬ್ಲಾಕ್’ ಮಾಡಿದ್ದಾರೆ’ ಎಂದು ಪೊವೆಲ್ ಸುದ್ದಿಗಾರರಿಗೆ ಹೇಳಿದರು.

35 ವರ್ಷದ ಸುನಿಲ್ ವಿಂಡೀಸ್ ತಂಡವನ್ನು 51 ಅಂತರರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ ಪ್ರತಿನಿಧಿಸಿದ್ದಾರೆ. ಟಿ20 ವಿಶ್ವಕಪ್ ಟೂರ್ನಿಗೆ ತಂಡದ ಆಯ್ಕೆಗೂ ಮುನ್ನ ಅವರನ್ನು ತಂಡಕ್ಕೆ ಸೆಳೆಯುವ ಇಂಗಿತವನ್ನೂ ಪೊವೆಲ್ ವ್ಯಕ್ತಪಡಿಸಿದರು.

‘ಕೊಹ್ಲಿ, ಧೋನಿ ಛಲದಾಟವೇ ಪ್ರೇರಣೆ’

ಕೋಲ್ಕತ್ತ (ಪಿಟಿಐ): ‘ಐಪಿಎಲ್‌ನಲ್ಲಿ ಹಲವು ಸಲ ಅನೂಹ್ಯ ಸಂಗತಿಗಳು ಘಟಿಸುವುದನ್ನು ನೋಡಿದ್ದೇನೆ. ಮಹೇಂದ್ರಸಿಂಗ್ ಧೋನಿ ಮತ್ತು ವಿರಾಟ್ ಕೊಹ್ಲಿ ಅವರು ಏಕಾಂಗಿಯಾಗಿಯೇ ದೊಡ್ಡ ಮೊತ್ತವನ್ನು ಬೆನ್ನತ್ತಿ ತಮ್ಮ ತಂಡಗಳಿಗೆ ಗೆಲುವು ಕೊಡಿಸಿರುವುದನ್ನು ನೋಡಿದ್ದೇನೆ. ಅವರ ಆ ರೀತಿಯ ಆಟವೇ ನನಗೂ ಪ್ರೇರಣೆ’ ಎಂದು ರಾಜಸ್ಥಾನ ರಾಯಲ್ಸ್ ತಂಡದ ಆಟಗಾರ ಜೋಸ್ ಬಟ್ಲರ್ ಹೇಳಿದರು.

ಮಂಗಳವಾರ ನಡೆದ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ 224 ರನ್‌ಗಳ ಗುರಿ ಬೆನ್ನತ್ತಿದ್ದ ರಾಯಲ್ಸ್ ತಂಡವು ಜಯಿಸಿತ್ತು. ಆರಂಭಿಕ ಬ್ಯಾಟರ್ ಬಟ್ಲರ್ ಕೊನೆಯ ಎಸೆತದವರೆಗೂ ಆಡಿ ತಂಡವನ್ನು ಗೆಲುವಿನ ದಡ ಸೇರಿಸಿದ್ದರು. ಶತಕ ಕೂಡ ಗಳಿಸಿದ್ದರು. ರಾಯಲ್ಸ್ ತಂಡವು 13ನೇ ಓವರ್‌ನಲ್ಲಿ 121 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡು ಸೋಲಿನತ್ತ ವಾಲಿತ್ತು. ಆದರೆ ಇಂಗ್ಲೆಂಡ್ ಆಟಗಾರ ಬಟ್ಲರ್ ಅದನ್ನು ತಪ್ಪಿಸಿ ಗೆಲುವಿನ ಕಾಣಿಕೆ ನೀಡಿದರು.

‘ನಾನು ಲಯ ಕಂಡುಕೊಳ್ಳಲು ಬಹಳಷ್ಟು ಕಷ್ಟಪಟ್ಟಿದ್ದೆ. ಹತಾಶೆಗೊಂಡಾಗ ಮತ್ತು ಸ್ವಯಂ ಪ್ರಶ್ನೆ ಕೇಳಿಕೊಳ್ಳುವ ಪರಿಸ್ಥಿತಿ ಬಂದಾಗಲೆಲ್ಲ ಎದೆಗುಂದಲಿಲ್ಲ. ಇರಲಿ. ನಿಲ್ಲಬೇಡ, ಮುಂದುವರಿಯುತ್ತಿರು ಎಂದು ನನಗೆ ನಾನೇ ಸ್ಫೂರ್ತಿ ತುಂಬಿಕೊಳ್ಳುತ್ತೇನೆ. ಅದರೊಂದಿಗೆ ಲಯವನ್ನು ಕಂಡುಕೊಳ್ಳುತ್ತೇನೆ’ ಎಂದು ಬಟ್ಲರ್ ಪಂದ್ಯದ ನಂತರದ ಸಂದರ್ಶನದಲ್ಲಿ ಹೇಳಿದರು.

ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಶತಕ ಸಿಡಿಸಿದ್ದ ರಾಜಸ್ಥಾನ ರಾಯಲ್ಸ್ ತಂಡದ ಜೋಸ್ ಬಟ್ಲರ್ ಅವರನ್ನು ಅಭಿನಂದಿಸಿದ ಕೆಕೆಆರ್ ಆಟಗಾರ ಸುನಿಲ್ ನಾರಾಯಣ್ –ಎಎಫ್‌ಪಿ ಚಿತ್ರ

ಇದೇ ಸಂದರ್ಭದಲ್ಲಿ ಮಾತನಾಡಿದ ನಾಯಕ ಸಂಜು ಸ್ಯಾಮ್ಸನ್, ‘ಬಟ್ಲರ್ ಅತ್ಯಂತ ವಿಶೇಷ ಆಟಗಾರ. ಅವರು ಒಮ್ಮೆ ಲಯಕ್ಕೆ ಕುದುರಿಕೊಂಡರೆ ಮುಗೀತು. ಯಾವುದೇ ಮೊತ್ತದ ಗುರಿ ತಲುಪುವುದು ಅಸಾಧ್ಯವೇನಲ್ಲ’ ಎಂದರು.

ಶ್ರೇಯಸ್‌ಗೆ ₹12 ಲಕ್ಷ ದಂಡ

ಕೋಲ್ಕತ್ತ (ಪಿಟಿಐ): ರಾಜಸ್ಥಾನ ರಾಯಲ್ಸ್ ವಿರುದ್ಧ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ನಿಧಾನಗತಿಯ ಓವರ್ ದರಕ್ಕಾಗಿ ಕೋಲ್ಕತ್ತ ನೈಟ್ ರೈಡರ್ಸ್ ನಾಯಕ ಶ್ರೇಯಸ್ ಅಯ್ಯರ್ ಅವರಿಗೆ ₹12 ಲಕ್ಷ ದಂಡ ವಿಧಿಸಲಾಗಿದೆ. ಕೊನೆಯ ಎಸೆತದ ವರೆಗೆ ಬೆಳೆದ ಆ ಪಂದ್ಯವನ್ನು ಕೆಕೆಆರ್ ತಂಡ ಎರಡು ವಿಕೆಟ್‌ಗಳಿಂದ ಸೋತಿತ್ತು. ಬಟ್ಲರ್ 60 ಎಸೆತಗಳಲ್ಲಿ 107 ರನ್ ಬಾರಿಸಿ ಹಾಲಿ ಲೀಗ್‌ನ 2ನೇ ಶತಕ ಬಾರಿಸಿದ್ದರು.

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	7	6	1	12	0.677
ಕೋಲ್ಕತ್ತ ನೈಟ್ ರೈಡರ್ಸ್	6	4	2	8	1.399
ಚೆನ್ನೈ ಸೂಪರ್ ಕಿಂಗ್ಸ್	6	4	2	8	0.726
ಸನ್‌ರೈಸರ್ಸ್ ಹೈದರಾಬಾದ್	6	4	2	8	0.502
ಲಖನೌ ಸೂಪರ್ ಜೈಂಟ್ಸ್	6	3	3	6	0.038
ಡೆಲ್ಲಿ ಕ್ಯಾಪಿಟಲ್ಸ್	6	3	4	6	-0.074
ಗುಜರಾತ್ ಟೈಟನ್ಸ್	7	3	4	6	-1.303
ಪಂಜಾಬ್ ಕಿಂಗ್ಸ್	6	2	4	4	-0.218
ಮುಂಬೈ ಇಂಡಿಯನ್ಸ್	6	2	4	4	-0.234
ರಾಯಲ್ ಚಾಲೆಂಜರ್ಸ್ ಬೆಂಗಳೂರು	7	1	6	2	-1.185

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (361 ರನ್)

ಪರ್ಪಲ್ ಕ್ಯಾಪ್: ಯಜುವೇಂದ್ರ ಚಾಹಲ್, ರಾಜಸ್ಥಾನ ರಾಯಲ್ಸ್ (12 ವಿಕೆಟ್)

ದುಬೈ ವಿಮಾನ ನಿಲ್ದಾಣದಲ್ಲಿ ಸಿಲುಕಿದ ಪ್ರಯಾಣಿಕರು • ರಸ್ತೆಗಳಲ್ಲೇ ಮುಳುಗಿದ ವಾಹನಗಳು

ಯುಎಇಯಲ್ಲಿ ದಾಖಲೆಯ ಮಳೆ

ದುಬೈ (ಎಪಿ): ಮರುಭೂಮಿ ಪ್ರದೇಶವಾದ ಅರಬ್ ಸಂಯುಕ್ತ ಸಂಸ್ಥಾನದಲ್ಲಿ (ಯುಎಇ) ಮಂಗಳವಾರ ದಾಖಲೆಯ ಮಳೆಯಾಗಿದ್ದು, ವಿಶ್ವದ ಪ್ರಮುಖ ವಿಮಾನನಿಲ್ದಾಣಗಳಲ್ಲಿ ಒಂದಾದ ದುಬೈ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಪ್ರವಾಹ ಪರಿಸ್ಥಿತಿ ಏರ್ಪಟ್ಟಿದೆ ಮತ್ತು ವಿಮಾನಗಳ ಕಾರ್ಯಾಚರಣೆಗೆ ತೊಡಕಾಗಿದೆ. ವಾಹನವೊಂದು ಕೊಚ್ಚಿಹೋಗಿ, 70 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

‘1949ರಿಂದ ಲಭ್ಯವಿರುವ ಹವಾಮಾನ ದತ್ತಾಂಶದ ಪ್ರಕಾರ, ಇದು ಐತಿಹಾಸಿಕ ಹವಾಮಾನ ಸಂದರ್ಭವಾಗಿದೆ’ ಎಂದು ಅಲ್ಲಿಯ ಸರ್ಕಾರಿ ಸುದ್ದಿಸಂಸ್ಥೆ ಡಬ್ಲ್ಯುಎಎಂ ತಿಳಿಸಿದೆ.

ಸರ್ಕಾರವು ಮೋಡ ಬಿತ್ತನೆ ಮಾಡಿದ್ದೇ ಭಾರಿ ಪ್ರಮಾಣದಲ್ಲಿ ಮಳೆ ಸುರಿಯಲು ಕಾರಣ ಎಂಬ ಆರೋಪ ಕೇಳಿಬಂದಿತ್ತು. ಆದರೆ, ಇಲ್ಲಿನ ರಾಷ್ಟ್ರೀಯ ಹವಾಮಾನ ಕೇಂದ್ರದ ಅಹಮದ್ ಹಬೀಬ್ ಎನ್ನುವವರು ಮೋಡ ಬಿತ್ತನೆ ಮಾಡಿಲ್ಲ ಎಂದು ಕೆಲವು ಮಾಧ್ಯಮಕ್ಕೆ ಸ್ಪಷ್ಟನೆ ನೀಡಿದ್ದಾರೆ. ಯುಎಇ ಅಲ್ಲದೆ ಬಹರೈನ್, ಕತಾರ್, ಸೌದಿ ಅರೇಬಿಯಾ ದೇಶಗಳಲ್ಲೂ ಮಳೆ ಸುರಿದಿದೆ.

ನೀರಿಗಾಗಿ ಯುಎಇ ನಿರ್ಲವಣೀಕರಣ ಘಟಕಗಳನ್ನೇ ಅವಲಂಬಿಸಿದೆ. ಹೀಗಾಗಿ, ಈಗಾಗಲೇ ಕಡಿಮೆಯಾಗುತ್ತಿರುವ ಮತ್ತು ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅಲ್ಲಿಯ ಆಡಳಿತವು ಮೋಡ ಬಿತ್ತನೆ ನಡೆಸಿತ್ತು ಎನ್ನಲಾಗಿತ್ತು.

ಮುಖ್ಯಾಂಶಗಳು
- ಯುಎಇ ಇತಿಹಾಸದಲ್ಲೇ ಭಾರಿ ಮಳೆ
- ಮೋಡ ಬಿತ್ತನೆ ಮಾಡಿಲ್ಲ: ಹವಾಮಾನ ಕೇಂದ್ರ
- ಹಲವಾರು ಮನೆಗಳಿಗೆ ನುಗ್ಗಿದ ನೀರು, ಸಂಕಷ್ಟದಲ್ಲಿ ಜನರು

ಸೋಮವಾರ ರಾತ್ರಿಯಿಂದ ಮಳೆ ಸುರಿಯಲಾರಂಭಿಸಿದೆ. ದುಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಂಗ್ರಹಿಸಿರುವ ದತ್ತಾಂಶದ ಪ್ರಕಾರ ಮಂಗಳವಾರದ ಅಂತ್ಯಕ್ಕೆ ಸುಮಾರು 142 ಮಿಲಿಮೀಟರ್ (5.59 ಇಂಚು) ಮಳೆಯಾಗಿದೆ. ದುಬೈ ವಿಮಾನ ನಿಲ್ದಾಣದಲ್ಲಿ ವಾರ್ಷಿಕ ಸರಾಸರಿ 94.7 ಮಿಲಿಮೀಟರ್ (3.73 ಇಂಚು) ಮಳೆಯಾಗುತ್ತದೆ.

ಪ್ರಯಾಣಿಕರ ಪರದಾಟ: ದುಬೈ ವಿಮಾನ ನಿಲ್ದಾಣದಿಂದ ಮಂಗಳವಾರ ರಾತ್ರಿ ಬಹುತೇಕ ವಿಮಾನಗಳ ಹಾರಾಟ ಸ್ಥಗಿತಗೊಂಡಿತು. ರನ್‌ವೇಯಲ್ಲಿ ನೀರು ತುಂಬಿದ್ದರಿಂದ ಟರ್ಮಿನಲ್ ತಲುಪಲೂ ಪ್ರಯಾಣಿಕರು ಪ್ರಯಾಸ ಪಟ್ಟರು. ಟ್ಯಾಕ್ಸಿಗಳ ಕಾರ್ಯಾಚರಣೆ ಕೂಡ ಸ್ಥಗಿತವಾಗಿದ್ದರಿಂದ ಪ್ರಯಾಣಿಕರು ಮಂಗಳವಾರ ರಾತ್ರಿ ಟರ್ಮಿನಲ್‌ನಲ್ಲಿಯೇ ಉಳಿಯಬೇಕಾಯಿತು.

ಜಲಾವೃತವಾಗಿರುವ ದುಬೈ ರಸ್ತೆಗಳು –ಎಎಫ್‌ಪಿ ಚಿತ್ರ

ಅಡಚಣೆ ಕುರಿತು ಬುಧವಾರ ಬೆಳಿಗ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದ ವಿಮಾನ ನಿಲ್ದಾಣ ಪ್ರಾಧಿಕಾರ, ‘ಪ್ರವಾಹ ಪರಿಸ್ಥಿತಿಯಿಂದಾಗಿ ಸೀಮಿತ ಸಾರಿಗೆ ಸೌಕರ್ಯ ಒದಗಿಸಲಾಗುತ್ತಿದೆ. ಪರಿಸ್ಥಿತಿ ಸುಧಾರಿಸಲು ಸ್ವಲ್ಪ ಸಮಯ ಬೇಕಾಗುತ್ತದೆ’ ಎಂದು ಹೇಳಿತ್ತು.

ವಿಮಾನ ನಿಲ್ದಾಣದ ಸಿಇಒ ಪಾಲ್ ಗ್ರಿಫಿತ್ಸ್ ಅವರು ಅಲ್ಲಿಯ ಸರ್ಕಾರಿ ರೇಡಿಯೊ ವಾಹಿನಿ ಮೂಲಕ ಸಂದೇಶ ರವಾನಿಸಿದ್ದಾರೆ. ‘ಪ್ರವಾಹದಿಂದಾಗಿ ಹಲವಾರು ವಿಮಾನಗಳನ್ನು ಅಲ್–ಮಕ್ತುಮ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆ ತಿರುಗಿಸಲಾಗಿದೆ. ಈ ರೀತಿಯ ಹವಾಮಾನ ಪರಿಸ್ಥಿತಿಯನ್ನು ನನ್ನ ಜೀವಮಾನದಲ್ಲಿ ನೋಡಿಲ್ಲ. ಇದು ಅತ್ಯಂತ ಸವಾಲಿನ ಸಮಯವಾಗಿದೆ. ಪ್ರಯಾಣಿಕರ ಸುರಕ್ಷತೆ ಮತ್ತು ಹಿತ ಕಾಪಾಡುವ ದೃಷ್ಟಿಯಿಂದ ನಾವೆಲ್ಲರೂ ಶಕ್ತಿ ಮೀರಿ ಕೆಲಸ ಮಾಡುತ್ತಿದ್ದೇವೆ’ ಎಂದಿದ್ದಾರೆ.

ಜನಜೀವನ ಅಸ್ತವ್ಯಸ್ತ

ಯುಎಇ ಆದ್ಯಂತ ಶಾಲೆಗಳನ್ನು ಮುಚ್ಚಲಾಗಿದೆ. ಸರ್ಕಾರಿ ನೌಕರರು ತಾವಿರುವ ಸ್ಥಳಗಳಿಂದಲೇ ಕೆಲಸ ಮಾಡುತ್ತಿದ್ದಾರೆ. ಇತರ ವಲಯಗಳ ಸಿಬ್ಬಂದಿ ಮನೆಯಲ್ಲೇ ಇದ್ದಾರೆ. ಮನೆಯಿಂದ ಹೊರಹೋಗಿದ್ದ ಹಲವರ ವಾಹನಗಳು ಜಲಾವೃತ ರಸ್ತೆಗಳಲ್ಲೇ ಸಿಲುಕಿವೆ.

ಮನೆಗಳು ಮತ್ತು ಬೀದಿಗಳಲ್ಲಿ ನಿಂತ ನೀರನ್ನು ಟ್ಯಾಂಕರ್, ಟ್ರಕ್‌ಗಳ ಸಹಾಯದಿಂದ ತೆರವು ಮಾಡಲಾಗುತ್ತಿದೆ. ಸಂಕಷ್ಟದಲ್ಲಿ ಸಿಲುಕಿದ್ದ ಹಲವು ನಿವಾಸಿಗಳನ್ನು ಸುರಕ್ಷಿತ ಸ್ಥಳಗಳಿಗೆ ಕಳುಹಿಸಲಾಗಿದೆ.

ಮರುಭೂಮಿ ಪ್ರದೇಶವಾದ ಯುಎಇಯಲ್ಲಿ ಸಾಧಾರಣ ಮಳೆಯಾಗುವ ಕಾರಣ ನೀರು ಹರಿದುಹೋಗಲು ಸಮರ್ಪಕ ವ್ಯವಸ್ಥೆಯನ್ನು ಮಾಡಲಾಗಿಲ್ಲ. ಇದರಿಂದಾಗಿ ಸದಸ್ಯದ ಪರಿಸ್ಥಿತಿ ನಿರ್ವಹಣೆ ಅತ್ಯಂತ ಕಷ್ಟಕರವಾಗಿ ಪರಿಣಮಿಸಿದೆ ಎನ್ನಲಾಗಿದೆ.

ಸಂಕ್ಷಿಪ್ತ ಸುದ್ದಿ

ಇರಾನ್ ದಾಳಿಗೆ ಪ್ರತ್ಯುತ್ತರ: ಇಸ್ರೇಲ್

ಜೆರುಸಲೆಂ (ಎಪಿ): ಇರಾನ್‌ನ ಕ್ಷಿಪಣಿ ಮತ್ತು ಡ್ರೋನ್ ದಾಳಿಗೆ ಪ್ರತ್ಯುತ್ತರ ನೀಡಲು ಇಸ್ರೇಲ್ ನಿರ್ಧರಿಸಿದೆ ಎಂದು ಬ್ರಿಟಿಷ್ ವಿದೇಶಾಂಗ ಕಾರ್ಯದರ್ಶಿ ಡೇವಿಡ್ ಕ್ಯಾಮರೂನ್ ಬುಧವಾರ ತಿಳಿಸಿದ್ದಾರೆ.

ಚಿಕ್ಕ ದಾಳಿ ನಡೆದರೂ ಇಸ್ರೇಲ್ ದೊಡ್ಡಮಟ್ಟದ ಬೆಲೆ ತೆರಬೇಕಾಗುತ್ತದೆ ಎಂದು ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ಎಚ್ಚರಿಕೆ ನೀಡಿದ್ದಾರೆ.

ಇರಾನ್‌ನ ಅನಿರೀಕ್ಷಿತ ದಾಳಿಗೆ ಯಾವಾಗ ಅಥವಾ ಹೇಗೆ ಎಂದು ತಿಳಿಸದೆಯೇ ಪ್ರತ್ಯುತ್ತರ ನೀಡಲು ಇಸ್ರೇಲ್ ಪ್ರತಿಜ್ಞೆ ಮಾಡಿದೆ. ಇರಾನ್ ದಾಳಿಯನ್ನು ಹಿಮ್ಮೆಟ್ಟಿಸಲು ನೆರವಾದ ಅಮೆರಿಕ, ಬ್ರಿಟನ್ ಸೇರಿದಂತೆ ಇಸ್ರೇಲ್‌ನ ಮಿತ್ರರಾಷ್ಟ್ರಗಳು ಯುದ್ಧ ಪರಿಸ್ಥಿತಿ ಪ್ರಕೋಪಕ್ಕೆ ಹೋಗದಂತೆ ತಡೆಯಲು ಯತ್ನಿಸುತ್ತಿವೆ.

ಉಕ್ರೇನ್ ಮೇಲೆ ಕ್ಷಿಪಣಿ ದಾಳಿ; 14 ಸಾವು

ಚೆರ್ನಿಹಾಯಿವ್ (ಎಎಫ್‌ಪಿ): ಉತ್ತರ ಉಕ್ರೇನ್ ನಗರ ಚೆರ್ನಿಹಾಯಿವ್ ಮೇಲೆ ರಷ್ಯಾ ಬುಧವಾರ ಕ್ಷಿಪಣಿ ದಾಳಿ ನಡೆಸಿದೆ. 14 ಜನರು ಮೃತಪಟ್ಟು, 61 ಜನರು ಜನರು ಗಾಯಗೊಂಡಿದ್ದಾರೆ.

ಅನಾರೋಗ್ಯದ ಕಾರಣಕ್ಕಾಗಿ ರಜೆ ಪಡೆದಿದ್ದ ಪೊಲೀಸ್ ಸಿಬ್ಬಂದಿ ಕೂಡ ಮೃತರಲ್ಲಿ ಒಬ್ಬರು.

ಪಾಕಿಸ್ತಾನ: ಭಾರಿ ಮಳೆಗೆ 63 ಸಾವು

ಪೆಶಾವರ (ಎಪಿ): ಪಾಕಿಸ್ತಾನದಲ್ಲಿ ತೀವ್ರವಾದ ಮಳೆಯಿಂದಾಗಿ ಕಳೆದ ನಾಲ್ಕು ದಿನಗಳಲ್ಲಿ 63 ಜನರು ಸಾವನ್ನಪ್ಪಿದ್ದಾರೆ. ಮಳೆ ಮತ್ತು ಮಿಂಚಿನಿಂದ ಸಂಭವಿಸಿದ ಅವಘಡಗಳಲ್ಲಿ ಮಂಗಳವಾರ 14 ಜನರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಕಿಸ್ತಾನದ ವಾಯವ್ಯ ದಿಕ್ಕಿನಲ್ಲಿರುವ ಖೈಬರ್ ಪಖ್ತೂಂಖ್ವಾ ಪ್ರದೇಶದಲ್ಲಿ ಹೆಚ್ಚಿನ ಸಾವುಗಳು ವರದಿಯಾಗಿವೆ. ಕಟ್ಟಡಗಳು ಕುಸಿದು, 15 ಮಕ್ಕಳು ಮತ್ತು ಐವರು ಮಹಿಳೆಯರು ಸೇರಿದಂತೆ 32 ಜನರು ಸಾವನ್ನಪ್ಪಿದ್ದಾರೆ. ಹಲವಾರು ಜನರು ಗಾಯಗೊಂಡಿದ್ದು, 11,370 ಮನೆಗಳಿಗೆ ಹಾನಿಯಾಗಿದೆ ಎಂದು ವಿಪತ್ತು ನಿರ್ವಹಣಾ ಪ್ರಾಧಿಕಾರದ ವಕ್ತಾರ ಖುರ್ಷೀದ್ ಅನ್ವರ್ ತಿಳಿಸಿದ್ದಾರೆ.

ಟಿ20 ಕ್ರಿಕೆಟ್ ವಿಶ್ವಕಪ್ • ಭಾರತ ತಂಡದ ಆಯ್ಕೆಯ ರೂಪುರೇಷೆ • ಗಿಲ್– ಜೈಸ್ವಾಲ್ ಪೈಪೋಟಿ

ಪ್ರಯೋಗಕ್ಕಿಂತ ಸಿದ್ಧಸೂತ್ರಕ್ಕೆ ಒತ್ತು

ನವದೆಹಲಿ (ಪಿಟಿಐ): ವೆಸ್ಟ್ ಇಂಡೀಸ್ ಮತ್ತು ಅಮೆರಿಕ ಜಂಟಿಯಾಗಿ ಆಯೋಜಿಸಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡವನ್ನು ಮೇ 1ರೊಳಗೆ ಪ್ರಕಟಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಆಯ್ಕೆ ಸಮಿತಿಯು ಸಿದ್ಧವಾಗಿದೆ.

ಈ ಬಾರಿಯ ತಂಡದ ಆಯ್ಕೆಯಲ್ಲಿ ಕೆಲವು ಅನುಭವಿ ಆಟಗಾರರು ಅವಕಾಶ ಕಳೆದುಕೊಂಡರೆ ಅಚ್ಚರಿಯಿಲ್ಲ. ಹಾಗೆಂದು ತೀರಾ ಹೊಸ ಆಟಗಾರರಿಗೂ ಅವಕಾಶ ನಿರೀಕ್ಷಿಸುವಂತಿಲ್ಲ. ಆದರೆ ಫಿಟ್‌ನೆಸ್ ಮತ್ತು ಆಟ ಎರಡರಲ್ಲೂ ಉತ್ತಮವಾಗಿರುವ ಆಟಗಾರರಿಗೆ ಮಣೆ ಹಾಕುವತ್ತ ಚಿತ್ತ ನೆಟ್ಟಿದೆ. ಅಜಿತ್ ಆಗರಕರ್ ನೇತೃತ್ವದ ಆಯ್ಕೆ ಸಮಿತಿಯು ಐಪಿಎಲ್‌ನಲ್ಲಿ ಆಡುತ್ತಿರುವ ಕೆಲವು ಆಟಗಾರರ ಮೇಲೆ ನಿಗಾ ಇರಿಸಿದೆ ಎನ್ನಲಾಗಿದೆ.

ಶುಭಮನ್ ಗಿಲ್ ಮತ್ತು ವಿರಾಟ್ ಕೊಹ್ಲಿ

'ಯಾವುದೇ ಹೊಸ ಪ್ರಯೋಗಗಳನ್ನು ನಡೆಸುವ ಸಾಧ್ಯತೆಗಳಿಲ್ಲ. ಅಂತರರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ ಭಾರತ ತಂಡದಲ್ಲಿ ಈಗಾಗಲೇ ಆಡಿರುವ ಮತ್ತು ಐಪಿಎಲ್‌ನಲ್ಲಿ ನಿರಂತರವಾಗಿ ಉತ್ತಮವಾಗಿ ಆಡುತ್ತಿರುವವರಿಗೆ ಅವಕಾಶ ಸಿಗುವ ಸಾಧ್ಯತೆ ಹೆಚ್ಚಿದೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

15 ಆಟಗಾರರ ತಂಡವನ್ನು ಮೇ 1ರೊಳಗೆ ಪ್ರಕಟಿಸಲು ಐಸಿಸಿ (ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್) ಸೂಚಿಸಿದೆ.

ಆರಂಭಿಕ ಬ್ಯಾಟರ್‌ಗಳಾದ ಶುಭಮನ್ ಗಿಲ್ ಅಥವಾ ಯಶಸ್ವಿ ಜೈಸ್ವಾಲ್ ಅವರಲ್ಲಿ ಒಬ್ಬರು ಮಾತ್ರ ಸ್ಥಾನ ಪಡೆಯುವ ಸಾಧ್ಯತೆ ಇದೆ. ಒಂದೊಮ್ಮೆ ಅವರಿಬ್ಬರೂ ತಂಡದಲ್ಲಿ ಸ್ಥಾನ ಗಳಿಸಿದರೆ, ಫಿನಿಷರ್‌ಗಳಾದ ಶಿವಂ ದುಬೆ ಮತ್ತು ರಿಂಕು ಸಿಂಗ್ ಅವರಲ್ಲಿ ಒಬ್ಬರಷ್ಟೇ ಸ್ಥಾನ ನಿರೀಕ್ಷಿಸಬಹುದು. ಚೆನ್ನೈ ಸೂಪರ್ ಕಿಂಗ್ಸ್ ತಂಡದ ದುಬೆ ಆಲ್‌ರೌಂಡ್ ಆಟವಾಡುವ ಮೂಲಕ ಗಮನ ಸೆಳೆಯುತ್ತಿದ್ದಾರೆ.

ಸಂಭವನೀಯ 20 ಆಟಗಾರರು

ಬ್ಯಾಟರ್‌ಗಳು: ರೋಹಿತ್ ಶರ್ಮಾ, ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ರಿಂಕು ಸಿಂಗ್.
ಆಲ್‌ರೌಂಡರ್ಸ್: ರವೀಂದ್ರ ಜಡೇಜ, ಶಿವಂ ದುಬೆ, ಅಕ್ಷರ್ ಪಟೇಲ್, ಹಾರ್ದಿಕ್ ಪಾಂಡ್ಯ.
ಸ್ಪಿನ್ನರ್ಸ್: ಕುಲದೀಪ್ ಯಾದವ್, ಯಜುವೇಂದ್ರ ಚಾಹಲ್, ರವಿ ಬಿಷ್ಣೋಯಿ
ವಿಕೆಟ್‌ಕೀಪರ್ಸ್: ರಿಷಭ್ ಪಂತ್, ಕೆ.ಎಲ್. ರಾಹುಲ್, ಸಂಜು ಸ್ಯಾಮ್ಸನ್
ವೇಗಿಗಳು: ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಅರ್ಷದೀಪ್ ಸಿಂಗ್, ಆವೇಶ್ ಖಾನ್

ವಿಕೆಟ್‌ಕೀಪಿಂಗ್‌ನಲ್ಲಿ ರಿಷಭ್ ಪಂತ್ ಮರಳುವುದು ಬಹುತೇಕ ಖಚಿತವಾಗಿದೆ. ಆದ್ದರಿಂದ ಎರಡನೇ ವಿಕೆಟ್‌ಕೀಪರ್ ಆಗಿ ಆಡಲು ಜಿತೇಶ್ ಶರ್ಮಾ, ಕನ್ನಡಿಗ ಕೆ.ಎಲ್. ರಾಹುಲ್ ಮತ್ತು ಇಶಾನ್ ಕಿಶನ್ ಅವರಲ್ಲಿ ಪೈಪೋಟಿ ನಡೆಯುವ ಸಾಧ್ಯತೆ ಹೆಚ್ಚಿದೆ.

ಈ ಐಪಿಎಲ್‌ನಲ್ಲಿ ರಾಹುಲ್ ಮತ್ತು ಇಶಾನ್ ಅವರು ಆರಂಭಿಕ ಬ್ಯಾಟರ್‌ಗಳಾಗಿ ಆಡುತ್ತಿದ್ದಾರೆ. ಆದರೆ ಮಧ್ಯಮ ಕ್ರಮಾಂಕದಲ್ಲಿ ಅವರನ್ನು ಆಡಿಸುವ ಪ್ರಯತ್ನ ಇದುವರೆಗೆ ಮಾಡಿಲ್ಲ. ಈ ಸ್ಥಾನಕ್ಕೆ ಸಂಜು ಸ್ಯಾಮ್ಸನ್ ಕೂಡ ಪೈಪೋಟಿಯಲ್ಲಿದ್ದಾರೆ.

ಬೌಲಿಂಗ್‌ನಲ್ಲಿ ಹಾರ್ದಿಕ್ ಪಾಂಡ್ಯ ಅವರು ನಿಖರತೆ ಮತ್ತು ಫಿಟ್‌ನೆಸ್‌ಗೆ ಮರಳದಿದ್ದರೆ ಸ್ಥಾನ ಪಡೆಯುವುದು ಕಷ್ಟವಾಗಲಿದೆ. ಆದರೆ ವಿರಾಟ್ ಕೊಹ್ಲಿ, ಸೂರ್ಯ, ರೋಹಿತ್, ಜಡೇಜ, ಸಿರಾಜ್, ಬೂಮ್ರಾ, ಅರ್ಷದೀಪ್ ಮತ್ತು ಕುಲದೀಪ್ ಸ್ಥಾನ ಪಡೆಯುವುದು ಖಚಿತವಾಗಲಿದೆ.

ಸ್ಪಿನ್ನರ್ ಯಜುವೇಂದ್ರ ಚಾಹಲ್ ರಾಷ್ಟ್ರೀಯ ತಂಡಕ್ಕೆ ಮರಳುವ ಸಾಧ್ಯತೆಗಳು ಹೆಚ್ಚಿವೆ. ಪ್ರತಿಭಾನ್ವಿತರಾದ ರಿಯಾನ್ ಪರಾಗ್, ಮಯಂಕ್ ಯಾದವ್, ಅಭಿಷೇಕ್ ಶರ್ಮಾ ಮತ್ತು ಹರ್ಷಿತ್ ರಾಣಾ ಅವರತ್ತಲೂ ಆಯ್ಕೆ ಸಮಿತಿಯ ಚಿತ್ತ ಇದೆ.

ಚೆಸ್: ಅಗ್ರಸ್ಥಾನಕ್ಕೆ ಹೆಚ್ಚಿದ ಪೈಪೋಟಿ

ಟೊರಾಂಟೊ (ಪಿಟಿಐ): ಅಗ್ರಸ್ಥಾನ ಹಂಚಿಕೊಂಡಿರುವ ಭಾರತದ ಡಿ.ಗುಕೇಶ್ ಅವರು ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ 11ನೇ ಸುತ್ತಿನಲ್ಲಿ ಅಗ್ರ ಶ್ರೆಯಾಂಕದ ಫ್ಯಾಬಿಯಾನೊ ಕರುವಾನಾ ಅವರನ್ನು ಎದುರಿಸಲಿದ್ದು, ತಮ್ಮ ಸ್ಥಾನವನ್ನು ಇನ್ನಷ್ಟು ಭದ್ರಪಡಿಸಿಕೊಳ್ಳುವ ನಿಟ್ಟಿನಲ್ಲಿ ಈ ಪಂದ್ಯ ಅವರಿಗೆ ಮಹತ್ವದ್ದಾಗಿದೆ.

ಎಂಟು ಆಟಗಾರರ, 14 ಸುತ್ತುಗಳ ಕ್ಯಾಂಡಿಡೇಟ್ಸ್ ಟೂರ್ನಿ ಈಗ ಅಂತಿಮ ಹಂತದತ್ತ ಸಾಗಿದೆ. ಭಾರತದ ಇನ್ನೊಬ್ಬ ಆಟಗಾರ, 18 ವರ್ಷದ ಪ್ರಜ್ಞಾನಂದ ಇನ್ನೊಂದು ಪಂದ್ಯದಲ್ಲಿ ಅಮೆರಿಕದ ಹಿಕಾರು ನಕಾಮುರಾ (ಅಮೆರಿಕ) ಅವರನ್ನು ಎದುರಿಸಲಿದ್ದಾರೆ.

ರಷ್ಯಾದ ಇಯಾನ್ ನೆಪೊಮ್ ನಿಯಾಚಿ, 17 ವರ್ಷದ ಗುಕೇಶ್ ಅವರ ಜೊತೆ ಆರು ಪಾಯಿಂಟ್‌ಗಳೊಡನೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಮೂವರು ಆಟಗಾರರು– ಅಮೆರಿಕದ ಫ್ಯಾಬಿಯಾನೊ ಕರುವಾನಾ, ಹಿಕಾರು ನಕಾಮುರಾ ಮತ್ತು ಭಾರತದ ಪ್ರಜ್ಞಾನಂದ ತಲಾ ಐದೂವರೆ ಪಾಯಿಂಟ್ಸ್ ಸಂಗ್ರಹಿಸಿ ಎರಡನೇ (ಸದ್ಯದ ಟೈಬ್ರೇಕ್ ಆಧಾರದಲ್ಲಿ ಕ್ರಮವಾಗಿ ಮೂರು, ನಾಲ್ಕು ಮತ್ತು ಐದನೇ ಸ್ಥಾನ) ಸ್ಥಾನ ಹಂಚಿಕೊಂಡಿದ್ದಾರೆ.

ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್

ಭಾರತದ ಮೂರನೇ ಆಟಗಾರ ವಿದಿತ್ ಗುಜರಾತಿ (5) ಅವರೂ ತೀರಾ ಹಿಂದೆಯೇನೂ ಇಲ್ಲ. ಕೊನೆಯ ಕೆಲವು ಪಂದ್ಯಗಳಲ್ಲಿ ಅಮೋಘ ಪ್ರದರ್ಶನ ನೀಡಿದರೆ ಅವರಿಗೆ ಅಗ್ರಸ್ಥಾನಕ್ಕೇರುವ ಅವಕಾಶ ಇದೆ. ಅವರಿಗೆ ಮುಂದಿನ ಎದುರಾಳಿ ನೆಪೊಮ್‌ನಿಯಾಚಿ.

ನೆಪೊಮ್‌ನಿಯಾಚಿ ಮಾತ್ರ ಇದು ವರೆಗೆ ಅಜೇಯರಾಗಿದ್ದಾರೆ. ಉಕ್ರೇನ್ ವಿರುದ್ಧ ರಷ್ಯಾ ನಡೆಸಿದ ದಾಳಿ ಖಂಡಿಸಿ ಆ ದೇಶದ ಮೇಲೆ ನಿರ್ಬಂಧ ಹೇರಿರುವ ಕಾರಣ ಅವರು ಇಲ್ಲಿ ಫಿಡೆ ಧ್ವಜದಡಿ ಆಡುತ್ತಿದ್ದಾರೆ. ಎರಡು ಸಲ ಕ್ಯಾಂಡಿಡೇಟ್ಸ್ ಟೂರ್ನಿ ಗೆದ್ದಿರುವ ಅವರು ಕಳೆದ ವರ್ಷ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಚೀನಾದ ಡಿಂಗ್ ಲಿರೆನ್ ಅವರಿಗೆ ಮಣಿದಿದ್ದರು.

ಇಟಲಿಯಲ್ಲಿ ಬೆಳೆದು ಅಮೆರಿಕದಲ್ಲಿ ನೆಲೆಸಿರುವ ಕರುವಾನಾ ಸತತ ಆರನೇ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುತ್ತಿದ್ದಾರೆ. ಆದರೆ ಒಮ್ಮೆ ಮಾತ್ರ ಟೂರ್ನಿ ಗೆದ್ದಿದ್ದಾರೆ. ಪ್ರಜ್ಞಾನಂದ ಅವರು ಕಳೆದ ವಿಶ್ವಕಪ್ ನಲ್ಲಿ ನಕಾಮುರಾ ವಿರುದ್ಧ ನೆಪೊಮ್‌ನಿಯಾಚಿ ಅವರನ್ನು ಎದುರಿಸಬೇಕಾಗುತ್ತದೆ. ಓಪನ್ ವಿಭಾಗದಲ್ಲಿ ಗೆಲ್ಲುವ ಆಟಗಾರ ಸುಮಾರು ₹43 ಲಕ್ಷ ಜೇಬಿಗಿಳಿಸಲಿದ್ದಾರೆ.

ಮಹಿಳಾ ವಿಭಾಗದಲ್ಲಿ ಚೀನಾದ ಆಟಗಾರ್ತಿಯರಾದ ಝೋಂಗ್ವಿ ತಾನ್ ಮತ್ತು ಟಿಂಗ್ಜಿ ಲೀ ಅವರು ಉತ್ತ ಸಾಧನೆ ತೋರಿದ್ದಾರೆ. ಇವರಿಬ್ಬರು ತಲಾ 6.5 ಪಾಯಿಂಟ್ಸ್ ಸಂಗ್ರಹಿಸಿ ಮುನ್ನಡೆ ಹಂಚಿಕೊಂಡಿದ್ದಾರೆ.

ಈ ವಿಭಾಗದಲ್ಲಿ ಭಾರತದ ಆಟಗಾರ್ತಿಯರಿಗೆ ಪ್ರಶಸ್ತಿ ಸಾಧ್ಯತೆ ಬಹುತೇಕ ಕ್ಷೀಣವಾಗಿದೆ. ಹಂಪಿ (4.5) ಅವರು ಸದ್ಯ ಐದನೇ ಸ್ಥಾನದಲ್ಲಿದ್ದಾರೆ. ಪವಾಡಸದೃಶ ಸಾಧನೆಯಿಂದಷ್ಟೇ ಅವರು ಅಗ್ರಸ್ಥಾನಕ್ಕೇರಬಹುದು. ಇನ್ನೊಂದೆಡೆ ವೈಶಾಲಿ ರಮೇಶಬಾಬು (3.5) ಅವರು 10ನೇ ಸುತ್ತಿನಲ್ಲಿ ನುರ್ಗ್ಯುಲ್ ಸಲಿಮೋವಾ ಅವರನ್ನು ಸೋಲಿಸಿದ್ದರೂ, ಎಂಟು ಆಟಗಾರ್ತಿಯರ ಪಟ್ಟಿಯಲ್ಲಿ ಕಡೆಯ ಸ್ಥಾನದಲ್ಲೇ ಇದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್: ಕಟ್ಟಡದಿಂದ ವಲಸಿಗರ ತೆರವು

ವಿಟ್ರಿ ಸುರ್ ಸೀನ್ (ಫ್ರಾನ್ಸ್), (ಎಎಫ್‌ಪಿ): ಒಲಿಂಪಿಕ್ಸ್‌ಗೆ ನೂರು ದಿನಗಳಷ್ಟೇ ಉಳಿದಿದ್ದು, ಫ್ರೆಂಚ್ ಅಧಿಕಾರಿಗಳು ಪ್ಯಾರಿಸ್‌ನ ದಕ್ಷಿಣ ಹೊರವಲಯದ ಸರ್ಕಾರಿ ಕಟ್ಟಡವೊಂದರಲ್ಲಿ ಆಶ್ರಯ ಪಡೆದಿದ್ದ ನೂರಾರು ವಲಸಿಗರನ್ನು ಬುಧವಾರ ತೆರವುಗೊಳಿಸಿದರು.

ಅವರಿಗೆ ಫ್ರಾನ್ಸ್‌ನ ಬೇರೆ ಭಾಗಗಳಿಗೆ ಹೋಗುವಂತೆ ಮನವೊಲಿಸಿ ಬಸ್ ವ್ಯವಸ್ಥೆ ಮಾಡಿಕೊಟ್ಟರು. ಒಲಿಂಪಿಕ್ಸ್ ವೇಳೆಗೆ ನಗರವನ್ನು ಅಂದಗೊಳಿಸಲು ಫ್ರಾನ್ಸ್ ರಾಜಧಾನಿಯಿಂದ ನಿರ್ವಸಿತರನ್ನು ಹೊರದಬ್ಬಲಾಗುತ್ತಿದೆ ಎಂದು ಸೇವಾಸಂಸ್ಥೆಗಳು ಇದೇ ವೇಳೆ ಅಧಿಕಾರಿಗಳ ವಿರುದ್ಧ ಆರೋಪ ಮಾಡಿವೆ.

ಪ್ಯಾರಿಸ್‌ನಲ್ಲಿ ಜುಲೈ 26 ರಿಂದ ಆಗಸ್ಟ್ 11ರವರೆಗೆ ಒಲಿಂಪಿಕ್ಸ್ ನಡೆಯಲಿದೆ.

ಈ ಹಿಂದೆ ಸರ್ಕಾರಿ ಕಚೇರಿಯಾಗಿದ್ದು, ಪಾಳುಬಿದ್ದಿದ್ದ ಕಟ್ಟಡದಲ್ಲಿ 450 ಮಂದಿ ವಲಸಿಗರು ವಾಸವಾಗಿದ್ದರು. ಅವರೆಲ್ಲರ ದಾಖಲೆಗಳನ್ನು ಸಂಗ್ರಹಿಸಿದ್ದು, ಸಾಮಾಜಿಕ ವಸತಿ ಯೋಜನೆಯಡಿ ಸೂರಿಗೆ ಅವರು ಕಾಯುತ್ತಿದ್ದರು ಎಂದು ನೆರವಿಗೆ ಬಂದಿದ್ದ ಸರ್ಕಾರೇತರ ಸಂಸ್ಥೆಗಳು ತಿಳಿಸಿವೆ.

ಅಂದಾಜು 300 ಮಂದಿ ಬ್ಯಾಗು, ಸೂಟ್‌ಕೇಸುಗಳಲ್ಲಿ ಬಟ್ಟೆಬರೆ ತುಂಬಿ ಬೆಳಿಗ್ಗೆ ಹೊರಟರು. ಯುವಕರು, ಮಹಿಳೆಯರು ಪುಟ್ಟ ಮಕ್ಕಳೊಂದಿಗೆ ಹೊರಟರು. ಅಧಿಕಾರಿಗಳು ಅವರ ದಾಖಲೆಗಳನ್ನು ಪರಿಶೀಲಿಸಿದರು.

ಬಸ್ಸುಗಳು ಆರ್ಲಿನ್ಸ್ ಮತ್ತು ಬೊಡೊ ನಗರಗಳತ್ತ ತೆರಳಲು ಸಜ್ಜಾಗಿದ್ದವು. ಆದರೆ ಬಹುತೇಕ ಮಂದಿ ಪ್ಯಾರಿಸ್ ವಲಯದಲ್ಲೇ ಅವಕಾಶ ನೀಡುವಂತೆ ಮನವಿ ಮಾಡುತ್ತಿದ್ದರು.

ಟಿ20: ಪಾಕ್, ಕಿವೀಸ್ ಪಂದ್ಯ ಇಂದು

ರಾವಲ್ಪಿಂಡಿ (ಎಪಿ): ಮಿಚೆಲ್ ಬ್ರೇಸ್‌ವೆಲ್ ನಾಯಕತ್ವದ ನ್ಯೂಜಿಲೆಂಡ್ ತಂಡವು ಗುರುವಾರ ನಡೆಯಲಿರುವ ಮೊದಲ ಟಿ20 ಪಂದ್ಯದಲ್ಲಿ ಆತಿಥೇಯ ಪಾಕಿಸ್ತಾನ ತಂಡವನ್ನು ಎದುರಿಸಲಿದೆ.

ಖ್ಯಾತನಾಮ ಆಟಗಾರರ ಗೈರು ಹಾಜರಿಯಲ್ಲಿ ಕಿವೀಸ್ ಬಳಗವು ಪಾಕ್ ನೆಲಕ್ಕೆ ಬಂದಿಳಿದಿದೆ. ಐದು ಪಂದ್ಯಗಳ ಸರಣಿಯಲ್ಲಿ ಆಡಲಿದೆ. ಆತಿಥೇಯ ಪಾಕ್ ತಂಡವನ್ನು ಬಾಬರ್ ಆಜಂ ಮುನ್ನಡೆಸುವರು.

ಕಿವೀಸ್ ಬಳಗದಲ್ಲಿ ಫಿನ್ ಅಲೆನ್, ಮಾರ್ಕ್ ಚಾಪ್ಮನ್, ಜಿಮ್ಮಿ ನಿಶಾಮ್, ಸ್ಪಿನ್ನರ್ ಈಶ್ ಸೋಧಿ, ಟಿಮ್ ರಾಬಿನ್ಸನ್ ಅವರು ಇದ್ದುದರಲ್ಲಿ ಅನುಭವಿಗಳಾಗಿದ್ದಾರೆ. ಉಳಿದವರಿಗೆ ಇದು ತಮ್ಮ ಸಾಮರ್ಥ್ಯವನ್ನು ತೋರಿಸಿಕೊಡುವ ಅವಕಾಶವಾಗಿದೆ. ಕೇನ್ ವಿಲಿಯಮ್ಸನ್, ಲಾಕಿ ಫರ್ಗ್ಯುಸನ್, ಡ್ಯಾರಿಲ್ ಮಿಚೆಲ್ ಅವರು ಐಪಿಎಲ್‌ನಲ್ಲಿ ಆಡುತ್ತಿದ್ದಾರೆ. ಟಿಮ್ ಸೌಥಿ ವಿಶ್ರಾಂತಿಯಲ್ಲಿದ್ದಾರೆ.

ಟ್ರೋಫಿಯೊಂದಿಗೆ ನ್ಯೂಜಿಲೆಂಡ್ ತಂಡದ ನಾಯಕ ಮಿಚೆಲ್ ಬ್ರೇಸ್‌ವೆಲ್ ಮತ್ತು ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ –ಎಪಿ/ಪಿಟಿಐ ಚಿತ್ರ

ಆದರೆ ಪಾಕ್ ತಂಡವು ಪೂರ್ಣಪ್ರಮಾಣದ ಸಾಮರ್ಥ್ಯ ಹೊಂದಿದೆ. ಫಕಾರ್ ಜಮಾನ್, ಮೊಹಮ್ಮದ್ ರಿಜ್ವಾನ್, ಇಫ್ತಿಕಾರ್ ಅಹಮದ್, ಶಾದಾಬ್ ಖಾನ್, ನಸೀಂ ಶಾ, ಶಹೀನ್ ಅಫ್ರಿದಿ, ಮೊಹಮ್ಮದ್ ಅಮೀರ್ ಮತ್ತು ಇಮಾದ್ ವಾಸೀಮ್ ತಂಡದ ಪ್ರಮುಖ ಆಟಗಾರರಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 8

ಸಂಕ್ಷಿಪ್ತ ಸುದ್ದಿ

ಟಿಟಿ: ಮಣಿಕಾ, ಶ್ರೀಜಾಗೆ ನಿರಾಸೆ

ನವದೆಹಲಿ (ಪಿಟಿಐ): ಭಾರತದ ಅನುಭವಿ ಟೇಬಲ್ ಟೆನಿಸ್ ಆಟಗಾರ್ತಿಯರಾದ ಮಣಿಕಾ ಬಾತ್ರ ಮತ್ತು ಶ್ರೀಜಾ ಅಕುಲಾ ಅವರು ಚೀನಾದಲ್ಲಿ ನಡೆಯುತ್ತಿರುವ ಐಟಿಟಿಎಫ್ ವಿಶ್ವಕಪ್ ಟೂರ್ನಿಯಲ್ಲಿ ಗುಂಪಿನ ಹಂತದಲ್ಲೇ ನಿರ್ಗಮಿಸಿದರು.

ಮಣಿಕಾ ಬಾತ್ರ

ಬುಧವಾರ ನಡೆದ ಮಹಿಳೆಯರ ಸಿಂಗಲ್ಸ್‌ನ ಗುಂಪು ಹಂತದ ಎರಡನೇ ಸುತ್ತಿನ ಪಂದ್ಯದಲ್ಲಿ ವಿಶ್ವ ರ‍್ಯಾಂಕಿಂಗ್‌ನಲ್ಲಿ 39ನೇ ಸ್ಥಾನದಲ್ಲಿರುವ ಮಣಿಕಾ 4-11, 4-11, 15-13, 2-11ರಿಂದ ಚೀನಾದ ವಾಂಗ್ ಮನ್ಯು ಅವರ ವಿರುದ್ಧ ಮುಗ್ಗರಿಸಿದರು. ಶ್ರೀಜಾ ಅವರು 4-11, 4-11, 15-13, 2-11ರಿಂದ ಹಾಲಿ ಚಾಂಪಿಯನ್ ಹಾಗೂ ವಿಶ್ವದ ನಾಲ್ಕನೇ ಕ್ರಮಾಂಕದ ಚೆನ್ ಮೆಂಗ್ (ಚೀನಾ) ಅವರಿಗೆ ಶರಣಾದರು.

ಮಂಗಳವಾರ ನಡೆದ ಗುಂಪು ಹಂತದ ಮೊದಲ ಸುತ್ತಿನ ಪಂದ್ಯವನ್ನು ಭಾರತದ ಇಬ್ಬರೂ ಆಟಗಾರ್ತಿಯರು ಗೆದ್ದಿದ್ದರು.

ಆರ್ಚರಿ: ಶೀತಲ್‌ದೇವಿಗೆ ಬೆಳ್ಳಿ

ನವದೆಹಲಿ (ಪಿಟಿಐ): ಪ್ಯಾರಾ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದ ಆರ್ಚರಿಪಟು ಶೀತಲ್ ದೇವಿ ಅವರು ಖೇಲೊ ಇಂಡಿಯಾ ಎನ್‌ಟಿಪಿಸಿ ರಾಷ್ಟ್ರೀಯ ರ‍್ಯಾಂಕಿಂಗ್ ಆರ್ಚರಿ ಕೂಟದಲ್ಲಿ ಬೆಳ್ಳಿ ಜಯಿಸಿದರು. ಜೂನಿಯರ್ ವಿಶ್ವ ಚಾಂಪಿಯನ್ ಏಕ್ತಾ ರಾಣಿ (ಹರಿಯಾಣ) ಚಿನ್ನದ ಪದಕ ಗೆದ್ದರು.

ಇಲ್ಲಿನ ಡಿಡಿಎ ಯಮುನಾ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಬುಧವಾರ ನಡೆದ ವೈಯಕ್ತಿಕ ಕಾಂಪೌಂಡ್ ವಿಭಾಗದ ಫೈನಲ್‌ನಲ್ಲಿ 17 ವರ್ಷದ ಶೀತಲ್ ಅವರು ಏಕ್ತಾ ವಿರುದ್ಧ 138- 140 ಪಾಯಿಂಟ್‌ಗಳಿಂದ ಪರಾಭವಗೊಂಡರು.

ಏಕ್ತಾ ಮತ್ತು ಶೀತಲ್ ಕ್ರಮವಾಗಿ ₹ 50 ಸಾವಿರ ಮತ್ತು ₹ 40 ಸಾವಿರ ಬಹುಮಾನ ಪಡೆದರು.

ಪ್ಯಾರಾ ಏಷ್ಯನ್ ಕ್ರೀಡಾಕೂಟದಲ್ಲಿ ಎರಡು ಚಿನ್ನ ಮತ್ತು ಒಂದು ಬೆಳ್ಳಿ ಪದಕ ಜಯಿಸಿದ್ದ ಶೀತಲ್ ಅವರಿಗೆ ಈಚೆಗೆ ಅರ್ಜುನ ಪ್ರಶಸ್ತಿ ನೀಡಲಾಗಿತ್ತು.

ಜಿಮ್ನಾಸ್ಟಿಕ್ಸ್: ದೀಪಾ ಫೈನಲ್‌ಗೆ

ನವದೆಹಲಿ (ಪಿಟಿಐ): ಒಲಿಂಪಿಯನ್ ದೀಪಾ ಕರ್ಮಾಕರ್ ಅವರು ದೋಹಾದಲ್ಲಿ ನಡೆಯುತ್ತಿರುವ ಎಫ್‌ಐಜಿ ಅಪರೇಟಸ್ ವಿಶ್ವಕಪ್ ಜಿಮ್ನಾಸ್ಟಿಕ್ಸ್‌ನ ಅರ್ಹತಾ ಸುತ್ತಿನಲ್ಲಿ ಆರನೇ ಸ್ಥಾನ ಪಡೆದು ಫೈನಲ್‌ಗೆ ಪ್ರವೇಶಿಸಿದರು.

ಕಳೆದ ತಿಂಗಳು ಅಜರ್‌ಬೈಜಾನ್‌ನಲ್ಲಿ ನಡೆದ ಬಾಕು ಅಪರಾಟಸ್ ವಿಶ್ವಕಪ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ 30 ವರ್ಷದ ದೀಪಾ, ಇಲ್ಲಿ ಮಹಿಳೆಯರ ವಾಲ್ಟ್‌ನಲ್ಲಿ ಒಟ್ಟಾರೆ 12.783 ಪಾಯಿಂಟ್ಸ್ ಗಳಿಸಿದರು. ಅರ್ಹತಾ ಸುತ್ತಿನಲ್ಲಿ ಅಗ್ರ ಎಂಟು ಸ್ಥಾನ ಪಡೆದವರು ಫೈನಲ್‌ಗೆ ಪ್ರವೇಶಿಸಿದರು. ಶುಕ್ರವಾರ ಫೈನಲ್ ಸ್ಪರ್ಧೆ ನಡೆಯಲಿದೆ. ಕಣದಲ್ಲಿದ್ದ ಭಾರತದ ಪ್ರಣತಿ ನಾಯಕ ಅರ್ಹತಾ ಸುತ್ತಿನಲ್ಲಿ 11ನೇ ಸ್ಥಾನ ಪಡೆದು, ಫೈನಲ್‌ಗೆ ಅರ್ಹತೆ ಪಡೆಯುವಲ್ಲಿ ವಿಫಲರಾದರು.

ಮೇರಿಯಂಡ ತಂಡಕ್ಕೆ ಗೆಲುವು

ನಾಪೋಕ್ಲು (ಕೊಡಗು ಜಿಲ್ಲೆ): ಮೇರಿಯಂಡ ತಂಡವು ಇಲ್ಲಿನ ಚೆರಿಯಪರಂಬುವಿನ ಜನರಲ್ ಕೆ.ಎಸ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಕುಂಡ್ಯೋಳಂಡ ಕಪ್ ಹಾಕಿ ಟೂರ್ನಿಯ ಪಂದ್ಯದಲ್ಲಿ 4-1 ಅಂತರದಿಂದ ಬಾರಿಯಂಡ ವಿರುದ್ಧ ಜಯ ಸಾಧಿಸಿತು.

ಸಮಬಲದ ಹೋರಾಟ ನಡೆಸಿದ ಸೋಮಯಂಡ ಮತ್ತು ಮಾತ್ರಂಡ ತಂಡಗಳ ಆಟಗಾರರು ಪ್ರೇಕ್ಷಕರನ್ನು ತುದಿಗಾಲಿನಲ್ಲಿ ನಿಲ್ಲಿಸಿದರು. ಬಳಿಕ ಪೆನಾಲ್ಟಿ ಶೂಟ್‌ಔಟ್‌ನಲ್ಲಿ ಮಾತ್ರಂಡ ತಂಡವು 5–3 ಅಂತರದಿಂದ ಜಯ ದಾಖಲಿಸಿತು.

CAUVERY MOTORS: Avalahalli: 8879156068; Mekhri Circle: 8422849049; Devanahalli: 8879078454
KEY MOTORS: Kanakapura Road: 7506023980, Mysore Road: 9167395034, Kanakapura City: 8879145649, BG Road: 9167395164, Sunkadakatte Magadi Road: 9167882027, Nelamangala: 9167881890
KHT MOTORS: Whitefield: 7506023988; Domlur: 7506024006, Kolar: 8291028427
KROPEX AUTO: Hosur Road: 7506024016, Koramangala: 9167395364, Sarjapur road: 8291202713, Mahadevapura: 8291052641
PRERANA MOTORS: Lalbagh Road: 7506024020; BTM Layout: 7506024118; Rajajinagar: 7506024039; Yelahanka: 9619489334
ADISHAKTI CARS: Hebbal: 7506023837; Dasarahalli: 9167982568; Kalyana Nagar: 9167163087
SREE AUTO: Tumkur: 7506024318, Tiptur: 9619050469, Chitradurga: 9619033465, Kunigal: 8879046819, Chikkaballapur: 9167082428, Chintamani: 8291927028